ವಿಶ್ವವಾಣಿ
ವಿಶ್ವಾಸವೇ ವಿಶ್ವ

ಚಕ್ರವರ್ತಿ ದಾಖಲೆ

ಐಸಿಸಿ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಗರಿಷ್ಠ ರ‍್ಯಾಂಕಿಂಗ್ ಅಂಕ (818) ಪಡೆದ ಭಾರತೀಯ ಬೌಲರ್ ಎಂಬ ದಾಖಲೆಯನ್ನು ಸ್ಪಿನ್ನರ್ ವರುಣ್ ಚಕ್ರವರ್ತಿ ನಿರ್ಮಿಸಿದ್ದಾರೆ.

ತನಿಖಾ ಸಂಸ್ಥೆಗಳ ದುರ್ಬಳಕೆ ಸೇರಿ ಕೇಂದ್ರದ ವಿರುದ್ಧ 5 ನಿರ್ಣಯ ಅಂಗೀಕರಿಸಲು ಸಿದ್ಧತೆ

ಕೇಂದ್ರದ ವಿರುದ್ಧ ರಾಜ್ಯ ಪಂಚನಾಮೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರ

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನ ಮುಗಿಯುವ ಹೊಸ್ತಿಲಿನಲ್ಲಿ ಬಿಸಿಬಿಸಿ ಚರ್ಚೆಗಳು ಮುನ್ನಲೆಗೆ ಬರುತ್ತಿದೆ. ಅಧಿವೇಶನ ಮುಗಿಯುವ ಹೊತ್ತಿಗೆ, ಕೇಂದ್ರ ಸರಕಾರದ ವಿರುದ್ಧ ನಾಲ್ಕರಿಂದ ಐದು ನಿರ್ಣಯಗಳನ್ನು ಮಂಡಿಸಲು ಸರಕಾರ ಮುಂದಾಗಿದೆ.

ಅಧಿವೇಶನದ ಆರಂಭದಲ್ಲಿಯೇ ಕೇಂದ್ರ ಸರಕಾರದ ರೈತ ವಿರೋಧಿ ನಿಲವನ್ನು ಖಂಡಿಸಿ, ಖಂಡನಾ ನಿರ್ಣಯ ಮಂಡಿಸಲು ರಾಜ್ಯ ಸರಕಾರ ಚಿಂತನೆ ನಡೆಸಿತ್ತು. ಆದರೀಗ, ನಿರ್ಣಯಗಳ ಸಂಖ್ಯೆ ಒಂದಕ್ಕೆ ಸೀಮಿತವಾಗದೇ ಐದಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ.

ಈ ಹಿಂದೆಯೇ ಚರ್ಚಿಸಿದಂತೆ, ಕೇಂದ್ರ ಸರಕಾರದ ತೀರ್ಮಾನಗಳಿಂದ ರಾಜ್ಯದ ರೈತರಿಗೆ ಆಗುತ್ತಿರುವ ಸಮಸ್ಯೆ, ಕಬ್ಬು ಬೆಳೆಯ ದರ ಏರಿಕೆ, ಮೆಕ್ಕೆಜೋಳ ಖರೀದಿ ಸೇರಿದಂತೆ ವಿವಿಧ ವಿಷಯಗಳನ್ನು ಸೇರಿಸಿ ರೈತ ವಿರೋಧಿ ಕೇಂದ್ರ ಸರಕಾರ ಎನ್ನುವ ರೀತಿಯಲ್ಲಿ ಒಂದು ಖಂಡನಾ ನಿರ್ಣಯ ಮಂಡಿಸಲು ಚಿಂತನೆ ನಡೆಸಲಾಗಿದೆ. ಇದರೊಂದಿಗೆ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾಗಿರುವ ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹಾದಾಯಿ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡುವ ವಿಷಯದಲ್ಲಿ ಕೇಂದ್ರ ಸರಕಾರದ ವಿಳಂಬ ನೀತಿಯ ವಿರುದ್ಧವೂ ಖಂಡನಾ ನಿರ್ಣಯ ಸಲ್ಲಿಸುವ ಸಾಧ್ಯತೆಯಿದೆ.

ಯಾವ ವಿಷಯಗಳ ಬಗ್ಗೆ ಪ್ರಸ್ತಾಪ?

- ಪ್ರತಿಪಕ್ಷ ನಾಯಕರ ವಿರುದ್ಧ ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆ
- ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ನೀಡಬೇಕಿರುವ ಅನುದಾನ ನಿರಾಕರಣೆ
- ಕೃಷ್ಣ, ಮಹಾದಾಯಿ ಸೇರಿ ನೀರಾವರಿ ಯೋಜನೆಗಳಿಗೆ ಅನುಮತಿ ವಿಳಂಬ
- ನ್ಯಾಯಬದ್ಧ ಬೆಂಬಲ ಬೆಲೆ ಹಾಗೂ ಖರೀದಿ ಕೇಂದ್ರ ಸ್ಥಾಪಿಸದಿರುವುದು
- ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ದಿಕ್ಸೂಚಿ ನಿರ್ಣಯ

ಪ್ರತಿಪಕ್ಷ ವಿರೋಧ

ರಾಜ್ಯ ಸರಕಾರ ಮಂಡಿಸಲು ಹೊರಟಿಸಿರುವ ಐದು ನಿರ್ಣಯಗಳಲ್ಲಿ ನಾಲ್ಕು ನಿರ್ಣಯಗಳು ಕೇಂದ್ರ ಸರಕಾರದ ವಿರುದ್ಧವಾಗಿದೆ. ಆದ್ದರಿಂದ ಈ ನಿರ್ಣಯಗಳನ್ನು ಮಂಡಿಸಲು ರಾಜ್ಯ ಸರಕಾರ ಮುಂದಾಗುತ್ತಿದ್ದಂತೆ, ತೀವ್ರ ಗದ್ದಲ ಶುರುವಾಗುವುದು ಬಹುತೇಕ ನಿಶ್ಚಿತ. ಆದ್ದರಿಂದ ಈ ನಿರ್ಣಯಗಳನ್ನು ಅಧಿವೇಶನದ ಕೊನೆಯ ದಿನ ಮಂಡಿಸಿ, ಸರಕಾರದ ನಿಲುವನ್ನು ದಾಖಲಿಸುವ ಲೆಕ್ಕಾಚಾರದಲ್ಲಿ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ್ ಅವರಿದ್ದಾರೆ ಎಂದು ತಿಳಿದುಬಂದಿದೆ.

ಅನುದಾನಕ್ಕೆ ಹಕ್ಕೊತ್ತಾಯ

ಕೇಂದ್ರ ಸರಕಾರದ ವಿರುದ್ಧ ಅನುದಾನ ತಾರತಮ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಖಂಡನಾ ನಿರ್ಣಯ ಮಂಡಿಸುವ ಮೂಲಕ ಕೇಂದ್ರ ಸರಕಾರದ ವಿರುದ್ಧ ಮತ್ತೊಂದು ಸುತ್ತಿನ ಸಮರ ಸಾರುವ ಸಾಧ್ಯತೆಯಿದೆ. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ತಗೆದುಕೊಂಡಿರುವ ಯೋಜನೆ, ಮುಂದಿನ ದಿನದಲ್ಲಿ ಯಾವೆಲ್ಲ ಅಭಿವೃದ್ಧಿ ಕಾರ್ಯ, ವಿಶೇಷ ಅನುದಾನ ಸೇರಿದಂತೆ ಹಲವು ಅಂಶಗಳನ್ನು ಒಳಗೊಂಡ ನಿರ್ಣಯ ಮಂಡನೆಯಾಗುವ ಸಾಧ್ಯತೆಯಿದೆ.

ಸೊಂಪಾದ ಪುಟಗಳು

ತನ್ನ ಕೃತಿಯನ್ನು ಟೀಕಿಸಿದ್ದಕ್ಕಾಗಿ ಆತ ವಿಮರ್ಶಕನ ಮುಖಕ್ಕೆ ಉಗಿದಿದ್ದ!

ನೂರೆಂಟು ವಿಶ್ವ – ವಿಶ್ವೇಶ್ವರ ಭಟ್ 6

ಚಿಂತನೆಯನ್ನು ಟ್ರಿಮ್ ಮಾಡುವ ರೇಜರ್‌ಗಳು

ಕಾಡುದಾರಿ – ಹರೀಶ್ ಕೇರ 7

ದಾರಿದೀಪೋಕ್ತಿ

ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸುವ ಸ್ವಭಾವ ಇಲ್ಲದಿದ್ದರೆ ಸಮಸ್ಯೆಗಳೇ ಅಲ್ಲದ ಸಂಗತಿಗಳು ಸಮಸ್ಯೆಗಳಾಗುತ್ತವೆ. ಪರಿಸ್ಥಿತಿಯನ್ನು ಗ್ರಹಿಸಲು ಬುದ್ಧಿವಂತಿಕೆಗಿಂತ ತಾಳ್ಮೆಯೇ ಜಾಸ್ತಿ ಬೇಕಾಗುತ್ತದೆ.

ವಕ್ರತುಂಡೋಕ್ತಿ

ಶಿಕ್ಷಣವೇ ಬೇರೆ ಬುದ್ಧಿವಂತಿಕೆಯೇ ಬೇರೆ. ಡಿಗ್ರಿಯನ್ನು ಹೊಂದಿಯೂ ಮೂರ್ಖರಾಗಿರಬಹುದು.

ಇ.ಡಿ ದುರ್ಬಳಕೆ ಸದನದಲ್ಲಿ ಗದ್ದಲ

ವಿಧಾನಸಭೆ: ಸ್ವಾಯತ್ತ ಸಂಸ್ಥೆಗಳನ್ನು ರಾಜಕೀಯ ಕಾರಣಕ್ಕೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎನ್ನುವ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಕಾಂಗ್ರೆಸ್ ನಡೆ ಆಡಳಿತ-ಪ್ರತಿಪಕ್ಷಗಳ ವಾಕ್ಸಮರಕ್ಕೆ ಕಾರಣವಾಗಿ, ಸದನವನ್ನು ಒಂದು ಗಂಟೆ ಕಾಲ ಮುಂದೂಡಲಾಯಿತು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾಗಾಂಧಿ, ರಾಹುಲ್ ಗಾಂಧಿ ವಿರುದ್ಧ ಐಟಿ, ಇಡಿ, ಸಿಬಿಐ ದುರ್ಬಳಕೆ ಮಾಡಿಕೊಳ್ಳುತ್ತಿರುವ ಕೇಂದ್ರ ಸರಕಾರದ ನಡೆಯನ್ನು ಖಂಡಿಸಿ ನಿರ್ಣಯ ಕೈಗೊಳ್ಳಲು ಆಡಳಿತ ಪಕ್ಷದ ಪ್ರಯತ್ನಿಸಿತ್ತು. ಆರಂಭದಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾವನೆಗೆ ಅವಕಾಶ ನೀಡಿದ್ದು ಭಾರಿ ಚರ್ಚೆಗೆ ಕಾರಣವಾಯಿತು.

ಮೈಲಾರಿ ಬಂಧನ

ಬಾಗಲಕೋಟೆ: ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಜಾನಪದ ಗಾಯಕ ಮೈಲಾರಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಹಾಲಿಂಗಪುರ ಪೊಲೀಸ್ ಠಾಣಾ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮಹಾರಾಷ್ಟ್ರಕ್ಕೆ ತೆರಳುತ್ತಿದ್ದಾಗ ಚೇಸ್ ಮಾಡಿ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ. ಯೂಟ್ಯೂಬ್‌ನಲ್ಲಿ ಜನಪದ ಹಾಡುಗಳ ಮೂಲಕ ಪ್ರಸಿದ್ಧಿಗೆ ಬಂದಿದ್ದ ಮೈಲಾರಿ ಮಹಾಲಿಂಗಪುರ ಹೊರವಲಯದ ಲಾಡ್ಜ್ ಒಂದರಲ್ಲಿ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕೇಳಿಬಂದಿದೆ.

ಫನ್‌ತರಂಗ
– ರಘುಪತಿ ಶೃಂಗೇರಿ –

ಅಧಿವೇಶನದ ನಡುವೆ ಹೊಟ್ಟೆನೋವು ಕಾಣಿಸಿಕೊಂಡಿದ್ದು, ವೈದ್ಯರನ್ನು ಭೇಟಿಯಾದ ಕಾಂಗ್ರೆಸ್ ಮುಖಂಡ

ಸುದ್ದಿ



ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಷಾದ, ಬಿಜೆಪಿ ಸದಸ್ಯರ ಸಭಾತ್ಯಾಗ

ಸದನದಲ್ಲಿ ಗೃಹಲಕ್ಷ್ಮೀ ಗದ್ದಲ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಗೃಹಲಕ್ಷ್ಮೀ ಕಂತು ಪಾವತಿಯ ಬಗ್ಗೆ ಸದನಕ್ಕೆ ನೀಡಿರುವ 'ಸುಳ್ಳು ಮಾಹಿತಿ'ಯ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ನಾಲ್ಕು ದಿನದಿಂದ ನಡೆಯುತ್ತಿರುವ ಜಟಾಪಟಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕ್ಷಮೆ ಹಾಗೂ ಬಿಜೆಪಿಗರ ಸಭಾತ್ಯಾಗದ ಮೂಲಕ ಕೊನೆಯಾಗಿದೆ.

ಫೆಬ್ರವರಿ ಹಾಗೂ ಮಾರ್ಚ್ ತಿಂಗಳಲ್ಲಿ ಗೃಹಲಕ್ಷ್ಮೀ ಹಣ ಪಾವತಿಯಾಗದಿದ್ದರೂ, ಆಗಿದೆ ಎಂದು ಉತ್ತರ ನೀಡಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕ್ಷಮೆ ಕೇಳಬೇಕೆಂದು ಆಗ್ರಹಿಸಿ ಬಿಜೆಪಿ ಬಾವಿಗಿಳಿದು ಪ್ರತಿಭಟನೆ ನಡೆಸಿತು. ಸರಣಿ ಸಭೆಗಳ ಬಳಿಕ, ಸಚಿವೆ ಹೆಬ್ಬಾಳ್ಕರ್ ಕ್ಷಮೆ ಕೋರಿದರೂ, ಕೋರಿದ ರೀತಿಗೆ ಅಕ್ಷೇಪ ವ್ಯಕ್ತಪಡಿಸಿ ಬಿಜೆಪಿಗರು ಸಭಾತ್ಯಾಗ ಮಾಡಿದರು.

ಬುಧವಾರ ವಿಧಾನಸಭೆಯ ಕಲಾಪದ ಆರಂಭದಲ್ಲಿಯೇ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಸುಳ್ಳು ಮಾಹಿತಿ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಮೂರು ದಿನಗಳಿಂದ ಪ್ರತಿಪಕ್ಷ ಸ್ಪಷ್ಟನೆ ಕೇಳಿದರೂ ಸರಕಾರ ಉತ್ತರಿಸುತ್ತಿಲ್ಲ. ಮೂರು ದಿನಗಳಿಂದ ಸಂಬಂಧಿಸಿದ ಸಚಿವರು ನಾಪತ್ತೆಯಾಗಿದ್ದಾರೆ. ಗೃಹಲಕ್ಷ್ಮೀ ಹಣ ಕುರಿತು ತಪ್ಪು ಮಾಹಿತಿ ನೀಡಿರುವದರಿಂದ ಅವರಿಂದಲೇ ಈ ಕುರಿತು ಸ್ಪಷ್ಟನೆ ಕೊಡಿಸಬೇಕು ಎಂದು ಆಗ್ರಹಿಸಿದರು.

ಈ ವಿಷಯಕ್ಕೆ ಸಂಬಂಧಿಸಿದತೆ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ಬಹಳ ಸಮಯ ಪರಸ್ಪರ ಆರೋಪ – ಪ್ರತ್ಯಾರೋಪದ ಬಳಿಕ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಷಾದ ವ್ಯಕ್ತಪಡಿಸಿದರು. ಆದರೂ ಪಟ್ಟು ಬಿಡದ ಪ್ರತಿಪಕ್ಷಗಳು ಬೇಷರತ್ ಕ್ಷಮೆ ಕೇಳಬೇಕೆಂದು ಆಗ್ರಹಿಸಿ, ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ಸದನಕ್ಕೆ ಯಾವುದೇ ರೀತಿಯ ತಪ್ಪು ಮಾಹಿತಿ ನೀಡಿಲ್ಲ. ನೀಡುವ ಉದ್ದೇಶವೂ ನಮ್ಮದಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಸುರೇಶ್ ಕುಮಾರ್, ಸಚಿವರು ಸದನಕ್ಕೆ ಬಂದು ಸ್ಪಷ್ಟನೆ ಕೊಡಬೇಕಿತ್ತು. ಗೃಹ ಲಕ್ಷ್ಮೀ ದುಡ್ಡೂ ಬರಲ್ಲ, ಉತ್ತರವೂ ಬರಲ್ಲ ಟೀಕಿಸಿದರು. ಈ ವೇಳೆ ಮಾತನಾಡಿದ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಬೇಕಾಬಿಟ್ಟಿ ಉತ್ತರ ಕೊಡುವುದಾದರೆ ಈ ಸದನ ಏಕೆ ಬೇಕು? ಎಂದು ಹರಿಹಾಯ್ದರು.

ಸದನ ಹತ್ತು ನಿಮಿಷ ಮುಂದಕ್ಕೆ

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸದನಕ್ಕೆ ಆಗಮಿಸುವ ಮುನ್ನವೇ ನಡೆದ ಚರ್ಚೆ ವೇಳೆ ಪರಸ್ಪರ ಗೊಂದಲ ಉಂಟಾಗಿ ಸಚಿವರನ್ನು ಸಭೆಗೆ ಕರೆಸಲೇಬೇಕು ಎಂದು ಪಟ್ಟು ಹಿಡಿದು ಬಿಜೆಪಿ ಸದಸ್ಯರು ಸದನದ ಬಾವಿಗೆ ಬಂದು ಪ್ರತಿಭಟನೆಗೆ ಮುಂದಾದರು.

→10

ರಾಜ್ಯ ಸರಕಾರ ದಿವಾಳಿ ಆಗಿದೆ. ಹಾಗಾಗಿ ಗೃಹಲಕ್ಷ್ಮೀ ಹಣ ಕೊಟ್ಟಿಲ್ಲ ಎಂದು ಹೇಳಿ. ಹಣ ಹಾಕಿ ಸದನಕ್ಕೆ ಬಂದಿದ್ದರೆ ಅದನ್ನು ಒಪ್ಪಬಹುದಿತ್ತು. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು ಬೇಷರತ್ ಕ್ಷಮೆ ಕೇಳಬೇಕು.

-ಸುರೇಶ್ ಕುಮಾರ್, ಶಾಸಕ

ಕೇಂದ್ರದಿಂದ ರಾಜ್ಯಕ್ಕೆ ಬಾಕಿ ಬರಬೇಕಿರುವ ಹಣ ಕೊಡಿಸುವ ಸಾಮರ್ಥ್ಯ ನಿಮಗಿಲ್ಲ. ನೀವೇನು ನಮ್ಮ ಬಗ್ಗೆ ಮಾತನಾಡುವುದು. ನಿಮ್ಮ ಯೋಗ್ಯತೆಗೆ ಕೇಂದ್ರ ಸರಕಾರದಿಂದ ನಮ್ಮ ಜನರಿಗೆ ಒಂದು ರುಪಾಯಿ ಕೂಡ ಕೊಡಿಸಲು ಆಗಿಲ್ಲ.

-ಬೈರತಿ ಸುರೇಶ್, ಸಚಿವ

ಪ್ರತಿ ವಿಚಾರಕ್ಕೂ ಎದ್ದು ನಿಂತು, ಎಲ್ಲರಿಗಿಂತ ಮೊದಲು ಉತ್ತರ ಕೊಡಲು ಮುಂದಾಗುವ ಸಚಿವ ಪ್ರಿಯಾಂಕ್ ಖರ್ಗೆ ಅವರು ಸ್ಪೀಕರ್ ಅವರಿಗಿಂತ ದೊಡ್ಡವರು. ಹಾಗಾಗಿ ಅವರಿಗೆ ಎತ್ತರದ ಜಾಗದಲ್ಲಿ ದೊಡ್ಡ ಕುರ್ಚಿ ಹಾಕಿಸಿಕೊಡಬೇಕು.

-ಸಿ.ಸಿ.ಪಾಟೀಲ್, ಶಾಸಕ

ಪ್ರಿಯಾಂಕ್ ವಿರುದ್ಧ ಬಿಜೆಪಿ ಆಕ್ಷೇಪ

ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿ ಆಡಳಿತ-ಪ್ರತಿಪಕ್ಷ ನಾಯಕರು ಗದ್ದಲ ನಡೆಸುವ ಸಮಯದಲ್ಲಿ ಬಿಜೆಪಿ ಶಾಸಕ ಸುನೀಲ್ ಕುಮಾರ್ ತಾಕತ್ತಿದ್ದರೆ ಸರಕಾರ ವಿಸರ್ಜನೆಗೊಳಿಸಿ ಚುನಾವಣೆ ಎದುರಿಸಿ ಎಂದು ಸವಾಲು ಹಾಕಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ, 80 ರು.ಗೆ ಒಂದು ಮತದಂತೆ ಮತಗಳ್ಳತನ ಮಾಡಿರುವುದು ನೀವು, ಈ ರೀತಿ ಮಾಡಿಯೇ ನೀವು ಗೆಲ್ಲುತ್ತಿದ್ದೀರಾ ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಬಿಜೆಪಿ ಶಾಸಕರು ಪ್ರಿಯಾಂಕ್ ವಿರುದ್ಧ ವಾಗ್ದಾಳಿ ನಡೆಸಿ, 'ಎಐಸಿಸಿ ಅಧ್ಯಕ್ಷರ ಮಗ ಎಂದ ಮಾತ್ರಕ್ಕೆ ಯಾವ್ಯಾವುದೋ ವಿಷಯವನ್ನು ಪ್ರಸ್ತಾಪಿಸಲು ಬರುವುದಿಲ್ಲ. ಸದನದಲ್ಲಿ ಎಲ್ಲರೂ ಒಂದೇ' ಎಂದು ಟೀಕಿಸಿದರು.

ಪ್ರತಿ ತಿಂಗಳು 2480 ಕೋಟಿ ರು.ಕೊಡುವುದಾದರೆ ಫೆಬ್ರವರಿ ಹಾಗೂ ಮಾರ್ಚ್ ತಿಂಗಳ 5000 ಕೋಟಿ ಎಲ್ಲಿ ಹೋಯಿತು? ಜನವರಿ ತಿಂಗಳ ನಂತರ ಎರಡು ತಿಂಗಳನ್ನು ಬದಿಗಿಟ್ಟು ಏಪ್ರಿಲ್ ತಿಂಗಳಿಗೆ ಹೇಗೆ ಹೋಗಲು ಸಾಧ್ಯ? ಈ ಕುರಿತು ಸಚಿವರು ಇಡೀ ರಾಜ್ಯದ ಫಲಾನುಭವಿಗಳ ಕ್ಷಮೆ ಕೇಳಬೇಕು.

-ಆರ್. ಅಶೋಕ, ಪ್ರತಿಪಕ್ಷ ನಾಯಕ.

ಹೈದರಾಲಿಯ ವೇತನದಂತಾಯಿತು!

ಇನ್ನು ಸದನದಲ್ಲಿ ಸುರೇಶ್ ಕುಮಾರ್ ಅವರು, ಟಿಪ್ಪು ಸುಲ್ತಾನನ ಅಪ್ಪ ಹೈದರಾಲಿ ತನ್ನ ಆಡಳಿತಾವಧಿಯಲ್ಲಿ ನೌಕರರಿಗೆ ಪ್ರತಿ ತಿಂಗಳ ಒಂದನೇ ತಾರೀಕು ಸಂಬಳ ನೀಡುತ್ತಿದ್ದ. ಸ್ವಲ್ಪ ಸಮಯದ ನಂತರದಲ್ಲಿ ಜನವರಿ ತಿಂಗಳ ಒಂದನೇ ತಾರೀಕಿನ ಬದಲಾಗಿ 5ಕ್ಕೆ ನೀಡತೊಡಗಿದ. ಫೆಬ್ರವರಿಯಲ್ಲಿ 10ನೇ ತಾರೀಕು, ಮಾರ್ಚ್‌ನಲ್ಲಿ 15ನೇ ತಾರೀಕು, ಏಪ್ರಿಲ್‌ನಲ್ಲಿ 20ನೇ ತಾರೀಕು, ಮೇ ತಿಂಗಳಲ್ಲಿ 25ನೇ ತಾರೀಕಿಗೆ ನೀಡಿ ಜೂನ್ ತಿಂಗಳ ವೇಳೆಗೆ ಒಂದು ತಿಂಗಳ ಸಂಬಳವನ್ನೇ ಎಗರಿಸಿಬಿಡುತ್ತಿದ್ದ. ಗೃಹಲಕ್ಷ್ಮೀಯ ಕಥೆಯೂ ಇದೇ ರೀತಿ ಆಗಿದೆ ಎಂದು ಕಥೆ ಹೇಳಿ, ಸರಕಾರಕ್ಕೆ ಕುಟುಕಿದರು.

ಕೇಂದ್ರವೂ ದಿವಾಳಿ ಆಗಿದೆಯೇ?

ಎರಡು ತಿಂಗಳು ಹಣ ಬಿಡುಗಡೆ ಮಾಡಲು ಆಗದಷ್ಟು ಸರಕಾರ ದಿವಾಳಿಯಾಗಿದೆ ಎನ್ನುವ ಸುನೀಲ್ ಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸೆಪ್ಟೆಂಬರ್‌ವರೆಗೆ ಹಣ ಬಿಡುಗಡೆ ಆಗಿದೆ. ಮಧ್ಯೆ ಒಂದೆರಡು ತಿಂಗಳು ನೀಡಲಾಗಿಲ್ಲ. ಯಾವ ಕಾರಣಕ್ಕೆ ನಿಂತಿದೆ ಎಂಬ ಬಗ್ಗೆ ಅಧಿಕಾರಿಗಳನ್ನು ಕೇಳಲಾಗುವುದು. ಇದೇ ದಿವಾಳಿ ಎನ್ನುವುದಾದರೆ, ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ನೀಡುವುದಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ನಲ್ಲಿ ಘೋಷಿಸಿದ್ದರು. ಆದರೆ, ಈವರೆಗೆ ಒಂದು ನಯಾಪೈಸೆ ಬರಲಿಲ್ಲ.

ಪಾಟೀ ಸವಾಲ್‌ಗೆ ಉತ್ತರಿಸಿದ ತಾಯಿ ರತ್ನಪ್ರಭಾ

ರೇಣುಕಾ ಹತ್ಯೆ: ಪೋಷಕರಿಂದ ಸಾಕ್ಷ್ಯ

ಬೆಂಗಳೂರು: ನಟ ದರ್ಶನ್ ವಿರುದ್ಧದ ಕೊಲೆ ಪ್ರಕರಣದಲ್ಲಿ ಸಾಕ್ಷಿಗಳ ವಿಚಾರಣೆ ಬೆಂಗಳೂರಿನ 57ನೇ ಸಿಸಿಎಚ್ ನ್ಯಾಯಾಲಯದಲ್ಲಿ ಡಿ. 17ರಿಂದ ಆರಂಭವಾಗಿದೆ.

ಬುಧವಾರ ವಿಚಾರಣೆ ವೇಳೆ ಮೊದಲಿಗೆ ವಿಚಾರಣೆ ಎದುರಿಸಿದ್ದು ರೇಣುಕಾಸ್ವಾಮಿಯ ತಾಯಿ ರತ್ನಪ್ರಭಾ. ಡಿ. 17ರಂದು ಮಧ್ಯಾಹ್ನ ಸುಮಾರು 4.30ರ ಸುಮಾರಿಗೆ ಶುರುವಾದ ವಿಚಾರಣೆಯ ವೇಳೆ ರತ್ನಪ್ರಭಾ ಅವರನ್ನು ಇದೇ ಪ್ರಕರಣದ ಆರೋಪಿಯಾಗಿರುವ ಪವಿತ್ರಾ ಗೌಡ ಅವರ ಪರ ವಕೀಲರಾದ ಬಾಲನ್ ಪಾಟೀ ಸವಾಲಿಗೆ ಗುರಿಪಡಿಸಿದರು.

ಪೊಲೀಸರ ದಾಖಲೆಗಳ ಪ್ರಕಾರ, 2024ರ ಜೂ. 8ರಂದು ನಿಮ್ಮ ಮಗ (ರೇಣುಕಾಚಾರ್ಯ) ನಾಪತ್ತೆಯಾಗಿದ್ದ. ಅದಕ್ಕೂ ಮುನ್ನ ಆತ ನಿಮ್ಮನ್ನು ಸಂಪರ್ಕಿಸಿದ್ದರೇ? ಎಂದು ಬಾಲನ್ ಪ್ರಶ್ನಿಸಿದರು. ಆಗ ರತ್ನಪ್ರಭಾ ಹೌದು, ಮನೆಗೆ ಊಟಕ್ಕೆ ಬರುವುದಿಲ್ಲ ಎಂದು ಹೇಳಿದ್ದ. ಮತ್ತೆ ಪ್ರಶ್ನಿಸಿದ ಬಾಲನ್ ಆತ ಫೋನ್ ಮಾಡಿದಾಗ ನಾಲ್ವರು ಸ್ನೇಹಿತರ ಜೊತೆಗೆ ಊಟಕ್ಕೆ ಹೋಗುವುದಾಗಿ ಹೇಳಿದ್ದ ಎಂದು ಹೇಳಿಕೆ ನೀಡಿದ್ದೀರಿ ಅದು ಸರಿಯೇ? ಎಂದಾಗ ಬಳಿಕ ಉತ್ತರಿಸಿದ ರತ್ನಪ್ರಭಾ ಇಲ್ಲ, ನಾನು ಹಾಗೆ ಹೇಳಿಕೆ ನೀಡಿಲ್ಲ ಎಂದರು.

ಬಾಲನ್ ಅವರು ಪ್ರಶ್ನೆ ಮುಂದುವರಿಸಿ, ನೀವು ಅದೇ ರೀತಿ ಹೇಳಿಕೆಯನ್ನು ಕೊಟ್ಟಿದ್ದೀರಿ. ನೀವು ಯಾವ ಸಂದರ್ಭದಲ್ಲಿ, ಯಾವ ಸಮಯದಲ್ಲಿ ಆ ಹೇಳಿಕೆಯನ್ನು ಕೊಟ್ಟಿದ್ದೀರಿ?. ನೀವು ನಿಮ್ಮ ಮಗನ ಕಡೆಯ ಫೋನ್ ಕಾಲ್ ಬಗ್ಗೆ ಪೊಲೀಸರಿಗೆ ಹೇಳಿದ್ದಾಗ ನಿಮ್ಮ ಮೊಬೈಲನ್ನು ಪೊಲೀಸರು ಪರಿಶೀಲಿಸಿದ್ದರೇ?.

→10

ಪವಿತ್ರಾಗೆ ಟಿವಿ, ದರ್ಶನ್‌ಗೆ ಕಂಬಳಿ

ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ಪ್ರಮುಖ ಆರೋಪಿಗಳಾದ ಪವಿತ್ರಾ ಗೌಡ, ದರ್ಶನ್ ಮುಂತಾದವರು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದರು. ಪವಿತ್ರಾ ಗೌಡ ಪರವಾಗಿ ವಾದ ಮಂಡಿಸಿದ ಬಾಲನ್, ಟಿವಿ, ರೇಡಿಯೋ, ದಿನಪತ್ರಿಕೆ, ಮ್ಯೂಸಿಕ್, ಮೆಡಿಟೇಷನ್ ಹಾಗೂ ಮನೆ ಊಟ ಬೇಕು ಎಂದು ಮನವಿ ಮಾಡಿದರು. ಪವಿತ್ರಾ ಗೌಡ ಇರುವ ಸೆಲ್‌ಗೆ ಟಿವಿ ಅಳವಡಿಸಲು, ದಿನಪತ್ರಿಕೆ ಮತ್ತು ಗ್ರಂಥಾಲಯದ ಪುಸ್ತಕ ಒದಗಿಸಲೂ ಸೂಚನೆ ನೀಡಿದರು. ಈ ಮೊದಲು ನಟ ದರ್ಶನ್ ಇರುವ ಸೆಲ್‌ಗೂ ಟಿವಿ ವ್ಯವಸ್ಥೆ ಕಲ್ಪಿಸಲಾಗಿತ್ತು.

ಇದೇ ವೇಳೆ ನಟ ದರ್ಶನ್ ಜೈಲಿನಲ್ಲಿ ವಿಪರೀತ ಚಳಿಯಿಂದಾಗಿ ನಿದ್ದೆ ಮಾಡಲು ಸಾಧ್ಯವಾಗುತ್ತಿಲ್ಲ. ಮನೆಯವರು ಅಥವಾ ವಕೀಲರು ನೀಡುವ ಕಂಬಳಿ ಬಳಸಲು ಅನುಮತಿ ನೀಡುವಂತೆ ಅಥವಾ ಹೆಚ್ಚುವರಿ ಕಂಬಳಿ ಒದಗಿಸುವಂತೆ ಮನವಿ ಮಾಡಿದರು. ಈ ಮನವಿಯನ್ನು ಪುರಸ್ಕರಿಸಿದ ನ್ಯಾಯಾಧೀಶರು, ಆರೋಪಿಗಳಿಗೆ ಅಗತ್ಯವಿರುವ ಹೆಚ್ಚುವರಿ ಕಂಬಳಿ ನೀಡಲು ಕಾರಾಗೃಹದ ಅಧಿಕಾರಿಗಳಿಗೆ ಸೂಚಿಸಿದರು.

ಚಿನ್ನಯ್ಯ ಬಂಧಮುಕ್ತಿ

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವ ಹೂತಿಟ್ಟ ಪ್ರಕರಣದಲ್ಲಿ ವಿಶೇಷ ತನಿಖಾ ತಂಡದಿಂದ ಬಂಧನಕ್ಕೆ ಒಳಗಾಗಿ ಬಳಿಕ ಜಾಮೀನು ಪಡೆದಿದ್ದ ಚಿನ್ನಯ್ಯ ಕೊನೆಗೂ ಜೈಲಿನಿಂದ ಹೊರ ಬರಲಿದ್ದಾನೆ. ಜಾಮೀನು ಸಿಕ್ಕಿದರೂ ಚಿನ್ನಯ್ಯನಿಗೆ ಶ್ಯೂರಿಟಿ ನೀಡಲು ಯಾರೂ ಮುಂದೆ ಬಂದಿರಲಿಲ್ಲ. ಬುಧವಾರ ಬೆಳ್ತಂಗಡಿ ನ್ಯಾಯಾಲಯಕ್ಕೆ ಆಗಮಿಸಿದ ಚಿನ್ನಯ್ಯ ಪತ್ನಿ ಮಲ್ಲಿಕಾ ಹಾಗೂ ಸಹೋದರಿ ರತ್ನ ಜಾಮೀನು ಪ್ರಕ್ರಿಯೆ ಮುಗಿಸಿದ್ದಾರೆ.

ಬೌದ್ಧ ಬಿಕ್ಕುಗಳಿಗೆ ಸಂಭಾವನೆ

ವಿಧಾನಪರಿಷತ್: ರಾಜ್ಯದಲ್ಲಿ ಬುದ್ಧ ವಿಹಾರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೌದ್ಧ ಬಿಕ್ಕುಗಳಿಗೆ ಮಾಸಿಕ ಸಂಭಾವನೆ ನೀಡಲಾಗುವುದು ಎಂದು ಸರಕಾರ ತಿಳಿಸಿದೆ. ಪ್ರಶ್ನೋತ್ತರ ವೇಳೆ ಸದಸ್ಯ ಶಿವಕುಮಾರ ಕೆ. ಅವರ ಪ್ರಶ್ನೆಗೆ ಸಚಿವ ಜಮೀರ್ ಅಹ್ಮದ್ ಪರವಾಗಿ ಉತ್ತರಿಸಿದ ಸಚಿವ ರಾಮಲಿಂಗಾ ರೆಡ್ಡಿ ಸರಕಾರದ ಮುಜರಾಯಿ ದೇವಸ್ಥಾನಗಳ ಸುಪರ್ದಿಯಲ್ಲಿರುವ ಅರ್ಚಕರಿಗೆ, ಜೈನ ಹಾಗೂ ಮುಸ್ಲಿಂ ಧರ್ಮಗುರುಗಳಿಗೆ 5 ಸಾವಿರದಿಂದ 6 ಸಾವಿರ ಮಾಸಿಕ ಸಂಭಾವನೆ ನೀಡಲಾಗುತ್ತಿದೆ. ಬೌದ್ಧ ಬಿಕ್ಕುಗಳಿಗೂ ಇದನ್ನು ವಿಸ್ತರಿಸಲಾಗುವುದು ಎಂದರು.

ಉರುಳಿಗೆ ಸಿಲುಕಿ ಹುಲಿ ಸಾವು

ಬೆಂಗಳೂರು: ಕೊಡಗಿನ ದುಬಾರೆ ಅರಣ್ಯದಿಂದ 5 ಕಿಮೀ ದೂರದಲ್ಲಿರುವ ಎಸ್ಟೇಟ್‌ನಲ್ಲಿ ಗಂಡು ಹುಲಿಯೊಂದು ಉರುಳಿಗೆ ಸಿಲುಕಿ ಸಾವನ್ನಪ್ಪಿದೆ. ಕೊಡಗು ಪ್ರಾದೇಶಿಕ ಅರಣ್ಯ ವಿಭಾಗದ ಶ್ರೀಮಂಗಲ ಗ್ರಾಮದ ಬಳಿ ಮೃತಪಟ್ಟ ಹುಲಿ ನಾಲ್ಕರಿಂದ ಐದು ವರ್ಷದ್ದೆಂದು ಅಂದಾಜಿಸಲಾಗಿದೆ. ಎರಡು ದಿನಗಳ ಹಿಂದೆ ಹುಲಿ ಬಲೆಗೆ ಸಿಲುಕಿತ್ತು. ಬಿಡಿಸಿಕೊಳ್ಳಲು ಯತ್ನಿಸಿ ಉಸಿರುಗಟ್ಟಿ ಸಾವನ್ನಪ್ಪಿದೆ ಎನ್ನಲಾಗಿದೆ. ಅಂತಿಮ ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯಲಾಗುತ್ತಿದೆ. ಅದರ ಕುತ್ತಿಗೆಯ ಸುತ್ತ 2 ಇಂಚು ಆಳದ ಗಾಯವಿತ್ತು.

ಕಾರವಾರ ನೌಕಾನೆಲೆಯಲ್ಲಿ ಚೀನಾ ಗೂಢಚರ್ಯೆ?

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕದಂಬ ನೌಕಾನೆಲೆಗೆ ಸಮೀಪವಿರುವ ತಿಮ್ಮಕ್ಕ ಗಾರ್ಡನ್ ಹಿಂಭಾಗದಲ್ಲಿ ಕೂತಿದ್ದ ಸೀಗಲ್ ಹಕ್ಕಿಯ ಬೆನ್ನಿನ ಭಾಗದಲ್ಲಿ ಚೀನಾದ ಜಿಪಿಎಸ್ ಟ್ರ್ಯಾಕರ್ ಪತ್ತೆಯಾಗಿದೆ. ಇದರಿಂದ ನೌಕಾನೆಲೆಯ ಬಗ್ಗೆ ಚೀನಾ ಗೂಢಚರ್ಯೆ ನಡೆಸುತ್ತಿರುವ ಶಂಕೆ ವ್ಯಕ್ತವಾಗಿದೆ.

ನೋಡಲು ಭಿನ್ನವಾಗಿ ಕಂಡ ಈ ಹಕ್ಕಿಯನ್ನು ನೋಡಿದ ಸ್ಥಳೀಯರು ಅರಣ್ಯ ಇಲಾಖೆಯ ಮರೈನ್ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಸ್ಥಳಕ್ಕೆ ಬಂದ ಅಧಿಕಾರಿಗಳು ಹಕ್ಕಿಯನ್ನ ಹಿಡಿದು ಪರಿಶೀಲಿಸಿದ್ದಾರೆ. ಈ ವೇಳೆ ಸೀಗಲ್‌ನ ಬೆನ್ನಿನಲ್ಲಿದ್ದ ಜಿಪಿಎಸ್‌ನಲ್ಲಿ ಚೈನೀಸ್ ವಿಜ್ಞಾನ ಅಕಾಡೆಮಿಯ ರಿಸರ್ಚ್ ಸೆಂಟರ್ ಫಾರ್ ಇಕೋ-ಎನ್ವಿರಾನ್ಮೆಂಟಲ್ ಸೈನ್ಸ್ ವಿಳಾಸ ಪತ್ತೆಯಾಗಿದೆ. ಸೀಗಲ್ ಹಕ್ಕಿಗಳ ಚಲನ ವಲನ, ಆಹಾರ ಹಾಗೂ ವಲಸೆಯನ್ನು ಗುರುತಿಸಲು ಜಿಪಿಎಸ್ ಟ್ರ್ಯಾಕರ್ ಬಳಸಲಾಗಿದೆ.

ಆಗ ಹದ್ದು, ಈಗ ಸೀಗಲ್

ಕಳೆದ ವರ್ಷ ನವಂಬರ್‌ನಲ್ಲೂ ಕಾರವಾರ ಬೈತಕೋಲ್ ಬಂದರಿನ ಸರಹದ್ದು ವ್ಯಾಪ್ತಿಯಲ್ಲಿ ಟ್ರ್ಯಾಕರ್ ಅಳವಡಿಸಿದ ರಣಹದ್ದು ಪ್ರತ್ಯಕ್ಷವಾಗಿತ್ತು. ಹದ್ದಿನ ಮೇಲೆ ಕಂಡು ಬಂದ ಟ್ರ್ಯಾಕರ್ ಕೂಡ ಚೀನಾ ನಿರ್ಮಿತವಾಗಿತ್ತು. ಇವು ಅಧ್ಯಯನಕ್ಕೆ ಬಳಕೆ ಮಾಡಿರುವುದು ತಿಳಿದುಬಂದಿತ್ತು. ಆದರೇ ಅಧ್ಯಯನದ ನೆಪದಲ್ಲಿ ಕಾರವಾರ ಭಾಗದಲ್ಲಿ ಇರುವ ಕದಂಬ ನೌಕಾನೆಲೆಯ ರಹಸ್ಯ ಸೋರಿಕೆಯ ಆತಂಕ ಕಾಡುತ್ತಿದೆ.

ಬಾಂಗ್ಲಾ ಕಿರಿಕ್: ಹೈಕಮಿಷನರ್‌ಗೆ ಸಮನ್ಸ್, ಪ್ರತಿಭಟನೆ ದಾಖಲು

ಢಾಕಾ ವೀಸಾ ಕಚೇರಿ ಬಂದ್

ದೆಹಲಿ: ನೆರೆಯ ದೇಶದಲ್ಲಿ ಹದಗೆಡುತ್ತಿರುವ ಭದ್ರತಾ ವಾತಾವರಣ ಮತ್ತು ರಾಜಕೀಯ ನಾಯಕರೊಬ್ಬರು ಇತ್ತೀಚೆಗೆ ನೀಡಿದ 'ಭಾರತ ವಿರೋಧಿ' ಹೇಳಿಕೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿರುವ ವಿದೇಶಾಂಗ ಸಚಿವಾಲಯ ಢಾಕಾದಲ್ಲಿರುವ ಭಾರತೀಯ ವೀಸಾ ಕೇಂದ್ರವನ್ನು ತಾತ್ಕಾಲಿಕವಾಗಿ ಮುಚ್ಚಲು ನಿರ್ಧರಿಸಿದೆ.

ಇದೇ ವೇಳೆ ಬುಧವಾರ ಬಾಂಗ್ಲಾದೇಶದ ಹೈಕಮಿಷನರ್ ಎಂ ರಿಯಾಜ್ ಹಮೀದುಲ್ಲಾ ಅವರಿಗೆ ಸಮನ್ಸ್ ನೀಡಿರುವ ಭಾರತ ತನ್ನ ಪ್ರಬಲ ಪ್ರತಿಭಟನೆ ದಾಖಲಿಸಿದೆ.

ಢಾಕಾದಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಬೆದರಿಕೆ ಹಾಕಿರುವ ಉಗ್ರಗಾಮಿ ಗುಂಪುಗಳ ಬಗ್ಗೆ ಹೈಕಮಿಷನರ್ ಅವರ ಗಮನ ಸೆಳೆಯಲಾಯಿತು. ಅಲ್ಲಿನ ಭದ್ರತೆ ಹದಗೆಡುತ್ತಿರುವ ಬಗ್ಗೆ ಭಾರತ ಬಲವಾದ ಕಳವಳ ವ್ಯಕ್ತಪಡಿಸಿದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಬಾಂಗ್ಲಾದ ನ್ಯಾಷನಲ್ ಸಿಟಿಜನ್ ಪಾರ್ಟಿ (ಎನ್‌ಸಿಪಿ) ನಾಯಕ ಹಸ್ನತ್ ಅಬ್ದುಲ್ಲಾ ಅವರು ಇತ್ತೀಚೆಗೆ ಸಾರ್ವಜನಿಕ ಭಾಷಣದಲ್ಲಿ, ಬಾಂಗ್ಲಾದೇಶವು ಭಾರತ ವಿರೋಧಿ ಗುಂಪುಗಳಿಗೆ ಆಶ್ರಯ ನೀಡುತ್ತದೆ ಮತ್ತು ಈಶಾನ್ಯದ ಏಳು ಸೋದರಿ ರಾಜ್ಯಗಳನ್ನು (ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ) ಪ್ರತ್ಯೇಕಿಸಲು ಸಹಾಯ ಮಾಡುತ್ತದೆ ಎಂದು ಇತ್ತೀಚೆಗೆ ಬೆದರಿಕೆಯೊಡ್ಡಿದ್ದ.

ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಘಟನೆಗಳಿಗೆ ಭಾರತ ಕಾರಣ ಎಂದು ಆತ ದೂಷಿಸಿದ್ದ. ಆದರೆ ಉಗ್ರಗಾಮಿಗಳು ಸೃಷ್ಟಿಸಿರುವ ಸುಳ್ಳು ನಿರೂಪಣೆಗಳನ್ನು ವಿದೇಶಾಂಗ ಸಚಿವಾಲಯ ತನ್ನ ಹೇಳಿಕೆಯಲ್ಲಿ ತಿರಸ್ಕರಿಸಿದೆ. 'ಮಧ್ಯಂತರ ಸರಕಾರ ಈ ಘಟನೆಗಳ ಕುರಿತು ಸಮಗ್ರ ತನಿಖೆ ನಡೆಸಿಲ್ಲ ಅಥವಾ ಭಾರತದೊಂದಿಗೆ ಅರ್ಥಪೂರ್ಣ ಪುರಾವೆಗಳನ್ನು ಹಂಚಿಕೊಂಡಿಲ್ಲ ಎಂಬುದು ದುರದೃಷ್ಟಕರ' ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಪ್ರಣಯ್ ವರ್ಮಾಗೆ ಸಮನ್ಸ್

ಭಾರತದಲ್ಲಿ ಆಶ್ರಯ ಪಡೆದಿರುವ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ಭಾರತದ ನೆಲದಿಂದ 'ಪ್ರಚೋದನಕಾರಿ' ಹೇಳಿಕೆಗಳನ್ನು ನೀಡಲು ನಿರಂತರವಾಗಿ ಅವಕಾಶ ನೀಡಲಾಗುತ್ತಿದೆ ಎಂದು ಆರೋಪಿಸಿ ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಅವರನ್ನು ಕರೆಸಿಕೊಂಡಿದ್ದ ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ ಭಾನುವಾರ ತನ್ನ ಪ್ರತಿಭಟನೆಯನ್ನು ದಾಖಲಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ಭಾರತ, ಬಾಂಗ್ಲಾದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದ ಚಟುವಟಿಕೆಗಳಿಗೆ ತನ್ನ ನೆಲವನ್ನು ಬಳಸಿಕೊಳ್ಳುವುದಕ್ಕೆ ಎಂದಿಗೂ ಅವಕಾಶ ನೀಡಿಲ್ಲ. ಮುಂಬರುವ ಸಾರ್ವತ್ರಿಕ ಚುನಾವಣೆಗಳನ್ನು ಬಾಂಗ್ಲಾದೇಶ ಶಾಂತಿಯುತ ವಾಗಿ ನಡೆಸಲಿ' ಎಂದು ಭಾನುವಾರ ವಿದೇಶಾಂಗ ಸಚಿವಾಲಯದ ಹೇಳಿತ್ತು.

ಸಿಡ್ನಿ ದಾಳಿ: ಇಸ್ಲಾಂ ಮೂಲಭೂತವಾದದ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಅಮೆರಿಕ ಕರೆ

ಜಿಹಾದಿಗಳ ವಿರುದ್ಧ ಡೊನಾಲ್ಡ್ ಟ್ರಂಪ್ ಆಕ್ರೋಶ

ವಾಷಿಂಗ್ಟನ್: ಜಗತ್ತಿನ ಎಲ್ಲಾ ರಾಷ್ಟ್ರಗಳು ಇಸ್ಲಾಂ ಮೂಲಭೂತವಾದದ ವಿರುದ್ಧ ಒಗ್ಗಟ್ಟಿನಿಂದ ಹೋರಾಡಬೇಕು ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕರೆ ನೀಡಿದ್ದಾರೆ.

ಯಹೂದಿ ಹಬ್ಬವಾದ ಹನುಕ್ಕಾವನ್ನು ಆಚರಿಸುವ ಸಲುವಾಗಿ ಯಹೂದಿ ಅಮೆರಿಕನ್ನರಿಗೆ ಶ್ವೇತ ಭವನದಲ್ಲಿ ಆಯೋಜಿಸಿದ್ದ ಆತಿಥ್ಯ ಸಮಾರಂಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ಆಸ್ಟ್ರೇಲಿಯಾದಲ್ಲಿ ನಡೆದ ಮಾರಕ ಸಾಮೂಹಿಕ ಗುಂಡಿನ ದಾಳಿಯಲ್ಲಿ 15 ಜನರು ಸಾವನ್ನಪ್ಪಿದ ಮೂರು ದಿನಗಳ ನಂತರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ವೇತಭವನದ ಹನುಕ್ಕಾ ಆಚರಣೆಯ ಕಾರ್ಯಕ್ರಮದಲ್ಲಿ ಜಗತ್ತಿನ ರಾಷ್ಟ್ರಗಳು ಇಸ್ಲಾಂ ಮೂಲಭೂತವಾದದ ವಿರುದ್ಧ ಒಗ್ಗಟ್ಟಿನ ರಂಗವನ್ನು ರೂಪಿಸುವಂತೆ ಕರೆ ನೀಡಿದರು.

ನಮ್ಮ ಇಡೀ ರಾಷ್ಟ್ರಕ್ಕೆ, ಆಸ್ಟ್ರೇಲಿಯಾದ ಜನರಿಗೆ, ವಿಶೇಷವಾಗಿ ಸಿಡ್ನಿಯಲ್ಲಿ ಹನುಕ್ಕಾ ಆಚರಣೆಯ ಮೇಲೆ ನಡೆದ ಭಯಾನಕ ಮತ್ತು ಯಹೂದಿ ವಿರೋಧಿ ಭಯೋತ್ಪಾದಕ ದಾಳಿಯಿಂದ ಬಾಧಿತರಾದ ಎಲ್ಲರಿಗೂ ಪ್ರೀತಿ ಮತ್ತು ಪ್ರಾರ್ಥನೆಗಳನ್ನು ಕಳುಹಿಸಲು ನಾನು ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ' ಎಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಟ್ರಂಪ್ ಹೇಳಿದರು.

ಇಸ್ಲಾಮಿಸಂ: ತುಳಸಿ ಗಬ್ಬಾರ್ಡ್ ಕಳವಳ: ಇದೇ ವೇಳೆ ಇಸ್ಲಾಮಿಸ್ಟ್‌ಗಳು ಮತ್ತು ಇಸ್ಲಾಮಿಸಂ ಅಮೆರಿಕಕ್ಕೆ ಮಾತ್ರವಲ್ಲದೇ ಇಡೀ ವಿಶ್ವದ ಸ್ವಾತಂತ್ರ್ಯ, ಭದ್ರತೆ, ಸಮೃದ್ಧಿಗೆ ದೊಡ್ಡ ಬೆದರಿಕೆಯಾಗಿದೆ ಎಂದು ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಕಳವಳ ವ್ಯಕ್ತಪಡಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ನಡೆದ ಇಸ್ಲಾಮಿಕ್ ಭಯೋತ್ಪಾದಕರ ಗುಂಡಿನ ದಾಳಿಗೆ ಯಾರೂ ಆಶ್ಚರ್ಯಪಡ ಬೇಕಾಗಿಲ್ಲ. ಹೆಚ್ಚಿನ ಸಂಖ್ಯೆಯ ಇಸ್ಲಾಮಿಸ್ಟ್‌ಗಳ ಒಳನುಸುಳುವಿಕೆಯೇ ಆಸ್ಟ್ರೇಲಿಯಾದ ಈ ಪರಿಸ್ಥಿತಿಗೆ ಕಾರಣ. ಆಸ್ಟ್ರೇಲಿಯಾ ಮಾತ್ರವಲ್ಲದೇ ಅಮೆರಿಕ ಸೇರಿದಂತೆ ಇಡೀ ಜಗತ್ತನ್ನು ಇಸ್ಲಾಮಿಕರಣಗೊಳಿಸುವುದು ಅವರ ಗುರಿಯಾಗಿದೆ. ಯುರೋಪ್ ಮತ್ತು ಆಸ್ಟ್ರೇಲಿಯಾಕ್ಕೆ ಇದು ತಡವಾಗಿದೆ. ಅಮೆರಿಕಕ್ಕೂ ಬಹಳ ಹತ್ತಿರದಲ್ಲೇ ಇದೆ. ಅದೃಷ್ಟವಶಾತ್ ಟ್ರಂಪ್ ಅವರು ನಮ್ಮ ಗಡಿಗಳ ಭದ್ರತೆಗೆ ಆದ್ಯತೆ ನೀಡಿದ್ದಾರೆ. ಇದರೊಂದಿಗೆ ಶಂಕಿತ ಭಯೋತ್ಪಾದಕರನ್ನು ಗಡಿಪಾರು ಮಾಡುವುದು ಮತ್ತು ಅಮೆರಿಕನ್ನರನ್ನು ಅಪಾಯಕ್ಕೆ ತಳ್ಳುವ ಸಾಮೂಹಿಕ ವಲಸೆಯನ್ನು ತಪ್ಪಿಸುವುದು ಅಗತ್ಯವಾಗಿದೆ ಎಂದು ತುಳಸಿ ಹೇಳಿದ್ದಾರೆ.

ಇನ್ನಷ್ಟು ರಾಷ್ಟ್ರಗಳ ವಲಸೆಗೆ ನಿರ್ಬಂಧ

ವಾಷಿಂಗ್ಟನ್: ನ್ಯಾಷನಲ್ ಗಾರ್ಡ್ ಟ್ರೂಪ್‌ನ ಇಬ್ಬರು ಯೋಧರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಅಫ್ಘಾನ್ ಪ್ರಜೆಯನ್ನು ಬಂಧಿಸಿದ ಬಳಿಕ 12 ರಾಷ್ಟ್ರಗಳ ನಾಗರಿಕರ ವಲಸೆಗೆ ನಿರ್ಬಂಧ ಹೇರಿದ್ದ ಅಮೆರಿಕ ಈ ಪಟ್ಟಿಯನ್ನು ಪ್ಯಾಲೆಸ್ತೀನ್ ಸೇರಿದಂತೆ 20 ದೇಶಗಳಿಗೆ ವಿಸ್ತರಿಸಿದೆ. ಇದಲ್ಲದೆ 15ಕ್ಕೂ ಹೆಚ್ಚು ದೇಶಗಳ ನಾಗರಿಕರ ಅಮೆರಿಕ ಪ್ರವಾಸಕ್ಕೆ ಬಿಗಿ ನಿಯಮ ಜಾರಿಗೊಳಿಸಲಾಗಿದೆ. ಜನವರಿ 1 ರಿಂದ ಈ ಬದಲಾವಣೆಗಳು ಜಾರಿಗೆ ಬರಲಿವೆ ಎಂದು ಟ್ರಂಪ್ ಸರಕಾರ ತಿಳಿಸಿದೆ. ಈ ಮೊದಲು ಅಫ್ಘಾನಿಸ್ತಾನ, ಬರ್ಮಾ, ಚಾಡ್, ಕಾಂಗೋ ಗಣರಾಜ್ಯ, ಈಕ್ವಟೋರಿಯಲ್ ಗಿನಿಯಾ, ಎರಿಟ್ರಿಯಾ, ಹೈಟಿ, ಇರಾನ್, ಲಿಬಿಯಾ, ಸೊಮಾಲಿಯಾ, ಸುಡಾನ್ ಮತ್ತು ಯೆಮೆನ್ ದೇಶಗಳ ಪ್ರಜೆಗಳ ಪ್ರವೇಶಕ್ಕೆ ಸಂಪೂರ್ಣ ನಿರ್ಬಂಧ ಹೇರಲಾಗಿತ್ತು. ಹೊಸದಾಗಿ ಬುರ್ಕಿನಾ ಫಾಸೊ, ಮಾಲಿ, ನೈಜರ್, ದಕ್ಷಿಣ ಸುಡಾನ್ ಮತ್ತು ಸಿರಿಯಾ ದೇಶಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಇದಲ್ಲದೆ ಪ್ಯಾಲೆಸ್ಟಿನಿಯನ್ ಪ್ರಾಧಿಕಾರ ನೀಡಿದ ಪ್ರಯಾಣ ದಾಖಲೆಗಳನ್ನು ಹೊಂದಿರುವ ವ್ಯಕ್ತಿಗಳ ಪ್ರವೇಶಕ್ಕೂ ನಿರ್ಬಂಧ ಹೇರಲಾಗಿದೆ.

ಅಂಗೋಲಾ, ಆಂಟಿಗುವಾ ಮತ್ತು ಬಾರ್ಬುಡಾಸ್, ಬೆನಿನ್, ಕೋಟ್ ಡಿ'ಐವೊಯಿರ್, ಡೊಮಿನಿಕಾ, ಗ್ಯಾಬೊನ್, ದಿ ಗ್ಯಾಂಬಿಯಾ, ಮಲಾವಿ, ಮಾರಿಟಾನಿಯಾ, ನೈಜೀರಿಯಾ, ಸೆನೆಗಲ್, ತಾಂಜಾನಿಯಾ, ಟೋಂಗಾ, ಜಾಂಬಿಯಾ ಮತ್ತು ಜಿಂಬಾಬ್ವೆ ಸೇರಿದಂತೆ 15 ದೇಶಗಳ ಮೇಲೆ ವಿಧಿಸಿದ್ದ ಭಾಗಶಃ ನಿರ್ಬಂಧಗಳನ್ನು ಮತ್ತಷ್ಟು ರಾಷ್ಟ್ರಗಳಿಗೆ ವಿಸ್ತರಿಸಲಾಗಿದೆ. ಬುರುಂಡಿ, ಕ್ಯೂಬಾ, ಟೋಗೊ ಮತ್ತು ವೆನೆಜುವೆಲಾ ಪ್ರಜೆಗಳ ಮೇಲೂ ಈ ನಿರ್ಬಂಧವನ್ನು ಹೇರಲಾಗಿದೆ.

ಕಾನೂನುಬದ್ಧ ಕಾಯಂ ನಿವಾಸಿಗಳು, ಹಾಲಿ ವೀಸಾ ಹೊಂದಿರುವವರು, ಕ್ರೀಡಾಪಟುಗಳು ಮತ್ತು ರಾಜತಾಂತ್ರಿಕ ವೀಸಾ ವರ್ಗಗಳು ಮತ್ತು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸೇವೆ ಸಲ್ಲಿಸುವ ವ್ಯಕ್ತಿಗಳಿಗೆ ಈ ಘೋಷಣೆಯು ವಿನಾಯಿತಿಯನ್ನು ನೀಡಲಿದೆ ಎಂದು ಟ್ರಂಪ್ ಆಡಳಿತ ಹೇಳಿದೆ.

ಸಮಾಚಾರ ಸಣ್ಣದಲ್ಲ

ಆತಂಕ ಸೃಷ್ಟಿಸಿದ ಅಪರಿಚಿತ

ಚನ್ನರಾಯಪಟ್ಟಣ: ತಾಲ್ಲೂಕಿನ, ದಂಡಿಗನಹಳ್ಳಿ ಹೋಬಳಿ, ಶಿವಪುರ ಗ್ರಾಮದಲ್ಲಿ ಮುಸುಕುಧಾರಿ ಯೊಬ್ಬ ಕೈಯ್ಯಲ್ಲಿ ಮಾರಕಾಸ್ತ್ರ ಹಿಡಿದು ಓಡಾಡುವ ಮೂಲಕ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದಾನೆ. ಮಂಗಳವಾರ ತಡರಾತ್ರಿ 1 ಗಂಟೆ ಸುಮಾರಿನಲ್ಲಿ ಮಾರಕಾಸ್ತ್ರ, ಟಾರ್ಚ್ ಹಿಡಿದು ಬಂದಿರುವ ಅಪರಿಚಿತ, ಕೆಲವು ಮನೆಗಳ ಮುಂದೆ ತಿರುಗಾಡಿದ್ದಾನೆ. ಯಾರಿಗೂ ಗೊತ್ತಿಲ್ಲದ ಆಸಾಮಿ ನಡೆದಾಡುವ ದೃಶ್ಯ ಗ್ರಾಮದ ಮನೆಯೊಂದರ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಆಗಂತುಕನ ಓಡಾಡದಿಂದ ಗ್ರಾಮಸ್ಥರು ಭಯಭೀತಿಗೊಂಡಿದ್ದಾರೆ. ಬೆಳಗಾಗುತ್ತಿದ್ದಂತೆಯೇ ಸ್ಥಳೀಯರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಕೂಡಲೇ ಆತನನ್ನು ಪತ್ತೆ ಮಾಡಿ ಭಯ ದೂರ ಮಾಡುವಂತೆ ಜನರು ಮನೆ ಮಾಡಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಅಪರಿಚಿತನ ಪತ್ತೆಗೆ ಬಲೆ ಬೀಸಿದ್ದಾರೆ.

ಸ್ನೇಹಿತನಿಂದಲೇ ಯುವಕನ ಹತ್ಯೆ

ಮೈಸೂರು: ಗಾಂಜಾ ಮತ್ತಿನಲ್ಲಿ ನಡೆದ ಗಲಾಟೆ ಓರ್ವನ ಕೊಲೆಯೊಂದಿಗೆ ಅಂತ್ಯವಾಗಿರುವ ಘಟನೆ ಜಿಲ್ಲೆಯ ಹೆಚ್.ಡಿ ಕೋಟೆಯಲ್ಲಿ ನಡೆದಿದೆ. ಹೆಚ್.ಡಿ.ಕೋಟೆ ಪಟ್ಟಣದ ಶಿವಾಜಿ ರಸ್ತೆ ನಿವಾಸಿ ಕಲಾಂ ಅಲಿಯಾಸ್ ಮಹಮ್ಮದ್ ರಫೀಕ್ (24) ಕೊಲೆಯಾದ ಯುವಕ. ಔಹಿದ್ ಪಾಷ ಎಂಬಾತನೇ ಕೊಲೆ ಮಾಡಿ ತಲೆ ಮರೆಸಿಕೊಂಡಿರುವ ಆರೋಪಿ. ಮಂಗಳವಾರ ರಾತ್ರಿ ಘಟನೆ ನಡೆದಿದ್ದು, ಮೃತ ಕಲಾಂಗೆ ನಿಶ್ಚಿತಾರ್ಥವಾಗಿ ಎರಡು ತಿಂಗಳಲ್ಲಿ ವಿವಾಹ ನೆರವೇರಬೇಕಿತ್ತು. ಮೃತ ಕಲಾಂ ಆರೋಪಿ ಔಹಿದ್ ಪಾಷನಿಗೆ ಕೊಡಬೇಕಿದ್ದ ಹಣದ ವಿಚಾರವಾಗಿ ಜಗಳ ಆರಂಭಗೊಂಡಿತ್ತು. ಮೊಬೈಲ್ ನಲ್ಲಿ ಪರಸ್ಪರ ಅವಾಚ್ಯ ಪದಗಳಿಂದ ನಿಂದಿಸಿಕೊಂಡ ಕೆಲವೇ ಕ್ಷಣದಲ್ಲಿ ಶಿವಾಜಿ ರಸ್ತೆಗೆ ಔಹಿದ್ ಆಗಮಿಸಿದ್ದು, ಶಿವಾಜಿ ರಸ್ತೆಯಲ್ಲಿ ಗುಂಪಿನಲ್ಲಿದ್ದ ಕಲಾಂ ತಲೆಗೆ ಔಹಿದ್ ದೊಣ್ಣೆಯಿಂದ ಥಳಿಸಿದ್ದಾನೆ. ಈ ವೇಳೆ ಬಲವಾದ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಕಲಾಂ ಸ್ಥಳದಲ್ಲಿಯೇ ತೀವ್ರ ರಕ್ತಸ್ರಾವದಿಂದ ಕುಸಿದುಬಿದ್ದಿದ್ದು, ಕೂಡಲೇ ಎಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಸ್ಥಳಾಂತರ ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಗಾಯಾಳು ಕಲಾಂ ತಡರಾತ್ರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತಲೆಮರೆಸಿಕೊಂಡ ಆರೋಪಿಯ ಬಂಧನಕ್ಕೆ ಬಲೆ ಬೀಸಿದ್ದಾರೆ.

ತಾಯಿ ನೆನಪಿಗೆ ಪೌರ ಕಾರ್ಮಿಕರಿಗೆ ಸ್ವೆಟರ್

ಚಿಕ್ಕಬಳ್ಳಾಪುರ: ನಗರಸಭೆಯ ಆವರಣದಲ್ಲಿ ಬುಧವಾರ ನಗರಸಭೆಯ ಮಾಜಿ ಸದಸ್ಯ, ವಕೀಲ ಆರ್.ಮಟಮಪ್ಪ ತಮ್ಮ ತಾಯಿ ಲಕ್ಷ್ಮಮ್ಮ 5ನೇವರ್ಷದ ಪುಣ್ಯಸ್ಮರಣೆ ಅಂಗವಾಗಿ ಮಾತಾಶ್ರೀ ಲಕ್ಷ್ಮಮ್ಮ ಸೇವಾ ಟ್ರಸ್ಟ್‌ನಿಂದ ನಗರಸಭೆಯ 100 ಮಂದಿ ಪೌರಕಾರ್ಮಿಕರಿಗೆ ಸ್ವೆಟರ್ಗಳನ್ನು ವಿತರಿಸಲಾಯಿತು. ಈ ವೇಳೆ ಮಾತನಾಡಿದ ಆರ್. ಮಟಮಪ್ಪ, ಚಳಿ, ಮಂಜು ಹಾಗೂ ಮಳೆಯನ್ನು ಲೆಕ್ಕಿಸದೇ ನಗರದ ಸ್ವಚ್ಛತೆಯ ಜೊತೆಗೆ ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಮಹತ್ತರ. ಈ ನಿಟ್ಟಿನಲ್ಲಿ ಪ್ರಸ್ತುತ ಚಳಿಗಾಲದಲ್ಲಿ ಶೀತವಾತಾವರಣ ಹೆಚ್ಚಾಗಿರುವ ಹಿನ್ನಲೆಯಲ್ಲಿ ಬೆಳಗಿನ ಜಾವವೇ ನಾಗರಿಕರ ಸೇವೆಗೆ ತೆರಳುವ ಪೌರಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಸೇವಾ ಕಾರ್ಯ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿಯೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು. ಮಟಮಪ್ಪ ಅವರ ತಂದೆ ರಾಮಯ್ಯ, ನಗರಸಭೆ ಆರೋಗ್ಯಶಾಖೆಯ ಎಇಇ ಉಮಾಶಂಕರ್,ನಗರಸಭೆ ಮಾಜಿ ಸದಸ್ಯ ಯತೀಶ್, ಹೋಟೆಲ್ ರಾಮಣ್ಣ, ಪ್ರಕಾಶ್, ಗುಂಪು ಮರದ ಆನಂದ್, ನಗರಸಭೆ ಆರೋಗ್ಯ ಅಧಿಕಾರಿ ಮುರಳಿ, ಅಂಬಾಭವಾನಿ, ಇದ್ದರು.

ಏರಿ ಬಿರುಕು: ನೀರು ಪೋಲು ತಡೆದ ತಂಡ

ಕುಣಿಗಲ್: ತಾಲ್ಲೂಕಿನ ಮಂಗಳಾ ಜಲಾಶಯದ ಏರಿಯ ತೂಬಿನ ಬಳಿ ಮಂಗಳವಾರ ರಾತ್ರಿ ಉಂಟಾದ ಬಿರುಕಿನಿಂದ ಅಪಾರ ಪ್ರಮಾಣದ ನೀರು ಪೋಲಾಗಿದ್ದು, ಹೇಮಾವತಿ ನಾಲಾವಲಯದ ಅಧಿಕಾರಿಗಳು ಹರಸಾಹಸ ಪಟ್ಟು ಬುಧವಾರ ಬಿರುಕನ್ನು ಮುಚ್ಚಿ ನೀರು ಪೋಲಾಗುವುದನ್ನು ನಿಯಂತ್ರಿಸಿದ್ದಾರೆ. ಬಿರುಕು ಬಿಟ್ಟು ನೀರು ಹರಿಯುತ್ತಿದ್ದನ್ನು ಕಂಡ ಗ್ರಾಮಸ್ಥರು ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ನಿರ್ಲಕ್ಷ್ಯ ತೋರಿದ ಪರಿಣಾಮ ಮಧ್ಯರಾತ್ರಿ ಬಿರುಕು ದೊಡ್ಡ ಪ್ರಮಾಣಕ್ಕೇರಿ ಅಪಾರ ಪ್ರಮಾಣದ ನೀರು ಹರಿದು ತೂಬಿನ ಕೆಳಭಾಗದ ಕಲ್ಲುಗಳು ನೀರಿನಲ್ಲಿ ಕೊಚ್ಚಿಹೋಗಿ ಸಮೀಪದ ಹೊಲಗದ್ದೆಗಳಿಗೆ ನೀರು ಹರಿದಿದೆ., ಮಧ್ಯರಾತ್ರಿಯಿಂದಲೇ ಎಇಇ ರುದ್ರೇಶ ತಂಡ ಗ್ರಾಮಸ್ಥರ ಸಹಕಾರದೊಂದಿಗೆ ಶ್ರಮಿಸಿದ್ದರೂ ಪ್ರಯೋಜನವಾಗದ ಕಾರಣ ಜಲಾಶಯದಲ್ಲಿ ಸಂಗ್ರಹವಾಗಿದ್ದ ನೀರನ್ನು ಕ್ರಸ್ಟ್ ಗೇಟ್ ಗಳ ಮೂಲಕ ಹೊರಬಿಡಲಾಯಿತು. ಮತ್ತೆ ಏರಿ ಕುಸಿದ ಪರಿಣಾಮ ಎರಡನೇ ಬಾರಿ ಕ್ರಸ್ಟ್ ಗೇಟ್ ಮೂಲಕ ನೀರನ್ನು ಹರಿಸಿ ದ ಬಳಿಕ ಮರಳು, ಜಲ್ಲಿ ಕಲ್ಲುಗಳನ್ನು ತುಂಬುವ ಮೂಲಕ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಮಾಜಿ ಸಚಿವ ಡಿ.ನಾಗರಾಜಯ್ಯ, ಅಧಿಕಾರಿಗಳ ಶ್ರಮದಿಂದ ಹೆಚ್ಚಿನ ಅನಾಹುತ ತಪ್ಪಿದೆ. ಮಂಗಳ ಜಲಾಶಯ ರಾಮಕೃಷ್ಣಹೆಗ್ಗಡೆ ಮುಖ್ಯಮಂತ್ರಿಯಾಗಿದ್ದಾಗ ಉದ್ಘಾಟನೆಯಾಗಿತ್ತು.

ದಾಖಲಾತಿ ಕಳೆದಿದೆ

ತುಮಕೂರು ಜಿಲ್ಲೆ, ಕೊರಟಗೆರೆ ಪಟ್ಟಣದ ಕುಂಬಾರ ಬೀದಿಯ ವಾಸಿ ಲೇಟ್ ಚಿನ್ನಪ್ಪನವರ ಮಗನಾದ ವೆಂಕಟಪತಿಯಾದ ನಾನು ನನ್ನ ವಾಸದ ಮನೆಯನ್ನು ಬದಲಾವಣೆ ಮಾಡುವಾಗ ದಿನಾಂಕ–06–06–1974 ರಂದು ಗುಂಡಯ್ಯಶೆಟ್ಟಿಯವರಿಂದ ಮುನಿಯಮ್ಮ ಕೋಮ್ ಚಿನ್ನಪ್ಪನರವರ ಹೆಸರಿಗೆ ಬದಲಾವಣೆಯಾಗಿರುವ ಮನೆಯ ಮೂಲ ಕ್ರಯಪತ್ರ ಕಳೆದು ಹೋಗಿರುತ್ತದೆ.

ಮೂಲ ಕ್ರಯಪತ್ರದ ಸಂಖ್ಯೆ–716/1974–75 ಆಗಿದ್ದು, ಮೇಲ್ಕಂಡ ಕ್ರಯ ಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ –ವೆಂಕಟಪತಿ. ಸಿ ಬಿನ್ ಲೇಟ್ ಚಿನ್ನಪ್ಪ, ಕುಂಬಾರ ಬೀದಿ, ಮಟನ್ ಮಾರ್ಕೆಟ್ ಸರ್ಕಲ್, ಕೊರಟಗೆರೆ ಇವರಿಗೆ ತಲುಪಿಸಲು ಕೋರಲಾಗಿದೆ ಅಥವಾ ಮೊಬೈಲ್ –89714 53065 ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

ಜನರ ವಿಶ್ವಾಸ ಗಳಿಸಿ, ಎನ್‌ಡಿಎ ಗೆಲ್ಲಿಸಿ

ಸ್ಥಳೀಯ ಸಂಸ್ಥೆಗಳ ಚುನಾವಣೆ | ಮೈತ್ರಿ ಅಭ್ಯರ್ಥಿಗಳೇ ಅಧಿಕಾರಕ್ಕೆ : ಸಂಸದ ಸುಧಾಕರ್ ಆಶಯ

ಬಾಗೇಪಲ್ಲಿ: ಕ್ಷೇತ್ರದ ಮತದಾರರು ಎನ್ಡಿಎಯತ್ತ ಒಲವು ತೋರುತ್ತಿರುವುದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎನ್ಡಿಎ ಬೆಂಬಲಿತ ಅಭ್ಯರ್ಥಿಗಳು ಮೇಲುಗೈ ಸಾಧಿಸಿ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತಿದ್ದು ಜನರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ನಡೆದುಕೊಳ್ಳಬೇಕೆಂದು ಸಂಸದ ಡಾ.ಕೆ.ಸುಧಾಕರ್ ಸಲಹೆ ನೀಡಿದರು.

ಸಂಸದ ಡಾ.ಕೆ.ಸುಧಾಕರ್‌ಅವರ ಗೃಹ ಕಚೇರಿಯಲ್ಲಿ ಆಯೋಜಿಸಿದ್ದ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ದ ಚೇಳೂರು, ಬಾಗೇಪಲ್ಲಿ, ಗುಡಿಬಂಡೆ ತಾಲೂಕಿನ ಹಾಲು ಒಕ್ಕೂಟದ ನಿರ್ದೇಶಕರ ಸ್ಥಾನಗಳ ಚುನಾವಣಾ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈ ದಿಸೆಯಲ್ಲಿ ಎನ್ಡಿಎ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಜಿಲ್ಲೆ ಸೇರಿದಂತೆ ಬಾಗೇಪಲ್ಲಿ, ಚೇಳೂರು, ಗುಡಿಬಂಡೆ ವ್ಯಾಪ್ತಿಯ ಎಲ್ಲಾ ಚಿಮುಲ್ ಕ್ಷೇತ್ರಗಳ ನಿರ್ದೇಶಕ ಸ್ಥಾನಗಳಲ್ಲಿ ಎನ್ಡಿಎ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಭರವಸೆ ವ್ಯಕ್ತಪಡಿಸಿದರು.

ಶೀಘ್ರದಲ್ಲಿ ನಡೆಯುವ ಚಿಮುಲ್ ಚುನಾವಣೆಯಲ್ಲಿ ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸುವ ಆಕಾಂಕ್ಷಿ ಅಭ್ಯರ್ಥಿಗಳ ಪಟ್ಟಿಯನ್ನು ನಮ್ಮ ಎನ್ಡಿಎ ಪಕ್ಷದ ನಾಯಕರಾದ ಶಿಡ್ಲಘಟ್ಟ ಶಾಸಕ ಬಿ.ಎನ್.ರವಿಕುಮಾರ್ ,ಚಿಂತಾಮಣಿಯ ಮಾಜಿ ಶಾಸಕ ಜೆ.ಕೆ.ಕೃಷ್ಣಾರೆಡ್ಡಿ, ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜುರವರ ಸಮ್ಮುಖದಲ್ಲಿ ಚರ್ಚಿಸಿ ಪರಿಶೀಲಿಸಿದ ನಂತರ ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತೇವೆ ಎಂದು ಮುಖಂಡರಿಗೆ ಸಲಹೆ ನೀಡಿದರು.

ಈ ವೇಳೆ ಜಿ.ಪಂ ಮಾಜಿ ಸದಸ್ಯ ಹರಿನಾಥರೆಡ್ಡಿ ಮಾತನಾಡಿ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಮಲ್ ಒಕ್ಕೂಟದ ಮೂರು ನಿರ್ದೇಶಕ ಸ್ಥಾನಗಳಿಗೆ ಪೆಬ್ರವರಿ ತಿಂಗಳಲ್ಲಿ ಚುನಾವಣೆ ನಡೆಯಲಿದೆ.ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಕಾರ್ಯಪ್ರವೃತ್ತರಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಎನ್ಡಿಎ ಅಭ್ಯರ್ಥಿಗಳು ಗೆಲವು ಸಾಧಿಸುವುದು ಸುಲಭವಾಗಲಿದೆ ಎಂದು ಹೇಳಿದರು.

ಬಾಗೇಪಲ್ಲಿ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಎನ್ಡಿಎ ಕಡೆ ಮತದಾರರು ಒಲವು ತೋರಿಸುತ್ತಿರುವುದರಿಂದ ಬಹುತೇಕ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಎನ್ಡಿಎ ಬೆಂಬಲಿತ ಅಭ್ಯರ್ಥಿ ಗೆಲವು ಸಾಧಿಸಿ ಅಧಿಕಾರದ ಗದ್ದುಗೇರುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗುಡಿಬಂಡೆ ತಾಲೂಕಿನ ಕಾಂಗ್ರೆಸ್ ಮುಖಂಡರಾದ ಪಯ್ಯೂರು ವೇಣುಗೋಪಾಲರೆಡ್ಡಿ, ಬೀಚಗಾನಹಳ್ಳಿ ವೆಂಕಟನರಸಪ್ಪ ಹಾಗೂ ಬೆಂಬಲಿಗರು ಜಿ.ಪಂ.ಮಾಜಿ ಸದಸ್ಯ ಹರಿನಾಥರೆಡ್ಡಿ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

ಈ ವೇಳೆ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಮುಕ್ತ ಮುನಿಯಪ್ಪ, ಜಿ.ಪಂ ಮಾಜಿ ಅಧ್ಯಕ್ಷ ಪಿ.ಎನ್. ಕೇಶವರೆಡ್ಡಿ, ಪಿಎಲ್ಡಿ

ಬ್ಯಾಂಕ್ ಅಧ್ಯಕ್ಷರು ಅಶ್ವತ್ಥರೆಡ್ಡಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಮಂಜುನಾಥರೆಡ್ಡಿ, ಮಾಜಿ ನಿರ್ದೇಶಕ ವಿ.ವೆಂಕಟಶಿವಾರೆಡ್ಡಿ, ಮುಖಂಡರಾದ ಜೆ.ಪಿ. ಚಂದ್ರಶೇಖರರೆಡ್ಡಿ, ಪಿ.ಎ.ನಾಗರಾಜುರೆಡ್ಡಿ, ಬೀಚಗಾನಹಳ್ಳಿ ಅಶ್ವತ್ಥಪ್ಪ, ಗುಜ್ಜೇಪಲ್ಲಿ ಸುಧಾಕರರೆಡ್ಡಿ, ತಟ್ಟಹಳ್ಳಿ ಮದ್ದಿರೆಡ್ಡಿ, ಮಾಸಪಲ್ಲಿ ಶಿವಣ್ಣ, ಬೈರೆಡ್ಡಿ, ನಲ್ಲಪರೆಡ್ಡಿಪಲ್ಲಿ ಶ್ರೀನಿವಾಸರೆಡ್ಡಿ ಮತ್ತಿತರರು ಇದ್ದರು.

ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ದ ಚೇಳೂರು, ಬಾಗೇಪಲ್ಲಿ, ಗುಡಿಬಂಡೆ ತಾಲೂಕಿನ ಹಾಲು ಒಕ್ಕೂಟದ ನಿರ್ದೇಶಕರ ಸ್ಥಾನಗಳ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಸಂಸದ ಡಾ.ಕೆ.ಸುಧಾಕರ್‌ಅವರನ್ನು ಸನ್ಮಾನಿಸಲಾಯಿತು.

ಚಿಮುಲ್ ಗಾಗಿ ಹರಸಾಹಸ ಪಟ್ಟಿರುವೆ

ಚಿಕ್ಕಬಳ್ಳಾಪುರ ಜಿಲ್ಲೆಯಿಂದ 80 ಕಿ.ಮೀ ದೂರದ ಕೋಲಾರದಲ್ಲಿದ್ದ ಕೋಚಿಮುಲ್ ಅನ್ನು ಬೇರ್ಪಡಿಸಿ ಚಿಮುಲ್ ಆಗಿ ಬದಲಾಯಿಸಲು ಹರಸಾಹಸ ಪಟ್ಟಿದ್ದೇನೆ. ಚಿಕ್ಕಬಳ್ಳಾಪುರ ಜಿಲ್ಲೆಯ ಹಾಲು ಉತ್ಪಾದಕರ ಹಿತಕ್ಕಾಗಿ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಚಿಮುಲ್ ಒಕ್ಕೂಟವನ್ನು ಅಸ್ತಿತ್ವಕ್ಕೆ ತಂದಿರುತ್ತೇವೆ. ಚಿಮುಲ್ ಆಡಳಿತವನ್ನು ಮತ್ತಷ್ಟು ಅಭಿವೃದ್ಧಿ ಪಥದತ್ತ ಮುನ್ನಡೆಸುವ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ ಎಂದು ಸಂಸದ ಸುಧಾಕರ ಹೇಳಿದರು.

ಬಿಜೆಪಿ ದ್ವೇಷ ರಾಜಕಾರಣ: ಪ್ರತಿಭಟನೆ

ತುಮಕೂರು: ದೆಹಲಿ ಹೈಕೋರ್ಟು ನ್ಯಾಷನಲ್ ಹೆರಾಲ್ಡ್ ಪ್ರಕರಣದ ಖಾಸಗಿ ದೂರನ್ನು ವಜಾಗೊಳಿಸುವ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಟೌನ್ಹಾಲ್ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ ಅವರ ನೇತೃತ್ವದಲ್ಲಿ ಕಾರ್ಯಕರ್ತರು, ಮುಖಂಡರುಗಳು ವಿಜಯೋತ್ಸವ ಹಾಗೂ ಬಿಜೆಪಿಯ ದ್ವೇಷ ರಾಜಕಾರಣದ ವಿರುದ್ಧ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಡಾ.ಎಸ್.ಷಫಿ ಅಹಮದ್,ಕಾಂಗ್ರೆಸ್ ಮುಖಂಡರನ್ನು ಗುರಿಯಾಗಿಸಿಕೊಂಡು ಬಿಜೆಪಿ ಪಕ್ಷ ನಡೆಸುತ್ತಿದ್ದ ದ್ವೇಷದ ರಾಜಕಾರಣಕ್ಕೆ ದೆಹಲಿ ಹೈಕೋರ್ಟು ತೀರ್ಪು ಸರಿಯಾದ ಬರೆ ಎಳೆದಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ ಮಾತನಾಡಿ, ಪಾರ್ಲಿಮೆಂಟ್ನ ವಿರೋಧಪಕ್ಷದ ನಾಯಕನಾಗಿ ರಾಹುಲ್ಗಾಂಧಿ ಅವರು ಯಶಸ್ಸು ಗಳಿಸುತ್ತಿರುವುದನ್ನು ಸಹಿಸಿಕೊಳ್ಳಲಾಗದೆ ಬಿಜೆಪಿ ನ್ಯಾಯಾಲಯದ ಮೂಲಕ ನಮ್ಮ ನಾಯಕರ ಮೇಲೆ ಒತ್ತಡ ಹೇರಲು ಮುಂದಾಗಿತ್ತು. ಆದರೆ ನ್ಯಾಯಾಲಯ ಅದಕ್ಕೆ ಆಸ್ಪದ ನೀಡದೆ, ಬಿಜೆಪಿಯ ಹುನ್ನಾರವನ್ನು ಛಿದ್ರಗೊಳಿಸಿದೆ ಎಂದರು. ಕಾಂಗ್ರೆಸ್ ಮುಖಂಡರಾದ ಎನ್.ಗೋವಿಂದರಾಜು ಮಾತನಾಡಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಗಂಗಹನುಮಯ್ಯ,ಮುಖಂಡರಾದ ಮುರುಳೀಧರ ಹಾಲಪ್ಪ, ಸಂಜೀವಕುಮಾರ್, ಹೆಬ್ಬೂರು ಶ್ರೀನಿವಾಸಮೂರ್ತಿ, ಪಿ.ಶಿವಾಜಿ, ಕೆಂಪರಾಜು, ಸುಜಾತ, ಭಾಗ್ಯ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್,ಜೆಸಿಬಿ ವೆಂಕಟೇಶ್, ಸಿಮೆಂಟ್ ಮಂಜುನಾಥ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಟೌನ್ಹಾಲ್ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಬಿಜೆಪಿಯ ದ್ವೇಷ ರಾಜಕಾರಣದ ವಿರುದ್ಧ ಪ್ರತಿಭಟನೆ ನಡೆಸಿದರು.

ಮೆಕ್ಕೆಜೋಳ ಖರೀದಿಗೆ ಆಗ್ರಹ: ಮುತ್ತಿಗೆ

ಹಾಸನ: ಜಿಲ್ಲೆಯ ರೈತರಿಂದ ಸಮರ್ಪಕ ರೀತಿಯಲ್ಲಿ ಮೆಕ್ಕೆಜೋಳ ಖರೀದಿ ಮಾಡದ ಕೆಎಂಎಫ್ ಪಶು ಆಹಾರ ಕೇಂದ್ರದ ಆಡಳಿತ ಮಂಡಳಿ ಕ್ರಮ ಖಂಡಿಸಿ ರೈತರು ಚನ್ನಪಟ್ಟಣದಲ್ಲಿರುವ ಕೇಂದ್ರದ ಎದುರು ಪ್ರತಿಭಟನೆ ನಡೆಸಿದರು.

ರಾಜ್ಯ ಕೆಎಂಎಫ್‌ನಿಂದ 10 ಸಾವಿರ ಮೆಟ್ರಿಕ್ ಟನ್ ಜೋಳ ಖರೀದಿಗೆ ಸೂಚನೆ ನೀಡಲಾಗಿದೆ. ಇದುವರೆಗೂ 9 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಹಾಸನ ಕೆಎಂಎಫ್ ಖರೀದಿಸಿದೆ.

ಉಳಿದ 1 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನ ರೈತರಿಂದ ಖರೀದಿಸಲು ಕೆಎಂಎಫ್ ಮುಂದಾಗುತ್ತಿದ್ದಂತೆಯೇ ಲೋಡ್ ಗಟ್ಟಲೆ ಜೋಳ ತುಂಬಿ ಕೊಂಡು ನೂರಾರು ರೈತರು ಕೆಎಂಎಫ್ ಮುಂದೆ ಜಮಾಯಿಸಿದ್ದರು.

ಆದರೆ ಮಂಗಳವಾರದವರೆಗೆ 1 ಸಾವರ ಮೆಟ್ರಿಕ್ ಟನ್ ಖರೀದಿಸಲಾಗಿದೆ ಎಂದು ಕೆಎಂಎಫ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇದರಿಂದ ಸಿಟ್ಟಾದ ರೈತರು, ಎಲ್ಲ ಜೋಳವನ್ನು ಖರೀದಿ ಮಾಡುವಂತೆ ಒತ್ತಾಯಿಸಿ ಕೆಎಂಎಫ್ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ಆಕ್ರೋಶ ಹೊರ ಹಾಕಿದರು.

ಕೆಎಂಎಫ್ ಆದೇಶದಂತೆ ನಾವು ಜೋಳ ಖರೀದಿ ಮಾಡಿದ್ದು, ಆದೇಶ ಮೀರಿ ನಾವು ಏನನ್ನೂ ಮಾಡಲಾಗುವುದಿಲ್ಲ ಎಂದು ಅಧಿಕಾರಿಗಳು ಸಮಜಾಯಿಷಿ ನೀಡಲು ಮುಂದಾದರು.

ಆದರೆ ಪಟ್ಟು ಬಿಡದ ರೈತರು ಹೋರಾಟ ಮುಂದುವರಿಸಿದರು. ಕಡೆಗೂ ರೈತರ ಒತ್ತಡಕ್ಕೆ ಮಣಿದ ಕೆಎಂಎಫ್, ಸ್ಥಳದಲ್ಲಿರುವವರ ಜೋಳವನ್ನು ದಿನಾಂಕ ನಿಗದಿ ಮಾಡಿ ಖರೀದಿಸುತ್ತೇವೆ ಎಂದು ಭರವಸೆ ನೀಡಿದರು.

ನಾವು ಆಹ್ವಾನಿಸಿದ ದಿನದಂದು ಮೆಕ್ಕೆಜೋಳ ತರುವಂತೆ ಹೇಳಿದ ಅಧಿಕಾರಿಗಳು, ರೈತರಿಂದ ಆಧಾರ್‌ಕಾರ್ಡ್ ಜೆರಾಕ್ಸ್ ಪಡೆದು ದಿನಾಂಕ ನಿಗದಿ ಮಾಡಿ ಕಳುಹಿಸಿದರು.

ಭ್ರಷ್ಟಾಚಾರ: ಉಪ ಲೋಕಾಯುಕ್ತರ ಗುಡುಗು

ದೂರು ಬಾರದಂತೆ ಕೆಲಸ ನಿರ್ವಹಿಸಿ | ಅಧಿಕಾರಿಗಳಿಗೆ ಕಟ್ಟಪ್ಪಣೆ

ಕೋಲಾರ: ಭ್ರಷ್ಟಾಚಾರದಿಂದ ಭಾರತವು ಅಭಿವೃದ್ಧಿಯಲ್ಲಿ ಸೊರಗುತ್ತಿದ್ದು ಅಧಿಕಾರಿಗಳು ಸಾರ್ವಜನಿಕರಿಂದ ದೂರುಗಳು ಬಾರದಂತೆ ಕೆಲಸ ನಿರ್ವಹಿಸಬೇಕೆಂದು ಉಪ ಲೋಕಾಯುಕ್ತ ಬಿ. ವೀರಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎರಡು ದಿನಗಳ ಸಾರ್ವಜನಿಕ ದೂರು ವಿಚಾರಣೆ ಹಾಗೂ ಬಾಕಿ ದೂರು ವಿಲೇವಾರಿ ಕಾರ್ಯಕ್ರಮದಲ್ಲಿ ಮಾತನಾಡಿ, ಭ್ರಷ್ಟ ವ್ಯವಸ್ಥೆ ಹಾಗೂ ಅಧಿಕಾರಿಗಳ ವಿಳಂಬ ಧೋರಣೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ ಕಾಲಮಿತಿಯಲ್ಲಿ ದೂರುಗಳ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕೆಂದರು. ಸ್ವಾತಂತ್ರ್ಯ ಬಂದು 79 ವರ್ಷಗಳಾದರೂ, ಭ್ರಷ್ಟಾಚಾರದ ಭೂತ ದೇಶವನ್ನು ಕಾಡುತ್ತಿದ್ದು ಇದನ್ನು ತೊಲಗಿಸಿದರೆ ಭಾರತ ಜಗತ್ತಿನಲ್ಲೇ ನಂಬರ್‌ಒನ್ ಆಗಲಿದೆ.

ಸರ್ಕಾರಿ ಅಧಿಕಾರಿಗಳು ಪಡೆಯುವ ಸಂಬಳ ಸಾರ್ವಜನಿಕರ ತೆರಿಗೆಯ ಹಣ ಎಂಬುದನ್ನು ಮರೆಯಬಾರದು. ಸರ್ಕಾರಿ ಕೆಲಸವೆಂದರೆ ಅದು ಸಾರ್ವಜನಿಕ ಸೇವೆಗೆ ಸಿಕ್ಕ ಪರವಾನಗಿಯೇ ಹೊರತು, ಲಂಚ ಪಡೆಯಲು ಸಿಕ್ಕ ಅವಕಾಶವಲ್ಲ ಎಂದು ಕಿಡಿ ಕಾರಿದರಲ್ಲದೆ ಪ್ರಾಮಾಣಿಕ ಅಧಿಕಾರಿಗಳಿಗೆ ತೊಂದರೆ ಎದುರಾದರೆ ಲೋಕಾಯುಕ್ತ ಸಂಸ್ಥೆ ಅವರ ಬೆನ್ನಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದರು.

ಲೋಕಾಯುಕ್ತಕ್ಕೆ ಬರುವ ಸುಮಾರು 25,000 ಪ್ರಕರಣಗಳಲ್ಲಿ 7,000 ದಿಂದ 8,000 ಪ್ರಕರಣಗಳು ಸುಳ್ಳು ದೂರುಗಳಾಗಿರುತ್ತವೆ.

ಇಂತಹ ಸುಳ್ಳು ದೂರುದಾರರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಬೇಕು ಎಂದು ತಾಕೀತು ಮಾಡಿದರು. ಉಪಲೋಕಾಯುಕ್ತರು 10 ಸುಮೋಟೋ ಪ್ರಕರಣ ಸೇರಿದಂತೆ ಒಟ್ಟು 116 ಪ್ರಕರಣಗಳನ್ನು ಬುಧವಾರ ವಿಲೇವಾರಿ ಮಾಡಿದರು.

128 ಪ್ರಕರಣಗಳನ್ನು ಗುರುವಾರ ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿದರು. ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ, ಜಿಪಂ ಸಿಇಒ ಡಾ. ಪ್ರವೀಣ್ ಪಿ. ಬಾಗೇವಾಡಿ, ಎಸ್ಪಿ ಡಾ. ಬಿ. ನಿಖಿಲ್,ಹಿರಿಯ ಸಿವಿಲ್ ನ್ಯಾಯಾಧೀಶ ಆರ್. ನಟೇಶ್, ಜಿಲ್ಲಾ ಅರಣ್ಯ ಸಂರಕ್ಷಣಾ ಅಧಿಕಾರಿ ಸರಿನಾ ಸಿಕ್ಕಲಿಗಾರ್,ಉಪವಿಭಾಗಾಧಿಕಾರಿ ಡಾ. ಮೈತ್ರಿ, ಲೋಕಾಯುಕ್ತ ಎಸ್ಪಿ ಅಂತೋನಿ ಜಾನ್ ಇದ್ದರು.

ಉಪ ಲೋಕಾಯುಕ್ತ ವೀರಪ್ಪ ಅವರು ವಿಚಾರಣಾ ಸಭೆಯನ್ನು ಉದ್ಘಾಟಿಸಿದರು.

ಮಾಹಿತಿ ಹಕ್ಕು ಬ್ಲ್ಯಾಕ್ಮೇಲ್ ಗೆ ಬಳಕೆ

ಚುನಾವಣೆಯಲ್ಲಿ ಹಣಕ್ಕೆ ಮತ ಮಾರಿಕೊಳ್ಳುವುದು ಗುಲಾಮಗಿರಿ ಸಂಕೇತವಾಗಿದ್ದು ಇದರಿಂದಾಗಿ ಸಮರ್ಥ ನಾಯಕರು ಆಯ್ಕೆಯಾಗುತ್ತಿಲ್ಲ. ಮಾಹಿತಿ ಹಕ್ಕು ಕಾಯ್ದೆಯನ್ನು ಕೆಲವು ವ್ಯಕ್ತಿಗಳು ಪ್ರಾಮಾಣಿಕ ಅಧಿಕಾರಿಗಳನ್ನು ಬ್ಲ್ಯಾಕ್ಮೇಲ್ ಮಾಡಲು ಬಳಸಿಕೊಳ್ಳುತ್ತಿರುವುದು ಆತಂಕಕಾರಿ ವಿಷಯ ಎಂದು ಉಪ ಲೋಕಾಯುಕ್ತ ವೀರಪ್ಪ ಪ್ರತಿಕ್ರಿಯಿಸಿದರು.

ಬೇಡಿಕೆಗೆ ಸಿಪಿಎಂ ಪ್ರತಿಭಟನೆ

ಗುಡಿಬಂಡೆ: ಬಗರ್‌ಹುಕುಂ ಸಾಗುವಳಿ ಚೀಟಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಡಿ.21 ರಂದು ಬೆಂಗಳೂರಿನ ಫ್ರೀಡಂಪಾರ್ಕ್ ನಲ್ಲಿ ಬೃಹತ್ ಪ್ರತಿಭಟನಾ ಬಹಿರಂಗ ಸಭೆಯನ್ನು ಸಿಪಿಎಂ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಈ ಹೋರಾಟಕ್ಕೆ ಸಾಥ್ ನೀಡಬೇಕೆಂದು ಸಿಪಿಎಂ ಪಕ್ಷದ ಮುಖಂಡರು ಮನವಿ ಮಾಡಿದರು.

ಪಟ್ಟಣದ ಸಿಪಿಎಂ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಜಯರಾಮರೆಡ್ಡಿ, ರೈತರು, ಬಡವರು, ಕೂಲಿಕಾರರು ಸೇರಿದಂತೆ ಬಡವರ ಪರ ಕೆಲಸ ಮಾಡುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ವಿಫಲವಾಗಿದೆ. ಚುನಾವಣೆಗಳ ಸಮಯದಲ್ಲಿ ಸುಳ್ಳು ಭರವಸೆಗಳನ್ನು ಕೊಟ್ಟು ಎಲ್ಲರಿಗೂ ಮಂಕು ಬೂದಿ ಎರಚಿ ಅಧಿಕಾರ ಗಿಟ್ಟಿಸಿಕೊಳ್ಳುತ್ತವೆ. ಚುನಾವಣೆಯ ಬಳಿಕ ಎಲ್ಲರನ್ನೂ ಮರೆತೆ ಹೋಗುತ್ತಾರೆ. ಫಾರಂ ನಂ 57 ರಲ್ಲಿ ಅರ್ಜಿ ಸಲ್ಲಿಸಿರುವವರಿಗೆ ಇಲ್ಲಿಯವರೆಗು ಭೂಮಿ ನೀಡಿಲ್ಲ. ಅದರ ಬದಲಿಗೆ ಅರ್ಜಿ ಹಾಕಿದ ಪಹಣಿಯಲ್ಲಿ ಗೋಮಾಳ ಎಂದು ನಮೂದಾಗಿದ್ದರೇ, ಅಂತಹ ಜಮೀನು ಮಂಜೂರು ಮಾಡಬಾರದೆಂಬ ಮಾರ್ಗಸೂಚಿ ಬಂದಿದೆ. ಇದರಿಂದ ಅನೇಕ ರೈತರಿಗೆ ಅನ್ಯಾಯವಾಗಿದೆ. ಈ ರೀತಿಯಾಗಿ ಅನೇಕ ರೈತ ವಿರೋಧಿ, ಬಡವಿರೋಧಿ, ಸಾಮಾನ್ಯ ವರ್ಗದ ವಿರೋಧಿ ನೀತಿಗಳ ವಿರುದ್ಧ ಡಿ.21 ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಈ ಹೋರಾಟಕ್ಕೆ ಎಲ್ಲರೂ ಸಾಥ್ ನೀಡಬೇಕು ಎಂದರು.

ಬಳಿಕ ಮುಖಂಡ ಚೆನ್ನರಾಯಪ್ಪ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ರೈತ ವಿರೋಧಿ ಕಾಯ್ದೆಗಳನ್ನು ಜಾರಿ ಮಾಡಿದೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದ್ದು, ಬೃಹತ್ ಕಂಪನಿಗಳಿಗೆ ಅನುಕೂಲವಾಗುತ್ತಿದೆ. ರಾಜ್ಯದಲ್ಲಿ ಬಡವರ ಪಡಿತರ ಚೀಟಿಗಳನ್ನು ರದ್ದು ಮಾಡಲಾಗುತ್ತಿದೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಸಾಕಷ್ಟು ಕಚೇರಿಗಳಲ್ಲಿ ಸಿಬ್ಬಂದಿಯಿಲ್ಲದೇ ರೈತರು ಹಾಗೂ ಜನರ ಕೆಲಸಗಳೇ ನಡೆಯುತ್ತಿಲ್ಲ. ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸಿಪಿಎಂ ಪಕ್ಷ ಬೃಹತ್ ಹೋರಾಟಕ್ಕೆ ಸಿದ್ದವಾಗಿದೆ. ಪ್ರತಿ ಊರು ಊರಿಗೂ ನಮ್ಮ ಪಕ್ಷ ತೆರಳಿ ಈ ಹೋರಾಟದ ಕುರಿತು ಜಾಗೃತಿ ಮೂಡಿಸುತ್ತೇವೆ. ಜನರು ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಸಿಪಿಎಂ ಪಕ್ಷದ ತಾಲೂಕು ಕಾರ್ಯದರ್ಶಿ ವೆಂಕಟರಾಜು, ಮುಖಂಡರಾದ ರಮಣ, ದಪ್ಪರ್ತಿ ದೇವರಾಜು , ಉಪ್ಪಾರಹಳ್ಳಿ ಶ್ರೀನಿವಾಸ್, ಆದಿನಾರಾಯಣಸ್ವಾಮಿ ಇದ್ದರು.

ಸಿಪಿಎಂ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೋರಾಟದ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಎಸ್‌ಐಟಿಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ನಾಳೆಯಿಂದ

ತುಮಕೂರು: ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್‌ಸೈನ್ಸ್ ಮತ್ತು ಇನ್ಫರ್ಮೇಶನ್ ಸೈನ್ಸ್ ವಿಭಾಗಗಳ ಸಂಘಟನೆಯಿಂದ ಇಇಇ ಕಂಪ್ಯೂಟರ್‌ಸೊಸೈಟಿ ಆಶ್ರಯದಲ್ಲಿ ಡಿ.19 ಮತ್ತು 20ರಂದು ಮೂರನೇ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಎಸ್.ಐ.ಟಿ. ಪ್ರಾಂಶುಪಾಲ ಡಾ.ದಿನೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂತರರಾಷ್ಟ್ರೀಯ ಸಮ್ಮೇಳನದ ಉದ್ದೇಶವು ಭಾರತ ಹಾಗೂ ವಿದೇಶಗಳ ಪ್ರಮುಖ ಸಂಶೋಧಕರು, ಪ್ರಾಧ್ಯಾಪಕರು, ಕೈಗಾರಿಕಾ ತಜ್ಞರು ಮತ್ತು ವೃತ್ತಿಪರರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ, ಉದಯೋನ್ಮುಖ ಗಣಕ ಮತ್ತು ಮಾಹಿತಿ ತಂತ್ರಜ್ಞಾನಗಳ ಕ್ಷೇತ್ರದಲ್ಲಿನ ಇತ್ತೀಚಿನ ಅಭಿವೃದ್ಧಿಗಳು, ಸವಾಲುಗಳು ಹಾಗೂ ನವೀನ ಆವಿಷ್ಕಾರಗಳ ಕುರಿತು ಚರ್ಚೆ ಮತ್ತು ಜ್ಞಾನ ವಿನಿಮಯ ನಡೆಸುವುದಾಗಿದೆ. ಶೈಕ್ಷಣಿಕ ಮತ್ತು ಕೈಗಾರಿಕೆ ನಡುವಿನ ಸಹಕಾರವನ್ನು ಬಲಪಡಿಸುವ ವೇದಿಕೆಯಾಗುವುದೇ ಈ ಸಮ್ಮೇಳನದ ಪ್ರಮುಖ ಆಶಯವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಎನ್.ಆರ್.ಸುನಿತಾ, ಪ್ರೊ.ಅಪರ್ಣಾ ಆರ್ ಇದ್ದರು.

ಇಂದಿನಿಂದ ಅಸ್ಟ್ರಿಂಗ್ ಮೈಸೂರ್ ಪ್ರದರ್ಶನ

ಮೈಸೂರು: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾರ್ಗದರ್ಶನದಲ್ಲಿ, ದೆಹಲಿ ಮೂಲದ ಪ್ರಯಾಸ್ ಈವೆಂಟ್ಸ್ ???ಂಡ್ ಎಕ್ಸಿಬಿಷನ್ಸ್ ಮೂಲಕ ಅಸ್ಟ್ರಿಂಗ್ ಮೈಸೂರು'' ಎಂಬ ಮೆಗಾ ಪ್ರದರ್ಶನವನ್ನು ಆಯೋಜಿಸಲಾಗುತ್ತಿದೆ.

ಡಿ.18, 19 ಮತ್ತು 20ರಂದು ಮೈಸೂರಿನ ಹಳೆಯ ಡಿಸಿ ಕಚೇರಿಯ ಹಿಂಭಾಗದಲ್ಲಿರುವ ಭಾರತ ಸೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆಯಲಿದೆ. ಈ ಪ್ರದರ್ಶನದ ಉದ್ಘಾಟನೆಯನ್ನು ತ್ರಿಶಿಕಾಕುಮಾರಿ ಒಡೆಯರ್ ಡಿ.18ರ ಬೆಳಿಗ್ಗೆ 11 ಗಂಟೆಗೆ ನೆರವೇರಿಸುವರು.

ಈ ಮೆಗಾ ಪ್ರದರ್ಶನದಲ್ಲಿ ವಿವಿಧ ಕೇಂದ್ರ, ಸರ್ಕಾರದ ಸಚಿವಾಲಯಗಳು, ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಪ್ರಮುಖ ರಾಷ್ಟ್ರೀಯ ಸಂಸ್ಥೆಗಳು ಸಹರ್ಷವಾಗಿ ಭಾಗವಹಿಸಲಿದ್ದು, ಇವರು ಅಭಿವೃದ್ಧಿ ಹೊಂದಿದ ಭಾರತ 2047ರ ದೃಷ್ಟಿಕೋನಕ್ಕೆ ಅನುಗುಣವಾಗಿ ತಮ್ಮ ಇತ್ತೀಚಿನ ಉಪಕ್ರಮಗಳು, ನಾವೀನ್ಯತೆಗಳು ಮತ್ತು ಅಭಿವೃದ್ಧಿಯ ಕೊಡುಗೆಗಳನ್ನು ಪ್ರದರ್ಶಿಸಲಿದ್ದಾರೆ. ಆಸ್ಟ್ರಿಂಗ್ ಮೈಸೂರು ಮೆಗಾ ಪ್ರದರ್ಶನವು ಮೈಸೂರಿನ ನಾಗರಿಕರಿಗೆ ಸಮಗ್ರ, ಸಮೃದ್ಧ ಮತ್ತು ಸಂವಾದಾತ್ಮಕ ವೇದಿಕೆಯಾಗಿ ಕಲ್ಪಿಸಲಾಗಿದೆ. ಸಾರ್ವಜನಿಕರಲ್ಲಿ ಜಾಗೃತಿ, ಕಲಿಕೆ ಮತ್ತು ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ, ವಿವಿಧ ಸರ್ಕಾರಿ ಯೋಜನೆಗಳು, ಸಾರ್ವಜನಿಕ ಕಲ್ಯಾಣ ಉಪಕ್ರಮಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಂದರ್ಶಕರಿಗೆ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ, ಪರಿಸರ ಮತ್ತು ಅರಣ್ಯ, ಹವಾಮಾನ ಬದಲಾವಣೆ, ಆರೋಗ್ಯ, ಬಂದರುಗಳು ಮತ್ತು ಸಾಗಾಣಿಕೆ, ಗಣಿಗಾರಿಕೆ, ಕರಕುಶಲ ವಸ್ತುಗಳು ಮತ್ತು ಜವಳಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಪ್ರದರ್ಶನವು ಪ್ರದರ್ಶಿಸುತ್ತದೆ. ಮಾಹಿತಿಯುಕ್ತ ಪ್ರದರ್ಶನಗಳು, ಸಂವಾದಾತ್ಮಕ ಅವಧಿಗಳು ಮತ್ತು ಜ್ಞಾನಾಧಾರಿತ ಅನುಭವಗಳ ಮೂಲಕ, ಪ್ರದರ್ಶನವು ನಾಗರಿಕರನ್ನು ಸಬಲೀಕರಣಗೊಳಿಸುತ್ತದೆ ಮತ್ತು ಪ್ರಗತಿ ಮತ್ತು ನಾವೀನ್ಯತೆಯ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾರ್ವಜನಿಕರನ್ನು ಪ್ರೇರೇಪಿಸುತ್ತದೆ. ಈ ಕಾರ್ಯಕ್ರ ಮದ ಮುಖ್ಯ ಆಕರ್ಷಣೆಯೆಂದರೆ, ಯುವ ಸಬಲೀಕರಣದ ಮೇಲೆ ವಿಶೇಷ ಗಮನ ವಿದ್ಯಾರ್ಥಿಗಳು ವೈವಿಧ್ಯಮಯ ವೃತ್ತಿ ಆಯ್ಕೆಗಳು, ಶೈಕ್ಷಣಿಕ ಮಾರ್ಗಗಳು, ಸಂಶೋಧನಾ ಅವಕಾಶಗಳು ಮತ್ತು ಕೌಶಲ್ಯಾಭಿವೃದ್ಧಿ ಸಾಧ್ಯತೆಗಳನ್ನು ಪೂರ್ಣಗೊಳಿಸಕೊಳ್ಳಲು ಸಂಭಾವ್ಯ ಅವಕಾಶವನ್ನು ಹೊಂದುತ್ತಾರೆ. ಇದು ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಉತ್ತಮ ಮತ್ತು ಮಾಹಿತಿಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಪ್ರದರ್ಶನದ ಸಾಂಸ್ಕೃತಿಕ ಹಿರಿಮೆಯನ್ನು ಮತ್ತಷ್ಟು ಸಮೃದ್ಧಗೊಳಿಸಲು ಭಾರತದ ಸಮೃದ್ಧ ಶಿಲ್ಪ ಪರಂಪರೆಯನ್ನು ಪ್ರತಿನಿಧಿಸುವ ಕೈಮಗ್ಗ, ಕರಕುಶಲ ವಸ್ತುಗಳು ಮತ್ತು ನೈಸರ್ಗಿಕ ನಾರಿನ ಉತ್ಪನ್ನಗಳು ಸೇರಿದಂತೆ ಭಾರತದ ಸಂಪ್ರದಾಯಗಳನ್ನು ನವಪೀಳಿಗೆಗೆ ಪರಿಚಯಿಸುವುದಕ್ಕಾಗಿ ಕುಶಲಕರ್ಮಿಗಳು ತಮ್ಮ ಕೈಯಿಂದ ತಯಾರಿಸಿದ ಆಕರ್ಷಕ ವಸ್ತುಗಳ ಪ್ರದರ್ಶನವನ್ನು ಪ್ರಸ್ತುತಪಡಿಸುವುದರೊಂದಿಗೆ ಅತ್ಯುತ್ತಮ ಕರಕುಶಲತೆ ಮತ್ತು ಪರಂಪರೆಯನ್ನು ಪ್ರದರ್ಶಿಸಲಿದ್ದಾರೆ.

ಹಳೆಯ ಹುದ್ದೆಗೆ ಮರಳಿದ ಪೌರಾಯುಕ್ತರು

ವಿಶ್ವವಾಣಿ ವರದಿ ಅಧಿವೇಶನದಲ್ಲಿ ಪ್ರಸ್ತಾಪ | ಎಂಎಲ್ಸಿ ರಮೇಶಬಾಬು ಕಿಡಿ

ವಿಶ್ವವಾಣಿ ಕಾಳಜಿ

ಚಿಕ್ಕನಾಯಕನಹಳ್ಳಿ: ಪೌರಾಡಳಿತ ಇಲಾಖೆಯ ಅಧಿಕಾರಿಯೊಬ್ಬರು ಬಡ್ತಿ ಪಡೆದು ಕೇವಲ ಒಂದು ದಿನ ಅಧಿಕಾರ ಚಲಾಯಿಸಿ, ಮರುದಿನವೇ ಹಳೆಯ ಹುದ್ದೆಗೆ ಮರಳಿರುವ ವಿಲಕ್ಷಣ ಸಂಬಳದ ಹಗರಣ ಇಂದು ವಿಧಾನಪರಿಷತ್ತಿನಲ್ಲಿ ಪ್ರತಿಧ್ವನಿಸಿತು. ಆಡಳಿತ ಪಕ್ಷದ ವಿಧಾನಪರಿಷತ್ತಿನ ಸದಸ್ಯರಾದ ರಮೇಶಬಾಬು ಅವರು ವಿಶ್ವವಾಣಿ ಪತ್ರಿಕೆಯ ವರದಿಯನ್ನು ಉಲ್ಲೇಖಿಸಿ ಚಿಕ್ಕನಾಯಕನಹಳ್ಳಿ ಪುರಸಭೆಯ ಭ್ರಷ್ಟಾಚಾರ ಮತ್ತು ಅಧಿಕಾರಿಗಳ ಬೇಜವಾಬ್ದಾರಿತನದ ವಿರುದ್ಧ ತೀವ್ರ ಆಕ್ರೋಷ ವ್ಯಕ್ತಪಡಿಸಿದರು.

ವಿಷಯ ಪ್ರಸ್ತಾಪಿಸಿದ ರಮೇಶಬಾಬು ಅವರು ವಿಶ್ವವಾಣಿ ಪತ್ರಿಕೆಯು ವ್ಯವಸ್ಥೆಯ ಅಣಕವನ್ನು ಬಯಲಿಗೆಳದಿದೆ. ಅಧಿಕಾರಿ ಮಂಜಮ್ಮ ಅವರು ಪೌರಾಯುಕ್ತರಾಗಿ ಪದೋನ್ನತಿ ಪಡೆದಿದ್ದಾರೆ. ನಿಯಮದಂತೆ ಅವರು ಹೊಸ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕಿತ್ತು. ಆದರೆ, ಕೇವಲ ಒಂದು ದಿನ ಅಧಿಕಾರ ವಹಿಸಿಕೊಂಡು ಮರುದಿನವೇ ತಮಗೆ ಲಾಭದಾಯಕವಾಗಿರುವ ಹಳೆಯ ಹುದ್ದೆಗೆ ವಾಪಸ್ ಬಂದಿದ್ದಾರೆ. ಇದು ಕೇವಲ ಉನ್ನತ ಶ್ರೇಣಿ ಗಿಟ್ಟಿಸಿಕೊಳ್ಳಲು ಮಾಡಿದ ತಂತ್ರವಲ್ಲವೇ ? ಎಂದು ಪ್ರಶ್ನಿಸಿದರು.

ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ನಡೆದಿದೆ ಎನ್ನಲಾದ ಹತ್ತಾರು ಕೋಟಿ ದುರುಪಯೋಗವಾಗಿರುವ ಬಗ್ಗೆ ಲೆಕ್ಕ ಪರಿಶೋಧನಾ ವರದಿ ಬಂದಿದ್ದರೂ ಪುರಸಭೆ ಅದನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದೆ. ಮುಖ್ಯಾಧಿಕಾರಿ ಸಭೆಗಳಿಗೆ ಹಾಜರಾಗುತ್ತಿಲ್ಲ. ಜನಪ್ರತಿನಿಧಿಗಳ ಪೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ ಇಂತಹ ಅಧಿಕಾರಿಗಳಿಂದ ಆಡಳಿತ ಯಂತ್ರ ಕುಸಿದಿದೆ ಎಂದು ಆಕ್ರೋಶ ಹೊರಹಾಕಿದರು.

ಹಗರಣದ ತೀವ್ರತೆಯನ್ನು ಪರಿಗಣಿಸಿ ಸಚಿವರು ಕಚೇರಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕು. ಆಡಿಟ್ ವರದಿಯನ್ನು ಹೊರತೆಗೆದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಆಡಳಿತ ಪಕ್ಷದ ಸದಸ್ಯರೇ ಪತ್ರಿಕಾ ವರದಿ ಹಿಡಿದು ಸರಕಾರದ ನಡೆಯನ್ನು ಪ್ರಶ್ನಿಸಿದ್ದು ಸದನದಲ್ಲಿ ತೀವ್ರ ಕುತೂಹಲ ಮೂಡಿಸಿತಲ್ಲದೆ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು.

ವಿಶ್ವವಾಣಿ

ಪೌರಾಯುಕ್ತೆ ಹುದ್ದೆಗೆ ಬಡ್ತಿ ಕೇವಲ ಸಂಬಳಕ್ಕಷ್ಟೆ !

2 ಕೋಟಿ ರು.ಗಳಿಗೂ ಅಧಿಕ ಆಡಿಟ್ ಆಕ್ಷೇಪಣೆ

ಸಮಾಚಾರ ಸಣ್ಣದಲ್ಲ

ಏಜೆಂಟರು ಪದ ಬಳಕೆ ಖಂಡನೀಯ

ಮಡಿಕೇರಿ: ವಿಧಾನಸಭೆಯ ಅಧಿವೇಶನದಲ್ಲಿ ಭೂಕಂದಾಯ ತಿದ್ದುಪಡಿ ವಿಧೇಯಕವನ್ನು ಮಂಡಿಸುವ ಸಂದರ್ಭ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು 'ಕೊಡವ ಪಟ್ಟೆದಾರರನ್ನು ಏಜೆಂಟರು' ಎಂದು ಸಂಭೋದಿಸುವ ಮೂಲಕ ಕೊಡವರನ್ನು ಅವಮಾನಿಸಿದ್ದಾರೆ ಎಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಅವರು ಆರೋಪಿಸಿದ್ದಾರೆ.ಸಚಿವರು ತಕ್ಷಣ ಕೊಡವರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ. ಕೊಡವರ ಒಂದು ಕುಟುಂಬದ (ಒಕ್ಕ) ಹಿರಿಯ ಸದಸ್ಯರನ್ನು ಕೊಡವರು 'ಪಟ್ಟೆದಾರ' ಎಂದು ಕರೆಯುತ್ತಾರೆ. ಇದರ ಅರಿವಿಲ್ಲದಿದ್ದರೆ ಸಚಿವರು ಇತಿಹಾಸವನ್ನು ಓದಿ ತಿಳಿದುಕೊಳ್ಳುವುದು ಉತ್ತಮ. ಸಚಿವ ಕೃಷ್ಣ ಬೈರೇಗೌಡ ಅವರು ಸದನದಲ್ಲಿ 'ಏಜೆಂಟರು' ಪದ ಬಳಕೆ ಮಾಡುವ ಸಂದರ್ಭ ಕೊಡಗಿನ ಶಾಸಕರು ಯಾವುದೇ ಆಕ್ಷೇಪ ವ್ಯಕ್ತಪಡಿಸದೇ ಇರುವುದು ಮತ್ತು ಸರಿಯಾದ ಮಾಹಿತಿಯನ್ನು ಒದಗಿಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿಗೆ ನೇಮಕ

ಮಡಿಕೇರಿ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಡಿಕೇರಿಯ ಎಸ್ ಎಸ್ ಸಂಪತ್ ಕುಮಾರ್ ನೇಮಕಗೊಂಡಿದ್ದಾರೆ. ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದ ಸಂಪತ್ ಕುಮಾರ್ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕೊಡಗು ಜಾನಪದ ಪರಿಷತ್ ನ ಖಜಾಂಜಿಗಳೂ ಆಗಿದ್ದಾರೆ. ಅವರನ್ನು ಅಖಿಲ ಕನಾ9ಟಕ ಬ್ರಾಹ್ಮಣ ಮಹಾಸಭಾದ ಕೇಂದ್ರಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ನೇಮಿಸಿ ಮಹಾಸಭಾದ ಅಧ್ಯಕ್ಷರಾದ ಎಸ್ ರಘುನಾಥ್ ಆದೇಶ ಹೊರಡಿಸಿದ್ದಾರೆ.

ಕುವೆಂಪುಗೆ 'ಭಾರತ ರತ್ನ' ನೀಡಲು ಆಗ್ರಹ

ಮಂಡ್ಯ: ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಯನ್ನು ಖಂಡಿಸಿ, ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತ ರತ್ನ ನೀಡಬೇಕೆಂದು ಆಗ್ರಹಿಸಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ವತಿಯಿಂದ ಕರ್ನಾಟಕ್ಕೆ ನ್ಯಾಯ ಕೊಡಿ ಎಂದು ಒತ್ತಾಯಿಸಿ ಪ್ರತಿಭಟನೆ ನಡೆಯಿತು. ನಗರದ ರೈತ ಸಭಾಂಗಣದ ಕುವೆಂಪು ಪ್ರತಿಮೆ ಬಳಿ ಸೇರಿದ ಕಾರ್ಯಕರ್ತರು ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಯ ವಿರುದ್ಧ ಘೋಷಣೆ ಕೂಗಿದರು. ಬಳಿಕ ಜೆ.ಸಿ. ವೃತ್ತಕ್ಕೆ ತೆರಳಿ ಕರ್ನಾಟಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ದೇವರಾಜ ಅರಸು ಹಿಂದುಳಿದ ವೇದಿಕೆ ಅಧ್ಯಕ್ಷ ಎಲ್.ಸಂದೇಶ್ ಮಾತನಾಡಿ, ತೆರಿಗೆ ಸಂಗ್ರಹದಲ್ಲಿ ರಾಜ್ಯವು ದೇಶದಲ್ಲೇ ಎರಡನೇ ಸ್ಥಾನದಲ್ಲಿದ್ದರೂ, ಕೇಂದ್ರ ಸರ್ಕಾರ ರಾಜ್ಯದ ಅಭಿವೃದ್ಧಿಗೆ ನಿರೀಕ್ಷಿತ ಅನುದಾನವನ್ನು ನೀಡದೆ ಅನ್ಯಾಯ ಎಸಗುತ್ತಿದೆ. ಒಂದು ರೂಪಾಯಿ ತೆರಿಗೆಗೆ ಕನಿಷ್ಠ 15 ಪೈಸೆಯನ್ನಾದರೂ ನೀಡಬೇಕಾದ ಕೇಂದ್ರ ಸರ್ಕಾರ, ಕೇವಲ 3 ಪೈಸೆಯನ್ನು ನೀಡುವುದರ ಮೂಲಕ ರಾಜ್ಯಕ್ಕೆ ದ್ರೋಹ ಎಸಗುತ್ತಿದೆ ಎಂದು ಆರೋಪಿಸಿದರು. ವಿವಿಧ ಸಂಘಟನೆಗಳ ಮುಖಂಡರಾದ ಪ್ರೊ. ಜಿ.ಟಿ. ವೀರಪ್ಪ, ಎಚ್.ಡಿ. ಜಯರಾಂ, ಎಂ.ಕೃಷ್ಣ, ಚಂದ್ರಶೇಖರ ಆರಾಧ್ಯ, ಸುಂಡಹಳ್ಳಿ ಬಸವರಾಜು, ವೈರಮುಡಿ, ಜಯರಾಮು, ನಾರಾಯಣಸ್ವಾಮಿ, ಬೆಂಜಮಿನ್ ಥಾಮಸ್, ಹುರುಗಲವಾಡಿ ರಾಮಯ್ಯ, ಎಂ.ಎಸ್. ರಾಜಣ್ಣ, ಬಿ.ಲಿಂಗಯ್ಯ, ಎಚ್.ಪಿ. ಸತೀಶ್, ಸುದರ್ಶನ್, ಶಶಿಕುಮಾರ್, ಸಿ.ಆರ್. ರಮೇಶ, ವಿಜಯಕುಮಾರ್, ಮಹೇಶ್, ಪ್ರದೀಪ್, ಆನಂದ್ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಎಬಿವಿಪಿ ವಿಶ್ವದ ವಿದ್ಯಾರ್ಥಿ ಸಂಘಟನೆ

ಮಡಿಕೇರಿ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪಾಶ್ಚಿಮಾತ್ಯ ಶಕ್ತಿಗಳ ಒತ್ತಡಗಳನ್ನು ಮೀರಿ ಭಾರತದ ಅಭ್ಯುದಯಕ್ಕೆ ಶ್ರಮಿಸುತ್ತಿದೆ ಎಂದು ಪರಿಷತ್ನ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಎಸ್ .ಬಾಲಕೃಷ್ಣ ಅವರು ಪ್ರತಿಪಾದಿಸಿದರು. ನಗರದ ಕೊಡಗು ಗೌಡ ಸಮಾಜದಲ್ಲಿ ಎಬಿವಿಪಿ ದಕ್ಷಿಣ ಪ್ರಾಂತದ 45ನೇ ಸಮ್ಮೇಳನದಲ್ಲಿ ಮಾತನಾಡಿ, ಕೊಡಗಿನಲ್ಲಿ ಇದೇ ಮೊದಲ ಬಾರಿಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ದಕ್ಷಿಣ ಪ್ರಾಂತದ ಸಮ್ಮೇಳನ ಆಯೋಜಿಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ''ಮೇಕಿಂಗ್ ಇಂಡಿಯಾ'' ಎಂಬ ಸ್ವಾವಲಂಭಿ ಚಿಂತನೆಗಳನ್ನು ಅಳವಡಿಸಿಕೊಂಡು ಭಾರತ ದೇಶ ಅಭಿವೃದ್ಧಿಯ ಪಥದಲ್ಲಿ ವಿಶ್ವ ಗುರುವಾಗುವತ್ತ ಸಾಗುತ್ತಿದೆ ಎಂದರು.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಸುತ್ತೂರು ಶ್ರೀ ಕ್ಷೇತ್ರ ಕೇವಲ ಮೈಸೂರಿಗೆ ಸೀಮಿತವಾಗಿಲ್ಲ, ಇಡೀ ದೇಶಕ್ಕೆ ಸೀಮಿತವಾಗಿದೆ. ಸುತ್ತೂರು ಮಠ ಸಮಾಜದ ಬಡ ವರ್ಗಗಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಈ ಮಠ ಅನೇಕ ಕೊಡುಗೆಗಳನ್ನು ದೇಶಕ್ಕೆ ನೀಡಿದೆ. ವಿಶ್ವದ 7 ಕ್ಕೂ ಹೆಚ್ಚು ದೇಶಗಳಲ್ಲಿ ಶ್ರೀಮಠದ ಭಕ್ತರಿದ್ದಾರೆ. ಅಮೇರಿಕಾ ದಂಥ ದೇಶದಲ್ಲಿ ಮಠಕ್ಕೆ ಹಾಗೂ ಸ್ವಾಮೀಜಿಗೆ ವಿಶೇಷ ಗೌರವವಿದೆ.



ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯುತ್ಸವ | ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

ಮಠಗಳು ಯುವಜನರಿಗೆ ಸ್ಫೂರ್ತಿ ತುಂಬಲಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಳವಳ್ಳಿಯಲ್ಲಿ ಆರಂಭವಾದ ಶ್ರೀ ಸುತ್ತೂರು ಮಠದ ಸಂಸ್ಥಾಪಕರಾದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಉದ್ಘಾಟಿಸಿದರು.

ಮಳವಳ್ಳಿ: ಮುಂದಿನ ಸದೃಢ ಭಾರತ ನಿರ್ಮಾಣಕ್ಕಾಗಿ ಯುವಜನರಲ್ಲಿ ಮಠಗಳು ಸ್ಫೂರ್ತಿ ತುಂಬಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಮಳವಳ್ಳಿಯಲ್ಲಿ ಆರಂಭವಾದ ಶ್ರೀ ಸುತ್ತೂರು ಮಹಾಸಂಸ್ಥಾನದ ಸಂಸ್ಥಾಪಕರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು.

ಯುಗಯುಗಾಂತರಗಳಲ್ಲಿ ಸಂತರು ತಮ್ಮ ಬುದ್ಧಿವಂತಿಕೆ ಮತ್ತು ಕರುಣೆಯ ಮೂಲಕ ಮಾನವೀಯತೆಯನ್ನು ಬೆಳಗಿದ್ದಾರೆ. ನಿಜವಾದ ಶ್ರೇಷ್ಠತೆ ಅಧಿಕಾರ ಅಥವಾ ಸಂಪತ್ತಿನಲ್ಲಿಲ್ಲ, ತ್ಯಾಗ, ಸೇವೆ ಮತ್ತು ಆಧ್ಯಾತ್ಮಿಕ ಶಕ್ತಿಯಲ್ಲಿದೆ ಎಂಬುದನ್ನು ಅವರ ಜೀವನವು ನಮಗೆ ನೆನಪಿಸುತ್ತದೆ. ಅಂತಹ ಶ್ರೇಷ್ಠ ಸಂತರಲ್ಲಿ, ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮಿಜಿ ಬೆಳಕು ಮತ್ತು ಸ್ಫೂರ್ತಿಯ ದೀಪವಾಗಿ ಬೆಳಗುತ್ತಾರೆ ಎಂದು ಶ್ಲಾಘಿಸಿದರು.

ಮಠದ ಮಾರ್ಗದರ್ಶನ ಮತ್ತು ಪೋಷಣೆಯಡಿ, ಜೆಎಸ್ಎಸ್ ಮಹಾವಿದ್ಯಾಪೀಠವು ಭಾರತದ ವಿಶಿಷ್ಟ ಸಂಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಶಿಕ್ಷಣ ಮತ್ತು ಸಾಮಾಜಿಕ ಅಭಿವೃದ್ಧಿಯ ಪ್ರಗತಿಗೆ ಸಮರ್ಪಿತವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಪಂಚದಾದ್ಯಂತ ಹಲವಾರು ಸಂಸ್ಥೆಗಳೊಂದಿಗೆ, ಶ್ರೀಮಠವು ಯುವ ಮನಸ್ಸುಗಳನ್ನು ರೂಪಿಸುವುದು, ಆರೋಗ್ಯ ರಕ್ಷಣೆ ನೀಡುವುದು, ಮಹಿಳೆಯರನ್ನು ಸಬಲೀಕರಣಗೊಳಿಸುವುದು, ಗ್ರಾಮೀಣ ಸಮುದಾಯಗಳನ್ನು ಉನ್ನತೀಕರಿಸುವುದು, ಸಂಸ್ಕೃತಿಯನ್ನು ಸಂರಕ್ಷಿಸುವುದು ಮತ್ತು ಸಮಗ್ರ ಸಮಾಜದ ಅಡಿಪಾಯವನ್ನು ಬಲಪಡಿಸುವಲ್ಲಿ ತೊಡಗಿಸಿಕೊಂಡಿದೆ ಎಂದು ಹೇಳಿದರು.

ತ್ವರಿತ ಬದಲಾವಣೆ ಮತ್ತು ಅನಿಶ್ಚಿತತೆಯ ಯುಗದಲ್ಲಿ, ಸಾಮಾಜಿಕ ಸಾಮರಸ್ಯ, ನೈತಿಕ ನಾಯಕತ್ವ, ಯುವ ಸಬಲೀಕರಣ ಮತ್ತು ಆಂತರಿಕ ಸ್ಥಿತಿ ಸ್ಥಾಪಕತ್ವವನ್ನು ಪೋಷಿಸಲು ಆಧ್ಯಾತ್ಮಿಕ ಮಾರ್ಗದರ್ಶನ ಅತ್ಯಗತ್ಯ ಎಂದು ಹೇಳಿದರು.

2047ರ ವೇಳೆಗೆ ನಾವು ವಿಕ್ಷಿತ್ ಭಾರತದ ದೃಷ್ಟಿಕೋನದತ್ತ ಸಾಗುತ್ತಿರುವಾಗ, ನಮಗೆ ತಂತ್ರಜ್ಞಾನದ ಶಕ್ತಿ ಮತ್ತು ಮೌಲ್ಯಗಳ ಬಲ ಎರಡೂ ಅಗತ್ಯವಿದೆ. ಅಭಿವೃದ್ಧಿ ಹೊಂದಿದ ಭಾರತಕ್ಕೆ ನೈತಿಕ ಬುದ್ಧಿವಂತಿಕೆಯೊಂದಿಗೆ ಆಧುನಿಕ ಶಿಕ್ಷಣ, ಪರಿಸರ ಜವಾಬ್ದಾರಿಯೊಂದಿಗೆ ನಾವೀನ್ಯತೆ, ಸಾಮಾಜಿಕ ಸೇರ್ಪಡೆಯೊಂದಿಗೆ ಆರ್ಥಿಕ ಬೆಳವಣಿಗೆ ಮತ್ತು ಸಹಾನುಭೂತಿಯೊಂದಿಗೆ ಪ್ರಗತಿಯ ಏಕೀಕರಣದ ಅಗತ್ಯವಿದೆ. ಭಾರತ ಸರ್ಕಾರ ಈ ಸಮಗ್ರ ದೃಷ್ಟಿಕೋನದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ದೇಶದ ದೊಡ್ಡ ಶಕ್ತಿ ಯುವ ಸಮುದಾಯ

ನಮ್ಮ ದೇಶದ ದೊಡ್ಡ ಶಕ್ತಿ ನಮ್ಮ ಯುವಕರಲ್ಲಿದೆ, ಅವರ ಶಕ್ತಿ, ಸೃಜನಶೀಲತೆ, ಮೌಲ್ಯಗಳು ಬಹುದೊಡ್ಡ ಪಾತ್ರವಹಿಸುತ್ತವೆ. ಭಾರತದ ಭವಿಷ್ಯ ಅವರ ಕೌಶಲ ಜ್ಞಾನದಿಂದ ಮಾತ್ರವಲ್ಲ, ಅವರ ಉದ್ದೇಶದ ಪ್ರಜ್ಞೆಯಿಂದ ರೂಪುಗೊಳ್ಳುತ್ತದೆ. ಸುತ್ತೂರು ಮಠದಂತಹ ಸಂಸ್ಥೆಗಳು ಯುವ ಮನಸ್ಸುಗಳನ್ನು ಪ್ರೇರೇಪಿಸುವುದನ್ನು, ಜವಾಬ್ದಾರಿಯುತ ನಾಗರಿಕರನ್ನು ಪೋಷಿಸುವುದು. ನಾಳಿನ ಭಾರತದ ವಾಸ್ತುಶಿಲ್ಪಿಗಳಿಗೆ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸಲಹೆ ನೀಡಿದರು.

ಸುತ್ತೂರು ಮಠದಂತಹ ಸಂಸ್ಥೆಗಳು ಈ ಪ್ರಯತ್ನದಲ್ಲಿ ಗಣನೀಯ ಪಾತ್ರ ವಹಿಸಬಹುದು ಎಂದರು.

ರಾಜ್ಯಪಾಲರಾದ ಥಾವರ್‌ಚಂದ ಗೆಹ್ಲೋಥ್, ಕೇಂದ್ರ ಸಚಿವರಾದ ಎಚ್ ಡಿ ಕುಮಾರಸ್ವಾಮಿ, ಕೃಷಿ ಸಚಿವ ಚಲುವರಾಯಸ್ವಾಮಿ, ಸುತ್ತೂರು ಮಠದ ಶ್ರೀಗಳು, ಮತ್ತಿತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ರಕ್ಷಣಾ ಪತ್ರಿಕೋದ್ಯಮ ಕುರಿತು ಕಾರ್ಯಾಗಾರ

ರಕ್ಷಣಾ ವಲಯದ ವರದಿಗೆ ಎಚ್ಚರ ಅಗತ್ಯ

ಮೈಸೂರು: ಜಿಲ್ಲೆಯ ಪ್ರತಿಷ್ಠಿತ ರಕ್ಷಣಾ ಇಲಾಖೆಯ ತರಬೇತಿ ಕೇಂದ್ರವಾದ ಆಲ್ಫಾ ಲೀಡ್ ಅಕಾಡೆಮಿಯು ಮಂಗಳವಾರ ರಕ್ಷಣಾ ಪತ್ರಿಕೋದ್ಯಮ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕಾರದಲ್ಲಿ ಸಂಸ್ಥಾಪಕರು ಹಾಗೂ ವಾಯುಸೇನೆಯ ಮಾಜಿ ಅಧಿಕಾರಿಯಯಾದ ಗ್ರೂಪ್ ಕ್ಯಾಪ್ಟನ್ ಅಭಿನಯ ಚತುರ್ವೇದಿಯವರು, ರಕ್ಷಣಾ ಸಂಪತ್ತಿಗೆ ಸುದ್ದಿಗಳನ್ನು ವರದಿ ಮಾಡುವಾಗ ವರದಿಗಾರರು ಎದುರಿಸುತ್ತಿರುವ ಸಮಸ್ಯೆಗಳು, ರಕ್ಷಣಾ ಸಂಬಂಧಿತ ಸುದ್ದಿಗಳನ್ನು ವರದಿ ಮಾಡುವಲ್ಲಿ ಮತ್ತು ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಸಾರ ಮಾಡುವಲ್ಲಿ ಮಾಧ್ಯಮವು ಪ್ರಮುಖ ಪಾತ್ರ ವಹಿಸುವುದರ ಕುರಿತು, ಇತರೆ ದೇಶಗಳಿಗೆ ಹೋಲಿಸಿದರೆ ಕೇವಲ ಭಾರತದಲ್ಲಿ ಮಾತ್ರ ರಕ್ಷಣಾ ಪಡೆಗಳು ಪತ್ರಕರ್ತರು ಹಾಗೂ ವರದಿಗಾರರಿಗೆ ಘಟನೆಗಳನ್ನು ವರದಿ ಮಾಡಲು ಅವಕಾಶ ನೀಡುತ್ತದೆ ಎಂದು ಹೇಳಿದರು.

ಸಂದರ್ಶನದ ವೇಳೆಯಲ್ಲಿ ಪ್ರಶ್ನೆಗಳು ನಾಯಕತ್ವ, ತರಬೇತಿ, ಜೀವನ ಪಾಠಗಳು, ಪ್ರೇರಣೆ ಮತ್ತು ಸೇವೆಗಳ ಮೌಲ್ಯಗಳ ಬಗ್ಗೆ ಇರಬೇಕೇ ಹೊರತು ಕಾರ್ಯಾಚರಣೆಗಳು, ಗುಪ್ತಚರ ಇಲಾಖೆ, ಭವಿಷ್ಯದ ನಿಯೋಜನೆ ಮತ್ತು ಶಸ್ತ್ರಾಸ್ತ್ರ ವ್ಯವಸ್ಥೆಯ ಬಗ್ಗೆ ಇರಬಾರದು ಹಾಗೂ ಕೇಳಬಾರದು. ಭಾರತೀಯ ಸೇನೆಯ ಕುರಿತು ಮಾಹಿತಿಗಳನ್ನು ಪಡೆಯಬೇಕೆಂದರೆ ಅಧಿಕೃತ ಮಾಹಿತಿ ಮೂಲಗಳಾದ ಆರ್ಮಿ ಎಡಿಜಿಪಿಐ, ಇಂಡಿಯನ್ ಏರ್‌ಫೋರ್ಸ್ ಪಬ್ಲಿಕ್ ರಿಲೇಶನ್ ಡೈರೆಕ್ಟರ್, ಇಂಡಿಯನ್ ನೇವಿ ಪಬ್ಲಿಕ್ ರಿಲೆಶನ್ ಆಫೀಸರ್,ರಕ್ಷಣಾ ಸಚಿವಾಲಯ, ವಿದೇಶಾಂಗ ಮತ್ತು ವ್ಯವಹಾರಗಳ ಸಚಿವಾಲಯ ಹಾಗೂ ಕೇಂದ್ರ ಗೃಹ ಸಚಿವಾಲಯಗಳ ಮೂಲಕ ಪಡೆಯಬಹುದು. ಇದಲ್ಲದೆ ಅನಧಿಕೃತವಾಗಿ ಮಾಜಿ ಸೇನಾಧಿಕಾರಿಗಳಿಂದ, ಅಧಿಕೃತ ಚಿಂತಕರ ಸಹಾಯದಿಂದ ಮಾಹಿತಿಗಳನ್ನು ಪಡೆದು ಅಂಕಣಗಳು, ಸುದ್ದಿಗಳನ್ನು ಮಾಡಬಹುದು ಎಂದು ಕಾರ್ಯಾಗಾರದಲ್ಲಿ ಭಾಗಿಯಾಗಿದ್ದ ಎಲ್ಲಾ ಪತ್ರಕರ್ತರಿಗೆ ತಿಳಿಸಿದರು. ನಂತರ ಚತುರ್ವೇದಿಯವರು ದಿನ ಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ಹಾಗೂ ಟಿವಿ ಮಾಧ್ಯಮಗಳಲ್ಲಿ ಪ್ರಕಟವಾಗುವ ಅಂಕಣಗಳಿಗೆ ವರ್ಷಕ್ಕೆ ಎರಡು ಬಾರಿ ನಗದು ಬಹುಮಾನ ಹಾಗೂ ಫೀಲ್ಡ್ ಮಾರ್ಷಲ್ ಕೆಮ್ ಕಾರ್ಯಪ್ಪ ಅತ್ಯುತ್ತಮ ಡಿಫೆನ್ಸ್ ಜರ್ನಲಿಸ್ಟ್' ಎಂಬ ನೀಡಿ ಸನ್ಮಾನಿಸಲಾಗುತ್ತದೆ ಎಂದು ತಿಳಿಸಿದರು. ಕೊನೆಯಲ್ಲಿ ನೆರೆದಿತ್ತ ಪತ್ರಕರ್ತರೊಂದಿಗೆ ಸಂವಾದ ನಡೆಸಿದರು.

ಈ ಕಾರ್ಯಾಗಾರದಲ್ಲಿ ವಾಯು ಸೇನೆಯ ಮಾಜಿ ಅಧಿಕಾರಿಯ ಗ್ರೂಪ್ ಕ್ಯಾಪ್ಟನ್ ಅಭಿನವ ಚತುರ್ವೇದಿ, ಡಾ.ಮಮತಾ ವಿಶ್ವನಾಥ್, ಸ್ವಾತಿ ಎಂ ಶೇಟ್, ನಿಶಾ ಹಾಗೂ ಮಣಿಕಂಠ ಉಪಸ್ಥಿತರಿದ್ದರು.

ಈ ವರ್ಷ ಜಿಲ್ಲೆಯಲ್ಲಿ ಪರಿಹರಿಸಿದ್ದು ಒಟ್ಟು 4 ಲಕ್ಷ ಪ್ರಕರಣ

ಲೋಕ್ ಅದಾಲತ್: 1,20,045 ಪ್ರಕರಣ ಇತ್ಯರ್ಥ

ಜಿಲ್ಲಾ ಕಾನೂನು ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ: ಈ ವರ್ಷದ ಕೊನೆಯ ಲೋಕ್ ಅದಾಲತ್ನಲ್ಲಿ 1,20,045 ಪ್ರಕರಣಗಳು ಇತ್ಯರ್ಥಗೊಂಡಿದ್ದು, ವಾರ್ಷಿಕವಾಗಿ 4 ಲಕ್ಷಕ್ಕೂ ಹೆಚ್ಚಿನ ಪ್ರಕರಣಗಳನ್ನು ಪರಿಹರಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ವ್ಯಾಜ್ಯಪೂರ್ವ ಪರಿಹಾರ ಕೇಂದ್ರದಲ್ಲಿನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿಯ ಲೋಕ್ ಅದಾಲತ್ನಲ್ಲಿ 1,04,649 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿತ್ತು. ಇತ್ತೀಚೆಗೆ ನಡೆದ (ಡಿ.13) ಅದಾಲತ್ನಲ್ಲಿ 2642 ನ್ಯಾಯಾಲಯ ಪ್ರಕರಣಗಳು ಹಾಗೂ 1,17,403 ವ್ಯಾಜ್ಯಪೂರ್ವ ಸೇರಿದಂತೆ ಒಟ್ಟು 1,20,045 ಪ್ರಕರಣಗಳು ಇತ್ಯರ್ಥವಾಗಿವೆ ಎಂದರು.

ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳ ನಿರ್ದೇಶನದ ಮೇರೆಗೆ 'ಸರ್ವರಿಗೂ ನ್ಯಾಯ' ಪರಿಕಲ್ಪನೆಯಡಿ ಜನಸಾಮಾನ್ಯರ ಅನುಕೂಲಕ್ಕಾಗಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ. ಜಿಲ್ಲೆಯ ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಎಲ್ಲಾ ರೀತಿಯ ಸಿವಿಲ್, ರಾಜಿಯೋಗ್ಯ ಕ್ರಿಮಿನಲ್, ಇತರೆ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಪರಿಹರಿಸಲು ಡಿ. 13ರಂದು ಅದಾಲತ್ ಏರ್ಪಡಿಸಲಾಗಿತ್ತು ಎಂದು ತಿಳಿಸಿದರು.

ಈ ಬಾರಿ ಚಾಮರಾಜನಗರದ 665, ಯಳಂದೂರು 230, ಕೊಳ್ಳೇಗಾಲ 1089 ಹಾಗೂ ಗುಂಡ್ಲುಪೇಟೆಯ 658 ಸೇರಿ ಒಟ್ಟು 2642 ನ್ಯಾಯಾಲಯದ ಪ್ರಕರಣಗಳು ಮತ್ತು ಚಾಮರಾಜನಗರದ 89503, ಯಳಂದೂರಿನ 3261, ಕೊಳ್ಳೇಗಾಲ 7843 ಹಾಗೂ ಗುಂಡ್ಲುಪೇಟೆಯ 16796 ಸೇರಿದಂತೆ ಒಟ್ಟು 1,17,403 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ವ್ಯಾಜ್ಯಪೂರ್ವ ಹಾಗೂ ನ್ಯಾಯಾಲಯದ ಒಟ್ಟು 1,20,045 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಚೆಕ್ಕು ಅಮಾನ್ಯ ಪ್ರಕರಣಗಳು, ಎಂ.ಇ.ಸಿ ಹಾಗೂ ಕಕ್ಷಿದಾರರಿಗೆ ಪರಿಹಾರ ರೂಪದಲ್ಲಿ ಒಟ್ಟು 15,81,11,395 ರೂ. ಗಳನ್ನು ಸಂಗ್ರಹಿಸಲಾಗಿದೆ ಎಂದು ನ್ಯಾಯಾಧೀಶರು ಹೇಳಿದರು.

ಲೋಕ್ ಅದಾಲತ್ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ 10-15 ವರ್ಷಗಳಿಂದ ಬಾಕಿ ಇದ್ದ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಗಿದೆ. ನ್ಯಾಯಾಲಯದ ಹೊರೆಯೂ ತಗ್ಗಿದೆ. ಅದಾಲತ್ ಯಶಸ್ಸಿಗೆ ಜಿಲ್ಲಾಡಳಿತ, ವಿವಿಧ ಇಲಾಖೆಗಳು, ಬ್ಯಾಂಕ್‌ಗಳಿಗೆ ಅಭಿನಂದನೆಗಳನ್ನು ತಿಳಿಸಿದರು.

ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುತ್ತಿದ್ದ ಲೋಕ್ ಅದಾಲತ್ ಅನ್ನುದಿನ್ನು ಮುಂದೆ ವರ್ಷಕ್ಕೆ 4 ಬಾರಿ ಹಮ್ಮಿಕೊಳ್ಳಲಾಗುತ್ತದೆ ಎಂದು ಜಿಲ್ಲಾ ನ್ಯಾಯಾಧೀಶರಾದ ಜಿ. ಪ್ರಭಾವತಿ ಅವರು ಮಾಹಿತಿ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ, ಮುಖ್ಯ ನ್ಯಾಯಿಕ ದಂಡಾಧಿಕಾರಿ ಸಿ.ಡಿ. ಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಎಚ್ಡಿಕೆ ಹುಟ್ಟುಹಬ್ಬ: ಹಣ್ಣುಹಂಪಲು ವಿತರಣೆ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ನಿಮಿತ್ತ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಯಿತು.

ತಿ.ನರಸೀಪುರ: ಮಾಜಿ ಮುಖ್ಯಮಂತ್ರಿ, ಹಾಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ 66ನೇ ಹುಟ್ಟುಹಬ್ಬವನ್ನು ಕ್ಷೇತ್ರದ ಕಾರ್ಯಕರ್ತರು, ಅಭಿಮಾನಿಗಳು ಸಂಭ್ರಮ ಸಡಗರದಿಂದ ಆಚರಿಸಿದರು. ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇಗುಲದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಹೆಸರಲ್ಲಿ ಪೂಜೆ ಸಲ್ಲಿಸಿದ ನಂತರ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿದರು.

ನಂತರ ಮಾತನಾಡಿದ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಸಿಬಿಹುಂಡಿ ಚಿನ್ನಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಯಾಗಿದ್ದ ಅವಧಿಯಲ್ಲಿ ರೈತ ಸಾಲ ಮನ್ನಾ, ಗ್ರಾಮ ವಾಸ್ತವ್ಯ, ಜನತಾ ದರ್ಶನ ಮತ್ತು ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಣೆ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು. ಭವಿಷ್ಯದಲ್ಲಿ ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಿ ರಾಜ್ಯದ ರೈತ, ಬಡ ಜನರ ಅಭ್ಯುದಯಕ್ಕೆ ಉತ್ತಮ ಯೋಜನೆಗಳನ್ನು ರೂಪಿಸಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಪ್ರಧಾನ ಕಾರ್ಯದರ್ಶಿ ಹೆಮ್ಮಿಗೆ ಹೊನ್ನಯ್ಯ ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಕರೋಹಟ್ಟಿ ಪ್ರಭುಸ್ವಾಮಿ,ಮಾವಿನಹಳ್ಳಿ ರಾಜೇಶ್, ಕಟ್ಟೆಪುರ ಸಿದ್ದಪ್ಪ, ಸೋಸಲೆ ರಾಜಣ್ಣ, ನಿಲಸೋಗೆ ಮಹೇಶ್, ಗಣೇಶ್, ತಿರುಮಕೂಡಲು ಜಯರಾಮು, ಬನ್ನ ಹಳ್ಳಿಹುಂಡಿ ಶಿವಕುಮಾರ್, ಶೆಟ್ಟಹಳ್ಳಿ ನಾಗರಾಜ ಮೂರ್ತಿ, ಗಣೇಶ್, ಕೆ.ಜಿ. ರಾಜಪ್ಪ, ಜಗಪತಿ ಇದ್ದರು.

ನಾಡು-ನುಡಿ ರಕ್ಷಣೆಗೆ ಜಯ ಕರ್ನಾಟಕ ಬದ್ಧ

ಜಯ ಕರ್ನಾಟಕ ಸಂಘಟನೆ ಆಯೋಜಿಸಿದ್ದ ಅದ್ದೂರಿ ಕನ್ನಡ ರಾಜ್ಯೋತ್ಸವವನ್ನು ಸಂಘಟನೆ ಯ ರಾಜ್ಯಾಧ್ಯಕ್ಷ ಡಾ. ಜಗದೀಶ್ ಅವರು ಉದ್ಘಾಟಿಸಿದರು.

ಕೆ.ಆರ್. ಪೇಟೆ: ಕನ್ನಡ ನಾಡು-ನುಡಿ, ನೆಲ-ಜಲದ ಸಂರಕ್ಷಣೆ ರಾಜ್ಯದ ಜ್ವಲಂತ ಸಮಸ್ಯೆಗಳ ನಿರ್ಮೂಲನೆಗೆ ಜಯ ಕರ್ನಾಟಕ ಸಂಘಟನೆಯು ಬದ್ಧತೆಯಿಂದ ಹೋರಾಟ ಮಾಡುತ್ತಿದೆ ಎಂದು ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಜಗದೀಶ್ ಹೇಳಿದರು.

ಅವರು ಪಟ್ಟಣದ ಪುರಸಭಾ ಪಕ್ಕದ ಮೈದಾನದಲ್ಲಿ ಜಯ ಕರ್ನಾಟಕ ಸಂಘಟನೆ ಆಯೋಜಿಸಿದ್ದ ಅದ್ದೂರಿ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ, ವಿವಿಧ ಕ್ಷೇತ್ರಗಳ ಸಾಧಕರು, ನಿವೃತ್ತ ಯೋಧರು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಮಾತನಾಡಿದರು.

ರಾಜ್ಯದ ಹೆಮ್ಮೆಯ ಕನ್ನಡಪರ ಸಂಘಟನೆಯಾಗಿರುವ ಜಯ ಕರ್ನಾಟಕ ಸಂಘಟನೆಯು ಅಣ್ಣಾ ಮುತ್ತಪ್ಪ ರೈ ಅವರ ನೇತೃತ್ವದಲ್ಲಿ ಆರಂಭವಾಗಿ, ಬದ್ಧತೆಯಿಂದ ಕೆಲಸ ಮಾಡುತ್ತಾ, ಕನ್ನಡ ಭಾಷೆ, ನೆಲ ಜಲ ಹಾಗೂ ಸಂಸ್ಕೃತಿ ಉಳಿಸುವ ದಿಕ್ಕಿನಲ್ಲಿ ನಾಡಿನಾದ್ಯಂತ ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು. ಕನ್ನಡದ ನೆಲದಲ್ಲಿ ಯಾವುದೇ ರೀತಿಯ ಗಲಾಟೆ ಗದ್ದಲಗಳು ನಡೆಯದಂತೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುತ್ತಿರುವ ಪೊಲೀಸರು ಅಕಾಲಿಕವಾಗಿ ನಿಧನರಾದರೆ ರಾಜ್ಯ ಸರ್ಕಾರ ಕೇವಲ 20 ಲಕ್ಷ ಪರಿಹಾರವನ್ನು ನೀಡುತ್ತಿತ್ತು. ಆದರೆ ಜಯ ಕರ್ನಾಟಕ ಸಂಘಟನೆ ಹೋರಾಟ ನಡೆಸಿದ ನಂತರ 50 ಲಕ್ಷ ರೂ.ನೀಡುವುದನ್ನು ಜಾರಿಗೆ ತಂದಿದೆ ಇದು ಜಯ ಕರ್ನಾಟಕ ಸಂಘಟನೆಯ ಹೋರಾಟದ ಶಕ್ತಿ ಎಂದು ಗುಡುಗಿದರು.

ಕೆ.ಆರ್.ಪೇಟೆ ಕ್ಷೇತ್ರದ ಶಾಸಕ ಎಚ್.ಟಿ.ಮಂಜು ಅಧ್ಯಕ್ಷತೆ ವಹಿಸಿದ್ದರು. ಗವಿಮಠದ ಶ್ರೀಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ತೊಂಡೆಕಾಯಿ ಬಾಳೆಹೊನ್ನೂರು ಮಠದ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಬೆಡದಹಳ್ಳಿಯ ಪಂಚಭೂತೇಶ್ವರ ಮಠದ ಸ್ವಾಮೀಜಿಗಳಾದ ಶ್ರೀ ರುದ್ರಮುನಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಹೇಮಗಿರಿ ಶಾಖಾಮಠದ ಗೌರವ ಕಾರ್ಯದರ್ಶಿ ಡಾ.ಜೆ.ಎನ್. ರಾಮಕೃಷ್ಣೇಗೌಡ, ರಾಜ್ಯ ಕೈಮಗ್ಗ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್,ರಾಜ್ಯ ಆರ್ಟಿಒಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ, ಗ್ಯಾರಂಟಿ ಸಮಿತಿಯ ತಾ.ಕು ಅಧ್ಯಕ್ಷ ಎ.ಬಿ. ಕುಮಾರ್, ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ, ಜಯಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ನಾರಾಯಣಸ್ವಾಮಿ, ಗೌರವಾಧ್ಯಕ್ಷ ಮುನಿಸ್ವಾಮಿ, ರಾಜ್ಯ ಉಪಾಧ್ಯಕ್ಷ ವಿಜಯಾ ಗೌಡ, ಮಂಡ್ಯ ಜಿಲ್ಲಾಧ್ಯಕ್ಷ ಡಾ. ಯೋಗಣ್ಣ, ಹಾಸ್ಯ ನಟರಾದ ಟೆನ್ನಿಸ್ ಕೃಷ್ಣ, ಕಿರುತೆರೆ ಕಲಾವಿದರಾದ ಶಿವಣ್ಣ, ಚಾರ್ಲಿ ಕುಮಾರ್,ನಂದೀಶ್, ಯುವ ಘಟಕದ ಅಧ್ಯಕ್ಷ ಕಾಮನಹಳ್ಳಿ ಕೆ. ಎಲ್. ಮಹೇಶ್, ಮಹಿಳಾ ಘಟಕದ ಅಧ್ಯಕ್ಷೆ ಜಯಲಕ್ಷ್ಮಮ್ಮ, ಸರಸ್ವತಿ, ರತ್ನಮ್ಮ, ಮಧು ಇದ್ದರು.

ಇದೇ ಸಂದರ್ಭದಲ್ಲಿ ಸಾಧಕರಾದ ವಿಷ್ಣು ಸೇನಾ ಸಮಿತಿಯ ರಾಜ್ಯಾಧ್ಯಕ್ಷ ಡಾ. ಪ್ರಶಾಂತ್ ಚಕ್ರವರ್ತಿ,ವಡಕಹಳ್ಳಿ ಮಂಜೇಗೌಡ, ಮಿಲ್ಕಿ ಸುಕುಮಾರ್ ,ಡಾ.ಶ್ರೀಕಾಂತ್, ಡಾ.ಕಾವ್ಯ, ಪತ್ರಕರ್ತ ಕಾಡು ಮೆಣಸ ಚಂದ್ರು ಅವರನ್ನು ಸನ್ಮಾನಿಸಲಾಯಿತು.

ಒತ್ತಡದ ಜೀವನ ಶೈಲಿ ಆರೋಗ್ಯದತ್ತ ನಿರ್ಲಕ್ಷ್ಯ

ಪಿರಿಯಾಪಟ್ಟಣ: ರಾಜ್ಯದಲ್ಲಿ ಬೇಸಿಗೆಕಾಲ ಬರಲಿದ್ದು ಪೋಷಕರು ತಮ್ಮ ಮಕ್ಕಳ ಆರೋಗ್ಯದ ಕಡೆ ಹೆಚ್ಚು ಗಮನವಹಿಸುವಂತೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಎ ಟಿ ರಂಗಸ್ವಾಮಿ ತಿಳಿಸಿದರು. ಆಲನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಎ ಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ಒತ್ತಡದ ಜೀವನ ಶೈಲಿಯಿಂದ ತಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇದರಿಂದಾಗಿ ತೀವ್ರ ತರಹದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಸರಿಯಾದ ಆಹಾರ ಸೇವನೆ ಮಾಡದೆ ಇರುವುದು ಮತ್ತು ಕುಡಿತಕ್ಕೆ ದಾಸರಾಗಿರುವುದು, ಹೀಗೆ ಅನೇಕ ಕಾರಣಗಳಿಂದ ಮನುಷ್ಯ ಅನಾರೋಗ್ಯಕ್ಕೆ ತುತ್ತಾಗುವುದು ಹೆಚ್ಚಾಗಿದೆ. ಜೊತೆಗೆ ಹೃದಯಾಘಾತಕ್ಕೆ ಹೆಚ್ಚು ಜನ ಮೃತಪಡುತ್ತಿದ್ದಾರೆ. ಅದಕ್ಕಾಗಿ ಸಂಘ ಸಂಸ್ಥೆಗಳು ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸುತ್ತಿವೆ. ಕೂಲಿ ಕಾರ್ಮಿಕರು ಇಂಥಕಡೆ ತಪಾಸಣೆ ಮಾಡಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು. ಈ ಸಂದರ್ಭ ಎ ಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಡಿವಿಜನ್ ಮ್ಯಾನೇಜರ್‌ಮಂಡಿಗೌಡ, ರಿಜಿನಲ್ ಮ್ಯಾನೇಜರ್‌ಮಧುಸೂದನ್, ಮ್ಯಾನೇಜರ್ ಮಹದೇವ್, ಡಾ.ವಿಜಯ್, ರೋಹಿತ್, ಪ್ರೀತಮ್, ಶಿವು, ಶಾಖೆಯ ಸಿಬ್ಬಂದಿ ಲಕ್ಷ್ಮಿ ಎಸ್, ಭರತ್, ಅಂಬಿಕಾ, ವಿಜಯ್, ಧನರಾಜ್, ಚೇತನ್, ಅಜಿತ ಇದ್ದರು.

ಸೆಪ್ಟೆಂಬರ್ ನಿಂದ ಬರಬೇಕಾದ ಬಾಕಿ ಶೀಘ್ರವೇ ಖಾತೆಗೆ ಪಾವತಿ

ಜಿಲ್ಲೆಗೆ 2123 ಕೋಟಿ ಗೃಹ ಲಕ್ಷ್ಮಿ ಹಣ ಬಿಡುಗಡೆ

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ಜಿಪಂ ಮಿನಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಡ್ಯ: ಜಿಲ್ಲೆಯ 4,61,599 ಮಹಿಳೆಯರಿಗೆ ಗೃಹ ಲಕ್ಷ್ಮಿ ಯೋಜನೆಯಡಿ ಯೋಜನೆ ಪ್ರಾರಂಭಗೊಂಡಾಗಿನಿಂದಲು ಇಲ್ಲಿಯವರೆಗೆ 23 ಕಂತುಗಳ ಮೂಲಕ ರೂ.2123 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ಹೇಳಿದರು.

ಜಿಪಂ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗೃಹಲಕ್ಷ್ಮಿ ಹಣ ಆಗಸ್ಟ್ ವರೆಗೆ ಪಾವತಿಸಲಾಗಿದ್ದು ಆಗಸ್ಟ್ ಮಾಹೆಯಲ್ಲಿ ಜಿಲ್ಲೆಯ 4,61,599 ಮಹಿಳೆಯರಿಗೆ ರೂ. 92.98 ಕೋಟಿ ಹಣ ನೀಡಲಾಗಿದೆ. ಸೆಪ್ಟೆಂಬರ್ ಮಾಸದಿಂದ ಬರಬೇಕಾದ ಹಣವನ್ನು ಶೀಘ್ರವೇ ಡಿ.ಬಿ.ಟಿ ಮೂಲಕ ನೀಡಲಾಗುವುದು. ಅದರಲ್ಲಿ ಯಾವುದೇ ಗೊಂದಲ ಬೇಡ. ಐ.ಟಿ., ಜಿ.ಎಸ್.ಟಿ ಪಾವತಿದಾರರಿಗೆ ಗೃಹಲಕ್ಷ್ಮಿ ಹಣ ಹೋಗಿಲ್ಲ. ಬಾಕಿ ಹಣ ಶೀಘ್ರ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿ ಎಂದು ಅಧಿಕಾರಿಗಳಿಗೆ ಹೇಳಿದರು.

ಕೆಲ ಗೃಹ ಲಕ್ಷ್ಮಿ ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಯನ್ನು ಆಧಾರ್ ಸೀಡಿಂಗ್ ಮತ್ತು ಇ-ಕೆ.ವೈ.ಸಿ ಮಾಡಿಸದಿರುವ ಕಾರಣ ಹಣ ಬಂದಿಲ್ಲ ಹಾಗಾಗಿ ಸಾರ್ವಜನಿಕರಿಗೆ ಆಧಾರ್ ಸೀಡಿಂಗ್ ಮತ್ತು ಇ-ಕೆ.ವೈ.ಸಿ ಮಾಡಿಸುವಂತೆ ಜಾಗೃತಿ ಮೂಡಿಸಿ ಎಂದು ತಿಳಿ ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ಪ್ರಶಾಂತ್ ಬಾಬು ಕೆ.ಸಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ ಜೂನ್ 2023 ರಿಂದ ನವೆಂಬರ್2025 ರ ವರೆಗೂ 18.03.04.248 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ಇಲ್ಲಿಯವರೆಗೂ ಶಕ್ತಿ ಯೋಜನೆಯಡಿ ರೂ. 492.93 ಕೋಟಿ ವೆಚ್ಚವಾಗಿದೆ ಎಂದು ಹೇಳಿದರು.ಬೆಂಗಳೂರು ಮೈಸೂರು ಬಸ್ ಗಾಗಿ ಅನೇಕ ಪ್ರಯಾಣಿಕರು ಸಂಚಾರ ಬೆಳೆಸುತ್ತಿದ್ದಾರೆ. ಆದ್ದರಿಂದ ಪ್ರಾಮಾಣಿಕರಿಗೆ ತೊಂದರೆ ಉಂಟಾಗದಂತೆ ಬಸ್ ವ್ಯವಸ್ಥೆ ಕಲ್ಪಿಸಿ ಹಾಗೂ ಜಿಲ್ಲೆಯ ಶಾಲಾ ಕಾಲೇಜು ಮಕ್ಕಳಿಗೆ ತೊಂದರೆಯಾಗದಂತೆ ಸಾರಿಗೆ ವ್ಯವಸ್ಥೆ ಕಲ್ಪಿಸಿ ಎಂದು ಕಿವಿಮಾತು ಹೇಳಿದರು.

ಯುವ ನಿಧಿ ಫಲಾನುಭವಿಗಳಿಗೆ ಕೆ.ಎಸ್.ಆರ್.ಟಿ.ಸಿ ಹಾಗೂ ಚೆಸ್ಕಾಂನಲ್ಲಿ ತಾಂತ್ರಿಕ ಕೆಲಸಗಳಿಗೆ ಬೇಕಾಗುವ ಅಭ್ಯರ್ಥಿಗಳನ್ನು ತಾಂತ್ರಿಕ ಶಿಕ್ಷಣ ಪಡೆದ ಯುವ ನಿಧಿ ಫಲಾನುಭವಿಗಳನ್ನು ಬಳಸಿಕೊಳ್ಳಿ ಎಂದು ಹೇಳಿದರು

ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ರಾಜೇಂದ್ರ ಎಸ್.ಹೆಚ್ ಅವರು ಮಾತನಾಡಿ, ಯುವ ನಿಧಿ ಪ್ಲಸ್ ಯೋಜನೆಯಡಿ ಜಿಲ್ಲೆಯ ಯುವಕರಿಗೆ ತರಬೇತಿ ನೀಡಲಾಗುತ್ತಿದೆ ಎಂದರು.

ಸಭೆಯಲ್ಲಿ ಯೋಜನಾಧಿಕಾರಿ ಧನುಷ್, ಗ್ಯಾರಂಟಿ ಪ್ರಾಧಿಕಾರದ ಸದಸ್ಯರುಗಳಾದ ಅಜಯ್ ಕುಮಾರ್ ಬಿ.ಪಿ, ಎ.ಬಿ. ಕುಮಾರ್, ಶಂಕರೇಗೌಡ, ಬಸವರಾಜು, ಮಹಮದ್ ಅನ್ವರ್, ರಮೇಶ್ ಬಿ. ಎಂ. ಪಿ.ಮಾದೇಶ ಉಪಸ್ಥಿತರಿದ್ದರು.

18.12.2025
ಗುರುವಾರ
vishwavani.news

ಬೆಳಗಾವಿ ಚಳಿಗಾಲದ ಅಧಿವೇಶನ

ಅರಣ್ಯದ ಅಂಚಿನ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಲು ತೊಂದರೆಯಾಗುತ್ತಿರುವ ಕುರಿತು ದೂರು ಸಲ್ಲಿಕೆಯಾಗಿಲ್ಲ. ರೈತರೇ ಬೆಳೆ ಸಮೀಕ್ಷೆಗೆ ಅವಕಾಶ ಕಲ್ಪಿಸಿರುವುದರಿಂದ ಈ ಸಮಸ್ಯೆ ಉದ್ಭವಿಸಿಲ್ಲ.

ಚಲುವರಾಯಸ್ವಾಮಿ ಕೃಷಿ ಸಚಿವ

ಐಷಾರಾಮಿ ಕಾರುಗಳ ನೋಂದಣಿಯಲ್ಲಿ ನಿರಂತರವಾಗಿ ಅವ್ಯವಹಾರ ನಡೆಯುತ್ತಿದೆ. ಅದನ್ನು ತಡೆಯಲು ಶಾಶ್ವತ ಕಾನೂನು ತರಬೇಕು. ಐಷಾರಾಮಿ ಕಾರುಗಳಿಗೆ ಕಡಿಮೆ ಕರ ಪಡೆದು ನೋಂದಣಿ ಮಾಡಿಕೊಡುವುದು ನಡೆಯುತ್ತಿದೆ.

ಟಿ.ಎ.ಶರವಣ ವಿಧಾನ ಪರಿಷತ್ ಸದಸ್ಯ

ಗೋವಾ ಪಾಂಡಿಚೇರಿ ಮುಂತಾದೆಡೆ ವಾಹನ ನೋಂದಣಿ ಕರ ಕಡಿಮೆ ಇದೆ. ಅಲ್ಲಿ ನೋಂದಣಿ ಮಾಡಿ ರಾಜ್ಯದಲ್ಲಿ ವಾಹನ ಓಡಿಸುತ್ತ ಇರುತ್ತಾರೆ. ಹೊರ ರಾಜ್ಯದ ನೋಂದಣಿ ವಾಹನವನ್ನು ಒಂದು ವರ್ಷದವರೆಗೆ ಯಾವುದೇ ಕರ ತುಂಬದೇ ರಾಜ್ಯದಲ್ಲಿ ಓಡಿಸಲು ಅವಕಾಶವಿದೆ.

ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ಬಳ್ಳಾರಿ ಜಿಲ್ಲೆಯಲ್ಲಿ ಅತಿ ಹೆಚ್ಚು ಕೈಗಾರಿಕೆಗಳಿದ್ದರೂ ಸ್ಥಳೀಯರಿಗೆ ಉದ್ಯೋಗ ಸಿಗುತ್ತಿಲ್ಲ. ಹಾಗಾಗಿ ಉದ್ಯೋಗ ಅರಸಿ ಯುವಕರು ಬೆಂಗಳೂರಿಗೆ ಗುಳೆ ಹೋಗುತ್ತಿದ್ದಾರೆ. ಅನ್ಯ ರಾಜ್ಯದವರು ಇಲ್ಲಿ ಕೈಗಾರಿಕೆ ಸ್ಥಾಪಿಸಿ ಸ್ಥಳೀಯರಿಗೆ ಅನ್ಯಾಯ ಮಾಡುತ್ತಿದ್ದಾರೆ. ಸರಕಾರ ಕೂಡ ಬಳ್ಳಾರಿ ಜಿಲ್ಲೆಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ.

ನಾರಾ ಭರತ್ ರೆಡ್ಡಿ ಶಾಸಕ

ಕಿತ್ತೂರು ಕರ್ನಾಟಕ ಮಂಡಳಿ ರಚನೆ ಮಾಡಿ

ವಿಧಾನ ಪರಿಷತ್: ಸರಕಾರ ಕಿತ್ತೂರ ಕರ್ನಾಟಕ ಅಭಿ ವೃದ್ಧಿ ಮಂಡಳಿ ಸ್ಥಾಪಿಸಿ ವಿಶೇಷವಾಗಿ ಐದು ಸಾವಿರ ಕೋಟಿ ಅನುದಾನವನ್ನು ನೀಡಿ ಕಿತ್ತೂರು

ಕರ್ನಾಟಕ ಪ್ರದೇಶ ಅಭಿವೃದ್ಧಿಪಡಿಸಬೇಕು ಎಂದು ಸದಸ್ಯ ಜಕ್ಕಪ್ಪನವರ ಆಗ್ರಹಿಸಿದರು. ವಿಶೇಷ ಚರ್ಚೆಯಲ್ಲಿ ವಿಷಯ ಪ್ರಸ್ತಾಪಿಸಿ, ಕಿತ್ತೂರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಸ್‌ಸಿ, ಎಸ್‌ಟಿ ಉದ್ಯಮಿಗಳಿಗೆ ಆದ್ಯತೆ ನೀಡಬೇಕು. ಈ ಭಾಗದಲ್ಲಿ ಏತ ನೀರಾವರಿ ಯೋಜನೆಗಳನ್ನು ವಿಸ್ತರಿಸಿ ನೀರಾವರಿಗೆ ಆದ್ಯತೆ ನೀಡಬೇಕು. ಸಾರಿಗೆ ಇಲಾಖೆಯಲ್ಲಿ ಬೆಂಗಳೂರಿಗೆ ನಾಲ್ಕು ಸಾವಿರ ಎಲೆಕ್ಟ್ರಿಕಲ್ ಬಸ್ ನೀಡುವುದಾಗಿ ಸಾರಿಗೆ ಸಚಿವರು ತಿಳಿಸಿದ್ದಾರೆ. ಅದರಲ್ಲಿ ಒಂದು ಸಾವಿರ ಕಲ್ಯಾಣ ಕರ್ನಾಟಕಕ್ಕೆ, 1 ಸಾವಿರ ಕಿತ್ತೂರು ಕರ್ನಾಟಕಕ್ಕೆ ನೀಡಬೇಕು ಎಂದರು.

ಘಟಕ ವೆಚ್ಚ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆ

ವಿಧಾನ ಪರಿಷತ್: ರಾಜ್ಯದಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಹಾಯಧನ ಹೆಚ್ಚಿಸುವ ಮತ್ತು ಘಟಕ ವೆಚ್ಚ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಸಚಿವ ಜಮೀರ್ ಪರವಾಗಿ ರಾಮಲಿಂಗಾ ರೆಡ್ಡಿ ತಿಳಿಸಿದರು.

2024-2025 ನೇ ಸಾಲಿನಲ್ಲಿ ಕೇಂದ್ರ ಸರಕಾರದ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ಹಾಗೂ ರಾಜ್ಯ ಸರಕಾರದ ವಸತಿ ಯೋಜನೆಗಳಡಿ ಮರು ಹಂಚಿಕೆ ಮಾಡಲಾದ 36,150 ಮನೆಗಳನ್ನು ಒಳಗೊಂಡಂತೆ ಒಟ್ಟಾರೆ 7,38,881 ಮನೆಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದ್ದು, 3,27,747 ಮನೆಗಳಿಗೆ ಮಂಜೂರಾತಿ ನೀಡಲಾಗಿದೆ, ಅಲೆಮಾರಿ ಜನಾಂಗದವರಿಗೆ 2024-25ನೇ ಸಾಲಿನಲ್ಲಿ ಪ್ರತ್ಯೇಕವಾಗಿ ಗುರಿ ಹಂಚಿಕೆಯಾಗಿರುವುದಿಲ್ಲ. ಅಲೆಮಾರಿ ವರ್ಗದ ವಸತಿರಹಿತರನ್ನು ಒಳಗೊಂಡಂತೆ ಎಲ್ಲ ವಸತಿರಹಿತರಿಗೆ ವಸತಿ ಸೌಕರ್ಯ ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮ

ವಿಧಾನ ಪರಿಷತ್: ಸರಕಾರದ ಉಪವಿಭಾಗಾಧಿಕಾರಿಗಳ ಎಸಿ ಕೋರ್ಟ್ ನ್ಯಾಯಾಲಯಗಳಲ್ಲಿ ಬಾಕಿ



ಇರುವ ಪ್ರಕರಣಗಳನ್ನು ಕಳೆದ ಎರಡೂವರೆ ವರ್ಷ ದಲ್ಲಿ ರಾಜ್ಯ ಸರಕಾರವು ಶೇ. 80ರಷ್ಟು ವಿಲೇವಾರಿ ಮಾಡಿದ್ದು, ಇನ್ನುಳಿದ ಬಾಕಿ ಪ್ರಕರಣಗಳನ್ನು ಸಹ ಇತ್ಯರ್ಥಗೊಳಿಸಲು ಸರಕಾರ ಬದ್ಧವಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ರಾಮೋಜಿ ಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಹೆಚ್ಚು ಪ್ರಕರಣಗಳು ಬಾಕಿ ಇರುವ ಜಿಲ್ಲೆಗಳಲ್ಲಿನ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಎಎಸ್ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಸರಕಾರವು ಆದೇಶಿಸಿದೆ. ಇದರಿಂದ ಬಾಕಿ ಪ್ರಕರಣಗಳು ಇತ್ಯರ್ಥವಾಗಲಿದೆ ಎಂದರು.

ಗೂಡ್ಸೆ ಪ್ರೀತಿ ಮಾಡುವವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?: ಮಧು ಬಂಗಾರಪ್ಪ
ಮುಂದೆ ರಾಹುಲ್ ಗಾಂಧಿ ಪ್ರಧಾನಿಯಾದ ಬಳಿಕ ಸರಿಪಡಿಸಲಿದ್ದಾರೆ: ಮುನಿಯಪ್ಪ

ನರೇಗಾ ಹೆಸರು ಬದಲಿಸಿದ್ದಕ್ಕೆ ಕಾಂಗ್ರೆಸ್ ನಾಯಕರ ಆಕ್ರೋಶ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ನರೇಗಾ ಯೋಜನೆಯ ಹೆಸರನ್ನು 'ವಿಬಿ ಜೀ ರಾಮ್ ಜೀ' ಎಂದು ಬದಲಾಯಿಸುವ ನಿರ್ಣಯ ಇದೀಗ ಪರ-ವಿರೋಧ ಚರ್ಚೆಗೆ ನಾಂದಿ ಹಾಡಿದೆ.

ಕೇಂದ್ರ ಸರಕಾರದ ಈ ತೀರ್ಮಾನವನ್ನು ಬಿಜೆಪಿ ನಾಯಕರು ಸಮರ್ಥಿಸಿಕೊಂಡರೆ, ಕಾಂಗ್ರೆಸಿಗರು ಆಕ್ಷೇಪವ್ಯಕ್ತಪಡಿಸಿ, ವಾಗ್ವಾಳಿ ನಡೆಸಿದ್ದಾರೆ.

ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿ, ನರೇಂದ್ರ ಮೋದಿಯವರು ಬಂದ ಮೇಲೆ ಹೆಸರು ಬದಲಾವಣೆ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟ ಮಾಡಿದವರ ಹೆಸರನ್ನು ತೆಗೆಯುವ ಕೆಲಸ ಆಗುತ್ತಿದೆ. ಕೇಂದ್ರದಲ್ಲಿ ಬಿಜೆಪಿಯವರಿಗೆ ಅಧಿಕಾರ ಶಾಶ್ವತವಲ್ಲ. ರಾಹುಲ್ ಗಾಂಧಿ ಅವರು ಮುಂದೆ ಪ್ರಧಾನಮಂತ್ರಿ ಆಗುತ್ತಾರೆ. ಆಗ ಎಲ್ಲವನ್ನು ಸರಿಪಡಿಸುತ್ತಾರೆ. ಹೆಸರು ಬದಲಾವಣೆ ಮಾಡುವುದು ಯೋಗ್ಯವಲ್ಲ. ನಮ್ಮ ಅಧಿಕಾರ ಮುಂದೆ ಬಂದೇ ಬರುತ್ತೆ ಎಂದು ಹೇಳಿದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಬಿಜೆಪಿಯವರು ಗೋಡ್ಸೆಯನ್ನು ಪ್ರೀತಿ ಮಾಡುವವರು, ಗೋಡ್ಸೆಯನ್ನು ಪೂಜೆ ಮಾಡುವವರು. ಇವರಿಂದ ಏನು ನಿರೀಕ್ಷಿಸಲು ಸಾಧ್ಯ? ಬ್ರಿಟಿಷರು ವ್ಯಾಪಾರಕ್ಕೆ ಬಂದಿದ್ದರಲ್ಲ ಹಾಗೇ ಬಿಜೆಪಿಯವರು. ಒಡೆದು ಆಳುವ ಸಂಪ್ರದಾಯವನ್ನು ತಂದಿದ್ದಾರೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರ ಮನರೇಗಾ ಯೋಜನೆ ಜಾರಿಗೆ ತಂದಿತ್ತು. ನಾವು ರಾಮನನ್ನು ಬೇಡ ಅಂತಾ ಹೇಳಲ್ಲ. ಆದರೆ ಅವರು ಬಾಯಲ್ಲಿ ಹೇಳುತ್ತಾರೆ, ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ಹಾಗಾಗಿ, ಈ ವಿಚಾರದಲ್ಲಿ ಪ್ರತಿಭಟನೆಗೆ ನಮ್ಮ ಪಕ್ಷ ತೀರ್ಮಾನ ಮಾಡಿದೆ ಎಂದು ಸ್ಪಷ್ಟಪಡಿಸಿದರು.

ಗಾಂಧಿ ವಿರೋಧಿ ಸಿದ್ಧಾಂತ :ದಿನೇಶ್ ಗುಂಡೂರಾವ್

ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಮಾತನಾಡಿ, ಆರ್‌ಎಸ್‌ಎಸ್ ಇತಿಹಾಸ, ಸಿದ್ಧಾಂತ ಮಹಾತ್ಮ ಗಾಂಧಿ ವಿರುದ್ಧದ ಸಿದ್ಧಾಂತ. ಮಹಾತ್ಮ ಗಾಂಧಿ ಹೆಸರು ಬಳಕೆ ಮಾಡದೇ ಇದ್ದರೆ ಕೆಟ್ಟ ಹೆಸರು ಬರುತ್ತೆ ಅಂತಾ ಕೆಲವೆಡೆ ಬಳಕೆ ಮಾಡುತ್ತಾರೆ. ಮೊದಲಿನಿಂದಲೂ ಅವರಿಗೆ ಮಹಾತ್ಮ ಗಾಂಧಿ ಮೇಲೆ ವೈರತ್ವ ಇತ್ತು. ಗೋಡ್ಸೆ ಸಿದ್ಧಾಂತ ಅವರಲ್ಲಿ ಯಾವಾಗಲೂ ಇರುವಂತದ್ದು ಎಂದು ವಾಗ್ವಾಳಿ ನಡೆಸಿದರು.

ನರೇಗಾ ಯೋಜನೆ ಬಡವರಿಗಾಗಿ ಇದ್ದ ಕಾನೂನು. ಅದನ್ನು ಏಕೆ ಬದಲಾವಣೆ ಮಾಡುತ್ತಿದ್ದಾರೆ. ಅವರಿಗೆ ಮಹಾತ್ಮ ಗಾಂಧಿ, ನೆಹರು ಬಗ್ಗೆ ವೈರತ್ವ, ದ್ವೇಷ ಇದೆ. ಹಾಗಾಗಿ, ದ್ವೇಷ ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸಕಾರ ಶೇ.60 ಹಾಗೂ ರಾಜ್ಯ ಸರಕಾರ 40% ಅಂತಾ ಮಾಡಿದ್ದಾರೆ. ಆಯುಷ್ಮಾನ್ ಭಾರತ್‌ದಲ್ಲಿ ಕೇವಲ 25% ಹಣ ಕೊಡುತ್ತಾರೆ. ಕೇಂದ್ರದವರು ಎಲ್ಲಿ ದುಡ್ಡು ಕೊಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನಲ್ಲಿ ಗಾಂಧಿ ತತ್ವ ಉಳಿದಿದೆಯಾ? ಸ್ವಾತಂತ್ರ್ಯ ಬಳಿಕ ಕಾಂಗ್ರೆಸ್ ಹೆಸರು ಬರ್ಖಾಸ್ತು ಮಾಡಿ ಎಂದು ಗಾಂಧಿ ಹೇಳಿದ್ದರು. ಜೀ ರಾಮ್ ಜೀ ಅನ್ನೋದು ಏನು ಅನ್ನೋದನ್ನು ಮೊದಲು ತಿಳಿದುಕೊಳ್ಳಬೇಕು. ಕೆಲಸ ಸೇಮ್ ಇದೆ, ಹೆಸರು ಬದಲಾವಣೆ ಆದರೆ ಏನು ಸಮಸ್ಯೆ..? ಕೋಳಿ ಕೇಳಿ ಮಸಾಲೆ ಅರಿಯಲು ಆಗಲ್ಲ.

- ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕ

ಬಿಜೆಪಿಯವರಿಗೆ ಗಾಂಧಿಯವರ ಹೆಸರು ಬಳಕೆ ಮಾಡಿಕೊಳ್ಳಲು ಬರುತ್ತದೆ. ಆದರೆ, ನರೇಗಾ ಹೆಸರು ಬದಲಾವಣೆಗೆ ಮಸೂದೆ ಮಂಡಿಸಿದ್ದಾರೆ. ಇದು ಖಂಡನೀಯ. 125 ದಿನ ದಿನ ಕೂಲಿ ಕೆಲಸ ಕೊಡಬೇಕೆಂದು ರಾಜ್ಯಗಳಿಂದ ಕೇಂದ್ರ ಶೇ.40 ಹಣ ಪಡೆಯುತ್ತದೆ. ಈ ಮೂಲಕ ರಾಜ್ಯ ದಿವಾಳಿ ಆಗುತ್ತದೆ.

- ಈಶ್ವರ್ ಖಂಡ್ರೆ, ಸಚಿವ

ಬಿಜೆಪಿಗೆ ಮಹಾತ್ಮ ಗಾಂಧಿ ಅವರ ಮೇಲೆ ಗೌರವ, ನಂಬಿಕೆ ಇದೆ. ವಿಕಸಿತ ಭಾರತದ ಕಲ್ಪನೆಯಿಂದ ಕೇಂದ್ರ ಸರಕಾರ ನರೇಗಾ ಯೋಜನೆ ಹೆಸರು ಬದಲಾವಣೆ ಮಾಡುತ್ತಿದೆ. ವಿಕಸಿತ ಭಾರತದ ಗುರಿಯನ್ನು ಇಟ್ಟುಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ಮಾಡಬೇಕು ಎನ್ನುವ ಕಲ್ಪನೆ ಇದೆ.

- ಅಶ್ವತ್ಥನಾರಾಯಣ, ಮಾಜಿ ಡಿಸಿಎಂ

ಬೆಳೆ ಸಮೀಕ್ಷೆ ಕುರಿತು ಆಕ್ಷೇಪ ಸಲ್ಲಿಸಲು ರೈತರಿಗೆ ಅವಕಾಶ

ವಿಧಾನಸಭೆ: ಬೆಳೆ ಸಮೀಕ್ಷೆ ಬಗ್ಗೆ ಆಕ್ಷೇಪ ಸಲ್ಲಿಸಲು ರೈತರಿಗೆ ಸೂಕ್ತ ಸಮಯದ ಅವಕಾಶ ಕಲ್ಪಿಸಲಾಗುವುದು ಎಂದು ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಜಿ.ಎಚ್. ಶ್ರೀನಿವಾಸ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಜಮೀನುಗಳಲ್ಲಿ ಬೆಳೆ ಸಮೀಕ್ಷೆಯನ್ನು ಸ್ವತಃ ರೈತರೇ ಬೆಳೆ ಸಮೀಕ್ಷೆ ರೈತರ ಆ್ಯಪ್ ನಲ್ಲಿ ಬೆಳೆ ಮಾಹಿತಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಈ ಸಂದರ್ಭದಲ್ಲಿ ವ್ಯತ್ಯಾಸ ಉಂಟಾದರೆ ಅದನ್ನು ನಿಗದಿತ ಸಮಯದಲ್ಲಿ ಸರಿಪಡಿಸುವುದಕ್ಕಾಗಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಸಕಾಲದಲ್ಲಿ ರೈತರು ಬೆಳೆ ಸಮೀಕ್ಷೆ ಮಾಡದಿದ್ದಲ್ಲಿ ಖಾಸಗಿ ನಿವಾಸಿಗಳ ಮೂಲಕ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಖಾಸಗಿ ನಿವಾಸಿಗಳ ಬದಲಿಗೆ ಸಂಘ ಸಂಸ್ಥೆಗಳ ಮೂಲಕ ಬೆಳೆ ಸಮೀಕ್ಷೆ ಮಾಡಿಸಲು ಅವಕಾಶ ಕಲ್ಪಿಸಿಲ್ಲ. ಬೆಳೆ ಮಾಹಿತಿ ಕುರಿತಂತೆ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ರೈತರು ನಿಗದಿತ ಸಮಯದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಮಲೆನಾಡಿನಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಮ್ಯಾನುವಲ್ ಮೂಲಕವೂ ಸಮೀಕ್ಷೆಗೆ ಅವಕಾಶ ಮಾಡಿಕೊಡಿ ಎಂಬ ಆರಗ ಜ್ಞಾನೇಂದ್ರ ಮನವಿಗೆ ಸ್ಪಂದಿಸಿದ ಅವರು, ಇದೀಗ ಮಲೆನಾಡಿನ ಗ್ರಾಮೀಣ ಪ್ರದೇಶಗಳಲ್ಲಿಯೂ ನೆಟ್ ವರ್ಕ್ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಕೃಷಿ ಕಾರ್ಮಿಕರ ಕೊರತೆ

ಗ್ರಾಮೀಣ ಪ್ರದೇಶಗಳಲ್ಲಿ ಇತ್ತೀಚೆಗೆ ಕೃಷಿ ಕೂಲಿ ಕಾರ್ಮಿಕರ ಕೊರತೆ ಕಂಡುಬರುತ್ತಿದೆ

ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಒಪ್ಪಿಕೊಂಡರು. ಪ್ರಶ್ನೋತ್ತರ ಕಲಾಪದಲ್ಲಿ ಬಸವರಾಜ ನೀಲಪ್ಪ ಶಿವಣ್ಣನವರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಕಾರ್ಮಿಕರ ಕೊರತೆ ಹಿನ್ನೆಲೆಯಲ್ಲಿ ರೈತರು ಕೃಷಿ ಚಟು ವಟಿಕೆಗಳನ್ನು ಕೈಗೊಳ್ಳಲು ಯಂತ್ರೋಪಕರಣಗಳನ್ನು ಬಳಸುವ ಕಡೆ ಹೆಚ್ಚಿನ ಆಸಕ್ತಿ ತೋರುತ್ತಿ ದ್ದಾರೆ ಎಂದರು. ಕೃಷಿ ಚಟುವ ಟಿಕೆಗಳನ್ನು ಕೈಗೊಳ್ಳಲು ಯಂತ್ರೋಪಕರಣ ಗಳನ್ನು ಬಳಸುವ ಕಡೆ ಹೆಚ್ಚಿನ ಆಸಕ್ತಿ ತೋರುತ್ತಿ ದ್ದಾರೆ. ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದ 3.20 ಲಕ್ಷ ರೈತರಿಗೆ ಅಂದಾಜು 1,250 ಕೋಟಿ ಮೊತ್ತದ ಕೃಷಿ ಯಂತ್ರೋ ಪಕರಣಗಳನ್ನು ವಿತರಿಸಲಾಗಿದೆ ಎಂದು ಹೇಳಿದರು. ಸರಕಾರವೂ ರೈತರ ಬೇಡಿಕೆಗಳಿಗೆ ಅನುಗುಣವಾಗಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸುವ ಕೆಲಸಕ್ಕೆ ಆದ್ಯತೆ ನೀಡಿದೆ. ಅಲ್ಲದೆ ಹೈಟೆಕ್ ಹಾರ್ವೆಸ್ಟ್ ಹಬ್ ಕಾರ್ಯಕ್ರಮದಡಿ 127 ಕೋಟಿ ರು. ವೆಚ್ಚದಲ್ಲಿ 348 ರೈತರಿಗೆ ಉಪಯುಕ್ತ ಕೃಷಿ ಯಂತ್ರೋಪಕರಣ ವಿತರಿಸಲಾಗಿದೆ ಎಂದರು.

ನಿಯಮಾವಳಿಗೆ ಕಾಲಾವಕಾಶ ಬೇಕು

ವಿಧಾನಸಭೆ: ಕಂದಾಯ ಜಮೀನಿನಲ್ಲಿ ನಿವೇಶನ ಖರೀದಿಸಿ ಮನೆ ನಿರ್ಮಿಸಿಕೊಂಡವರಿಗೆ ಅಗತ್ಯ ದಾಖಲೆ ನೀಡಲು ಅಗತ್ಯ ನಿಯಮಾವಳಿ ರೂಪಿಸಬೇಕಿದ್ದು, ಅದಕ್ಕಾಗಿ ಕಾಲಾವಕಾಶ ಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈಗಾಗಲೇ ಕಂದಾಯ ನಿವೇಶ ನಗಳಿಗೆ ಖರೀದಿಯ ಕ್ರಯಪತ್ರ ಮುಂತಾದ ದಾಖಲೆ ಪರಿಶೀಲಿಸಿ, ಇ-ಸ್ವತ್ತು ನೀಡಿ, ಅವುಗಳನ್ನು ತೆರಿಗೆ ವ್ಯಾಪ್ತಿಗೆ ಸೇರಿಸಲಾಗುತ್ತಿದೆ. ಈವರೆಗೆ 2,936 ಅರ್ಜಿಗಳು ಸ್ವೀಕೃತವಾಗಿವೆ. ಖಾಸಗಿ ಜಮೀನುಗಳಲ್ಲಿ ನೆಲೆಸಿರುವ ದಾಖಲೆ ರಹಿತ ಜನವಸತಿಗಳನ್ನು ಕಂದಾಯ ಗ್ರಾಮ ಅಥವಾ ಗ್ರಾಮದ ಭಾಗವಾಗಿ ಪರಿವರ್ತಿಸಿ, ಅಲ್ಲಿನ ನಿವಾಸಿಗಳಿಗೆ ಭೂಸುಧಾರಣಾ ಕಾಯ್ದೆ ಅನ್ವಯ ಹಕ್ಕುಪತ್ರಗಳನ್ನು ಕಂದಾಯ ಇಲಾಖೆಯಿಂದ ವಿತರಿಸಲು ಅವಕಾಶ ಕಲ್ಪಿಸಲಾಗಿದೆ. ಬಳಿಕ ಗ್ರಾಮ ಪಂಚಾಯತಿಗಳಿಗೆ ಖಾತೆ ವಿತರಣೆಗೆ ಅವಕಾಶವಿದೆ. ಆದರೆ ಕೇವಲ ಅಗ್ರಿಮೆಂಟ್ ಪತ್ರದ ಆಧಾರದಲ್ಲಿ ನಿವೇಶನ ಖರೀದಿಸಿ, ವಸತಿ ನಿರ್ಮಿಸಿದವರಿಗೆ, ಒಂದು ಬಾರಿಯ ಪರಿಹಾರವಾಗಿ ಖಾತಾ ಮಾಡಿಕೊಡಲು ನಿಯಮಗಳನ್ನು ರೂಪಿಸಬೇಕಾಗಿದೆ. ಇದು ತಕ್ಷಣಕ್ಕೆ ಆಗುವ ಕೆಲಸವಲ್ಲ, ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ ಎಂದರು.

ಇಡೀ ದಿನ ಕಲಾಪದಿಂದ ದೂರ ಉಳಿದು ವಿಶ್ರಾಂತಿ | ಗ್ಯಾಸ್ಟ್ರೋಕೇಷನ ಇನ್ಫೆಕ್ಸನ್ ಅಷ್ಟೇ ಎಂದ ಪುತ್ರ ಯತೀಂದ್ರ

ಸಿಎಂ ಸಿದ್ದರಾಮಯ್ಯ ಆರೋಗ್ಯದಲ್ಲಿ ಏರುಪೇರು

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಗ್ಯದಲ್ಲಿ ದಿಢೀರ್ ಏರುಪೇರು ಉಂಟಾದ ಹಿನ್ನೆಲೆಯಲ್ಲಿ ಬುಧವಾರದ ಕಲಾಪದಿಂದ ಬಹುಪಾಲು ದೂರ ಉಳಿದು ವಿಶಾಂತ್ರಿ ಮೊರೆ ಹೋದರು. ತೀವ್ರ ಹೊಟ್ಟೆ ನೋವಿನ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸದನಕ್ಕೆ ಗೈರಾಗಿ ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಉಳಿದುಕೊಂಡರು.

ಬುಧವಾರ ಬೆಳಗ್ಗೆ ಕೇಂದ್ರ ಸರಕಾರದ ವಿರುದ್ಧ ನಡೆದಿದ್ದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಅವರಿಗೆ ಮಧ್ಯಾಹ್ನ ವೇಳೆಗೆ ಹೊಟ್ಟೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ವೈದ್ಯರ ಸಲಹೆಯಂತೆ ಅಧಿಕೃತ ಕಾರ್ಯಕ್ರಮಗಳನ್ನು

ರದ್ದುಗೊಳಿಸಿ ಸರ್ಕ್ಯೂಟ್ ಹೌಸ್‌ನಲ್ಲಿ ವಿಶ್ರಾಂತಿ ಪಡೆದರು. ಸಿದ್ದರಾಮಯ್ಯ ಅವರ ಅನಾರೋಗ್ಯ ವಿಷಯ ತಿಳಿಯುತ್ತಿದ್ದಂತೆ ಪುತ್ರ ಡಾ.ಯತೀಂದ್ರ ಸರ್ಕ್ಯೂಟ್ ಹೌಸ್‌ಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಯತೀಂದ್ರ, ತಂದೆಯವರ ಆರೋಗ್ಯ ಚೆನ್ನಾಗಿದೆ. ಗ್ಯಾಸ್ಟ್ರೋಕೇಷನ್ ಇನ್ಫೆಕ್ಸನ್‌ನಿಂದ ಡೈರಿಯಾ ಸಮಸ್ಯೆ ತರಾ ಆಗಿದೆ. ವೈದ್ಯರು ತಪಾಸಣೆ ನಡೆಸಿ ಮಾತ್ರೆಗಳನ್ನು ಕೊಟ್ಟಿದ್ದು, ತಂದೆಯವರು ವಿಶ್ರಾಂತಿ ಪಡೆಯುತ್ತಿದ್ದಾರೆ. ನಾಳೆ ಸದನದ ಕಲಾಪದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಗೊಂದಲಗಳಿಗೆ ತೆರೆ ಎಳೆದಿದ್ದಾರೆ.

ಸಿದ್ದರಾಮಯ್ಯ ಭೇಟಿಯಾದ ರಾಜಕೀಯ ಮುಖಂಡರು

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯದಲ್ಲಿನ ಏರುಪೇರಾದ ಸುದ್ದಿ ತಿಳಿಯುತ್ತಿದ್ದಂತೆ ವಿವಿಧ ರಾಜಕೀಯ ಮುಖಂಡರು ಭೇಟಿ ಆರೋಗ್ಯ ವಿಚಾರಿಸಿದ್ದಾರೆ. ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಏಕಾಂಗಿಯಾಗಿ ಬಂದು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದು, ರಾಜಕೀಯ ಪಡಸಾಲೆಯಲ್ಲಿ ಭಾರೀ ಕುತೂಹಲ ಮೂಡಿಸಿದೆ. ಮತ್ತೊಂದೆಡೆ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಅವರು ಕೂಡ ಸಿಎಂ ಅವರನ್ನು ಭೇಟಿ ಮಾಡಿದ್ದು, ವಿಶೇಷ ಎನಿಸಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಿಟಿಡಿ, ಚಾಮುಂಡೇಶ್ವರಿ ಕ್ಷೇತ್ರದ ಏತ ನೀರಾವರಿ ಯೋಜನೆ ಹಾಗೂ ಗ್ರೇಟರ್ ಮೈಸೂರು ಅಭಿವೃದ್ಧಿ ಕುರಿತು ಸಿಎಂ ಅವರೊಂದಿಗೆ ಚರ್ಚೆ ಮಾಡಲಾಗಿದೆ ಎಂದಿದ್ದಾರೆ.



ಇದು ಕೇವಲ ಸೌಜನ್ಯದ ಭೇಟಿ. ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ಸಿಎಂ ಅವರಿಗೆ ಧೈರ್ಯ ಹೇಳುವ ಅವಶ್ಯಕತೆಯಿಲ್ಲ. ಅವರೇ ನಮಗೆ ಧೈರ್ಯ ಹೇಳುವಷ್ಟು ಗಟ್ಟಿಯಾಗಿದ್ದಾರೆ.

- ರಮೇಶ್ ಜಾರಕಿಹೊಳಿ, ಶಾಸಕ

ಮುಖ್ಯಮಂತ್ರಿಗಳ ಆರೋಗ್ಯದ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಅವರ ಜತೆಗೆ ನಾನು ಊಟ ಮಾಡಿದ್ದೇನೆ, ಅವರು ಚೆನ್ನಾಗಿದ್ದಾರೆ. ನಾಳೆ ಸದನದಲ್ಲಿ ಹಲವು ಪ್ರಮುಖ ವಿಷಯಗಳಿಗೆ ಸಿಎಂ ಉತ್ತರ ನೀಡಬೇಕಿದೆ. ಹೀಗಾಗಿ ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಅವರು ಪರಿಶೀಲಿಸುತ್ತಿದ್ದಾರೆ.

- ಬೈರತಿ ಸುರೇಶ್, ಸಚಿವ

ರಾಜ್ಯ ಪೊಲೀಸ್ ಇಲಾಖೆಯ ಅವ್ಯವಸ್ಥೆ ಕುರಿತು ಹರಿಹಾಯ್ದ ಪ್ರತಿಪಕ್ಷ ನಾಯಕ ಆರ್.ಅಶೋಕ

ಪೊಲೀಸರೇ ಕಳ್ಳರಾದರೆ ನಾಡು ಕಾಯುವವರು ಯಾರು?

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಬೇಲಿಯೇ ಎದ್ದು ಹೊಲ ಮೇಯ್ದರೆ ಹೇಗೆ ಎಂಬಂತೆ ಪೊಲೀಸರೇ ಕಳ್ಳರಾದರೆ ನಾಡಿನ ರಕ್ಷಣೆ ಮಾಡುವವರು ಯಾರು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ರಾಜ್ಯ ಪೊಲೀಸ್ ಇಲಾಖೆಯ ಅವ್ಯವಸ್ಥೆ ಕುರಿತು ಹರಿಹಾಯ್ದರು.

ವಿಧಾನಸಭೆಯಲ್ಲಿ ನಿಯಮ 69ರಡಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತಮ್ಮ ಮಾತಿನುದ್ದಕ್ಕೂ ಪೊಲೀಸ್ ಅಕ್ರಮವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಇಂದು ಜೈಲುಗಳು ಜೈಲುಗಳಾಗಿ ಉಳಿದಿಲ್ಲ. ಹಣ ಕೊಟ್ಟರೆ ಎಲ್ಲಾ ಬಗೆಯ ಸವಲತ್ತು ಸಿಗುತ್ತದೆ. ಸಣ್ಣಪುಟ್ಟ ಅಪರಾಧ ಮಾಡಿದವರಿಗೆ ಲಾಡ್ಜ್‌ಗಳಂತಾಗಿವೆ. 4-5 ಕೊಲೆ ಮಾಡಿದವರಿಗೆ ರೆಸಾರ್ಟ್ ಆಗಿದ್ದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಹೊಂದಿದ್ದರೆ ಫೈವ್ ಸ್ಟಾರ್ ಹೊಟೆಲ್‌ಗಳಾಗಿವೆ. ಜೈಲಿನಲ್ಲಿ ಹಣ, ಹೆಂಡ, ಫೋನ್ ಸಿಗುತ್ತಿದೆ. ಇಂತಹವರನ್ನು ಕಾಯಲು ಪೊಲೀಸರು ಬೇಕಾ? ಸಂಬಳ ಯಾಕೆ ಕೊಡುತ್ತಿದ್ದೀರಿ? ಸರಕಾರ ಸತ್ತಿದೆಯೋ, ಬದುಕಿದೆಯೋ ಗೊತ್ತಿಲ್ಲ. ಈ ಹಿಂದೆ ಜೈಲಿಗೆ ನಾನಾ ಮೂಲಗಳಿಂದ ಮದ್ಯ ಸರಬರಾಜು ಆಗುತ್ತಿತ್ತು. ಈಗ ಅಲ್ಲಿಯೇ ತಯಾರು ಮಾಡುವ ಮಟ್ಟಕ್ಕೆ ಜೈಲುಗಳು ಸುಧಾರಣೆ ಆಗಿವೆ. ಹಾಗಾದರೆ, ಅಲ್ಲಿಗೆ ಸ್ಪಿರಿಟ್ ಸಪ್ಲೇ ಮಾಡುತ್ತಿರುವವರು ಯಾರು? ಇದು ನಾಚಿಕೆಗೇಡಿನ ಸಂಗತಿ ಎಂದು ಟೀಕಿಸಿದರು.

ಜೈಲುಗಳು ಹೆಚ್ಚು ಹಣ ಸಿಗುವ ತಾಣ: ಇಂದು ಜೈಲುಗಳು ಪೊಲೀಸರಿಗೆ ಅತಿ ಹೆಚ್ಚು ಹಣ ಸಿಗುವ ಜಾಗಗಳಾಗಿವೆ. ಅಲ್ಲಿರುವ ಎಲ್ಲರೂ ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಲಕ್ಷ

ಲಕ್ಷದ ಲೆಕ್ಕದಲ್ಲಿ ಲಂಚ ಪಡೆದು ಅಕ್ರಮಕ್ಕೆ ಅವಕಾಶ ಕೊಟ್ಟಿದ್ದಾರೆ. ದೇಶಕ್ಕೆ ಮಾರಕವಾಗಿ ಜೈಲಿನಲ್ಲಿರುವ ಉಗ್ರರ ಕೈಗೆ ಮೊಬೈಲ್ ಕೊಡುತ್ತಿದ್ದಾರೆ. ಇವರಿಗೆ ಕನಿಷ್ಠ ಪ್ರಮಾಣದ ಆತ್ಮಸಾಕ್ಷಿ ಬೇಡವಾ? ಅಪರಾಧಿಗಳ ಜತೆ ನಂಟು ಹೊಂದಿರುವ ಪೊಲೀಸರ ಪಟ್ಟಿ ನೀಡುವಂತೆ ಈ ಪೊಲೀಸ್ ಮಹಾನಿರ್ದೇಶಕರು ಪತ್ರ ಬರೆಯುವ ಮಟ್ಟಕ್ಕೆ ರಾಜ್ಯದ ಪೊಲೀಸ್ ಇಲಾಖೆ ಬಂದಿರುವುದು ಶೋಚನೀಯ.

ಜೈಲಿನ ಜಾಮರ್ ಅನ್ನು ಸ್ಲೋ ಮಾಡಿ ಕಳ್ಳರಿಗೆ ಮೊಬೈಲ್ ಬಳಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಅಂತಹ ತಂತ್ರಜ್ಞಾನವನ್ನು ಪೊಲೀಸರು ಕಂಡುಕೊಂಡಿದ್ದಾರೆ. ಕಾರವಾರದಲ್ಲಿ ಪೊಲೀಸರ ಮೇಲೇ ಕಳ್ಳರಿಂದ ಹಲ್ಲೆ ಆಗಿದೆ. ಅಂದರೆ, ಈಗ ಕಳ್ಳರಿಂದ ಪೊಲೀಸರೇ ರಕ್ಷಣೆ ಕೇಳಬೇಕಾದ ಅನಿವಾರ್ಯತೆ ಎದುರಾಗಿರುವುದು ಅಸಹ್ಯದ ಪರಮಾವಧಿ ಎಂದು ಟೀಕಿಸಿದರು.

ರಾಜ್ಯದಲ್ಲಿ ಡ್ರಗ್ ಮಾಫಿಯಾಕ್ಕೆ ಪೊಲೀಸರೇ ಕಾವಲಾಗಿದ್ದಾರೆ. ಯಾರ ಕೈಯಿಂದಲೂ ನಿಯಂತ್ರಣ ಆಗುತ್ತಿಲ್ಲ. ಶಾಲಾ ಕಾಲೇಜುಗಳೇ ಡ್ರಗ್ ಮಾರಾಟ ಕೇಂದ್ರಗಳಾಗಿವೆ. ಎಲ್ಲಾ ಶಾಲೆಗಳಲ್ಲಿ ಇಂದು ಡ್ರಗ್ ಸಿಗುತ್ತಿದೆ. ವಿದ್ಯಾರ್ಥಿಗಳು ಮಾತ್ರವಲ್ಲ, ಕೂಲಿ ಮಾಡುವ ಮಕ್ಕಳು ಕೂಡ ಇಂದು ಡ್ರಗ್ ಚಟಕ್ಕೆ ಬಲಿಯಾಗಿದ್ದಾರೆ. ಈ ದಂದೆಯ ಬಗ್ಗೆ ಪೊಲೀಸರು ಇದ್ದಾರೆ ಎಂಬುದು ಸತ್ಯ.

- ಆರ್.ಅಶೋಕ, ಪ್ರತಿಪಕ್ಷ ನಾಯಕ

ಪೊಲೀಸರೇ ಕಳ್ಳರು

ಬೆಂಗಳೂರಿನಲ್ಲಿ ನಡೆದ ಏಳು ಕೋಟಿ ರುಪಾಯಿ ದರೋಡೆ ಪ್ರಕರಣದಲ್ಲಿ ಪೊಲೀಸರೇ ಸೂತ್ರದಾರ. ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ನಿಲ್ಲಿಸಿದ್ದ ಕಾರಿನಿಂದ ಪೊಲೀಸರೇ ಹನ್ನೊಂದು ಲಕ್ಷ ಕಳ್ಳತನ ಮಾಡಿದ್ದಾರೆ. ಬೀದರ್‌ನಲ್ಲಿ ನಡೆದ ಎಟಿಎಂ ದರೋಡೆ ಪ್ರಕರಣದ ಆರೋಪಿಗಳು ಈವರೆಗೆ ಪತ್ತೆ ಇಲ್ಲ ಎಂದು ಆರ್.ಅಶೋಕ ಹೇಳಿದರು.

23000 ರೌಡಿಗಳು

ರಾಜ್ಯದಲ್ಲಿ 23000 ಸಕ್ರಿಯ ರೌಡಿಗಳಿದ್ದಾರೆ. ಅವರ ಹಿಂದಿರುವ ಸ್ಲೀಪರ್ ಸೆಲ್ ನಲ್ಲಿ ಸುಮಾರು 30000 ಜನ ರೌಡಿಗಳಿರಬಹುದು. ಇವರ ನಿಯಂತ್ರಣ ಸಾಧಿಸಲು ಆಗಿಲ್ಲ. ಅಂದರೆ ಬೇಲಿಯೇ ಎದ್ದು ಹೊಲ ಮೇಯುತ್ತಿದೆ ಎಂದು ಕಾಣುತ್ತಿದೆ. ಪರಿಸ್ಥಿತಿ ಹೀಗಾದರೆ ಯಾರನ್ನು ನಂಬಬೇಕು. ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ 5474 ಕೋಟಿ ರೂಪಾಯಿ ಸೈಬರ್ ವಂಚನೆ ಆಗಿದೆ. ಆದರೆ, ಆ ಪೈಕಿ ವಾಪಸ್ ಪಡೆದಿರುವ ಹಣ ಕೇವಲ 627 ಕೋಟಿ ಮಾತ್ರ ಎಂದು ಅಶೋಕ ಆರೋಪಿಸಿದರು.

ರಾಜ್ಯದಲ್ಲಿರುವುದು ಪೋಷಿತ ಸರಕಾರವಲ್ಲ, ಶೋಷಿತ ಸರಕಾರ

ವಿಧಾನಸಭೆ: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವುದು ಪೋಷಿತ ಸರಕಾರ ಅಲ್ಲ, ಶೋಷಿತ ಸರಕಾರ ಎಂದು ಶಾಸಕ ಸುನೀಲ್ ಕುಮಾರ್ ಕಟುವಾಗಿ ಟೀಕಿಸಿದರು. ವಿಧಾನಸಭೆಯಲ್ಲಿ ನಿಯಮ 69ರಡಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಇಂದು ಅಪರಾಧಿಗಳಿಗೆ ಭಯ ಇಲ್ಲವಾಗಿದೆ. ಏಕೆಂದರೆ, ಅವರ ರಕ್ಷಣೆಗೆ ಸರಕಾರವೇ ನಿಂತಂತಿದೆ. ಆದಕಾರಣವೇ ಅಪರಾಧಗಳ ಹಾಗೂ ಅಪರಾಧಿಗಳ

ಸಂಖ್ಯೆ ಹೆಚ್ಚುತ್ತಿದೆ. ಅಪರಾಧಿಗಳಿಗೆ ಏತಕ್ಕಾಗಿ ರಕ್ಷಣೆ ನೀಡಬೇಕು ?. ಗೃಹ ಸಚಿವರಿಗೆ ಇಲಾಖೆ ಮೇಲೆ ಹಿಡಿತ ಇಲ್ಲವೇ ? ಸರ್ಕಾರಕ್ಕೆ ಪೊಲೀಸ್ ಇಲಾಖೆ ಮೇಲೆ ನಿಯಂತ್ರಣ ತಪ್ಪಿದೆಯೇ ? ಖಾಕಿಯೇ ಕಳ್ಳತನಕ್ಕೆ ಇಳಿದರೆ ರಕ್ಷಣೆ ಮಾಡುವವರು ಯಾರು? ಎಂದು ಪ್ರಶ್ನಿಸಿದರು.

ಇತ್ತೀಚೆಗಿನ ವರ್ಷಗಳಲ್ಲಿ ಬಾಲಕ ಹಾಗೂ ಬಾಲಕಿಯರ ನಾಪತ್ತೆ ಪ್ರಕರಣ ಹೆಚ್ಚಾಗಿವೆ. ಕಳೆದೊಂದು ವರ್ಷದಲ್ಲಿ ಅಂದಾಜು 9 ಸಾವಿರ ಮಕ್ಕಳು ಕಾಣೆಯಾಗಿದ್ದಾರೆ. ಮೈಸೂರಿನಂತಹ ಸಾಂಸ್ಕೃತಿಕ ನಗರಿಯಲ್ಲಿ ಡ್ರಗ್ ಕಾರ್ಖಾನೆ ತೆರೆಯಲಾಗಿದೆ. ಅದನ್ನು ಪತ್ತೆ ಮಾಡಿದ್ದು ದೂರದ ಮುಂಬೈ ಪೊಲೀಸರು. ಹಾಗಾದರೆ ನಮ್ಮ ಪೊಲೀಸರು ಮಾಡುತ್ತಿರುವ ಕೆಲಸವಾದರೂ ಏನು? ಇದು ನಮ್ಮ ಪೊಲೀಸ್ ಇಲಾಖೆ ಬಹುದೊಡ್ಡ ವೈಫಲ್ಯ ಎಂದು ಟೀಕಿಸಿದರು.

ಪೊಲೀಸ್ ಇಲಾಖೆಯಲ್ಲಿ ಬಹಳ ದೊಡ್ಡ ಪ್ರಮಾಣದ ಭ್ರಷ್ಟಾಚಾರ ತಾಂಡವವಾಡುತ್ತಿದೆ. ವರ್ಗಾವಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ಮಾಡಲಾಗುತ್ತಿದೆ. ಆದಾಯ ತರುವ ಠಾಣೆಗಳನ್ನು ವರ್ಗೀಕರಣ ಮಾಡಿ ಇಂತಿಷ್ಟು ಹಣ ನಿಗದಿ ಮಾಡಿ ಹುದ್ದೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಖಾಕಿ ಎಂಬುದು ಕರಪ್ಷನ್ ಆಗಿದೆ. ಸಚಿವರೇ, ಪೊಲೀಸ್ ಇಲಾಖೆಯನ್ನು ನಿಯಂತ್ರಣ ಮಾಡಿ, ಇಲ್ಲವೇ ಜಾಗ ಬಿಟ್ಟು ಹೊರಡಿ ಎಂದು ಕಟುವಾದ ಮಾತುಗಳಲ್ಲಿ ಸರಕಾರವನ್ನು ತರಾಟೆಗೆ ತೆಗೆದುಕೊಂಡರು.



ಸಾರಿಗೆ ವಿಚಾರದಲ್ಲೂ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ಕೇಂದ್ರ ಸರಕಾರವು ರಾಜ್ಯಕ್ಕೆ ನೀಡುತ್ತಿರುವ 4,500 ವಿದ್ಯುತ್ ಚಾಲಿತ ಬಸ್‌ಗಳಲ್ಲಿ ಕೇವಲ 200 ಬಸ್‌ಗಳನ್ನು ಕಲ್ಯಾಣ ಕರ್ನಾಟಕಕ್ಕೆ ಹಂಚಿಕೆ ಮಾಡಲಾಗುತ್ತಿದೆ. ಈ ಸಂಖ್ಯೆಯನ್ನು 750ಕ್ಕೆ ಹೆಚ್ಚಿಸಬೇಕು.

- ಎಫ್.ಎಚ್.ಜಕ್ಕಪ್ಪನವರ್ ವಿಧಾನ ಪರಿಷತ್ ಸದಸ್ಯ

ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಎಂದು ಪ್ರತ್ಯೇಕಿಸಿ ನೋಡುವುದು ಬೇಡ. ಈ ಎರಡೂ ಪ್ರಾಂತ್ಯಗಳು ದಕ್ಷಿಣ ಕರ್ನಾಟಕಕ್ಕಿಂತ ಬಹಳ ಹಿಂದುಳಿದಿವೆ. ನಾವೆಲ್ಲರೂ ಸೇರಿ, ಈ ಪ್ರದೇಶಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದರತ್ತ ಗಮನಹರಿಸೋಣ.

- ಎಂ.ನಾಗರಾಜ್ ಯಾದವ್ ವಿಧಾನ ಪರಿಷತ್ ಸದಸ್ಯ

ರಾಜ್ಯದ ಇತರೆಡೆ ಇರುವ ಪ್ರದೇಶಾಭಿವೃದ್ಧಿ ಮಂಡಳಿಗಳಲ್ಲಿ ವಿಧಾನ ಪರಿಷತ್ತಿನ ಸದಸ್ಯರಿಗೆ ಸದಸ್ಯತ್ವ ಮತ್ತು ಅನುದಾನ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಅಂತಹ ಅವಕಾಶ ಇಲ್ಲ. ಈ ಬಗ್ಗೆ ಸರಕಾರ ಗಮನ ಹರಿಸಬೇಕು.

- ವೈ.ಎಂ.ಸತೀಶ್ ವಿಧಾನ ಪರಿಷತ್ ಸದಸ್ಯ

ಉತ್ತರ ಕರ್ನಾಟಕ ಎಂದರೆ, ಮುಂಬೈ ಕರ್ನಾಟಕವನ್ನಷ್ಟೇ ಕೇಂದ್ರೀಕರಿಸಿ ಮಾತನಾಡಲಾಗುತ್ತಿದೆ. ಆದರೆ ಅದಕ್ಕಿಂತಲೂ ಹಿಂದುಳಿದಿರುವ ಕಿತ್ತೂರು ಕರ್ನಾಟಕವನ್ನು ಕಡೆಗಣಿಸಲಾಗುತ್ತಿದೆ. 371-ಜೆ ವಿಧಿ ಜಾರಿಯಾದ ನಂತರ ಸ್ವಲ್ಪ ಸುಧಾರಣೆ ಆಗಿದೆಯಾದರೂ, ಆಗಬೇಕಾದದ್ದು ಇನ್ನಷ್ಟು ಇದೆ.

- ಶಶೀಲ್ ನಮೋಶಿ ವಿಧಾನ ಪರಿಷತ್ ಸದಸ್ಯ

ರೈತರಿಗೆ ಹೆಣ್ಣು ಸಿಗ್ತಿಲ್ಲ, 25 ಲಕ್ಷ ಪ್ರೋತ್ಸಾಹ ಕೊಡಿ

ವಿಧಾನ ಪರಿಷತ್: ರೈತರ ಮಕ್ಕಳಿಗೆ ಹೆಣ್ಣು ಸಿಗದ ಹಿನ್ನೆಲೆಯಲ್ಲಿ ಯುವಕರು ದೇವಸ್ಥಾನಗಳಿಗೆ ಪಾದಯಾತ್ರೆ ಹೋಗುತ್ತಿರುವ ಬಗ್ಗೆ ಬುಧವಾರ ಮೇಲ್ಮನೆ ಕಲಾಪದ ವೇಳೆ ಚರ್ಚೆಯಾಯಿತು. ಈ ಕುರಿತು ಶೂನ್ಯವೇಳೆಯಲ್ಲಿ ಸದಸ್ಯ ಪುಟ್ಟಣ್ಣ ಪ್ರಸ್ತಾಪಿಸಿ, ರೈತಾಪಿ ವರ್ಗದ ಮಕ್ಕಳಿಗೆ ಕನ್ಯಾ ಸಿಗುತ್ತಿಲ್ಲ. ಹೀಗಾಗಿ ಯುವಕರ ಮದುವೆಯಾಗುವ ವಯಸ್ಸು ಮೀರುತ್ತಿದೆ. ಸರಕಾರ ಇಂಥವರ ಹೆಸರಿನಲ್ಲಿ 25 ಲಕ್ಷ ರು. ನಿಶ್ಚಿತ ಠೇವಣಿ ಇಡಬೇಕೆಂದು ಆಗ್ರಹಿಸಿದರು. ಪೋಷಕರು ರೈತರ ಮಕ್ಕಳಿಗೆ ಮದುವೆಯಾಗಲು ಕನ್ಯಾ ಕೊಡುತ್ತಿಲ್ಲ. ಹೆಣ್ಣು ಹೆತ್ತವರಿಗೆ ಸರಕಾರಿ ಇರಬೇಕು. ಜತೆಗೆ ಆಸ್ತಿಯೂ ಇರಬೇಕು, ಶ್ರೀಮಂತನಾಗಿರಬೇಕು ಸೇರಿದಂತೆ ಹಲವು ಬೇಡಿಕೆಗಳನ್ನು ಹಾಕಿಕೊಂಡಿದ್ದಾರೆ. ಇದರಿಂದ ರೈತರ ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ ಎಂದು ಮರುಕ ವ್ಯಕ್ತಪಡಿಸಿದರು. ಇದರಿಂದ ಬೇಸತ್ತು ಯುವಕರ ಗುಂಪು ಚಾಮರಾಜನಗರ, ಧರ್ಮಸ್ಥಳ ಗಳಂಥ ಸ್ಥಳಗಳಿಗೆ ಹರಕೆ ಕಟ್ಟಿಕೊಂಡು ಪಾದಯಾತ್ರೆ ಹೋಗುತ್ತಿದ್ದಾರೆ. ದೇಶಕ್ಕೆ ಅನ್ನ ಹಾಕುವ ರೈತರ ಮಕ್ಕಳಿಗೆ ಹೆಣ್ಣು ಕೊಡಬೇಕು. ಇದಕ್ಕೆ ಸರಕಾರ ಹೊಸ ಭಾಗ್ಯ ಜಾರಿಗೆ ತಂದು ಪ್ರೋತ್ಸಾಹಧನವಾಗಿ 10 ರಿಂದ 25 ಲಕ್ಷದವರೆಗೆ ಠೇವಣಿ ಇಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಮೇಜು ಕುಟ್ಟಿ ಬಹುತೇಕ ಸದಸ್ಯರು ಬೆಂಬಲ ವ್ಯಕ್ತಪಡಿಸಿದರು.

98 ಕೋಟಿ ರುಪಾಯಿ ಬಳಕೆಯಾಗಿಲ್ಲ

ವಿಧಾನಸಭೆ: ರಾಜ್ಯ ಸರಕಾರದ ನಿರ್ದೇಶನದ ಅನುಸಾರ ಸಂಗ್ರಹಿಸಿದ ಡಿಎಂಎಫ್ ನಿಧಿಯ ಪೈಕಿ 98 ಕೋಟಿ ರು.ಗಳನ್ನು ಮೂರು ಜಿಲ್ಲೆಗಳ ವೈಯಕ್ತಿಕ ಖಾತೆಯಲ್ಲಿ ನಿರುಪಯುಕ್ತವಾಗಿ ಇಡಲಾಗಿತ್ತು ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ಮೇಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ವರದಿಯಲ್ಲಿ ಈ ವಿಚಾರ ಉಲ್ಲೇಖಿಸಲಾಗಿದೆ. ಬಳ್ಳಾರಿ, ಗದಗ, ಚಿತ್ರದುರ್ಗ ಜಿಲ್ಲೆಯಲ್ಲಿ 2018 ರಿಂದ 2023 ರವರೆಗೆ ವೈಯಕ್ತಿಕ ಖಾತೆಯಲ್ಲಿ ನಷ್ಟವಾಗಿತ್ತು. ಇದರಿಂದ ಉಳಿಕೆ ಮೊತ್ತದ ಮೇಲೆ ಸಂಭಾವ್ಯ ನಷ್ಟ ಸಂಭವಿಸಿದೆ ಎಂದು ವರದಿ ಉಲ್ಲೇಖಿಸಲಾಗಿದೆ.

ಪ್ರವಾಸೋದ್ಯಮ ಕೇಂದ್ರವಾಗಿ 106 ದ್ವೀಪ

ವಿಧಾನ ಪರಿಷತ್: ರಾಜ್ಯದ ಕರಾವಳಿ ಪ್ರದೇಶದಲ್ಲಿನ 106 ದ್ವೀಪಗಳನ್ನು ಪರಿಸರ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ ಎಂದು ಮೀನುಗಾರಿಕೆ ಸಚಿವ ಮಂಕಾಳ ಎಸ್.ವೈದ್ಯ ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿನ 7 ದ್ವೀಪಗಳನ್ನು ಪರಿಸರ ಪ್ರವಾಸೋದ್ಯಮವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ವ್ಯವಹರಣಾ ಸಲಹೆಗಾರರನ್ನು ಆಯ್ಕೆ ಮಾಡಲಾಗಿದ್ದು ವರದಿ ತಯಾರಿಸಲಾಗುತ್ತಿದೆ. ಉಡುಪಿ ಜಿಲ್ಲೆಯ 7 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ 1 ದ್ವೀಪಗಳಿಗೆ ವರದಿ ತಯಾರಿಸಲಾಗಿದೆ. ಈ ಪೈಕಿ 3 ದ್ವೀಪಗಳಾದ ದರಿಯಾ ಬಹದ್ದೂರ್ ಘಡ, ಮಲ್ಪೆ ಮತ್ತು ಅಯಾಬಾ ದ್ವೀಪಗಳನ್ನು ಅಭಿವೃದ್ಧಿಪಡಿಸಲು ಪ್ಲಾನ್ ಸಿದ್ಧಪಡಿಸಲಾಗಿದ್ದು, ರಾಜ್ಯದಲ್ಲಿ ಮೀನುಗಾರರಿಗೆ ತೊಂದರೆಯಾಗದಂತೆ ಬಂದರುಗಳನ್ನು ಮತ್ತು ಕರಾವಳಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲಾಗುವುದು ಎಂದರು.

184 ಟೆಲಿಮೆಟ್ರಿಕ್ ಮಳೆ ಮಾಪಕ, ಹವಾಮಾನ ಕೇಂದ್ರದಲ್ಲಿ 69 ಉಪಕರಣ ಕಾರ್ಯ ನಿರ್ವಹಿಸುತ್ತಿಲ್ಲ | ನಿರ್ವಹಣೆಗೆ ಮಂಜೂರಾದ ಹುದ್ದೆಗಳೇ ಖಾಲಿಯಾಗಿದೆ ಎಂದು ಸಿಎಜಿ ವರದಿಯಲ್ಲಿ ಪ್ರಸ್ತಾಪ | ಅಗ್ನಿಶಾಮಕ ಮತ್ತು ತುರ್ತು ಇಲಾಖೆಗೆ ನೀಡಿದ್ದ ಅನುದಾನ ಬಳಸಿಲ್ಲ

ವಿಪತ್ತು ನಿರ್ವಹಣೆಗಿರುವ ಉಪಕರಣಗಳೇ ರಿಪೇರಿಗೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜಧಾನಿ ಬೆಂಗಳೂರಿನಲ್ಲಿ ಪ್ರವಾಹ ವಿಪತ್ತಿನ ಮುನ್ಸೂಚನೆ ನೀಡಲು ಹಾಗೂ ನಿಯಂತ್ರಿಸಲು ಸಹಾಯವಾಗಲು ಸ್ಥಾಪಿಸಿದ್ದ ಟೆಲಿಮೆಟ್ರಿಕ್ ಉಪಕರಣಗಳೇ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವ ಅಂಶ ಸಿಎಜಿ ವರದಿಯಲ್ಲಿ ಬಹಿರಂಗವಾಗಿದೆ.

ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದ ಸಿಎಜಿ ವರದಿಯಲ್ಲಿ ವಿಪತ್ತು ನಿರ್ವಹಿಸಲು ಸ್ಥಾಪಿಸಲಾಗಿರುವ ಉಪಕರಣಗಳ ನಿಷ್ಕ್ರಿಯತೆ, ವಿಪತ್ತು ನಿರ್ವಹಣೆಗೆ ಅಗ್ನಿಶಾಮಕ ಇಲಾಖೆ ನೀಡಲಾಗಿದ್ದ ಅನುದಾನವನ್ನು ಬಳಸದೇ ಇರುವ ಬಗ್ಗೆ ಹಾಗೂ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದೇ ಇರುವ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. 2019-23ನೇ ಸಾಲಿನಲ್ಲಿ ಭಾರಿ ಮಳೆಯಿಂದ ಹಾನಿಗೊಳಗಾದ ಮನೆಗಳ ಪೈಕಿ ಶೇ.20ರಷ್ಟು ಮನೆಗಳ ಕಾಮಗಾರಿಯೇ ಆರಂಭವಾಗಿಲ್ಲ ಎನ್ನುವ ಅಂಶವನ್ನು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ರಾಜಧಾನಿ ಬೆಂಗಳೂರಿನ ಪ್ರವಾಹ ಮುನ್ಸೂಚನೆಗೆಂದು ಸ್ಥಾಪಿಸಲಾಗಿದ್ದ ಒಟ್ಟು 184 ಉಪಕರಣಗಳಲ್ಲಿ 69 ಉಪಕರಣಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಲಾಗಿದೆ. ಬೆಂಗಳೂರು ನಗರ ಪ್ರವಾಹ ಮಾದರಿ ತಯಾರಿಕೆ ಕಾಮಗಾರಿಯಲ್ಲಿ ಇದರಲ್ಲಿ 25 ಟೆಲಿಮೆಟ್ರಿಕ್ ಜಲ ಕೇಂದ್ರ, ನಾಲ್ಕು ಅಲ್ಟ್ರಾಸಾನಿಕ್ ನೀರಿನ ಮಟ್ಟದ ಸಂವೇಧಕಗಳನ್ನು ಸ್ಥಾಪಿಸಲಾಗಿತ್ತು. ಇದರೊಂದಿಗೆ ಬೆಂಗಳೂರಿನ ಚರಂಡಿಗಳಲ್ಲಿ ಸ್ಥಾಪಿಸಲಾಗಿದ್ದ 100 ನೀರಿನ ಸಂವೇದಕಗಳಿಂದ ಯಾವುದೇ ಮಾಹಿತಿ ಸಂಗ್ರಹವಾಗಿಲ್ಲ. ಇನ್ನು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಮಂಗಳೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡದಲ್ಲಿ ಸ್ಥಾಪಿಸಲಾಗಿದ್ದ ಟೆಲಿಮೆಟ್ರಿಕ್ ನೀರಿನ ಮಟ್ಟ ಸಂವೇದಕಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಇನ್ನು 2023 ವಿಪತ್ತು ನಿರ್ವಹಣೆಗೆ ಎಸ್‌ಡಿಆರ್‌ಎಫ್‌ನಿಂದ ಬಿಡುಗಡೆಯಾಗಿರುವ ಹಣದಲ್ಲಿ ಅಗ್ನಿಶಾಮಕ ಮತ್ತು ತುರ್ತು ಇಲಾಖೆಯು 23.68 ರು. ಕೋಟಿಗಳನ್ನು ಬಳಸಿದೆ ಮತ್ತು 7.69 ಕೋಟಿ ರು. ಅನುದಾನ ಬಳಕೆಯಾಗದೆ ಮಾರ್ಚ್ 2023 ರ ಅಂತ್ಯದ ವೇಳೆಗೆ ಬ್ಯಾಂಕ್ ಖಾತೆಯಲ್ಲಿ ಉಳಿದಿದೆ. ಇದರಿಂದಾಗಿ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಅನುದಾನಗಳ ನೈಜ ಬಳಕೆಯನ್ನು ಮೇಲ್ವಿಚಾರಣೆ ಮಾಡುವುದು ಸಮಸ್ಯೆಯಾಗಿದೆ ಎನ್ನುವ ವಿಷಯವನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಕಾರಣಕ್ಕಾಗಿಯೇ ಹಣಕಾಸು ವಹಿವಾಟುಗಳಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಹೆಚ್ಚಿಸಲು ಸರಕಾರ ಹಣಕಾಸು ದಾಖಲೆ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ಅತಿವೃಷ್ಟಿಯ ಸಮಯದಲ್ಲಿ ಹಾನಿಗೊಳಲಾಗಿದ್ದ 1,10,407 ಮನೆಗಳ ಪೈಕಿ ಶೇ.20ರಷ್ಟು ಅಂದರೆ 22496 ಮನೆಗಳ ನಿರ್ಮಾಣವೇ ಆರಂಭವಾಗಿಲ್ಲ. ಇದಕ್ಕಾಗಿ 213 ಕೋಟಿ ರು.ಗಳನ್ನು ಈಗಾಗಲೇ ಪಾವತಿಸಲಾಗಿದೆ. ಕಾಮಗಾರಿಯೇ ಪೂರ್ಣಗೊಳ್ಳದೇ ಅನುದಾನ ಪಾವತಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಇದರೊಂದಿಗೆ ಭೂ ಕುಸಿತ ಪೀಡಿತಕ್ಕೊಳಗಾಗುವ ಪ್ರದೇಶವೆಂದು ಗುರುತಿಸಿರುವ ಜಾಗದಲ್ಲಿಯೇ 6.25 ಕೋಟಿ ರು. ವೆಚ್ಚದಲ್ಲಿ ಕೊಡಗು ಜಿಲ್ಲಾಧಿಕಾರಿ ಕಚೇರಿ ಕಟ್ಟಲಾಗಿದೆ ಎನ್ನುವ ಅಂಶವನ್ನು ನಮೂದಿಸಲಾಗಿದೆ.

ಶಿಫಾರಸುಗಳು

- ಸರಕಾರ ಮೂಲಸೌಕರ್ಯ ಕಲ್ಪಿಸುವಾಗ ತುರ್ತು ಕಾರ್ಯಾಚರಣೆ ಕೇಂದ್ರಗಳನ್ನು ಪುನರುಜ್ಜೀವನಗೊಳಿಸಬೇಕು
- ವಿವಿಧ ಹಂತದಲ್ಲಿ ವಿಪತ್ತು ಎದುರಿಸಲು ವಲಯ ನಿರ್ದಿಷ್ಟ ತಂಡ ರಚಿಸಬೇಕು
- ವಿಪತ್ತು ನಿರ್ವಹಣೆಗೆ ಎಲ್ಲ ಹಂತದಲ್ಲಿ ಅಧಿಕಾರಿಗಳಿಗೆ ಸೂಕ್ತ ತರಬೇತಿ ಅಗತ್ಯ
- ವಿಪತ್ತು ನಿರ್ವಹಣೆಯ ಬಗ್ಗೆ ಸಮುದಾಯಗಳಿಗೆ ಜಾಗೃತಿ ಮೂಡಿಸಲು ಮತ್ತು ಉತ್ತಮ ಶಿಕ್ಷಣ ನೀಡಲು ಸರಕಾರ ಕ್ರಮವಹಿಸಬೇಕು.
- ಹಣಕಾಸು ವಹಿವಾಟುಗಳಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಹೆಚ್ಚಿಸಲು ಸರಕಾರ ಹಣಕಾಸು ದಾಖಲೆ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
- ಭೌಗೋಳಿಕ-ಪ್ರಾದೇಶಿಕ ಹವಾಮಾನ ವ್ಯತ್ಯಾಸಗಳನ್ನು ಪರಿಗಣಿಸಿ ಬರವನ್ನು ಶಮನಗೊಳಿಸಲು ರಾಜ್ಯ ಸರಕಾರ ಮಾರ್ಗಸೂಚಿ ರೂಪಿಸಬೇಕು
- ಜಲ ಸಂರಕ್ಷಣೆ ಮತ್ತು ನೀರು ಕೊಯ್ಲು ಕ್ರಮಗಳಿಗೆ ರಾಜ್ಯ ಸರಕಾರ ಹೆಚ್ಚಿನ ಒತ್ತು ನೀಡಬೇಕು.
- ಪರಿಹಾರ ಪಾವತಿಸುವ ವಿಧಾನ ಸುಗಮಗೊಳಿಸಬೇಕು; ಯಾವುದೇ ಅಕ್ರಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಹೊಣೆಗಾರಿಕೆ ನಿಗದಿಪಡಿಸಬೇಕು.
- ಭೂಕುಸಿತ ತಡೆಗಟ್ಟುವಿಕೆ ಮತ್ತು ಸಂವೇದನಾಶೀಲತೆ ನಕ್ಷೆಗಳನ್ನು ಸಂಯೋಜಿಸುವ ಸೂಕ್ತ ಸಾಂಸ್ಥಿಕ ಚೌಕಟ್ಟನ್ನು ಜಾರಿಗೆ ತರಬೇಕು.
- ಚಂಡಮಾರುತ ಮತ್ತು ಮಿಂಚುಗಳಂತಹ ಅಪಾಯಗಳಿಗೆ ಮೂಲಸೌಕರ್ಯಹಾನಿ, ಮಾನವ ನಷ್ಟವನ್ನು ಕಡಿಮೆ ಮಾಡಲು ಹೆಚ್ಚಿನ ಒತ್ತು ನೀಡಬೇಕು.

ಹುದ್ದೆ ಭರ್ತಿಗೆ ಕ್ರಮ ವಹಿಸಿ

ಪೊಲೀಸ್ ಇಲಾಖೆ ಹಾಗೂ ಅಗ್ನಿಶಾಮಕ ಸೇವಾ ಸಿಬ್ಬಂದಿಯ ಕೇಡರ್‌ಗಳಲ್ಲಿ ಭಾರಿ ಪ್ರಮಾಣದ ಹುದ್ದೆಗಳು ಖಾಲಿಯಿರುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ವಿಪತ್ತು ಪ್ರತಿಕ್ರಿಯೆ ಪಡೆ ಘಟಕಗಳು ಮಂಜೂರಾದ ಸಾಮರ್ಥ್ಯದ ಶೇ.67 ರಿಂದ 96ರವರೆಗೆ ಖಾಲಿಯಿದೆ. ಇದರೊಂದಿಗೆ ಕೇಂದ್ರ ಸರಕಾರ ಮಾಡಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ ಪೋರ್ಟಲ್‌ನಲ್ಲಿ ದತ್ತಾಂಶವನ್ನು ರಾಜ್ಯ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ನಿಯಮಿತವಾಗಿ ನವೀಕರಿಸಲಾಗುತ್ತಿಲ್ಲ. ಇದರಿಂದಾಗಿ ವಿಪತ್ತುಗಳಿಂದ ಉಂಟಾಗುವ ಹಾನಿ ಬಗ್ಗೆ ಸ್ಪಷ್ಟ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ ಎಂದು ಉಲ್ಲೇಖಿಸಿದೆ.

ಐದು ವಿಧೇಯಕಗಳಿಗೆ ಪರಿಷತ್‌ನಲ್ಲಿ ಅಂಗೀಕಾರ

ವಿಧಾನ ಪರಿಷತ್: ಕರ್ನಾಟಕ ವಿಧಾನಸಭೆಯಿಂದ ಅಂಗಿಕೃತ ರೂಪದಲ್ಲಿರುವ 2025ನೇ ಸಾಲಿನ ವಿವಿಧ ವಿಧೇಯಕಗಳನ್ನು ಪರ್ಯಾಲೋಕಿಸಿ ವಿಧಾನ ಪರಿಷತ್‌ನಲ್ಲಿ ಐದು ವಿಧೇಯಕಗಳಿಗೆ ಅಂಗೀಕಾರ ದೊರಕಿತು.

ವಿಧಾನ ಪರಿಷತ್ ಕಲಾಪದ 330ರಡಿಯ ಚರ್ಚೆಯ ಬಳಿಕ ನಡೆದ ವಿಧೇಯಕ ಮಂಡನೆ ಹಾಗೂ ಅಂಗೀಕಾರ ಚರ್ಚೆಯ ವೇಳೆ ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ ಪ್ರತಿ ವಿಧೇಯಕವನ್ನು ಪ್ರತ್ಯೇಕವಾಗಿ ಮಂಡಿಸಿ ಮತಕ್ಕೆ ಹಾಕಿದರು.

ಈ ವೇಳೆ ಒಂದೆರಡು ವಿಧೇಯಕದ ಬಗ್ಗೆಯಷ್ಟೇ ಸಣ್ಣ ಪ್ರಮಾಣದ ಚರ್ಚೆ ನಡೆಯಿತು. ಇದಕ್ಕೆ ಸಂಬಂಧಿಸಿದ ಸಚಿವರು ಸಮರ್ಪಕ ಉತ್ತರ ನೀಡಿದ ಹಿನ್ನೆಲೆಯಲ್ಲಿ ಚರ್ಚೆ ಅಂತ್ಯಗೊಂಡು ಸದಸ್ಯರು ಪಕ್ಷಾತೀತವಾಗಿ ಒಮ್ಮತ ಸೂಚಿಸಿದರು. ಈ ಹಿನ್ನೆಲೆಯಲ್ಲಿ ಐದು ವಿಧೇಯಕಗಳು ಪ್ರತ್ಯೇಕವಾಗಿ ಅನುಮೋದನೆಗೊಂಡವು. ಸಚಿವರಾದ ಸಂತೋಷ್ ಲಾಡ್, ರಾಮಲಿಂಗಾರೆಡ್ಡಿ ಅವರು ವಿಧೇಯಕಕ್ಕೆ ಅನುಮೋದನೆ ನೀಡುವಂತೆ ಕೋರಿದರು.

ಅನುಮೋದನೆಗೊಂಡ ವಿಧೇಯಕಗಳು

- 2025ನೇ ಸಾಲಿನ ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ.
- 2025ನೇ ಸಾಲಿನ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರೆ ಕಾನೂನುಗಳ(ತಿದ್ದುಪಡಿ) ವಿಧೇಯಕ
- 2025ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡೆ) ವಿಧೇಯಕ
- 2025ನೇ ಸಾಲಿನ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ)(ತಿದ್ದುಪಡಿ) ವಿಧೇಯಕ
- 2025ನೇ ಸಾಲಿನ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ.

ಬಸವ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನಕ್ಕೆ ₹64.43 ಕೋಟಿ

ವಿಧಾನ ಪರಿಷತ್: ಬಸವ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಸ್ಥಾಪನೆಗೆ 64.43 ಕೋಟಿ ರು. ಬಿಡುಗಡೆ ಮಾಡಲಾಗಿದ್ದು, ಇದುವರೆಗೆ 54.82 ಕೋಟಿ ರು. ಬಳಕೆ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಹನುಮಂತ ನಿರಾಣಿ ಪ್ರಶ್ನೆಗೆ ಉತ್ತರಿಸಿದ ಅವರು, ಬಸವ ಅಂತಾರಾಷ್ಟ್ರೀಯ ಕೇಂದ್ರದ ಸಿವಿಲ್ ಕಾಮಗಾರಿಯ ಎ, ಬಿ, ಸಿ ಮತ್ತು ಎಫ್ ಬ್ಲಾಕ್‌ಗಳ ಕಾಮಗಾರಿ ಮುಕ್ತಾಯವಾಗಿದ್ದು, ಬಾಕಿ ಉಳಿದ ಡಿ ಮತ್ತು ಇ ಬ್ಲಾಕ್‌ಗಳ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಪರಿಶೀಲನೆಯಲ್ಲಿರುತ್ತದೆ ಕಟ್ಟಡದ ಸಿವಿಲ್ ಕಾಮಗಾರಿಗಳು ಮುಕ್ತಾಯಗೊಂಡ ನಂತರ ಕಟ್ಟಡಗಳಲ್ಲಿ ಬಾಕಿ ಉಳಿದ ವಿದ್ಯುತ್, ಧ್ವನಿ ಮತ್ತು ಬೆಳಕು ಆಧುನಿಕ ಶೈಲಿಯ 3ಡಿ, ಡಯಾರಾಮ ಮಲ್ಟಿಮಿಡಿಯಾ ತಂತ್ರಜ್ಞಾನ ಮತ್ತು ಐನಿಮ್ಯಾಟ್ರಿಕ್ಸ್ ಇತ್ಯಾದಿ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಮ್ಯೂಸಿಯಂನ ವಿಸ್ತ್ರತ ಯೋಜನಾ ವರದಿಯನ್ನು ತಯಾರಿಸಲು ಒಟ್ಟು 21 ಸಭೆಗಳನ್ನು ನಡೆಸಲಾಗಿದೆ. ಈ ಸಭೆಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ವಸ್ತು ಸಂಗ್ರಹಾಲಯವನ್ನು ಹೇಗೆ ಮಾಡಬೇಕೆಂದು ಚರ್ಚಿಸಲಾಗಿದೆ. 12 ನೇ ಶತಮಾನದಲ್ಲಿ ಸಮಗ್ರ ಶರಣರ ಜೀವನ ಸಾಧನೆಗಳನ್ನು ಒಳಗೊಂಡಂತೆ, ಬಸವಣ್ಣನವರ ಸಂಪೂರ್ಣ ಜೀವನ ಚಿತ್ರಣವನ್ನು, ವಚನಾಧಾರಿತ ಚಿಂತನೆಗಳನ್ನು, ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಅಳವಡಿಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಶಾಸಕರಿಗೆ ಅಧ್ಯಕ್ಷತೆ ನೀಡಿ: ಸದನದಲ್ಲಿ ಚರ್ಚೆ

ವಿಧಾನಸಭೆ: ಸರಕಾರಿ ಕಾರ್ಯಕ್ರಮದಲ್ಲಿ ಸ್ಥಳೀಯ ಶಾಸಕರ ಬದಲಿಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಧ್ಯಕ್ಷತೆ ನೀಡುವ ಕ್ರಮ ಸರಿಯಲ್ಲ ಎಂದು ಬಿಜೆಪಿಯ ಹಲವು ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಶೂನ್ಯ ವೇಳೆಯಲ್ಲಿ ಶಾಸಕ ಸುರೇಶ್‌ಗೌಡ, ಸಿಮೆಂಟ್ ಮಂಜು ಅವರು, ರಾಜ್ಯ ಸರಕಾರದ ಪರಿಷ್ಕೃತ ಶಿಷ್ಟಾಚಾರ ಬದಲಾವಣೆಯಿಂದ ಕ್ಷೇತ್ರದಲ್ಲಿ ನಡೆಯುವ ಸರಕಾರಿ ಕಾರ್ಯಕ್ರಮ ಗಳ ಅಧ್ಯಕ್ಷತೆಯನ್ನು ಸ್ಥಳೀಯ ಶಾಸಕರ ಬದಲು ಜಿಲ್ಲಾ ಉಸ್ತುವಾರಿ ಸಚಿವರಿಗೆ ನೀಡಲಾಗಿದೆ. ಇದರಿಂದ ಕ್ಷೇತ್ರದಲ್ಲಿ ಶಾಸಕರಿಗೆ ಸಮಸ್ಯೆಯಾಗುತ್ತಿದೆ. ಇದರೊಂದಿಗೆ ವಿಧಾನಸಭಾಧ್ಯಕ್ಷರನ್ನು ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಬಳಿಕ ನಮೂದಿಸ ಲಾಗಿದೆ. ಆದ್ದರಿಂದ ಈ ಪರಿಷ್ಕೃತ ಶಿಷ್ಟಾಚಾರ ನಿಯಮ ಸರಿಪಡಿಸಬೇಕು ಎಂದು ಆಗ್ರಹಿಸಿದರು. ಸರಕಾರದ ಪರವಾಗಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಈ ಸಮಸ್ಯೆ ಬಗ್ಗೆ ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಗುರುವಾರ ಉತ್ತರಿಸುವ ಭರವಸೆ ನೀಡಿದರು.

ಉತ್ತರ ಕೇಳಿದ್ರೆ, ಖಾಲಿ ಪೆನ್‌ಡ್ರೈವ್!

ಕಲಾಪದ ವೇಳೆ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುವುದು ರೂಢಿ. ಆದರೆ, ಅಧಿಕಾರಿಗಳ ಎಡವಟ್ಟಿನಿಂದಾಗಿ ಖಾಲಿ ಪೆನ್‌ಡ್ರೈವ್ ನೀಡಿ ಮತ್ತೆ ಮರಳಿ ಪಡೆದುಕೊಂಡಿರುವ ಪ್ರಸಂಗ ವಿಧಾನ ಪರಿಷತ್‌ನಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಯನ್ನು ಬಿಜೆಪಿ ಸದಸ್ಯ ನವೀನ್ ಕೇಳಿದ್ದರು. ಅದಕ್ಕೆ ಇಲಾಖೆಯಿಂದ ಉತ್ತರ ಪೆನ್‌ಡ್ರೈವ್ ಮೂಲಕ ಉತ್ತರ ನೀಡಲಾಗಿತ್ತು. ಆದರೆ ಅದನ್ನು ಪರಿಶೀಲಿಸಿದಾಗ ಅದು ಖಾಲಿಯಾಗಿತ್ತು. ಆದ್ದರಿಂದ ನನ್ನಿಂದ ಪಡೆದುಕೊಂಡರು ಎಂದು ನವೀನ್ ಸದನದಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಉಪಸಭಾಪತಿ ಎಂ.ಕೆ.ಪ್ರಾಣೇಶ್, ಸಭಾನಾಯಕರನ್ನು ಪ್ರಶ್ನಿಸಿದರು. ಸಚಿವಾಲಯದವರು ಪರಿಷತ್ ಕಾರ್ಯದರ್ಶಿಗಳಿಗೆ ಕೊಟ್ಟಿರುವುದಾಗಿ ಸ್ವೀಕೃತಿ ಪಡೆದಿದ್ದಾರೆ. ಇಲ್ಲಿ ಏನೋ ಆಗಿರಬೇಕು. ಈ ಬಗ್ಗೆ ಪರಿಶೀಲನೆ ಮಾಡುವುದಾಗಿ ಉತ್ತರಿಸಿದರು.

ನಾನು ಟಿ.ಡಿ ಅಲ್ಲ, ಡಿ.ಟಿ!

ಸಭಾಪತಿಗಳೇ ನಾನು ಟಿ.ಡಿ.ಶ್ರೀನಿವಾಸ್ ಅಲ್ಲ, ಡಿ.ಟಿ.ಶ್ರೀನಿವಾಸ್. ಬೆಳಗ್ಗೆಯಿಂದಲೂ ಹಾಗೇ ಕರೆಯುತ್ತಿದ್ದೀರಾ ಎಂದು ತಮ್ಮ ಹೆಸರು ಸರಿಯಾಗಿ ಕರೆಯುವಂತೆ ಸಭಾಪತಿಗಳಿಗೆ ಮನವಿ ಮಾಡಿಕೊಂಡ ಹಾಸ್ಯಮಯ ಪ್ರಸಂಗ ಬುಧವಾರ ಮೇಲ್ಮನೆಯಲ್ಲಿ ನಡೆಯಿತು. ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಪೀಠದಲ್ಲಿದ್ದ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಅವರು ಡಿ.ಟಿ. ಶ್ರೀನಿವಾಸ್ ಅವರನ್ನು ಟಿ.ಡಿ ಎಂದು ಕೂಗಿದರು. ಅದಕ್ಕೆ ಅವರು ನಾನು ಟಿ.ಡಿ.ಎಸ್ ಅಲ್ಲ ಡಿ.ಟಿ.ಎಸ್ ಎಂದರು. ಆಗ ಉಪಸಭಾಪತಿ ಸರಿ ಮಾಡಿಕೊಳ್ಳೋಣ ಎಂದು ಮುಂದೆ ಸಾಗಿದರು.

ರಾಜೀನಾಮೆ ಯಾರೆಲ್ಲ ನೀಡುವಿರಿ!

ವಿಧಾನಸಭೆಯಲ್ಲಿ ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದಂತೆ ಗಂಭೀರವಾದ ಚರ್ಚೆ ನಡೆಯುತ್ತಿತ್ತು. ಈ ವೇಳೆ ಸುನೀಲ್‌ಕುಮಾರ್, 'ಸರಕಾರ ವಿಸರ್ಜನೆ ಮಾಡಿ ಚುನಾವಣೆಗೆ ಬನ್ನಿ' ಎಂದು ಸವಾಲು ಹಾಕಿದರು. ಇದಕ್ಕೆ ಕಾಂಗ್ರೆಸ್ಸಿಗರು ಮತ ಚೋರಿಯ ಗಲಾಟೆ ಆರಂಭಿಸಿದರು. ಈ ವೇಳೆ ಗಲಾಟೆ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ರಾಜೀನಾಮೆ ಯಾರೆಲ್ಲ ನೀಡುತ್ತೀರಾ ಕೈ ಎತ್ತಿ. ಈಗಲೇ ಅಂಗೀಕರಿಸುತ್ತೇನೆ ಎಂದರು. ಆಗ ಬಿಜೆಪಿಯ ಅಶ್ವತ್ಥ ನಾರಾಯಣ ಸೇರಿದಂತೆ ಕೆಲವರು ಮಾತ್ರ ಕೈ ಎತ್ತಿದರು!

ಮಾನನಷ್ಟ ಮೊಕದ್ದಮೆ ಹೂಡುವೆ

ಸದನದಲ್ಲಿ ಶಿವಲಿಂಗೇಗೌಡ್ರು, ಯಾವಾಗ ಎದ್ದು ನಿಂತರೂ ಬಿಜೆಪಿಯ ವೇದವ್ಯಾಸ ಕಾಮತರು ಗೌಡರ ಕಾಲೆಳೆಯುತ್ತಾರೆ. ಈ ವೇಳೆ 'ಗೌಡ್ರೇ ನಿಮಗೆ ಗೊತ್ತಾಗಲ್ಲ ಕೂರಿ' ಎಂದು ಹೇಳುವುದು ಸಾಮಾನ್ಯ. ಬುಧವಾರದ ಸದನದಲ್ಲಿ ಇದೇ ರೀತಿ ಮಾಡಲು ಮುಂದಾದಾಗ ರೊಚ್ಚಿಗೆದ್ದ ಶಿವಲಿಂಗೇಗೌಡರು, 'ರೀ ನೀವು ಯಾವಾಗಲೂ ತಮಾಷೆ ಮಾಡಬೇಡಿ. ನಾನು ಏನು ಓದಿದ್ದೇನೆ ಎನ್ನುವುದು ಗೊತ್ತಾ? ನೀವು ಹೀಗೇ ಮಾಡುತ್ತಾ ಹೋದರೆ ನಾನು ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ' ಎಂದು ಎಚ್ಚರಿಸಿದರು. ಆಗ ಇಡೀ ಸದನ ನಗೆಗಡಲಲ್ಲಿ ತೇಲಿತು.

ಕಲಾಪಕ್ಕೆ ಆಡಳಿತ ಪಕ್ಷದ ಸದಸ್ಯರ ಗೈರು: ಪ್ರತಿಪಕ್ಷ ನಾಯಕರಿಂದ ಆಕ್ರೋಶ

ಸುವರ್ಣ ವಿಧಾನಸೌಧ

ವಿಧಾನ ಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸುವ ವೇಳೆ ಸಭಾಪತಿ ಕಲಾಪವನ್ನು 10 ನಿಮಿಷಕ್ಕೆ ಮುಂದೂಡಿದ ಘಟನೆಗೆ ಬುಧವಾರದ ವಿಧಾನ ಪರಿಷತ್ ಕಲಾಪ ಸಾಕ್ಷಿಯಾಯಿತು.

ಕಲಾಪ ಆರಂಭವಾದರೂ ಸಚಿವ ಸತೀಶ ಜಾರಕಿಹೊಳಿ, ಹಾಗೂ ಸಚಿವ ರಾಮಲಿಂಗಾ ರೆಡ್ಡಿ ಹೊರತುಪಡಿಸಿ ಯಾವ ಕಾಂಗ್ರೆಸ್ ಸದಸ್ಯರು ಹಾಜರಾಗದ ಕಾರಣ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಸರಕಾರ ಕಳೆದು ಹೋಗಿದೆ ಸರಕಾರವನ್ನು ಹುಡುಕಿಕೊಡಿ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಸದನದ ಬಗ್ಗೆ ಆಸಕ್ತಿ ಇಲ್ಲ, ಸದನ ಆರಂಭವಾಗಿ ಅರ್ಧ ಗಂಟೆಯಾದರೂ ಸದಸ್ಯರು ಸಭೆಗೆ ಆಗಮಿಸದೆ ಹೊರಗಡೆ ಪ್ರತಿಭಟನೆ ಮಾಡುವ ಮೂಲಕ ಪೀಠಕ್ಕೆ ಅವಮಾನ ಮಾಡಿದ್ದಾರೆ, ಸರ್ಕಾರ ಉತ್ತರ ಕರ್ನಾಟಕಕ್ಕೆ ದ್ರೋಹ ಬಗೆದಿದೆ, ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ, ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ಪ್ರತಿವರ್ಷ ಚಳಿಗಾಲ ಅಧಿವೇಶನ ನಡೆಸಲಾಗುತ್ತದೆ ಆದರೆ ಸರ್ಕಾರ ಸದನದ ಸಮಯವನ್ನು ಹಾಳು ಮಾಡಿದೆ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಪ್ರತಿಪಕ್ಷ ಮುಖ್ಯ ಸಚೇತಕ ಎನ್ ರವಿಕುಮಾರ, ಶಶೀಲ್ ನಮೋಶಿ, ಹಣಮಂತ ನಿರಾಣಿ, ಟಿ ಎ ಶರವಣ, ಭಾರತಿ ಶೆಟ್ಟಿ, ತಿಪ್ಪಣ್ಣ ಕಮಕನೂರ, ಬಸನಗಡ ಬಾದರ್ಲಿ, ಭೋಜೇಗೌಡ ಸೇರಿದಂತೆ ಇತರೆ ಸದಸ್ಯರು ಆರೋಪಿಸಿ ಸದನದಲ್ಲೇ ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ, ಸಭಾಪತಿಗಳು ಮಧ್ಯೆ ಪ್ರವೇಶಿಸಿ ಸದನವನ್ನು 10 ನಿಮಿಷ ಮುಂದೂಡುವ ಮೂಲಕ ಸದನದಲ್ಲಿನ ಗಲಾಟೆಗೆ ತೆರೆ ಎಳೆದರು.

ಕೃಷ್ಣಬೈರೇಗೌಡ ವಿರುದ್ಧ ಭೂ ಕಬಳಿಕೆ ಆರೋಪ

ಸ್ಮಶಾನದ ಭೂಮಿ ಬರೆಸಿಕೊಂಡಿದ್ದಾರೆ, ರಾಜೀನಾಮೆ ನೀಡಲಿ: ಛಲವಾದಿ ನಾರಾಯಣಸ್ವಾಮಿ
ಯಾವುದೇ ತಪ್ಪು ಮಾಡಿಲ್ಲ, ತನಿಖಾ ಸಂಸ್ಥೆಯಿಂದ ತನಿಖೆ ಎದುರಿಸಲು ಸಿದ್ಧ: ಸಚಿವ ಕೃಷ್ಣಬೈರೇಗೌಡ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಕಂದಾಯ ಸಚಿವ ಕೃಷ್ಣ ಬೈರೇಗೌಡರು ತಮ್ಮ ಹೆಸರಿಗೆ ಸ್ಮಶಾನ ಜಮೀನು ಬರೆಸಿಕೊಂಡಿದ್ದು, ಅವರು ರಾಜೀನಾಮೆ ನೀಡುವಂತೆ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

ಸುವರ್ಣಸೌಧದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳೇ ಮುಡಾ ಹಗರಣದಲ್ಲಿ 14 ಸೈಟು ಪಡೆದು ವಾಪಸ್ ಕೊಟ್ಟರು. ಪ್ರಿಯಾಂಕ್ ಖರ್ಗೆ ಐದು ಎಕರೆ ಜಾಗ ಪಡೆದು ವಾಪಸ್ ನೀಡಿದರು. ಇವೆರಡೂ ಪ್ರಕರಣಗಳೇ ಅಲ್ಲ, ಕದ್ದ ಮಾಲು ವಾಪಸ್ ಕೊಟ್ಟರೆ ಅದು ಕಳ್ಳತನವೇ ಅಲ್ಲ ಎಂಬಂತೆ ಪ್ರದರ್ಶನ ಮಾಡಿದರು. ಈಗ ಕೋಲಾರ ಜಿಲ್ಲೆಯ ಗರುಡನಪಾಳ್ಯ ಗ್ರಾಮದಲ್ಲಿ ಸರ್ವೆ ನಂ.47ರಲ್ಲಿನ 1 ಎಕರೆ ಜಾಗ, ಗರುಡನಪಾಳ್ಯ, ನರಸಾಪುರ ಹೋಬಳಿಯ ಸರ್ವೆ 46ರಲ್ಲಿನ 20.16 ಎಕರೆ ಜಾಗ ಸೇರಿ ಒಟ್ಟು 21.16 ಎಕರೆಯ ಕೋಟ್ಯಂತರ ಮೌಲ್ಯದ ಸ್ಮಶಾನದ ಜಮೀನನ್ನು ಸಚಿವ ಕೃಷ್ಣ ಬೈರೇಗೌಡ ಕಬಳಿಸಿದ್ದಾರೆ. ಸ್ಮಶಾನವನ್ನು ಯಾರೂ ಕೂಡ ತಮ್ಮ ಹೆಸರಿಗೆ ಮಾಡಿಕೊಳ್ಳಲು ಆಗಲ್ಲ. ಆದರೆ ಅಕ್ರಮ ಎಸಗಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ದೂರಿದರು.

ದಾಖಲೆ ಪ್ರಕಾರ, ಇದು ಕೆರೆ ಜಮೀನು, ಅದನ್ನು ಸ್ಮಶಾನಕ್ಕೆ ಬಿಡಲಾಗಿದೆ. ಕೆರೆ ಜಾಗವನ್ನು ಕೃಷ್ಣ ಬೈರೇಗೌಡ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಮೂಲ ದಾಖಲೆಗಳ ಪ್ರಕಾರ, ಸರಕಾರಿ ಸ್ಮಶಾನ ಖರಾಬು ಅಂತ ಇದೆ. ಈ ಜಮೀನು ಕಂದಾಯ ಸಚಿವರ ಖಾತೆಗೆ ಹೇಗೆ ಬರುತ್ತದೆ? ಕೃಷ್ಣ ಬೈರೇಗೌಡ ಹೆಸರಿಗೆ ಸ್ಮಶಾನ ಖರಾಬು ಜಮೀನು ಯಾಕೆ ಬಂದಿದೆ? ಎಂದು ಪ್ರಶ್ನಿಸಿದರು.

ಎನ್.ರವಿಕುಮಾರ್ ಮಾತನಾಡಿ, 14 ಸೈಟು ವಾಪಸ್ ಕೊಟ್ಟರು, ಹ್ಯುಬ್ಲೊಟ್ ವಾಚ್ ವಾಪಸ್ ಕೊಟ್ಟರು. ಈಗ ಕೃಷ್ಣ ಬೈರೇಗೌಡ ಸರದಿ. ಕೆರೆಯ, ಸ್ಮಶಾನದ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಕೆರೆ ಹಾಗೂ ಸ್ಮಶಾನ ಜಾಗವನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ಮಾಡಿಕೊಳ್ಳಲು ಆಗುವುದಿಲ್ಲ. ಕೆರೆಗೆ ಮಾರ್ಕ್ ಮಾಡಿ ಖರಾಬು ಅಂತ ಹೇಗೆ ಮಾಡಿದರು? ಸಿಲ್ವರ್ ಟೀಕ್ ಬೆಳೆಯುತ್ತಾರಂತೆ ಅಲ್ಲಿ. ಇದನ್ನು ತನಿಖೆಗೆ ಒಳಪಡಿಸಬೇಕು, ಸಿಎಂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸ್ವತಂತ್ರ್ಯವಾಗಿ ತನಿಖೆ ಮಾಡಲಿ

ಈ ಬಗ್ಗೆ ಸ್ಪಷ್ಟನೆ ಮಾಡಿದ ಸಚಿವ ಕೃಷ್ಣ ಬೈರೇಗೌಡ, ಇಲ್ಲದೇ ಇರುವುದನ್ನು ಹುಡುಕಿ ಆರೋಪ ಮಾಡುವುದು ಅವರ ಸಂಸ್ಕೃತಿ. ನಮ್ಮ ತಾತನವರಿಂದ ನಮಗೆ ವಿಭಾಗದ ಮೂಲಕ ಬಂದಿರುವ ಆಸ್ತಿ. ಗ್ರ್ಯಾಂಟ್ ಮಾಡಿಸಿಕೊಂಡಿರುವುದು ಅಲ್ಲ. ಕ್ರಮದ ಮೂಲಕ ತೆಗೆದುಕೊಂಡು, ಕುಟುಂಬದಲ್ಲಿ ಭಾಗ ಆಗಿ ಬಂದಿದೆ. ಹಿಂದೆ ಏನಾಗಿದೆ ಅಂತಾ ಅವರು ಚೆಕ್ ಮಾಡಲಿ. ನಮ್ಮ ತಾತನವರು ಖರೀದಿ ಮಾಡಿ ಬಂದಿರುವುದು ಅಲ್ವಾ ಅಂತಾ ಚೆಕ್ ಮಾಡಲಿ. ಲೋಕಾಯುಕ್ತರಿಗೆ ಬೇಕಾದರೆ ದೂರು ಕೊಡಲಿ ಎಂದು ಹೇಳಿದರು. ಇಲ್ಲದೇ ಇದ್ದರೆ ಬೇರೆ ತನಿಖಾ ಸಂಸ್ಥೆಯಿಂದ ತನಿಖೆ ಮಾಡಿಸಲಿ. ತಪ್ಪಾಗಿದ್ದರೆ ದೂರು ಕೊಡಲಿ, ತನಿಖೆ ಮಾಡಿಸಲಿ. ಯಾವುದೋ ಪಿತ್ರಾರ್ಜಿತ ಆಸ್ತಿ ನಮಗೆ ಬಂದಿರುವುದು. ಕಾನೂನು ಪ್ರಕಾರ ನಾನು ನಡೆದುಕೊಳ್ಳಬೇಕು, ಅವರೂ ನಡೆದುಕೊಳ್ಳಬೇಕು. ಜಿಲ್ಲಾಧಿಕಾರಿಗಳಿಂದಲೂ ತನಿಖೆ ಮಾಡಿಸಲಿ ಎಂದು ಸ್ಪಷ್ಟನೆ ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಇಸ್ಲಾಮ್ ಮೂಲಭೂತವಾದ ನಿಲ್ಲಲಿ

ಈ ವರ್ಷ ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನಿ ಉಗ್ರರು ನಡೆಸಿದ ಭೀಕರ ದಾಳಿಯಲ್ಲಿ 26 ಮಂದಿ ಸಾವನ್ನಪ್ಪಿದ್ದರು. ನ.10ರಂದು ದೆಹಲಿಯಲ್ಲಿ ಕಾರು ಬಾಂಬ್ ಸ್ಫೋಟಗೊಂಡು 15 ಮಂದಿ ಮೃತಪಟ್ಟಿದ್ದಾರೆ. ಡಿ.14ರಂದು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಇಬ್ಬರು ಉಗ್ರರು ನಡೆಸಿದ ದಾಳಿಯಲ್ಲಿ 15 ಮಂದಿ ಸಾವನ್ನಪ್ಪಿದ್ದಾರೆ. ಇದಕ್ಕೂ ಮುನ್ನ ಭಾರತ, ಇಸ್ರೇಲ್, ಅಮೆರಿಕ, ಅಫ್ಘಾನಿಸ್ತಾನ, ಸಿರಿಯಾ, ಇರಾನ್, ನ್ಯೂಜಿಲೆಂಡ್, ಇಂಗ್ಲೆಂಡ್, ಫ್ರಾನ್ಸ್ ದೇಶಗಳಲ್ಲಿ ಇಸ್ಲಾಮ್ ಹೆಸರಿನಲ್ಲಿ ನಡೆದ ಹಿಂಸಾಚಾರಗಳು ಅಸಂಖ್ಯ. ಮಂಗಳವಾರ ಅಮೆರಿಕದ ವೈಟ್‌ಹೌಸ್‌ನಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯಹೂದಿಗಳ ಹನುಕ್ಕಾ ಸಂಭ್ರಮಾಚರಣೆಗೆ ಚಾಲನೆ ನೀಡಿ, ಜಗತ್ತಿನ ಎಲ್ಲ ದೇಶಗಳು ಒಗ್ಗೂಡಿ ಇಸ್ಲಾಮ್ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ನಿಲ್ಲಿಸಬೇಕು ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಟ್ರಂಪ್ ಮಾತಾಡುವುದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಮೊದಲನೇ ಬಾರಿ ಅವರ ಹೇಳಿಕೆಯನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಿದ್ದಾರೆ. ಇಸ್ಲಾಮ್ ಹೆಸರಿನಲ್ಲಿ ನಡೆಯುತ್ತಿರುವ ಉಗ್ರಕೃತ್ಯಗಳ ಬಗ್ಗೆ ಇಸ್ಲಾಮನ್ನು ಶುದ್ಧಭಾವದಿಂದ ನೋಡುವ ಮುಸ್ಲಿಮರೂ ಬೇಸತ್ತಿದ್ದಾರೆ. ಭಾರತಕ್ಕೆ ಉಗ್ರರನ್ನು ಕಳುಹಿಸಿಕೊಡುವ ಪಾಕಿಸ್ತಾನದಲ್ಲೂ ಉಗ್ರರ ಕಿರುಕುಳ ಕಡಿಮೆಯಿಲ್ಲ. ಸದಾ ಅಲ್ಲಿ ಬಾಂಬ್ ಸ್ಫೋಟಗೊಳ್ಳುತ್ತ ಆಗಾಗ ಜನ ಸಾಯುತ್ತಲೇ ಇರುತ್ತಾರೆ. ಆ ದೇಶದ ಅಭಿವೃದ್ಧಿಯೇ ಹಳ್ಳ ಹಿಡಿದಿದೆ. ಜಮ್ಮುಕಾಶ್ಮೀರ ರೋಗಗ್ರಸ್ತವಾಗುವುದಕ್ಕೆ ಭಯೋತ್ಪಾದನೆಯೇ ಕಾರಣ. ಅಫ್ಘಾನಿಸ್ತಾನ, ಸಿರಿಯಾದಂತಹ ಕೆಲವು ದೇಶಗಳು ಇಸ್ಲಾಮ್ ಹೆಸರಿನ ಭಯೋತ್ಪಾದನೆಯಿಂದ ಚೇತರಿಸಿಕೊಳ್ಳಲಾಗದ ಸ್ಥಿತಿಯಲ್ಲಿವೆ. ಇದರ ವಿರುದ್ಧ ಜಗತ್ತಿನ ಎಲ್ಲ ದೇಶಗಳು ಒಗ್ಗೂಡಬೇಕು. ಇಸ್ಲಾಮ್ ಹೆಸರಿನಲ್ಲಿ ನಡೆಯುವ ಉಗ್ರವಾದವನ್ನು ಮುಸ್ಲಿಮ್ ರಾಷ್ಟ್ರಗಳೂ ಮುಂಚೂಣಿಯಲ್ಲಿ ನಿಂತು ಖಂಡಿಸಬೇಕು. ಈ ವೈಜ್ಞಾನಿಕ ಯುಗದಲ್ಲೂ ಇಸ್ಲಾಮ್ ಉಗ್ರವಾದ ಈ ಮಟ್ಟಕ್ಕೆ ಬೆಳೆಯುತ್ತಲೇ ಹೋಗುತ್ತಿರುವುದು ಅಪಾಯಕಾರಿ.

ಸೊಂಪಾದಕೀಯ

ಅಮ್ಮಾ ನಾನ್ ಸೇಲಾದೆ!

ಐಪಿಎಲ್ ನ ಈ ವರ್ಷದ ಮಿನಿ ಹರಾಜು ಪ್ರಕ್ರಿಯೆ ಮುಗಿದಿದೆ. ಕ್ಯಾಮರೂನ್ ಗ್ರೀನ್ ಸೇರಿದಂತೆ ಹಲವು ಅನುಭವಿ ಆಟಗಾರರು ದೊಡ್ಡ ದೊಡ್ಡ ಮೊತ್ತಗಳಿಗೆ ಸೇಲಾಗಿದ್ದಾರೆ. ಆದರೆ, ಇಲ್ಲಿ ಗಮನಿಸಬೇಕಾದ ಅಂಶ ಅಂದ್ರೆ, ಈ ಬಾರಿಯ ಹರಾಜಿನಲ್ಲಿ ಹಿರಿಯ ಆಟಗಾರರಿಗಿಂತ ಹೆಚ್ಚು ಸಣ್ಣ ವಯಸ್ಸಿನ ಆಟಗಾರರೇ ಸದ್ದು ಮಾಡ್ತಾ ಇರೋದು. ಯಾವಾಗ ವೈಭವ ಸೂರ್ಯವಂಶಿ ಅನ್ನೋ 14 ವರ್ಷದ ಹುಡುಗ ಐಪಿಎಲ್‌ನಲ್ಲಿ ತನ್ನ ಪ್ರತಿಭೆ ತೋರಿಸಿದನೋ ಆಗಿನಿಂದ ಐಪಿಎಲ್ ತಂಡಗಳ ಮಾಲೀಕರ ಕಣ್ಣುಗಳು ಹೊಸ ಹುಡುಗರನ್ನೇ ಹುಡುಕಲು ಶುರು ಮಾಡಿವೆ. ಹಾಗಾಗಿ ವೈಭವ ಸೂರ್ಯವಂಶಿ ಹಾದಿಯಲ್ಲೇ ಇನ್ನೂ ಅನೇಕ ಎಳೆ ಹುಡುಗರ ಐಪಿಎಲ್ ವೈಭವ ಶುರು ಆಗಿದೆ. ಆದರೆ ಈ ಎಳೆ ವಯಸ್ಸಿನ ಆಟಗಾರರು ಕೇವಲ ಆಯ್ಕೆ ಆಗಿದ್ದಷ್ಟೇ ದೊಡ್ಡ ಸಾಧನೆ ಅಲ್ಲ, ಅವರು ಕನಸಿನಲ್ಲೂ ಊಹೆ ಮಾಡಲಾರದಂಥ ಮೊತ್ತಕ್ಕೆ ಅವರು ಸೇಲಾಗಿದ್ದಾರೆ. ಕೇವಲ 19 ವರ್ಷದ ಆಟಗಾರನೊಬ್ಬ 14 ಕೋಟಿಗೆ ಸೇಲಾಗಿದ್ದಾನೆ. ಹಾಗಾಗಿ ಮುಂದಿನ ವರ್ಷದ ಐಪಿಎಲ್ ಹೊತ್ತಿಗೆ ಆತ ತನ್ನ ವಯಸ್ಸಿಗಿಂತ ಹೆಚ್ಚಿನ ಕೋಟಿಗಳನ್ನು ತನ್ನ ಬ್ಯಾಂಕ್ ಅಕೌಂಟಿಗೆ ಹಾಕಿಕೊಳ್ಳಲಿದ್ದಾನೆ. ಹಾಗಾಗಿ ಇನ್ನೂ ಮೀಸೆ ಬರದ ಹುಡುಗರು, ಅಮ್ಮಾ ನಾನ್ ಸೇಲಾದೆ, ಆ ತಂಡದ ಪಾಲಾದೆ, ಈ ತಂಡದ ಪಾಲಾದೆ ಅಂತ ಮನೆಯಲ್ಲಿ ಸಂಭ್ರಮ ಆಚರಿಸುತ್ತಿದ್ದಾರೆ. ಒಟ್ಟಿನಲ್ಲಿ ಈ ಐಪಿಎಲ್‌ನಿಂದಾಗಿ ಕ್ರಿಕೆಟ್ ಆಡಬೇಕು, ಅದರಿಂದ ಫೇಮಸ್ ಆಗಬೇಕು, ದುಡ್ಡು ಮಾಡಬೇಕು ಅಂದ್ರೆ, ರಾಷ್ಟ್ರೀಯ ತಂಡಕ್ಕೇ ಆಯ್ಕೆ ಆಗಬೇಕು ಅನ್ನೋ ಸಂಪ್ರದಾಯ ಮುರಿದುಬಿದ್ದು ಎಳೆಯ ಹುಡುಗರು ಕೋಟ್ಯಧಿಪತಿಗಳಾಗುತ್ತಿದ್ದಾರೆ. ಹಾಗಾಗಿ ಇನ್ನು ಮುಂದೆ ಅಪ್ಪ ಅಮ್ಮಂದಿರು ಮನೆಯಲ್ಲಿ ಪುಸ್ತಕ ಹಿಡಿದು ಓದುವ ತಮ್ಮ ಮಕ್ಕಳನ್ನು ನೋಡಿ, ಓದಿ ಯಾರ್ ಉದ್ಧಾರ ಆಗಿದ್ದಾರೆ. ಪಕ್ಕದ ಮನೆ ಹುಡುಗನ್ನ ನೋಡು, ಕ್ರಿಕೆಟ್ ಆಡಿ ಎಷ್ಟು ದುಡ್ಡು ಮಾಡ್ತಾ ಇದ್ದಾನೆ. ನೀನೂ ಇದ್ದೀಯ ಅಂತ ಮೂದಲಿಸುವ ದಿನಗಳು ದೂರ ಇಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಆಕ್ಸಿಜನ್ ಮಾಸ್ಕ್ ಮತ್ತು ಮೈಕ್ರೊಫೋನ್

ತುರ್ತು ಪರಿಸ್ಥಿತಿಯಲ್ಲಿ ಕಾಕ್‌ಪಿಟ್‌ನಲ್ಲಿ ಏನಾಗುತ್ತದೆ ಎಂಬುದನ್ನು ಹಾಲಿವುಡ್ ಸಿನಿಮಾಗಳಲ್ಲಿ ತೋರಿಸಿದಾಗ, ಪೈಲಟ್‌ಗಳು ಆಕ್ಸಿಜನ್ ಮಾಸ್ಕ್ ಧರಿಸಿ ಮಾತನಾಡುವುದನ್ನು ನೀವು ನೋಡಿರಬಹುದು. ಆ ಸಮಯದಲ್ಲಿ ಅವರ ಧ್ವನಿ 'ಸ್ಟಾರ್ ವಾರ್ಸ್' ಸಿನಿಮಾದ 'ಡಾರ್ತ್ ವೇಡರ್'ನಂತೆ ಭಾರವಾಗಿ ಮತ್ತು ವಿಚಿತ್ರವಾಗಿ ಕೇಳಿಸುತ್ತದೆ. ಆದರೆ, ನಿಜವಾದ ವಿಮಾನಯಾನದಲ್ಲಿ, ಸ್ಪಷ್ಟವಾದ ಸಂವಹನ ಅತಿ ಮುಖ್ಯ. ವಿಮಾನಕ್ಕೆ ಅಪಾಯ ಎದುರಾದಾಗ, ಪೈಲಟ್ 'ಏರ್ ಟ್ರಾಫಿಕ್ ಕಂಟ್ರೋಲ್' (ಎಟಿಸಿ) ಜತೆ ಅಥವಾ ಸಹ-ಪೈಲಟ್ ಜತೆ ಮಾತನಾಡುವಾಗ ಒಂದು ಸಣ್ಣ ಶಬ್ದ ಅಸ್ಪಷ್ಟವಾದರೂ ಅದು ದೊಡ್ಡ ದುರಂತಕ್ಕೆ ಕಾರಣವಾಗಬಹುದು. ಹಾಗಾದರೆ, ಮುಖಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವ, ಗಾಳಿ ರಭಸವಾಗಿ ಬೀಸುವ ಮಾಸ್ಕ್‌ನ ಒಳಗಿದ್ದುಕೊಂಡು ಪೈಲಟ್‌ಗಳು ಹೇಗೆ ಸ್ಪಷ್ಟವಾಗಿ ಮಾತನಾಡುತ್ತಾರೆ? ಇದರ ಹಿಂದೆ ಆಸಕ್ತಿದಾಯಕವಾದ 'ಅಕೌಸ್ಟಿಕ್ ಇಂಜಿನಿಯರಿಂಗ್' ಇದೆ. ವಿಮಾನದ ಕ್ಯಾಬಿನ್‌ನಲ್ಲಿ ಒತ್ತಡ ಕಡಿಮೆಯಾದಾಗ ಅಥವಾ ಹೊಗೆ ಆವರಿಸಿದಾಗ, ಪೈಲಟ್‌ಗಳು ತಕ್ಷಣವೇ 'ಕ್ವಿಕ್ ಡಾನಿಂಗ್ ಮಾಸ್ಕ್' ಧರಿಸುತ್ತಾರೆ. ಇದನ್ನು ಧರಿಸಿದ ತಕ್ಷಣ, ಅವರು ಬಳಸುತ್ತಿದ್ದ ಸಾಮಾನ್ಯ ಹೆಡ್‌ಸೆಟ್ ಮೈಕ್ರೊಫೋನ್ ನಿಷ್ಕ್ರಿಯವಾಗುತ್ತದೆ ಮತ್ತು ಮಾಸ್ಕ್ ಒಳಗಿರುವ ವಿಶೇಷ ಮೈಕ್ರೊಫೋನ್ ಕೆಲಸ ಮಾಡಲು ಶುರು ಮಾಡುತ್ತದೆ. ಇಲ್ಲಿ ಮೂರು ಮುಖ್ಯ ತಾಂತ್ರಿಕ ಸವಾಲುಗಳನ್ನು ಇಂಜಿನಿಯರ್‌ಗಳು ಭೇದಿಸಿದ್ದಾರೆ. ಉಸಿರಾಟದ ಶಬ್ದ (Breathing Noise). ಆಕ್ಸಿಜನ್ ಸರಬರಾಜು ಮಾಡುವಾಗ ಬರುವ 'ಸ್ಶ್ಯ....' ಎಂಬ ಶಬ್ದವನ್ನು ತಡೆಯುವುದು. ಸಣ್ಣ ಕಪ್ (ಮಾಸ್ಕ್)ನೊಳಗೆ ಮಾತನಾಡುವಾಗ ಧ್ವನಿ ಪ್ರತಿಧ್ವನಿಸುವುದನ್ನು ತಡೆಯುವುದು. ಹೆಡ್‌ಸೆಟ್ ಮೈಕ್‌ನಿಂದ ಮಾಸ್ಕ್ ಮೈಕ್‌ಗೆ ಸಂಪರ್ಕ ಬದಲಾಯಿಸುವುದು. ಸಾಮಾನ್ಯವಾಗಿ ಪೈಲಟ್‌ಗಳು ಬಳಸುವ ಹೆಡ್‌ಸೆಟ್‌ನಲ್ಲಿ 'ಬೂಮ್ ಮೈಕ್' ಇರುತ್ತದೆ (ಬಾಯಿಯ ಹತ್ತಿರ ಬರುವ ಕಡ್ಡಿ). ಆದರೆ ಆಕ್ಸಿಜನ್ ಮಾಸ್ಕ್ ಧರಿಸಿದಾಗ, ಆ ಬೂಮ್ ಮೈಕ್ ಮಾಸ್ಕ್‌ನ ಹೊರಗೆ ಉಳಿಯುತ್ತದೆ. ಆದ್ದರಿಂದ, ಮಾಸ್ಕ್‌ನ ವಿನ್ಯಾಸದಲ್ಲೇ, ಮೂಗು ಮತ್ತು ಬಾಯಿಯನ್ನು ಮುಚ್ಚುವ ಕೋನ್ (Cone) ಆಕಾರದ ರಬ್ಬರ್ ಕಪ್‌ನ ಒಳಭಾಗದಲ್ಲಿ ಅತ್ಯಂತ ಸೂಕ್ಷ್ಮವಾದ ಮೈಕ್ರೊಫೋನ್ ಅನ್ನು ಅಳವಡಿಸಲಾಗಿರುತ್ತದೆ. ಇದು ಸಾಮಾನ್ಯ ಮೈಕ್ ಅಲ್ಲ. ಇದನ್ನು 'ಡೈನಾಮಿಕ್ ನಾಯ್ಸ್ ಕ್ಯಾನ್ಸಲಿಂಗ್ ಮೈಕ್ರೊಫೋನ್' ಎಂದು ಕರೆಯುತ್ತಾರೆ. ಇದು ಹೇಗೆ ಕೆಲಸ ಮಾಡುತ್ತದೆ? ಇದು ವಿಮಾನದ ಇಂಜಿನ್ ಶಬ್ದ, ಎಚ್ಚರಿಕೆಯ ಗಂಟೆಗಳು (Alarms) ಮತ್ತು ಆಕ್ಸಿಜನ್ ಹರಿವಿನ ಶಬ್ದವನ್ನು ಹೇಗೆ ನಿಭಾಯಿಸುತ್ತದೆ ಎಂಬುದು ಕುತೂಹಲಕಾರಿ. ಈ ಮೈಕ್ರೊಫೋನ್ ಧ್ವನಿಯನ್ನು ಎರಡೂ ಕಡೆಯಿಂದ (ಮುಂಭಾಗ ಮತ್ತು ಹಿಂಭಾಗ) ಸ್ವೀಕರಿಸುವಂತೆ ವಿನ್ಯಾಸಗೊಳಿಸಲಾಗಿರುತ್ತದೆ. ದೂರದಿಂದ ಬರುವ ಹಿನ್ನೆಲೆ ಶಬ್ದವು ಮೈಕ್‌ನ ಎರಡೂ ಬದಿಗಳಿಗೆ ಒಂದೇ ಸಮಯದಲ್ಲಿ ಅಪ್ಪಳಿಸುತ್ತದೆ. ಭೌತಶಾಸ್ತ್ರದ ನಿಯಮದಂತೆ, ಸಮಾನ ಒತ್ತಡವು ಎರಡೂ ಕಡೆಯಿಂದ ಬಿದ್ದರೆ ಅದು ರದ್ದುಗೊಳ್ಳುತ್ತದೆ. ಆದರೆ ಪೈಲಟ್ ಮಾತನಾಡುವಾಗ, ಅವರ ಬಾಯಿ ಮೈಕ್‌ನ ಒಂದು ಬದಿಗೆ ಹತ್ತಿರವಿರುತ್ತದೆ. ಹೀಗಾಗಿ ಧ್ವನಿಯ ಒತ್ತಡವು ಒಂದು ಬದಿಯಲ್ಲಿ ಹೆಚ್ಚಿರುತ್ತದೆ. ಈ ವ್ಯತ್ಯಾಸವನ್ನು ಮಾತ್ರ ಮೈಕ್ರೊಫೋನ್ ವಿದ್ಯುತ್ ಸಂಕೇತವನ್ನಾಗಿ ಪರಿವರ್ತಿಸುತ್ತದೆ. ಹೀಗಾಗಿಯೇ ಅಬ್ಬರದ ಸೈರನ್‌ಗಳ ನಡುವೆಯೂ ಪೈಲಟ್ ಧ್ವನಿ ಎಟಿಸಿಗೆ ಸ್ಪಷ್ಟವಾಗಿ ಕೇಳಿಸುತ್ತದೆ. ಮಾಸ್ಕ್ ಧರಿಸಿದಾಗ ಪೈಲಟ್ ಉಸಿರಾಡಿದರೆ, ಆಮ್ಲಜನಕವು ರಭಸವಾಗಿ ಒಳಗೆ ಬರುತ್ತದೆ. ಇದನ್ನು 'ಡಿಮ್ಯಾಂಡ್ ರೆಗ್ಯುಲೇಟರ್' ನಿಯಂತ್ರಿಸುತ್ತದೆ. ಪೈಲಟ್ ಉಸಿರು ಎಳೆದಾಗ ಮಾತ್ರ ಇದು ಆಕ್ಸಿಜನ್ ಬಿಡುತ್ತದೆ. ಇದು ದೊಡ್ಡ 'ಕ್ಲಿಕ್-ಹಿಸ್' ಶಬ್ದವನ್ನು ಉಂಟುಮಾಡುತ್ತದೆ. ನೀವು ಟಿವಿಯಲ್ಲಿ ನೋಡುವಂತೆ, ಪೈಲಟ್‌ನ ಪ್ರತಿ ಉಸಿರಾಟವೂ ರೇಡಿಯೋದಲ್ಲಿ ಕೇಳಿಸಿದರೆ, ಎಟಿಸಿಗೆ ಕಿರಿಕಿರಿಯಾಗುತ್ತದೆ ಮತ್ತು ಸಂದೇಶ ಅಸ್ಪಷ್ಟವಾಗುತ್ತದೆ. ಇದನ್ನು ತಡೆಯಲು 'ವಾಯ್ಸ್ ಆಕ್ಟಿವೇಟೆಡ್ ಸ್ವಿಚ್' ಅಥವಾ ಗೇಟಿಂಗ್ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಪೈಲಟ್ ಮಾತನಾಡುವಾಗ ಉಂಟಾಗುವ ಧ್ವನಿಯ ತೀವ್ರತೆ ನಿರ್ದಿಷ್ಟ ಮಟ್ಟವನ್ನು ಮೀರಿದಾಗ ಮಾತ್ರ ಮೈಕ್ ಆನ್ ಆಗುತ್ತದೆ. ಕೇವಲ ಉಸಿರಾಟದ ಶಬ್ದವಿದ್ದರೆ, ಮೈಕ್ ಆಫ್ ಆಗಿಯೇ ಇರುತ್ತದೆ ಅಥವಾ ಆ ಶಬ್ದವನ್ನು ಫಿಲ್ಟರ್ ಮಾಡಲಾಗುತ್ತದೆ. ಸ್ಮಾರ್ಟ್ ಸ್ವಿಚಿಂಗ್ ವಿಮಾನಕ್ಕೆ ಹೇಗೆ ತಿಳಿಯುತ್ತದೆ? ತುರ್ತು ಪರಿಸ್ಥಿತಿಯಲ್ಲಿ ಪೈಲಟ್‌ಗೆ' ನಾನು ಈಗ ಮಾಸ್ಕ್ ಹಾಕಿಕೊಂಡಿದ್ದೇನೆ, ಆಡಿಯೋ ಸೆಟ್ಟಿಂಗ್ ಬದಲಾಯಿಸು' ಎಂದು ಸ್ವಿಚ್ ಹುಡುಕುವ ಸಮಯವಿರುವುದಿಲ್ಲ. ಇದಕ್ಕಾಗಿ ವಿಮಾನದಲ್ಲಿ ಸ್ವಯಂಚಾಲಿತ ವ್ಯವಸ್ಥೆ ಇರುತ್ತದೆ.

ತನ್ನ ಕೃತಿಯನ್ನು ಟೀಕಿಸಿದ್ದಕ್ಕಾಗಿ ಆತ ವಿಮರ್ಶಕನ ಮುಖಕ್ಕೆ ಉಗಿದಿದ್ದ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಸಾಹಿತ್ಯ ಲೋಕದ ಜಗಳ, ಜಟಾಪತಿ ಒಂಥರಾ ಚೆಂದವೇ. ಈ ಜಗಳದಲ್ಲಿ ಒಡಮೂಡುವ ಟೀಕೆ-ಟಿಪ್ಪಣಿಗಳು, ಟೀಕೆ-ಪ್ರತಿ ಟೀಕೆಗಳು ಎರಡೂ ಕಡೆಯ ಅಭಿಮಾನಿಗಳಿಗೆ ರಸಗವಳವೇ. ಈ ಜಗಳ ಈ ನೆಲೆಯಲ್ಲಿ, ಚೌಕಟ್ಟಿನಲ್ಲಿದ್ದರೆ ಅದು ಆರೋಗ್ಯಪೂರ್ಣವೂ ಹೌದು. ಆದರೆ ಪರಸ್ಪರ ಹೊಡೆದಾಟದ ಹಂತಕ್ಕೆ ಹೋದರೆ ಅದರಂಥ ಅಸಹ್ಯ ಮತ್ತೊಂದಿಲ್ಲ. ಸಾಮಾನ್ಯವಾಗಿ ಸಾಹಿತಿ, ಬರಹಗಾರರು ಆ ಹಂತಕ್ಕೆ ಹೋಗುವುದಿಲ್ಲ. ಅದು ಪುಸ್ತಕ ಬಿಡುಗಡೆ ಸಮಾರಂಭಗಳು, ಬೌದ್ಧಿಕ ಚರ್ಚೆಗಳು, ಕಟು ವಿಮರ್ಶೆ, ಪರಸ್ಪರ ಕಾಲೆಳೆಯುವಿಕೆ ಮತ್ತು ಲೇಖನಿಗಳ ಮೂಲಕ ನಡೆಯುವ ಪ್ರಹಾರಗಳಿಗೆ ಸೀಮಿತವಾಗಿರುತ್ತವೆ. ಸಾಹಿತ್ಯವಲಯದಲ್ಲಿ ಸಾಮಾನ್ಯವಾಗಿ ವಿವಾದ ಕಿಡಿ ಹೊತ್ತಿಕೊಳ್ಳುವುದು ವಿಮರ್ಶಕರಿಂದ. ಯಾವ ಸಾಹಿತಿಯೂ ವಿಮರ್ಶಕರನ್ನು ಇಷ್ಟಪಡುವುದಿಲ್ಲ. ಅದರಲ್ಲೂ ತಮ್ಮನ್ನು ಟೀಕಿಸುವ ವಿಮರ್ಶಕರನ್ನಂತೂ ಇಷ್ಟಪಡುವ, ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ.

ಆದರೆ, 2002 ಮತ್ತು 2004ರ ಅವಧಿಯಲ್ಲಿ ಅಮೆರಿಕದ ಸಾಹಿತ್ಯ ವಲಯದಲ್ಲಿ ನಡೆದ ಒಂದು ಘಟನೆ ಇಡೀ ಜಗತ್ತನ್ನೇ ಹುಬ್ಬೇರಿಸುವಂತೆ ಮಾಡಿತ್ತು. ಅದು ಕೇವಲ ಪದಗಳ ಸಮರವಾಗಿರದೇ, ದೈಹಿಕ ನಿಂದನೆಯ ಮಟ್ಟಕ್ಕೆ ಇಳಿದಿತ್ತು. ಈ ಜಟಾಪತಿ ನಡೆದದ್ದು ಪ್ರಖ್ಯಾತ ಲೇಖಕ ರಿಚರ್ಡ್ ಫೋರ್ಡ್ ಮತ್ತು ಅಂದಿನ ಉದಯೋನ್ಮುಖ ಲೇಖಕ (ಎರಡು ಬಾರಿ ಪುಲಿಟ್ಜರ್ ಪುರಸ್ಕೃತ) ಕಲ್ಸನ್ ವೈಟ್ಹೆಡ್ ನಡುವೆ. ಈ ವಿವಾದದ ಕೇಂದ್ರ ಬಿಂದುವಾಗಿದ್ದು ಒಂದು 'ಪುಸ್ತಕ ವಿಮರ್ಶೆ' ಮತ್ತು ಅದರ ಅಂತ್ಯವಾಗಿದ್ದು ಮುಖಕ್ಕೆ 'ಉಗುಳುವ' ಮೂಲಕ!

ಈ ಕಥೆಯನ್ನು ಅರ್ಥಮಾಡಿಕೊಳ್ಳಲು ಮೊದಲು ನಾವು ಇಬ್ಬರು ವ್ಯಕ್ತಿಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕು. ರಿಚರ್ಡ್ ಫೋರ್ಡ್ ಆ ಸಮಯಕ್ಕಾಗಲೇ ಅಮೆರಿಕದ ಸಾಹಿತ್ಯದ ದಿಗ್ಗಜ ಎಂದು ಕರೆಸಿಕೊಂಡವರು. 1996ರಲ್ಲಿ ತಮ್ಮ 'ಇಂಡಿಪೆಂಡೆನ್ಸ್ ಡೇ' ಕಾದಂಬರಿಗಾಗಿ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಪಡೆದ ಹಿರಿಯ ಲೇಖಕ. ಅವರ ಬರವಣಿಗೆ ಗಂಭೀರವಾದದ್ದು ಮತ್ತು ಅವರು ತಮ್ಮ ಕೃತಿಗಳ ಬಗ್ಗೆ ಅತೀವ ಅಭಿಮಾನ ಹೊಂದಿದ್ದವರು. 2000ರ ದಶಕದ ಆರಂಭದಲ್ಲಿ ಕಲ್ಸನ್ ವೈಟ್ಹೆಡ್ ಒಬ್ಬ ಯುವ ಲೇಖಕ. ಅವರು ತಮ್ಮ 'ದಿ ಇಂಟ್ಯೂಷನಿಸ್ಟ್' ಮತ್ತು 'ಜಾನ್ ಹೆನ್ರಿ ಡೇಸ್' ಮೂಲಕ ಆಗಷ್ಟೇ ಸಾಹಿತ್ಯ ಲೋಕದಲ್ಲಿ ಹೆಸರು ಮಾಡುತ್ತಿದ್ದರು. ಅವರು ಹೊಸ ತಲೆಮಾರಿನ ಧ್ವನಿಯಾಗಿದ್ದರು.

ಈ ಜಟಾಪತಿಯ 2002ರಲ್ಲಿ ಪ್ರಾರಂಭವಾಯಿತು. ರಿಚರ್ಡ್ ಫೋರ್ಡ್ ಅವರು 'ಎ ಮಲ್ಟಿಟ್ಯೂಡ್ ಆಫ್ ಸಿನ್ಸ್' ಎಂಬ ಸಣ್ಣ ಕಥೆಗಳ ಸಂಕಲನವನ್ನು ಬಿಡುಗಡೆ ಮಾಡಿದ್ದರು. ಪ್ರತಿಷ್ಠಿತ ಪತ್ರಿಕೆ 'ದಿ ನ್ಯೂಯಾರ್ಕ್ ಟೈಮ್ಸ್' ಈ ಪುಸ್ತಕದ ವಿಮರ್ಶೆಯನ್ನು ಬರೆಯುವ ಜವಾಬ್ದಾರಿಯನ್ನು ಯುವ ಲೇಖಕ ಕಲ್ಸನ್ ವೈಟ್ಹೆಡ್ ಅವರಿಗೆ ನೀಡಿತು. ಸಾಮಾನ್ಯವಾಗಿ ಹಿರಿಯ ಲೇಖಕರ ಕೃತಿಗಳನ್ನು ಕಿರಿಯರು ವಿಮರ್ಶಿಸುವಾಗ ಎಚ್ಚರಿಕೆ ವಹಿಸುತ್ತಾರೆ ಅಥವಾ ಗೌರವ ಸೂಚಿಸುತ್ತಾರೆ. ಆದರೆ ವೈಟ್ಹೆಡ್ ತಮ್ಮ ವಿಮರ್ಶೆಯಲ್ಲಿ ಅತ್ಯಂತ ನಿಷ್ಠುರವಾಗಿದ್ದರು. ಅವರು ಫೋರ್ಡ್ ಅವರ ಪುಸ್ತಕವನ್ನು ಕಟುವಾಗಿ ಟೀಕಿಸಿದರು.

ವೈಟ್ಹೆಡ್ ಬರೆದ ವಿಮರ್ಶೆಯ ಮುಖ್ಯಾಂಶಗಳು ಹೀಗಿದ್ದವು - 'ಈ ಪುಸ್ತಕದ ಯಾವುದೇ ಪುಟವನ್ನು ತೆರೆದರೂ ನಿಮಗೆ ಅದೇ ನಿರಾಶಾದಾಯಕ ಪಾತ್ರಗಳು, ಅದೇ ಅಸಹಾಯಕತೆ ಕಾಣಸಿಗುತ್ತದೆ, ಕಥಾವಸ್ತುವಿನಲ್ಲಿ ಯಾವುದೇ ಪ್ರಗತಿಯಿಲ್ಲ. ಫೋರ್ಡ್ ಅವರ ಕಥೆಗಳು ಏಕತಾನತೆಯಿಂದ ಕೂಡಿವೆ. ಕಥೆಗಳಲ್ಲಿ ಬರುವ ಪಾತ್ರಗಳು ತಮ್ಮ ತಪ್ಪುಗಳಿಂದ ಪಾಠ ಕಲಿಯುವುದಿಲ್ಲ, ಬದಲಿಗೆ ಅದೇ ತಪ್ಪುಗಳನ್ನು ಮಾಡುತ್ತಾ ಗೊಣಗುತ್ತಿರುತ್ತಾರೆ. ಈ ಕಥೆಗಳನ್ನು ಫೋರ್ಡ್ ಪುಸ್ತಕವಾಗಿ ಪ್ರಕಟಿಸುವ ಬದಲು, ತಮ್ಮಷ್ಟಕ್ಕೆ ಓದಿಕೊಂಡಿದ್ದರೆ, ಅವರು ಓದುಗರಿಗೆ ಮಹದುಪಕಾರ ಮಾಡಿದಂತೆ ಆಗುತ್ತಿತ್ತು'. ನಂತರ ವಿಮರ್ಶೆಯ ಕೊನೆಯಲ್ಲಿ, 'ಫೋರ್ಡ್ ಅವರು ಇನ್ನು ಮುಂದೆ ಆದರೂ ತಮ್ಮ ಪಾತ್ರಗಳಿಗೆ ಬಲವಾದ ಪ್ಲಾಟ್ (ಕಥಾವಸ್ತು) ನೀಡಲಿ ಮತ್ತು ತಮ್ಮ ಕಸುಬಿನ ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳಲಿ' ಎಂದು ವ್ಯಂಗ್ಯವಾಗಿ ಸಲಹೆ ನೀಡಿದ್ದರು.

ಈ ವಿಮರ್ಶೆಯು ಸಾಹಿತ್ಯ ವಲಯದಲ್ಲಿ ದೊಡ್ಡ ಸಂಚಲನ ಮೂಡಿಸಿತು. ಒಬ್ಬ 'ದಿಗ್ಗಜ' ಲೇಖಕನ ಕೃತಿಯನ್ನು ಒಬ್ಬ 'ಹೊಸಬ' ಹೀಗೆ ಟೀಕಿಸಿದ್ದು ಫೋರ್ಡ್ ಅವರಿಗೆ ಸಹಿಸಲು ಸಾಧ್ಯವಾಗಲಿಲ್ಲ. ಫೋರ್ಡ್ ಅವರಿಗೆ ವಿಮರ್ಶಕರ ಬಗ್ಗೆ ಮೊದಲಿನಿಂದಲೂ ಅಸಹನೆ ಇತ್ತು. ವೈಟ್ಹೆಡ್ ಅವರಿಗಿಂತ ಮೊದಲು, ಆಲಿಸ್ ಹಾಫ್ಮನ್ ಎಂಬ ಲೇಖಕಿ, ಫೋರ್ಡ್ ಅವರ ಮತ್ತೊಂದು ಪುಸ್ತಕವನ್ನು ಟೀಕಿಸಿದ್ದರು.

ಆಗ ಫೋರ್ಡ್ ಮಾಡಿದ ಕೆಲಸವೇನು ಗೊತ್ತೇ? ಅವರು ಹಾಫ್ಮನ್ ಅವರ ಪುಸ್ತಕವೊಂದನ್ನು ತೆಗೆದುಕೊಂಡು, ಅದಕ್ಕೆ ಬಂದೂಕಿನಿಂದ ಗುಂಡು ಹೊಡೆದು, ಆ ತೂತಾದ ಪುಸ್ತಕವನ್ನು ಅಂಚೆಯ ಮೂಲಕ ಹಾಫ್ಮನ್ ಅವರಿಗೆ ಕಳುಹಿಸಿಕೊಟ್ಟಿದ್ದರು! ಇದನ್ನು ಖಂಡಿಸಿದ ಹಾಫ್ಮನ್ ಅವರ ಪತಿಗೆ ಕರೆ ಮಾಡಿದ ಫೋರ್ಡ್, 'ಈ ವಿಷಯದಲ್ಲಿ ನೀನು ಸುಮ್ಮನಿದ್ದರೆ ಒಳ್ಳೆಯದು. ಇಲ್ಲದಿದ್ದರೆ ಪುಸ್ತಕಕ್ಕೆ ಹಾರಿಸಿದ ಗುಂಡನ್ನು ನಿನ್ನ ಎದೆಗೆ ಹಾರಿಸಬೇಕಾಗುತ್ತದೆ, ಹುಷಾರ್' ಎಂದು ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಅಂದರೆ, ತಮ್ಮ ಕೃತಿಯನ್ನು ಯಾರಾದರೂ ಟೀಕಿಸಿದರೆ ಫೋರ್ಡ್ ಅವರು ಅದನ್ನು ವೈಯಕ್ತಿಕ ಅವಮಾನ ಎಂದು ಪರಿಗಣಿಸುತ್ತಿದ್ದರು. ಆದರೆ ವೈಟ್ಹೆಡ್ ವಿಷಯದಲ್ಲಿ ಅವರು ತಕ್ಷಣಕ್ಕೆ ಏನೂ ಮಾಡಲಿಲ್ಲ. ಅವರು ಸೇಡಿಗಾಗಿ ಕಾಯುತ್ತಿದ್ದರು.

ವಿಮರ್ಶೆ ಬಂದು ಬರೋಬ್ಬರಿ ಎರಡು ವರ್ಷಗಳು ಕಳೆದಿದ್ದವು. 2004ರಲ್ಲಿ ನ್ಯೂಯಾರ್ಕ್ ನಗರದಲ್ಲಿ 'ಪೋಯೆಟ್ಸ್ ಆ್ಯಂಡ್ ರೈಟರ್ಸ್' ಎಂಬ ಸಂಸ್ಥೆ ಅದ್ದೂರಿ ಔತಣಕೂಟ ಏರ್ಪಡಿಸಿತ್ತು. ಅಲ್ಲಿಗೆ ಸಾಹಿತ್ಯ ಲೋಕದ ಗಣ್ಯರೆಲ್ಲರೂ ಬಂದಿದ್ದರು. ಅಲ್ಲಿ ವೈಟ್ಹೆಡ್ ಕೂಡ ಇದ್ದರು. ಪಾರ್ಟಿ ನಡೆಯುತ್ತಿದ್ದಾಗ, ಫೋರ್ಡ್ ಅವರು ವೈಟ್ಹೆಡ್ ಅವರಿದ್ದಲ್ಲಿಗೆ ಬಂದರು. ವೈಟ್ಹೆಡ್ ಅವರನ್ನುದ್ದೇಶಿಸಿ ಫೋರ್ಡ್, 'ನನ್ನ ಪುಸ್ತಕದ ಬಗ್ಗೆ ಆ ಕೆಟ್ಟ ವಿಮರ್ಶೆ ಬರೆದಿದ್ದು ನೀನೇ ಅಲ್ವಾ?' ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ವೈಟ್ಹೆಡ್ ಅವರು 'ಹೌದು' ಎನ್ನುವಷ್ಟರಲ್ಲಿ, ಫೋರ್ಡ್ ಅವರು ವೈಟ್ಹೆಡ್ ಅವರ ಮುಖಕ್ಕೆ ಕ್ಯಾಕರಿಸಿ 'ಪ್ಚ್' ಎಂದು ನೇರವಾಗಿ ಉಗುಳಿದರು! ಅದು ಕೇವಲ ಮಾತಿನ ಚಕಮಕಿಯಾಗಿರಲಿಲ್ಲ, ಬದಲಿಗೆ ಅತ್ಯಂತ ಹೀನಾಯವಾದ ಕೃತ್ಯವಾಗಿತ್ತು. ಫೋರ್ಡ್ ಅಷ್ಟಕ್ಕೆ ನಿಲ್ಲದೇ, 'ನಾನು ಇದಕ್ಕಾಗಿಯೇ ಎರಡು ವರ್ಷಗಳಿಂದ ಕಾಯುತ್ತಿದ್ದೆ' ಎಂದು ಹೇಳಿ ಅಲ್ಲಿಂದ ಹೊರಟುಹೋದರು.

ಈ ಘಟನೆ ನಡೆದಾಗ ವೈಟ್ಹೆಡ್ ಅವರ ಪ್ರತಿಕ್ರಿಯೆ ಅತ್ಯಂತ ಆಶ್ಚರ್ಯಕರ ಮತ್ತು ಪ್ರಬುದ್ಧವಾಗಿತ್ತು. ಅವರು ಫೋರ್ಡ್ ಮೇಲೆ ತಿರುಗಿ ಬೀಳಲಿಲ್ಲ ಅಥವಾ ದೈಹಿಕವಾಗಿ ಹಲ್ಲೆ ನಡೆಸಲಿಲ್ಲ ಅಥವಾ ಜಗಳಕ್ಕೂ ಮುಂದಾಗಲಿಲ್ಲ. ಪ್ಯಾಂಟಿನಿಂದ ತಮ್ಮ ಕರವಸ್ತ್ರ ತೆಗೆದು, ಮುಖದ ಮೇಲಿನ ಎಂಜಲನ್ನು ಒರೆಸಿಕೊಂಡರು. ನಂತರ ಪತ್ರಕರ್ತರು ಈ ಬಗ್ಗೆ ಕೇಳಿದಾಗ ವೈಟ್ಹೆಡ್, 'ಅದೊಂದು ಅನಿರೀಕ್ಷಿತ ಘಟನೆ. ಆದರೆ ನಾನು ಒಬ್ಬ ವೃದ್ಧನ ಮೇಲೆ ಹಲ್ಲೆ ಮಾಡಲು ಹೋಗಲಿಲ್ಲ. ಅಲ್ಲದೇ, ಈ ರೀತಿ ಮುಖಕ್ಕೆ ಉಗುಳುವುದು ಒಂದು ರೀತಿಯ 'ಪರ್ಫಾರ್ಮೆನ್ಸ್ ಆರ್ಟ್'. ನೀವು ಒಮ್ಮೆ ಮಾಡಿದರೆ ಅದು ಕಲೆ, ಪದೇ ಪದೆ ಮಾಡಿದರೆ ಅದು ಅಸಹ್ಯ ಹುಟ್ಟಿಸುತ್ತದೆ' ಎಂದು ಪ್ರತಿಕ್ರಿಯಿಸಿದರು. ವೈಟ್ಹೆಡ್ ಅವರು ಅತ್ಯಂತ ಸಂಯಮದಿಂದ ವರ್ತಿಸುವ ಮೂಲಕ ನೈತಿಕವಾಗಿ ಗೆದ್ದರು.



ಫೋರ್ಡ್ ಅವರು ತಮ್ಮ ವರ್ತನೆಯಿಂದ ಸಾಹಿತ್ಯ ಲೋಕದಲ್ಲಿ ತೀವ್ರ ಮುಜುಗರಕ್ಕೀಡಾದರು.

ಆಶ್ಚರ್ಯವೆಂದರೆ, ಫೋರ್ಡ್ ಈ ಘಟನೆಯ ಬಗ್ಗೆ ಎಂದಿಗೂ ಕ್ಷಮೆ ಕೇಳಲಿಲ್ಲ. ಘಟನೆ ನಡೆದ ನಂತರ ಅವರು 'ದಿ ಗಾರ್ಡಿಯನ್' ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದು ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡರು. ಅವರ ವಾದ ಹೀಗಿತ್ತು - 'ನಾನು ಬರೆದ ಪುಸ್ತಕ ನನ್ನ ಜೀವನದ ಒಂದು ಭಾಗ. ನಾನು ಬೇರೆಯಲ್ಲ, ನನ್ನ ಕೃತಿಗಳು ಬೇರೆಯಲ್ಲ. ವಿಮರ್ಶಕರು ಅದನ್ನು ಟೀಕಿಸಿದಾಗ, ಅವರು ನನ್ನನ್ನೇ ಟೀಕಿಸಿದಂತೆ. ವಿಮರ್ಶಕರಿಗೆ ನನ್ನ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವೇ ಇಲ್ಲ. ಅದರಲ್ಲೂ ವೈಟ್ಹೆಡ್ ಒಬ್ಬ ಬಚ್ಚಾ. ಆತನಿಗೆ ನನ್ನ ಸಾಹಿತ್ಯವನ್ನು ವಿಮರ್ಶಿಸುವ ಯೋಗ್ಯತೆಯೇ ಇಲ್ಲ. ಯಾರಾದರೂ ನನ್ನ ಮಕ್ಕಳ ಬಗ್ಗೆ, ನನ್ನ ಹೆಂಡತಿಯ ಬಗ್ಗೆ ಅಥವಾ ನನ್ನ ಜೀವನದ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ನಾನು ಸುಮ್ಮನಿರಬೇಕೇ? ನನ್ನ ಪುಸ್ತಕವನ್ನು ಕೆಟ್ಟದಾಗಿ ಟೀಕಿಸಿದರೆ ಅದಕ್ಕೆ ಪ್ರತಿಕ್ರಿಯಿಸುವುದು ನನ್ನ ಹಕ್ಕು. ವಿಮರ್ಶಕರು ಸುರಕ್ಷಿತ ವಲಯದಲ್ಲಿ ಕುಳಿತು ಕಲ್ಲು ಎಸೆಯುತ್ತಾರೆ, ಆದರೆ ಲೇಖಕರು ಪೆಟ್ಟು ತಿನ್ನಬೇಕು ಎಂಬ ನಿಯಮವೇನಿಲ್ಲ. ವಿಮರ್ಶೆಗಳು ಕೇವಲ ಅಭಿಪ್ರಾಯಗಳಲ್ಲ, ಅವು ಲೇಖಕನ ಜೀವನದ ಮೇಲಾಗುವ ದಾಳಿಗಳು. ಅದಕ್ಕೆ ನಾನು ನನ್ನದೇ ರೀತಿಯಲ್ಲಿ ಉತ್ತರ ನೀಡಿದ್ದೇನೆ. ನನಗೆ ಆ ಬಗ್ಗೆ ಯಾವುದೇ ಪಶ್ಚಾತ್ತಾಪವಿಲ್ಲ. ಹಾಗೆ ನೋಡಿದರೆ, ನಾನು ಅವನನ್ನು ಹೊಡೆಯದೇ ಬಿಟ್ಟಿದ್ದು ಹೆಚ್ಚು.'

ಅಷ್ಟೇ ಅಲ್ಲ, ಫೋರ್ಡ್ ತಾವು ಮಾಡಿದ್ದನ್ನು 'ಗಂಡಸುತನ'ದ ಸಂಕೇತ ಎಂದೂ ಬಿಂಬಿಸಿಕೊಳ್ಳಲು ಪ್ರಯತ್ನಿಸಿದರು. ಅದಾದ ಬಳಿಕ ಕೆಲವು ಪತ್ರಿಕಾ ಸಂದರ್ಶನದಲ್ಲಿ ಫೋರ್ಡ್, 'ವೈಟ್ಹೆಡ್ ಮುಖಕ್ಕೆ ಉಗುಳಿದ ಘಟನೆ ಏನೇನೂ ಅಲ್ಲ, ನಾನು ಆತನಿಗೆ ಹೊಡೆಯದೇ ಬಿಟ್ಟಿದ್ದು ನನ್ನ ಕ್ಷಮಾ ಗುಣ. ಆದರೆ ನಾನು ಆತನ ಮುಖಕ್ಕೆ ನಾಲ್ಕು ಬಾರಿಸಬೇಕಿತ್ತು ಎಂದು ಈಗ ಅನಿಸುತ್ತಿದೆ' ಎಂದು ಹೇಳಿದ್ದರು.

ಈ ಘಟನೆಯು ಸಾಹಿತ್ಯದ ಇತಿಹಾಸದಲ್ಲಿ ಒಂದು ಕಪ್ಪು ಚುಕ್ಕೆಯಾಗಿ ಉಳಿದುಬಿಟ್ಟಿತು. ಇದು ಕೆಲವು ಮುಖ್ಯ ಪ್ರಶ್ನೆಗಳನ್ನು ಸಹ ಹುಟ್ಟುಹಾಕಿತು. ಲೇಖಕ ಎಷ್ಟೇ ದೊಡ್ಡವನಾಗಿರಲಿ, ಪ್ರಸಿದ್ಧನಾಗಿರಲಿ, ಅವನ ಕೃತಿ ಕಳಪೆಯಾಗಿದ್ದರೆ ಅದನ್ನು ಟೀಕಿಸುವ ಹಕ್ಕು ವಿಮರ್ಶಕನಿಗೆ ಇದೆಯೇ? ವಿಮರ್ಶಕನಾದವನು ಲೇಖಕನಿಗೆ ಹೆದರಿ, ಕೃತಿಯನ್ನು ಹೊಗಳುವುದು ವಿಮರ್ಶೆಯಾ? ಲೇಖಕರು ವಿಮರ್ಶಕರಿಗೆ ಹೊಡೆಯುವ ಮಟ್ಟಕ್ಕೆ ಹೋದರೆ ಅಂಥ ಲೇಖಕನಿಗೆ ಯಾವ ಶಿಕ್ಷೆ? ಪ್ರಸಿದ್ಧ ಸಾಹಿತಿಗಳು ಬರೆದಿದ್ದೆಲ್ಲ ಮಹಾನ್ ಕೃತಿಗಳಾ? ಸಾಹಿತ್ಯ ವಿಮರ್ಶೆ ಅಂದ್ರೆ ಟೀಕೆಗಳು ಇರಬೇಡವಾ?... ಮುಂತಾದ ಪ್ರಶ್ನೆಗಳ ಬಗ್ಗೆ ಬಿಸಿಬಿಸಿ ಚರ್ಚೆಗಳಾದವು. ಈ ವಿಷಯದಲ್ಲಿ ಸಾಹಿತಿಗಳಲ್ಲೇ ಎರಡು ಗುಂಪುಗಳಾದವು. ಅವರೂ ತಮ್ಮೊಳಗೇ ಪರಸ್ಪರ ಜಗಳಕ್ಕಿಳಿದರು. ಸುಮಾರು ಆರು ತಿಂಗಳುಗಳ ಕಾಲ ಈ ವಿಷಯ ಚರ್ಚೆಯಲ್ಲಿತ್ತು. ವೈಟ್ಹೆಡ್ ಮತ್ತು ಬಹುತೇಕ ಸಾಹಿತಿಗಳು, ಕೃತಿ ಕಳಪೆಯಾಗಿದ್ದರೆ ಅದನ್ನು ಟೀಕಿಸುವ ಹಕ್ಕು ವಿಮರ್ಶಕನಿಗೆ ಇದೆ ಎಂದು ಪ್ರತಿಪಾದಿಸಿದರು.

ಕೃತಿ ಒಮ್ಮೆ ಪ್ರಕಟವಾದರೆ ಅದು ಸಾರ್ವಜನಿಕ ಆಸ್ತಿ. ಕೃತಿಕಾರನಿಗಿಂತ ವಿಮರ್ಶಕರಿಗೆ ಕೃತಿ ಮುಖ್ಯವಾಗಬೇಕು. ಪ್ರಸಿದ್ಧ ಸಾಹಿತಿ ಬರೆಯುವುದೆಲ್ಲವೂ ಅದ್ಭುತವಾಗಿಯೇ ಇರಬೇಕೆಂದೇನೂ ಇಲ್ಲ. ಫೋರ್ಡ್ ಅವರ ವರ್ತನೆಯು ಹಳೆಯ ತಲೆಮಾರಿನ ಲೇಖಕರ ಅಹಂಕಾರವನ್ನು ತೋರಿಸಿದರೆ, ವೈಟ್ಹೆಡ್ ಅವರ ಮೌನವು ಹೊಸ ತಲೆಮಾರಿನ ವೃತ್ತಿಪರತೆಯನ್ನು ತೋರಿಸಿದೆ ಎಂದು ಇನ್ನು ಕೆಲವರು ಅಭಿಪ್ರಾಯಪಟ್ಟರು. ಇನ್ನು ಕೆಲವರು, ಸಾಹಿತಿಗಳಿಂದ ವಿಮರ್ಶಕರಿಗೆ (ಪೊಲೀಸ್) ರಕ್ಷಣೆ ನೀಡಬೇಕು ಎಂದು ಕಿಚಾಯಿಸಿದರು. ಕೆಲವು ವಿಮರ್ಶಕರು 'ಫೋರ್ಡ್ ಕೃತಿ ಅಫೋರ್ಡಬಲ್ ಅಲ್ಲ' ಎಂದು ಸಾಹಿತ್ಯ ಕಾರ್ಯಕ್ರಮಗಳಲ್ಲಿ ಫಲಕ ಹಿಡಿದು ಪ್ರತಿಭಟಿಸಿದರು. 'ಫೋರ್ಡ್ ಬರುತ್ತಿದ್ದಾನೆ, ದೂರವಿರಿ. ಆತನ ಎಂಜಲು ಸಿಡಿಯಬಹುದು (ಅಂದರೆ ಬೈಯಬಹುದು), ಇಲ್ಲವೇ ಕ್ಯಾಕರಿಸಿ ಉಗುಳಬಹುದು' ಎಂದು ಸಾಹಿತ್ಯಾಸಕ್ತರು ಲೇವಡಿ ಮಾಡುತ್ತಿದ್ದರು.

ಕುತೂಹಲಕಾರಿ ವಿಷಯವೆಂದರೆ, ಈ ಘಟನೆಯ ನಂತರ ಕಲ್ಸನ್ ವೈಟ್ಹೆಡ್ (ಈಗ ಅವರಿಗೆ ಐವತ್ತಾರು ವರ್ಷ) ಅವರ ಏಳಿಗೆಯನ್ನು ಯಾರೂ ತಡೆಯಲಾಗಲಿಲ್ಲ. ಅವರು ಮುಂದೆ 'ದಿ ಅಂಡರ್‌ಗ್ರೌಂಡ್ ರೈಲ್‌ರೋಡ್' ಮತ್ತು 'ದಿ ನಿಕಲ್ ಬಾಯ್ಸ್' ಎಂಬ ಅದ್ಭುತ ಕಾದಂಬರಿಗಳನ್ನು ಬರೆದು, ಎರಡು ಬಾರಿ ಪುಲಿಟ್ಜರ್ ಪ್ರಶಸ್ತಿಗೆ ಭಾಜನರಾದರು. ಇತಿಹಾಸದಲ್ಲಿ ಕೇವಲ ನಾಲ್ಕು ಜನರಿಗೆ ಮಾತ್ರ ಈ ಗೌರವ ಸಿಕ್ಕಿದೆ. ಫೋರ್ಡ್ ಇಂದಿಗೂ (81 ವರ್ಷ) ಗೌರವಾನ್ವಿತ ಲೇಖಕರೇ ಆಗಿದ್ದರೂ, ಆ 'ಉಗುಳಿದ ಘಟನೆ' ಅವರ ವ್ಯಕ್ತಿತ್ವದ ಮೇಲಿನ ಒಂದು ಅಳಿಸಲಾಗದ ಕಲೆಯಾಗಿ ಉಳಿದುಬಿಟ್ಟಿದೆ!

ಕನ್ನಡದಲ್ಲೂ ಸಾಹಿತಿ - ವಿಮರ್ಶಕರ ಜಟಾಪತಿ ಹೊಸತೇನಲ್ಲ. ಪರಸ್ಪರ ಬೈದಾಡಿಕೊಂಡಿರಬಹುದು, ಆದರೆ ಉಗುಳುವ ಮಟ್ಟಕ್ಕೆ ಹೋಗಿಲ್ಲ.

ಗಾಂಧೀಜಿಯ 3 ಮಂಗಗಳ ರೀತಿ ಗೋವಾದ ಆಡಳಿತ!

ಗೋವಾ ಎಂಬ ಅದ್ಭುತ ಪ್ರವಾಸಿ ತಾಣದಲ್ಲಿ ಭ್ರಷ್ಟಾಚಾರ, ದುರಾಚಾರ ಹಾಗೂ ಸಾವಿನ ವ್ಯಾಪಾರಿಗಳ ಆಟಾಟೋಪವೇ ಆಡಳಿತ ನಡೆಸುತ್ತಿದೆ. ಡ್ರಗ್ಸ್ ಮಾಫಿಯಾ ಗೋವಾದಲ್ಲಿ ಅನಿಯಂತ್ರಿತವಾಗಿ ಬೆಳೆದಿದೆ. ಅಲ್ಲಿನ ಮೋಜಿನ ಸುಂದರ ರಾತ್ರಿಗಳ ಹಿಂದಿನ ಕಟು ಸತ್ಯಗಳೇ ಬೇರೆ ಇವೆ. ಇದಕ್ಕೆ ಕಡಿವಾಣ ಹಾಕುವವರು ಯಾರು?

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಪ್ರವಾಸಿಗರ ಸ್ವರ್ಗ ಗೋವಾ. ಜಾಗತಿಕ ಪ್ರವಾಸೋದ್ಯಮದಲ್ಲಿ ಅದಕ್ಕೊಂದು ಅದ್ಭುತವಾದ ಸ್ಥಾನವಿದೆ. ಚಳಿಗಾಲದ ಬಿಸಿಲಿನಲ್ಲಿ ಪ್ರವಾಸಿಗರು ಗೋವಾದ ಬೀಚುಗಳಲ್ಲಿ ಮಲಗಿ ಹಿತವಾದ ಸುಖ ಅನುಭವಿಸುವುದು ಹಾಗೂ ಅಲ್ಲಿನ ಮೋಜಿನ ರಾತ್ರಿಗಳಲ್ಲಿ ಪಾರ್ಟಿ ಮಾಡಿ ಸಂತೋಷ ಅನುಭವಿಸುವುದು ನಮಗೆಲ್ಲರಿಗೂ ಗೊತ್ತು. ಆದರೆ ಆ ಸುಂದರ ಮುಖವಾಡದ ಹಿಂದೊಂದು ಸಮಸ್ಯೆಯೂ ಇದೆ. ಅದು ಬಹಳ ಜನರಿಗೆ ಗೊತ್ತಿಲ್ಲ. ಗೋವಾದ ಪ್ರಸಿದ್ಧ ನೈಟ್‌ಲೈಫ್‌ನ ಹಿಂದೆ ಕರಾಳ ದಂಧೆಗಳು ನಡೆಯುತ್ತವೆ. ಅಲ್ಲಿ ಭ್ರಷ್ಟಾಚಾರ, ಮಾದಕ ದ್ರವ್ಯಗಳ ವ್ಯಾಪಾರ, ದುರಾಚಾರ, ಮನುಷ್ಯನ ಜೀವಕ್ಕೆ ಬೆಲೆ ಕೊಡದ ಕಟುಕರ ದರ್ಬಾರೇ ಆಡಳಿತ ನಡೆಸುತ್ತದೆ.

ಅತ್ಯಂತ ಆಘಾತಕಾರಿ ಸಂಗತಿ ಏನೆಂದರೆ ಹೀಗೆ ದರ್ಬಾರು ನಡೆಸುವವರು ಸಾವಿನ ವ್ಯಾಪಾರಿಗಳಾಗಿದ್ದಾರೆ. ಅವರು ಜನರ ಜೀವದ ಸುರಕ್ಷತೆಗೆ ಯಾವ ಬೆಲೆಯನ್ನೂ ಕೊಡುವುದಿಲ್ಲ. ಅವರು ನೋಡುವುದು ಹಣದ ಮುಖವನ್ನು ಮಾತ್ರ. ಸರ್ಕಾರ ಅಥವಾ ಆಡಳಿತ ಯಂತ್ರದ ತೆಕ್ಕೆಗೂ ಇವರು ಸಿಗುವುದಿಲ್ಲ. ಇವರನ್ನು ನೋಡಿ ಸ್ಥಳೀಯ ಆಡಳಿತವು ಗಾಂಧೀಜಿಯ ಮೂರು ಮಂಗಗಳಂತೆ ಕುಳಿತಿರುತ್ತದೆ. ಆ ಮಂಗಗಳು ಸತ್ಯವನ್ನು ನೋಡುವುದಕ್ಕೆ ಇಷ್ಟಪಡುವುದಿಲ್ಲ, ಸತ್ಯವನ್ನು ಕೇಳುವುದಕ್ಕೆ ಬಯಸುವುದಿಲ್ಲ ಮತ್ತು ಸತ್ಯವನ್ನು ಮಾತನಾಡುವುದಕ್ಕಂತೂ ಬಿಲ್‌ಕುಲ್ ಸಿದ್ಧವಿಲ್ಲ. ಇತ್ತೀಚೆಗೆ ಗೋವಾದ ನೈಟ್‌ಕ್ಲಬ್‌ನಲ್ಲಿ ನಡೆದ ಅಗ್ನಿ ದುರಂತದಲ್ಲಿ ಇಪ್ಪತ್ತೈದು ಜನರು ಸಾವನ್ನಪ್ಪಿದ ಘೋರ ಘಟನೆಗೂ ಈ ಮಂಗಗಳೇ ಕಾರಣ!

ಅಗ್ನಿ ದುರಂತದ ಬಗ್ಗೆ ವಿವರವಾಗಿ ಚರ್ಚಿಸುವುದಕ್ಕೂ ಮೊದಲು ಇನ್ನೊಂದು ವಿಷಯವನ್ನು ಗಮನಿಸಬೇಕು. ನಮ್ಮ ದೇಶದಲ್ಲಿ ಹಸಿರು ನ್ಯಾಯಾಧಿಕರಣ ಎಂಬ ನ್ಯಾಯಾಂಗ ವ್ಯವಸ್ಥೆಯೊಂದಿದೆ. ಅದಕ್ಕೆ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಮುಖ್ಯಸ್ಥರಾಗಿರುತ್ತಾರೆ. ದೇಶದಲ್ಲಿ ಪರಿಸರಕ್ಕೆ ಆಗುತ್ತಿರುವ ಹಾನಿಯನ್ನು ನಿಯಂತ್ರಿಸುವುದು ಅದರ ಜವಾಬ್ದಾರಿ. ನಮಗೆ ಗೊತ್ತಿರುವಂತೆ ಭಾರತದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಸರಕಾರಗಳಿಗೆ ಕಿಂಚಿತ್ತೂ ಆಸಕ್ತಿಯಿಲ್ಲ. ಹೀಗಾಗಿ ಅಳಿದುಳಿದಿರುವ ಹಸಿರಿನ ರಕ್ಷಣೆಯ ಬಗ್ಗೆ ಅವು ತಲೆಕೆಡಿಸಿಕೊಳ್ಳುತ್ತಿಲ್ಲ. ಹಾಗಿರುವಾಗ ಗುಣಮಟ್ಟದ ಪ್ರವಾಸೋದ್ಯಮವನ್ನು ನಾವು ಹೇಗೆ ತಾನೇ ನಿರೀಕ್ಷಿಸಲು ಸಾಧ್ಯ? ಪ್ರವಾಸೋದ್ಯಮಕ್ಕೆ ಒಂದು ದೇಶದ ಹಣೆಬರಹವನ್ನೇ ರೂಪಾಂತರಗೊಳಿಸುವ ಶಕ್ತಿಯಿದೆ. ಒಳ್ಳೆಯ ಉದಾಹರಣೆಯೆಂದರೆ ಸ್ಪೇನ್. ಅದರ ಆರ್ಥಿಕತೆ ಒಂದು ಕಾಲದಲ್ಲಿ ಸಂಪೂರ್ಣ ಕುಸಿದುಹೋಗಿತ್ತು. ಆದರೆ ಆ ದೇಶದ ಸರ್ಕಾರ ಹಟಕ್ಕೆ ಬಿದ್ದು ಪ್ರವಾಸೋದ್ಯಮದ ಮೂಲಕ ದೇಶವನ್ನು ಮರುನಿರ್ಮಾಣ ಮಾಡುವ ಸಂಕಲ್ಪ ಮಾಡಿತು. ಅದರಂತೆ ಸ್ಪೇನ್ ಇಂದು ಪ್ರವಾಸೋದ್ಯಮದಿಂದಲೇ ತನ್ನ ಭವಿಷ್ಯವನ್ನು ಕಟ್ಟಿಕೊಂಡಿದೆ.

ಆದರೆ ನಮ್ಮ ದೇಶದಲ್ಲಿ ಪ್ರವಾಸೋದ್ಯಮದ ಸ್ಥಿತಿ ಹೇಗಿದೆ? ಈ ಹಿಂದೆಯೇ ನಾನು ಅಂಕಣಗಳಲ್ಲಿ ಬರೆದಿದ್ದೆ. ನಮ್ಮ ದೇಶದಲ್ಲಿ ಎರಡು ರೀತಿಯ ಪ್ರವಾಸೋದ್ಯಮವಿದೆ. ಒಂದು, ದೇಸಿ ಪ್ರವಾಸೋದ್ಯಮ, ಇನ್ನೊಂದು ಅಂತಾರಾಷ್ಟ್ರೀಯ ಪ್ರವಾಸೋದ್ಯಮ. ವಿದೇಶಗಳಿಂದ ಇಲ್ಲಿಗೆ ಬರುವವರಲ್ಲಿ ಒಂದಷ್ಟು ಜನರು ಶ್ರೀಮಂತರಾಗಿದ್ದರೆ, ಇನ್ನುಳಿದವರು ತಮ್ಮಲ್ಲಿರುವ ಉಳಿತಾಯದ ಹಣವನ್ನು ಅಳೆದು ತೂಗಿ ಖರ್ಚು ಮಾಡುವ ಮಧ್ಯಮ ವರ್ಗದ ಪ್ರವಾಸಿಗರು. ದುರದೃಷ್ಟವಶಾತ್ ಗೋವಾಕ್ಕೆ ಬರುವವರಲ್ಲಿ ಕಡಿಮೆ ಬಜೆಟ್‌ನ ಪ್ರವಾಸಿಗರೇ ಹೆಚ್ಚು. ಅವರಲ್ಲಿ ಅನೇಕರ ಕೈಯಲ್ಲಿ ವಾಪಸ್ ಹೋಗಲು ವಿಮಾನದ ಟಿಕೆಟ್‌ಗೂ ಹಣವಿರುವುದಿಲ್ಲ. ಅಂತಹವರು ಇಲ್ಲೇ ತಲೆಮರೆಸಿಕೊಂಡು, ಜೀವನೋಪಾಯಕ್ಕಾಗಿ ಎಲ್ಲಾ ರೀತಿಯ ಅನೈತಿಕ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಗೋವಾದಲ್ಲಿ ನಡೆಯುತ್ತಿರುವುದೇ ಇದು. ನಾನು ಈ ವಿಷಯವನ್ನು ಸಂಸತ್ತಿನಲ್ಲೂ ಪ್ರಸ್ತಾಪಿಸಿದ್ದೆ. ಆದರೆ ಗೋವಾದ ಭೂಗತ ಲೋಕದ ಸಂಪರ್ಕಗಳು ಎಷ್ಟು ಪ್ರಭಾವಶಾಲಿಯಾಗಿವೆ ಅಂದರೆ, ಯಾರು ಏನೇ ಹೇಳಿದರೂ ಅಲ್ಲಿನ ತಳಮಟ್ಟದ ಚಟುವಟಿಕೆಗಳಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

ಇನ್ನೊಂದು ಬಹಳ ಮುಖ್ಯವಾದ ವಿಷಯವಿದೆ. ವಿದೇಶಗಳಲ್ಲಿ ಬೀಚುಗಳ ಸಂರಕ್ಷಣೆಗೆ ತುಂಬಾ ಮಹತ್ವ ನೀಡುತ್ತಾರೆ. ಕರಾವಳಿಯ ಪರಿಸರವನ್ನು ಘಾಸಿಗೊಳಿಸಲು ಯಾರಿಗೂ ಅವಕಾಶ ನೀಡುವುದಿಲ್ಲ. ನಿಯಮಗಳು ಕಟ್ಟುನಿಟ್ಟಾಗಿರುತ್ತವೆ. ಶಿಕ್ಷೆಯೂ ಕಠಿಣವಾಗಿರುತ್ತದೆ. ಆದರೆ ನಮ್ಮ ದೇಶದಲ್ಲಿ ನಡೆಯುತ್ತಿರುವುದೇನು? ಸಮುದ್ರದ ದಂಡೆಯಿಂದ 500 ಮೀಟರ್ ದೂರದವರೆಗೆ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ ಎಂಬ ನಿಯಮ ನಮ್ಮಲ್ಲಿದೆ. ಆದರೆ ವಾಸ್ತವದಲ್ಲಿ ಆ 500 ಮೀಟರಿನ ಒಳಗೇ ಎಲ್ಲಾ ರೀತಿಯ ಚಟುವಟಿಕೆಗಳೂ ನಡೆಯುತ್ತಿವೆ. ನಮ್ಮಲ್ಲಿರುವ ಕ್ಯಾಸಿನೋಗಳು ಯಾವ ಪರಿಸರ ಸಂಬಂಧಿ ನಿಯಮಗಳನ್ನೂ ಪಾಲಿಸುವುದಿಲ್ಲ. ಅದರಿಂದ ಸಮುದ್ರದ ಪರಿಸರಕ್ಕೆ ಅಪಾರ ಹಾನಿಯಾಗುತ್ತಿದೆ. ಸಮುದ್ರದಲ್ಲಿ ವಾಸಿಸುವ ಜೀವಿಗಳು ಅಪಾಯಕ್ಕೆ ಸಿಲುಕುತ್ತಿವೆ. ನಮ್ಮ ಕಣ್ಣಿಗೆ ಕಾಣದಂತೆ ಸಮುದ್ರದೊಳಗೆ ರೋಗಗಳು ಹರಡುತ್ತಿವೆ. ಅಲ್ಲಿನ ವಿಶಿಷ್ಟ ಜೀವಜಂತುಗಳು ರೋಗಗಳಿಗೆ ತುತ್ತಾಗಿ ಸಾವನ್ನಪ್ಪುತ್ತಿವೆ. ಇದನ್ನೆಲ್ಲ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ವರದಿಗಳನ್ನು ಸಲ್ಲಿಸಲಾಗಿದೆ. ಆದರೆ ಗೋವಾದ ಸರಕಾರ ಕ್ಯಾರೇ ಅನ್ನುತ್ತಿಲ್ಲ.

ಅಗ್ನಿ ದುರಂತ ಸಂಭವಿಸಿದ ಗೋವಾದ ನೈಟ್ ಕ್ಲಬ್ ಪಣಜಿಯಿಂದ 25 ಕಿ.ಮೀ. ದೂರದಲ್ಲಿದೆ. ಅದು ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿ ಅಕ್ರಮವಾಗಿ ನಿರ್ಮಾಣವಾಗಿರುವ ನೈಟ್‌ಕ್ಲಬ್. ಜನವಸತಿಯಿಂದ ದೂರವಿರುವ, ಬೆಟ್ಟಗುಡ್ಡದ ರೀತಿಯ ಪರಿಸರದಲ್ಲಿ ಏಕಾಂಗಿಯಾಗಿ ಅದು ತಲೆಯೆತ್ತಿತ್ತು. ಅಲ್ಲಿಗೆ ಹೋಗಲು ಸರಿಯಾದ ರಸ್ತೆ ಕೂಡ ಇರಲಿಲ್ಲ. ಹೀಗಾಗಿ ಬೆಂಕಿ ಬಿದ್ದಾಗ ಅಗ್ನಿಶಾಮಕ ವಾಹನಗಳು ಕ್ಲಬ್‌ವರೆಗೆ ಹೋಗುವುದಕ್ಕೇ ಹರಸಾಹಸ ಮಾಡಬೇಕಾಯಿತು. ನೈಟ್‌ಕ್ಲಬ್‌ನಲ್ಲಿ ಪ್ರವಾಸಿಗರು ಕುಣಿಯುತ್ತಿದ್ದಾಗ ಏಕಾಏಕಿ ಬೆಂಕಿ ಕಾಣಿಸಿಕೊಂಡಿತಲ್ಲವೆ? ಆಗ ಅವರೆಲ್ಲರೂ ಜೀವ ಉಳಿಸಿಕೊಳ್ಳಲು ನೆಲಮಹಡಿಗೆ ಓಡಿದ್ದರು. ಆದರೆ ಅಲ್ಲಿ ವಾತಾಯನ ವ್ಯವಸ್ಥೆಯೇ ಇರಲಿಲ್ಲ. ಹೊರಗಿನ ಗಾಳಿ ಒಳಗೆ ಬರುತ್ತಿರಲಿಲ್ಲ, ಒಳಗಿನ ಗಾಳಿ ಹೊರಗೆ ಹೋಗುತ್ತಿರಲಿಲ್ಲ. ಬೆಂಕಿಯಿಂದ ರಕ್ಷಿಸಿಕೊಳ್ಳಲು ಅಲ್ಲಿಗೆ ಓಡಿದವರಿಗೆ ಹೊಗೆಯಿಂದ ಉಸಿರುಗಟ್ಟಿತ್ತು. ಆದರೆ ಅಲ್ಲಿಂದ ಹೊರಗೆ ಓಡಲು ಅವರಿಗೆ ದಾರಿ ಇರಲಿಲ್ಲ. ಎಲೆಕ್ಟ್ರಿಕ್ ಪಟಾಕಿಗಳ ಕಿಡಿಯಿಂದ ಮರದ ಛಾವಣಿಗೆ ಬೆಂಕಿ ಹೊತ್ತಿಕೊಂಡಿತ್ತು. ಹೀಗಾಗಿ ಬೆಂಕಿ ಶರವೇಗದಲ್ಲಿ ಎಲ್ಲೆಡೆ ವ್ಯಾಪಿಸಿತ್ತು. ಮರದ ಛಾವಣಿಯಿರುವ ಕ್ಲಬ್‌ನಲ್ಲಿ ಎಲೆಕ್ಟ್ರಿಕ್ ಪಟಾಕಿಗಳನ್ನು ಸಿಡಿಸುವ ದಡ್ಡತನದ ಕೆಲಸವನ್ನು ಯಾರಾದರೂ ಮಾಡುತ್ತಾರೆಯೇ? ಈ ಕ್ಲಬ್ ಅಕ್ರಮವಾಗಿ ನಿರ್ಮಾಣಗೊಂಡಿದೆ ಎಂದು 2023ರಲ್ಲೇ ಸರ್ಕಾರಕ್ಕೆ ದೂರು ಸಲ್ಲಿಕೆಯಾಗಿತ್ತು. ನಂತರ ಈ ಕ್ಲಬ್ ಅಕ್ರಮವಾಗಿ ತ್ಯಾಜ್ಯದ ನೀರನ್ನು ನದಿಗೆ ಹರಿಸುತ್ತಿದೆ ಎಂದು ಇನ್ನೊಂದು ದೂರು ಸಲ್ಲಿಕೆಯಾಗಿತ್ತು. 2024ರ ಜನವರಿಯಲ್ಲಿ ಅರ್ಪೋರಾ ಗ್ರಾಮ ಪಂಚಾಯತ್‌ನ ಅಧಿಕಾರಿಗಳು ಈ ಕ್ಲಬ್‌ನ ತಪಾಸಣೆ ನಡೆಸಿದ್ದರು. ನಂತರ ಮಾರ್ಚ್‌ನಲ್ಲಿ ನೋಟಿಸ್ ಜಾರಿಗೊಳಿಸಿದ್ದರು. ಆದರೆ ಕ್ಲಬ್‌ನ ಮಾಲೀಕರಾದ ಗೌರವ್ ಮತ್ತು ಸೌರಭ್ ಲೂಥ್ರಾ, ಆ ನೋಟಿಸ್‌ಗೆ ಉತ್ತರಿಸುವ ಗೋಜಿಗೂ ಹೋಗಿರಲಿಲ್ಲ. ನಿಮ್ಮ ಕ್ಲಬ್ ಕೃಷಿ ಭೂಮಿಯಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿದೆ ಎಂದು ಕಂದಾಯ ಅಧಿಕಾರಿಗಳೂ ನೋಟಿಸ್ ಜಾರಿಗೊಳಿಸಿದ್ದರು. ಗೋವಾ ಕರಾವಳಿ ನಿರ್ವಹಣೆ ಪ್ರಾಧಿಕಾರ ಕೂಡ ಇನ್ನೊಂದು ನೋಟಿಸ್ ನೀಡಿತ್ತು. ಆದರೆ ಲೂಥ್ರಾ ಸಹೋದರರು ಎಷ್ಟೊಂದು ಪ್ರಭಾವಿಗಳು ಅಂದರೆ, ಎಲ್ಲಾ ನೋಟಿಸುಗಳನ್ನೂ ಅವರು ಕಸದ ಬುಟ್ಟಿಗೆ ಎಸೆದಿದ್ದರು!

ವಾಸ್ತವ ಏನೆಂದರೆ, ರಾಜಕೀಯ ರಕ್ಷಣೆ ಹೊಂದಿರುವ ಪ್ರಭಾವಿಗಳಿಗೆ ಲೂಟಿ ಹೊಡೆಯಲು ಗೋವಾ ಪ್ರಶಸ್ತ ತಾಣವಾಗಿ ಬದಲಾಗಿದೆ. ದೇಶದ ಎಲ್ಲಾ ಕಡೆಯಿಂದ ಪ್ರಭಾವಿ ಲೂಟಿಕೋರರು ಗೋವಾಕ್ಕೆ ಹೋಗಿ ಬಿಸಿನೆಸ್ ಮಾಡುತ್ತಿದ್ದಾರೆ. ಲೂಥ್ರಾ ಸಹೋದರರು ದೆಹಲಿ ಮೂಲದವರು. ಅವರಿಗೆ ಗೋವಾದ ನೈಟ್‌ಕ್ಲಬ್ ಕೇವಲ ಹಣ ಮಾಡುವ ದಂಧೆಯಾಗಿತ್ತು. ಅಲ್ಲಿ ಜನರು ಬದುಕುತ್ತಾರೋ ಸಾಯುತ್ತಾರೋ ಎಂಬುದು ಅವರಿಗೆ ಬೇಕಿರಲಿಲ್ಲ. ತಮ್ಮದೇ ನೈಟ್‌ಕ್ಲಬ್‌ನಲ್ಲಿ ಇಪ್ಪತ್ತೈದು ಜನರು ಸತ್ತುಹೋದಾಗ ಅವರು ನಡೆದುಕೊಂಡ ರೀತಿಯೇ ಅದಕ್ಕೆ ಸಾಕ್ಷಿ. ಕ್ಲಬ್‌ಗೆ ಬೆಂಕಿ ಬಿದ್ದಿರುವ ಸುದ್ದಿ ಅವರಿಗೆ ತಡರಾತ್ರಿ 1.15ರ ಸುಮಾರಿಗೆ ತಲುಪಿತ್ತು. ಅವರಲ್ಲಿ ಕಿಂಚಿತ್ತಾದರೂ ಮಾನವೀಯತೆ ಇದ್ದಿದ್ದರೆ ತಕ್ಷಣ ಗೋವಾಕ್ಕೆ ಧಾವಿಸಿ ಸಾಂತ್ವನ ಹೇಳುತ್ತಿದ್ದರು. ಆದರೆ ಅವರು ಮಾಡಿದ್ದೇನು? ತಾಪ್ತೋಪ್ಡ್ ಟಿಕೆಟ್ ಬುಕ್ ಮಾಡಿಕೊಂಡು 5.30ರ ವಿಮಾನದಲ್ಲಿ ಥಾಯ್ಲೆಂಡ್‌ಗೆ ಹಾರಿಹೋದರು. ವಿದೇಶಕ್ಕೆ ಪಲಾಯನ ಮಾಡಿದರೂ ಈಗ ಅವರು ಅಲ್ಲಿನ ಪೊಲೀಸ್ ಕಸ್ಟಡಿಯಲ್ಲಿದ್ದಾರೆ ಮತ್ತು ಶೀಘ್ರದಲ್ಲೇ ಭಾರತಕ್ಕೆ ಅವರನ್ನು ಕರೆತಂದು ಇಲ್ಲಿನ ಕಾನೂನು ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ ಎಂಬುದು ಬೇರೆ ವಿಷಯ.

ಲೂಥ್ರಾ ಸಹೋದರರ ಕತೆ ಹಾಗಿರಲಿ. ಗೋವಾದಲ್ಲಿ ನಡೆಯುತ್ತಿರುವ ಅಕ್ರಮ ಕ್ಯಾಸಿನೋಗಳು ಮತ್ತು ನೈಟ್‌ಕ್ಲಬ್‌ಗಳಿಗೆ ಕಡಿವಾಣ ಹಾಕುವವರು ಯಾರು? ಪ್ರವಾಸಿಗರ ಜೀವದ ಜೊತೆ ಚೆಲ್ಲಾಟವಾಡುವ ಚಟುವಟಿಕೆಗಳನ್ನು ಯಾರು ನಿಯಂತ್ರಿಸುತ್ತಾರೆ? ಗೋವಾದಲ್ಲಿ ನಡೆಯುತ್ತಿರುವ ಸಾವಿರಾರು ಕೋಟಿ ರು.ಗಳ ಮಾದಕ ವಸ್ತುಗಳ ಮಾರಾಟ ಜಾಲವನ್ನು ಯಾರು ಮಟ್ಟಹಾಕುತ್ತಾರೆ? ಗೋವಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಯಾರು ಮರುಸ್ಥಾಪಿಸುತ್ತಾರೆ? 2013ರಲ್ಲಿ ಪ್ರಸಿದ್ಧ ಪತ್ರಕರ್ತ ತರುಣ್ ತೇಜಪಾಲ್ ಗೋವಾದಲ್ಲಿ ತನ್ನ ಸಹೋದ್ಯೋಗಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣ ದೊಡ್ಡ ಸುದ್ದಿಯಾಗಿತ್ತು. ಆದರೆ ಅಂತಹ ಅದೆಷ್ಟೋ ಪ್ರಕರಣಗಳು ಗೋವಾದ ಬೀಚುಗಳ ಮರಳಿನಲ್ಲಿ ಸಮಾಧಿಯಾಗಿವೆ. ಡ್ರಗ್ಸ್ ದಂಧೆ ಗೋವಾದ ಪರಿಸ್ಥಿತಿಯನ್ನು ಇನ್ನಷ್ಟು ಭಯಂಕರವಾಗಿಸಿದೆ. 2018ರಲ್ಲಿ ಅಂದಿನ ಮುಖ್ಯಮಂತ್ರಿ ಮನೋಹರ ಪರ್ರಿಕರ್ ಅವರು ಗೋವಾದಲ್ಲಿ ಡ್ರಗ್ಸ್ ಮಾಫಿಯಾ ಮಿತಿಮೀರಿ ಬೆಳೆದಿದೆ ಎಂಬುದನ್ನು ಒಪ್ಪಿಕೊಂಡಿದ್ದರು. ಈ ವರ್ಷದ ಏಪ್ರಿಲ್‌ನಲ್ಲೇ ಗೋವಾದಲ್ಲಿ 23 ಕೋಟಿ ರೂ.ಗಳ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ಅದಕ್ಕೂ ಮುನ್ನ ಫೆಬ್ರವರಿಯಲ್ಲಿ ಒಬ್ಬ ಜರ್ಮನ್ ಪ್ರಜೆಯನ್ನು ಬಂಧಿಸಲಾಗಿತ್ತು. ಮಾರ್ಚ್‌ನಲ್ಲಿ ಒಬ್ಬ ನೈಜೀರಿಯನ್ ಪ್ರಜೆಯನ್ನು ಬಂಧಿಸಲಾಗಿತ್ತು. ಇವರೆಲ್ಲ ಮಾದಕ ದ್ರವ್ಯಗಳ ದಂಧೆಕೋರರು. ಇವರ ಬಂಧನವು ಗೋವಾದ ಮಾದಕ ಮಾಫಿಯಾದಲ್ಲಿ ತೃಣಸಮಾನ ಘಟನೆ. ಎಲ್ಲಿ ಮಾದಕ ದ್ರವ್ಯಗಳ ಹಣ ಹರಿದಾಡುತ್ತದೆಯೋ ಅಲ್ಲಿ ಇನ್ನಿತರ ಸಮಾಜಬಾಹಿರ ಚಟುವಟಿಕೆಗಳು ಕೂಡ ಹೆಚ್ಚಾಗುತ್ತವೆ ಎಂಬುದನ್ನು ನೆನಪಿಡಬೇಕು. ಇಂದು ಗೋವಾದಲ್ಲಿ ಟ್ಯಾಕ್ಸಿ ಮಾಫಿಯಾ ಅಗಾಧವಾಗಿ ಬೆಳೆದಿದೆ. ದಕ್ಷಿಣ ಗೋವಾದಿಂದ ಮನೋಹರ ಪರ್ರಿಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಬೇಕು ಅಂದರೆ ಟ್ಯಾಕ್ಸಿ ಆಪರೇಟರ್‌ಗಳು 5000 ರು. ಕೇಳುತ್ತಾರೆ! ಸರ್ಕಾರಕ್ಕೆ ಇದರ ಬಗ್ಗೆಯೇನಾದರೂ ಮಾಹಿತಿ ಇದೆಯೇ?

ಮುಗಿಸುವ ಮುನ್ನ ಕೆಲ ಅಂಕಿಅಂಶಗಳನ್ನು ನಿಮ್ಮ ಮುಂದಿಡುತ್ತೇನೆ. ಕೋವಿಡ್‌ಗೂ ಮೊದಲು 2019ರಲ್ಲಿ ಗೋವಾಕ್ಕೆ 90 ಲಕ್ಷ ಅಂತಾರಾಷ್ಟ್ರೀಯ ಪ್ರವಾಸಿಗರು ಭೇಟಿ ನೀಡಿದ್ದರು. ಕಳೆದ ವರ್ಷ ಗೋವಾಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ ಕೇವಲ 15 ಲಕ್ಷ. ಏಕೆ? ನಾನೇನೂ ನೈಟ್ ಕ್ಲಬ್‌ಗಳ ವಿರೋಧಿಯಲ್ಲ. ಆದರೆ ನೈಟ್‌ಕ್ಲಬ್‌ಗಳು ಸುರಕ್ಷಿತವಾಗಿರಬೇಕು ಮತ್ತು ಅನೈತಿಕ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಕಳಕಳಿಯಿಂದ ಹೇಳುತ್ತೇನೆ. ಅವು ನಿಯಮಗಳನ್ನು ಪಾಲಿಸಿ, ಸಕ್ರಮವಾಗಿ ಕಾರ್ಯನಿರ್ವಹಿಸಬೇಕು. ಅಲ್ಲಿಗೆ ಮರ್ಯಾದಸ್ಥರೂ ಹೋಗಿ ಸಂತೋಷ ಪಡುವಂತಿರಬೇಕು. ಈಗಿನ ಪರಿಸ್ಥಿತಿ ಹಾಗಿದೆಯೇ? ಗೋವಾ ನಿಜಕ್ಕೂ ಸಂಕಷ್ಟದಲ್ಲಿದೆ.

ಭಟ್ಟರ್ ಸ್ಕಾಚ್

- **ಹೇಮಾ ವಿನಾಯಕ, ಬೆಂಗಳೂರು**
ಭಟ್ರೇ, 'ಜನಸೇವಕ' ಅನ್ನೋದರ ಲೇಟೆಸ್ಟ್ ಡೆಫಿನಿಷನ್ ಏನು?
– **ಜನರ ದುಡ್ಡಲ್ಲಿ, ಜನರಿಗೇ ಗೊತ್ತಾಗದ ಹಾಗೆ, ತನಗೇ ಸೇವೆ ಮಾಡಿಕೊಳ್ಳುವವನೇ ನಿಜವಾದ 'ಜನ-ಸೇವಕ'!**

- **ರಾಜೇಶ ಚಂದಾಪುರ, ಚಂದಾಪುರ**
ಭಟ್ರೇ, ರಸ್ತೆ ರಿಪೇರಿಗೂ ಮತ್ತು ಎಲೆಕ್ಷನ್‌ಗೂ ಏನು ಸಂಬಂಧ?
– **ನಾಲ್ಕು ವರ್ಷ ಕುಣಿದಾಡೋ ಗುಂಡಿಗಳು, ಎಲೆಕ್ಷನ್ ಹತ್ರ ಬರ್ತಿದ್ದಂಗೆ ಡಾಂಬರ್ ಹಾಕಿಸಿಕೊಂಡು ಮಲಗಿ ಬಿಡ್ತವೆ. ಎಲೆಕ್ಷನ್ ಮುಗಿದ್ಮೇಲೆ ಮತ್ತೆ ಎದ್ದು ಕುಣಿಯೋಕೆ ಶುರು ಮಾಡ್ತವೆ!**

- **ಬಿ.ಪಿ.ಷಡಕ್ಷರಿ, ನೆಲಮಂಗಲ**
ಭಟ್ರೇ, ರಾಹುಕಾಲ ಅಂದ್ರೆ ಏನು?
– **ಗಂಡನ ಜೇಬಿನಲ್ಲಿ ಹಣ ಇಲ್ಲದಾಗ, ಹೆಂಡತಿ ಶಾಪಿಂಗ್ ಕರ್ಕೊಂಡು ಹೋಗು ಅಂತ ಹಠ ಹಿಡಿಯುವ ಸಮಯವೇ 'ರಾಹುಕಾಲ'!**

- **ರೂಪಾ ಶ್ರೀಪಾದ, ಹುಬ್ಬಳ್ಳಿ**
ಭಟ್ರೇ, ಜ್ಯೋತಿಷಿಗಳು ಕಷ್ಟ ಬಂದಾಗಲೇ ಯಾಕೆ ಪರಿಹಾರ ಹೇಳ್ತಾರೆ?
– **ಸುಖ ಬಂದಾಗ ನೀವ್ಯಾರು ಅವರ ಕಡೆ ತಿರುಗಿ ಕೂಡ ನೋಡಲ್ಲ ಅಂತ ಅವರಿಗೆ ಚೆನ್ನಾಗಿ ಗೊತ್ತು!**

- **ನಾಗೇಂದ್ರ, (ಇಮೇಲ್ ಮೂಲಕ)**
ಭಟ್ರೇ, ಸಂಸಾರದಲ್ಲಿ 'ಮೌನ'ಕ್ಕೂ 'ಶಾಂತಿ'ಗೂ ಏನು ವ್ಯತ್ಯಾಸ?
– **ಗಂಡ ಸುಮ್ಮನಿದ್ದರೆ ಅದು 'ಶಾಂತಿ'. ಹೆಂಡತಿ ಸುಮ್ಮನಿದ್ದರೆ ಅದು ಚಂಡಮಾರುತ ಬರುವ ಮುಂಚಿನ 'ಮೌನ'!**

- **ರಮ್ಯಾ, (ಇಮೇಲ್ ಮೂಲಕ)**
ಭಟ್ರೇ, ನಮ್ಮ ದೇಶದ ಅಭಿವೃದ್ಧಿಗೂ ಮತ್ತು ರಾಜಕಾರಣಿಗಳ ಭರವಸೆಗೂ ಏನು ಸಾಮ್ಯತೆ?
– **ಎರಡೂ ಕಾಗದದ ಮೇಲೆ ಮಾತ್ರ ಅದ್ಭುತವಾಗಿ ಕಾಣುತ್ತವೆ!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ರಾಜಕಾರಣಿಗಳಿಗೆ ನಿದ್ದೆ ಕಡಿಮೆ ಅಂತೆ, ಹೌದಾ?
– **ಹೌದು, ಅದಕ್ಕೆ ಅಲ್ವಾ ಅವರೆಲ್ಲರೂ ವಿಧಾನಸೌಧದಲ್ಲೇ ನಿದ್ದೆ ಮಾಡೋದು!**

- **ಸಿದ್ದೇಶ, ಅರಸೀಕೆರೆ**
ಭಟ್ರೇ, 'ಹನಿಮೂನ್' ಅಂದ್ರೆ ಏನು?
– **ಮದುವೆಯ ನಂತರ ಗಂಡನಿಗೆ ಸಿಗುವ ಕೊನೆಯ 'ಸ್ವಾತಂತ್ರ್ಯ ದಿನಾಚರಣೆ' ಮತ್ತು 'ರಜೆ'. ಆಮೇಲೆ ಬರೀ ಓವರ್ ಟೈಮ್ ಡ್ಯೂಟಿಯೇ!**

ಚಿಂತನೆಯನ್ನು ಟ್ರಿಮ್ ಮಾಡುವ ರೇಜರ್‌ಗಳು



ಕಾಡುದಾರಿ

ಹರೀಶ್ ಕೇರ

vveditoped@gmail.com

ಮಾಗಿಯ ಹವೆಗೆ ಆಕಾಶ ಬಿಳುಚಿಕೊಂಡಿದೆ. ಗಿಡಮರಗಳಲ್ಲಿ ಹೇಮಂತಗಾನ. ಈ ವರ್ಷ ನಮ್ಮ ಹೊದಿಕೆಗಳನ್ನೆಲ್ಲ ಹೊರಗೆ ತರಿಸಿರುವ ಚಳಿಯ ಆವುಟ ನೋಡುತ್ತ ಎದುರು ಒಂದು ಹಬೆಯಾಡುವ ಕಾಫಿ ಕಪ್ ಇಟ್ಟುಕೊಂಡರೆ ಇನ್ನೇನೂ ಬೇಕಿಲ್ಲ ಅನ್ನಿಸುತ್ತದೆ. ಡಿಸೆಂಬರ್ ಮುಗಿಯುತ್ತ ಬರುತ್ತಿದೆ, ಇನ್ನೆರಡು ವಾರದಲ್ಲಿ ದಿನದರ್ಶಿಕೆಯ ಕೊನೆಯ ಎಲೆ ಕಳಚಿ ಬೀಳಲಿದೆ. ಗೋಡೆಗೆ ಹೊಸ ಕ್ಯಾಲೆಂಡರ್ ನೇತು ಬೀಳುವ ಹೊತ್ತಿಗೆ ಸಂದದ್ದೆಷ್ಟು ಬಂದದ್ದೆಷ್ಟು ಎಂದು ಲೆಕ್ಕ ಹಾಕುವ ಚಪಲ. ಹೊಸ ವರ್ಷದ ನಿರ್ಣಯಗಳ ಬಗ್ಗೆ ಸಿನಿಕತೆ ಬೇಕಿಲ್ಲ. ನಿರ್ಣಯಗಳಿಗಿಂತ ಅವುಗಳನ್ನು ಪಾಲಿಸುವ ಪಾಲಿಸಿ ಮುಖ್ಯ ಅಂತ ನಮಗೆ ಎಷ್ಟು ಜನ ವ್ಯಕ್ತಿತ್ವ ವಿಕಸನ ಭಾಷಣಕಾರರು ಹೇಳಿಲ್ಲ. ನಿರ್ಣಯಗಳು ಯಾಕೆ ಮುಖ್ಯ ಅಂತಲೂ, ಅವುಗಳನ್ನು ಉಳಿಸಿಕೊಳ್ಳೋದು ಹೇಗೆ ಅಂತಲೂ ಹೇಳಿಕೊಡೋ ಟ್ಯುಟೋರಿಯಲ್‌ಗಳು ನಿಮಗೆ ದಂಡಿಯಾಗಿ ಸಿಗಬಹುದು. ನಾನೀಗ ಹೇಳಹೊರಟದ್ದು ಅದಲ್ಲ.

ನಮ್ಮ ಬದುಕು ಸರಳವಾಗಿರುತ್ತದೆ. ಕೆಲವೊಮ್ಮೆ ನಾವೇ ಅದನ್ನು ಜಟಿಲ ಮಾಡಿಕೊಳ್ಳುತ್ತೇವೆ. ನಾವು ಸನ್ನಿವೇಶವನ್ನು ನೋಡುವ ಬಗೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿಕೊಂಡರೆ– ಬದುಕು ಹೆಚ್ಚು ಹಿತಕರ ಆಗಿರುತ್ತೆ ಅಂತ ಹಿಂದಿನ ಕೆಲವು ಫಿಲಾಸಫರ್‌ಗಳು ಹೇಳಿದ್ದಾರೆ. ಮುಖದಲ್ಲಿರುವ ಗಡ್ಡವನ್ನು ರೇಜರ್‌ನಿಂದ ಹೆರೆದು ತೆಗೆದರೆ ಮುಖ ಹೊಳೆಯುತ್ತದೆ. ಅನಗತ್ಯ ಗಡ್ಡ ಮೀಸೆಗಳನ್ನು ತೆಗೆದುಹಾಕುವುದೂ ಬದುಕಿನ ಅನಗತ್ಯ ಸಂಗತಿಗಳನ್ನು ಅಳಿಸಿಹಾಕುವುದೂ ಒಂದೇ ಎಂಬ ಫಿಲಾಸಫಿಯೊಂದಿಗೆ ಈ ಚಿಂತಕರು ನೀಡಿರುವ ಕೆಲವು ಸೂತ್ರಗಳನ್ನು 'ಫಿಲಾಸಫಿಕಲ್ ರೇಜರ್ಸ್' ಎಂದು ಕರೆದಿದ್ದಾರೆ. ಹೊಸ ವರ್ಷದ ಹೊಸ್ತಿಲಲ್ಲಿ, ನಮ್ಮ ಜೀವನ ಸುರಳೀತಗೊಳಿಸುವ ಅಂಥ ಕೆಲವು ರೇಜರ್‌ಗಳನ್ನು ಗಮನಿಸೋಣ.

1. ಒಕ್ಕಾಮ್‌ನ ರೇಜರ್ (Occam's Razor): ನಿಮ್ಮ ಕಚೇರಿಯಲ್ಲಿ ನೀವು ನೀಡಬೇಕಾಗಿರುವ ಪ್ರೆಸೆಂಟೇಶನ್‌ಗೆ ಕೊನೆಯ ಕ್ಷಣದಲ್ಲಿ ಯಾವುದೋ ಗ್ಲಿಚ್. ಆತಂಕ ಆವರಿಸುತ್ತದೆ. ನನ್ನನ್ನು ದ್ವೇಷಿಸುವ ಯಾರೋ ಈ ಕಚೇರಿಯಲ್ಲಿದ್ದಾರೆ. ನನ್ನ ಪ್ರೆಸೆಂಟೇಶನ್‌ಗೂ ಕೆಲಸಕ್ಕೂ ಬಡ್ತಿಗೂ ಸಂಚಕಾರ ತರಲು ಯತ್ನಿಸುತ್ತಿದ್ದಾರೆ ಎಂದೆಲ್ಲ ಅಂದುಕೊಳ್ಳುತ್ತೀರಿ. ಆದರೆ ಅದನ್ನು ಸಾಬೀತುಪಡಿಸುವ ಸಾಕ್ಷ್ಯಗಳು ಯಾವುದೂ ನಿಮ್ಮಲ್ಲಿ ಇಲ್ಲ. ಸರಳವಾದ ಸಾಧ್ಯತೆ ಏನು? ಬಹುಶಃ ನೀವೇ ಪಿಪಿಟಿ ತಯಾರಿಸಿ ಕೊನೆಯ ಕ್ಷಣದಲ್ಲಿ ಸೂಕ್ತ ಫಾರ್ಮ್ಯಾಟ್‌ಗೆ ಕೂರಿಸಲು ಮರೆತಿರಬಹುದು, ಬೇರೆ ಯಾವುದೋ ತಾಂತ್ರಿಕ ಸಮಸ್ಯೆ ಆಗಿರಬಹುದು. ಈ ರೇಜರ್ ಹೇಳುವುದು ಇಷ್ಟೇ– ಒಂದು ಘಟನೆಗೆ ಸರಳವಾದ ವಿವರಣೆಗಳು ಸರಿಯಾಗಿರುವ ಸಾಧ್ಯತೆ ಹೆಚ್ಚು. ಅನಗತ್ಯ ಅಥವಾ ಅಸಂಭವ ಊಹೆಗಳನ್ನು ತಪ್ಪಿಸಿ. ಆ ವಿವರಣೆಗೆ ಹೊಂದಿಕೊಳ್ಳಬಲ್ಲ ಸೂಕ್ತ ರುಜುವಾತು ಇದ್ದರೆ ಸಾಕು. ಪರಿಸ್ಥಿತಿಯನ್ನು ಸಂಕೀರ್ಣ ಮಾಡಿ ಇನ್ನಷ್ಟು ಸಮಸ್ಯೆ ಸೃಷ್ಟಿಸಿಕೊಳ್ಳುವ ನಮ್ಮ ಸ್ವಭಾವಕ್ಕೆ ತಡೆ ಹಾಕಲು ಈ ರೇಜರ್ ನೆರವಾಗುತ್ತದೆ. ವಿಲಿಯಂ ಒಕ್ಕಾಮ್ ಆಂಗ್ಲೋ– ಫ್ರೆಂಚ್ ಚಿಂತಕ.

2. ಹ್ಯಾನ್ಲಾನ್‌ನ ರೇಜರ್ (Hanlon's Razor): ರಸ್ತೆಯಲ್ಲಿ ಯಾರೋ ದಿಢೀರ್ ನಿಮ್ಮ ವಾಹನಕ್ಕೆ ಅಡ್ಡ ಬಂದಿದ್ದಾರೆ. ಸಣ್ಣದೊಂದು ಡಿಕ್ಕಿ ಆಗಿಹೋಗಿದೆ. ಅವನ್ಯಾರೋ ದುರುದ್ದೇಶದಿಂದಲೇ ನಿಮಗೆ ಬಂದು ಕುಟ್ಟಿದ್ದಾನೆ ಎಂದುಕೊಳ್ಳುತ್ತೀರಿ. ಹಾಗಲ್ಲ, ನಿಮ್ಮ ಲೇನ್‌ಗೆ ದಿಢೀರ್ ನುಗ್ಗಿದ್ದು ಅವನ ಮೂರ್ಖತನದಿಂದಷ್ಟೇ ಇರಬಹುದು. ಇಷ್ಟೇ ಸಿಂಪಲ್ ಅದು– 'ಮೂರ್ಖತನದಿಂದ ಅಥವಾ ಆಕಸ್ಮಿಕವಾಗಿ ಆದುದು ಎಂದು ವಿವರಿಸಬಹುದಾದುದಕ್ಕೆ, ದುರುದ್ದೇಶ ಕಾರಣವೆಂದು ಹೇಳಬೇಡಿ'. ಕಚೇರಿಯಲ್ಲಿ ನೀವು ನಡೆಸುವ ಮೀಟಿಂಗಿಗೆ ನಿಮ್ಮ ಸಹೋದ್ಯೋಗಿ ತಡವಾಗಿ ಬರುತ್ತಾರೆ. ದುರುದ್ದೇಶದಿಂದಲೇ ಹಾಗೆ ಮಾಡಿದ್ದಾರೆ ಅಂದುಕೊಳ್ಳುವುದು ತಪ್ಪು. ಅದು ನಿಜವಾಗಿಯೂ ಟ್ರಾಫಿಕ್ ಜಾಮ್‌ನಿಂದಲೇ ಆಗಿರಬಹುದು. ನಿಮ್ಮ ಬೇಸರದ ಎಫ್‌ಬಿ ಪೋಸ್ಟ್‌ಗೆ ಯಾರೋ ನಗುವ ಇಮೋಜಿ ಹಾಕಿದ್ದರೆ, ದುರುದ್ದೇಶದಿಂದಲ್ಲದೇ ಕೈತಪ್ಪಿ ಹಾಕಿರಬಹುದು. ಕಾನ್ಸ್ಪಿರಸಿ ಥಿಯರಿಗಳು ಹುಟ್ಟಿಕೊಳ್ಳುವುದು ಈ ನಿಯಮವನ್ನು ಮರೆತಾಗ.

3. ಸಗಾನ್‌ನ ರೇಜರ್ (Sagan's Razor) : 'ನನ್ನ ಗ್ಯಾರೇಜ್‌ನಲ್ಲಿ ಬೆಂಕಿಯನ್ನು ಉಗುಳುವ ಡ್ರ್ಯಾಗನ್ ಇದೆ. ನಾನು ಅದನ್ನು ನಿಮಗೆ ತೋರಿಸಬಲ್ಲೆ, ಆದರೆ ಅದು ಕಷ್ಟ. ಯಾಕೆಂದರೆ ಅದು ಅದೃಶ್ಯ ಡ್ರ್ಯಾಗನ್. ಅದು ಶಬ್ದ ಮಾಡುವುದಿಲ್ಲ, ಅದು ಶಾಖರಹಿತ, ಅದಕ್ಕೆ ಹೃದಯವೂ ಇಲ್ಲ. ಆದರೂ ನನ್ನ ಮಾತನ್ನು ನಂಬಿ' ಅಂತ ಯಾರಾದರೂ ಹೇಳಿದರೆ ಖಂಡಿತ ಅವರನ್ನು ನಂಬಬೇಡಿ. ಅಮೆರಿಕದ ಕಾಸ್ಮಾಲಜಿಸ್ಟ್ ಕಾರ್ಲ್ ಸಗಾನ್‌ನ ಥಿಯರಿ ಇದು. ಅವನಿಗಿಂತ ಮೊದಲು ಡೇವಿಡ್ ಹ್ಯೂಮ್ ಎಂಬ ತತ್ವಜ್ಞಾನಿ ಇದನ್ನೇ ಹೇಳಿದ್ದ. ಇದರರ್ಥ ಇಷ್ಟೇ– ಅಸಾಮಾನ್ಯವಾದ ಸಂಗತಿಗಳನ್ನು ಸಾಬೀತುಪಡಿಸಲು ಹೆಚ್ಚಿನ, ಅಸಾಮಾನ್ಯವಾದ ಪುರಾವೆಗಳೇ ಬೇಕು. ಮತ್ತು ನಾವು ಆ ಬಗ್ಗೆ ಹೆಚ್ಚು ಅನುಮಾನ ಹೊಂದಿರಬೇಕು. ಈ ರೇಜರ್ ಅನ್ವಯಿಸುವ ಮೂಲಕ ಎಷ್ಟೋ ಅರ್ಥಹೀನ ಚರ್ಚೆಗಳನ್ನು ಕಡಿಮೆ ಮಾಡಬಹುದು. ಶಾಖರಹಿತ ಬೆಂಕಿಯನ್ನು ಉಗುಳುವ ಅದೃಶ್ಯ, ನಿರಾಕಾರ, ತೇಲುವ ಡ್ರ್ಯಾಗನ್‌ಗೂ ಮತ್ತು ಯಾವುದೇ ಡ್ರ್ಯಾಗನ್ ಇಲ್ಲದಿರುವಿಕೆಗೂ ವ್ಯತ್ಯಾಸವೇ ಇಲ್ಲ. ಯಾರಾದರೂ ತಾನು ದೇವರನ್ನು, ದೆವ್ವಗಳನ್ನು ನೋಡಿದ್ದೇನೆ, ಪವಾಡ ಮಾಡುತ್ತೇನೆ ಎಂದೆಲ್ಲ ಕೊಚ್ಚಿಕೊಂಡರೆ ಈ ರೂಲ್ ಅನ್ನು ಅಂಥವರ ಮೇಲೆ ಪ್ರಯೋಗಿಸಿ ಅವರ ಪೊಳ್ಳುತನ ಎಷ್ಟು ಎಂದು ಕಂಡುಕೊಳ್ಳಬಹುದು. ಹೆಚ್ಚಿನ ದೇವಮಾನವರು, ಆಸ್ತಿಕರ ವಾದಗಳು ಈ ರೂಲ್‌ನ ಮುಂದೆ ಕೊಚ್ಚಿಹೋಗುತ್ತವೆ.

4. ಫೆಯ್ನ್‌ಮನ್‌ನ ರೇಜರ್ (Feynman's Razor): ನೀವು ಒಂದು ಸಂಗತಿಯನ್ನು ಸರಳವಾಗಿ ವಿವರಿಸಲು ಸಾಧ್ಯವಾಗದಿದ್ದರೆ, ಅದು ನಿಮಗೆ ಅರ್ಥವಾಗಿಲ್ಲ ಎಂದೇ ಅರ್ಥ. ಸರಳ ಪದಗಳಲ್ಲಿ, ಕಡಿಮೆ ಸಂಕೀರ್ಣತೆಯಿಂದ, ಪಾರಿಭಾಷಿಕ ಗೋಜಲು ಇಲ್ಲದೆ ಏನನ್ನಾದರೂ ವಿವರಿಸಲು ಸಾಧ್ಯವಾದರೆ ಅದು ನಿಮ್ಮಲ್ಲಿ ಅಂತರ್ಗತವಾಗಿದೆ ಎಂದುಕೊಳ್ಳಬಹುದು. ಇದು ನಮ್ಮ ಅಥವಾ ಇತರರ ಗ್ರಹಿಕೆಗೆ ಇರುವ ಲಿಟ್ಮಸ್ ಪರೀಕ್ಷೆ. ಭೌತಶಾಸ್ತ್ರಜ್ಞ ಮತ್ತು ನೊಬೆಲ್ ಪ್ರಶಸ್ತಿ ಗೆದ್ದ ರಿಚರ್ಡ್ ಫೆಯ್ನ್‌ಮನ್ ಅವರ ಹೆಸರು ಇದಕ್ಕಿದೆ. ಸಂಕೀರ್ಣವಾದ ವೈಜ್ಞಾನಿಕ ವಿಚಾರಗಳನ್ನು ಸ್ಪಷ್ಟವಾಗಿ ವಿವರಿಸುವ ಅಸಾಧಾರಣ ಸಾಮರ್ಥ್ಯ ಅವರದಾಗಿತ್ತು. ಇದನ್ನು ನಮ್ಮ ಕನ್ನಡದ ಹಲವು ಸಾಹಿತಿಗಳಿಗೆ, ವಿಮರ್ಶಕರಿಗೆ ಅನ್ವಯಿಸಿದರೆ ಅವರು ದಾರುಣವಾಗಿ ಸೋತುಹೋಗುತ್ತಾರೆ. ತಾವೇ ಅರ್ಥಮಾಡಿಕೊಳ್ಳದ ಥಿಯರಿಗಳನ್ನು ಓದುಗರಿಗೆ ಅರ್ಥವಾಗದ ಜಟಿಲ ಭಾಷೆಯಲ್ಲಿ ವಿವರಿಸುವುದಕ್ಕೆ ಈ ಅಕಾಡೆಮಿಶಿಯನ್‌ಗಳು ಸಿದ್ಧಹಸ್ತರು. ಅದು



ಅವರ ಖಾಲಿ ತಲೆಗೆ ಸಾಕ್ಷಿಯಲ್ಲದೆ ಇನ್ನೇನಲ್ಲ. ಪ್ರಪಂಚದ ಯಾವುದೇ ಜ್ಞಾನವಿರಲಿ, ಅದನ್ನು ನಾವು ಇನ್ನೊಬ್ಬರಿಗೆ ಸರಳವಾಗಿ ಸಂವಹನ ಮಾಡಲು ಸಾಧ್ಯವಾಗದಿದ್ದರೆ ಅದನ್ನು ಪಡೆದುಕೊಳ್ಳುವುದು ನಿಷ್ಪ್ರಯೋಜಕ. ಸ್ಪಷ್ಟ ಚಿಂತನೆಗೆ ಸ್ಪಷ್ಟ ಬರವಣಿಗೆಯೂ ಸಾಕ್ಷಿ. ಸರಳ ಬರಹದ ಪರವಾಗಿದ್ದ ಇನ್ನೊಬ್ಬ ಲೇಖಕ ಜಾರ್ಜ್ ಆರ್ವೆಲ್. ಆತ ಒಳ್ಳೆಯ ಬರವಣಿಗೆಯ ಆರು ನಿಯಮಗಳನ್ನು ತಿಳಿಸುತ್ತಾನೆ– ದೀರ್ಘ ವಾಕ್ಯಗಳ ಬದಲು ಸಣ್ಣ ಸರಳ ವಾಕ್ಯಗಳು, ಅಲಂಕಾರಗಳನ್ನು ಬಳಸದಿರುವುದು, ದೀರ್ಘ ಪದಗಳ ಬದಲು ಸಣ್ಣ ಪದಗಳು, ಅನಗತ್ಯ ಪದಗಳಿಗೆ ಗೇಟ್‌ಪಾಸ್, ಕರ್ಮಣಿ ಪ್ರಯೋಗಕ್ಕೆ ಕತ್ತರಿ, ಪಾರಿಭಾಷಿಕ ಪದಗಳಿಗೆ ನೋ ನೋ.

5. ಹಿಚೆನ್ಸ್ ರೇಜರ್ (Hitchen's Razor) : ಇದು ಸಗಾನ್‌ನ ರೇಜರ್‌ನ ಮುಂದುವರಿಕೆಯಂತೆ ಇದೆ. ಅಸಾಧಾರಣ ಸಂಗತಿಗಳಿಗೆ ಅಸಾಧಾರಣ ಸಾಕ್ಷ್ಯಗಳೇ ಬೇಕು ಎಂದು ಸಗಾನ್ ಹೇಳಿದರೆ, ರುಜುವಾತು ಇಲ್ಲದಿದ್ದರೆ ವಾದವೇ ಇರಕೂಡದು ಎಂದು ಕ್ರಿಸ್ಟೋಫರ್ ಹಿಚೆನ್ಸ್ ಹೇಳುತ್ತಾನೆ. ಇವನು ನಮ್ಮ ಕಾಲದ ಅಸಾಧಾರಣ ಚಿಂತಕ, ಬರಹಗಾರ, ನಾಸ್ತಿಕ. ವಿತಂಡವಾದಗಳಿಂದ ಕೆಲವರು ನಮ್ಮನ್ನು ಗೆಲ್ಲಲು ಯತ್ನಿಸುವುದನ್ನು ನೀವು ನೋಡಬಹುದು. ಅಂಥ ವಾದಗಳಿಗೆ ಮುಗುಳ್ನಗುವೇ ಉತ್ತರ ಅಷ್ಟೆ. ಹೇಳಿಕೆ ನೀಡುವವರಿಗೆ ತಮ್ಮ ಪರವಾಗಿ ರುಜುವಾತು ನೀಡಲು ಏನೂ ಇಲ್ಲದಿದ್ದರೆ, ಅಂಥ ಊಹಾಪೋಹ ನಿರಾಕರಿಸಲು ಶಕ್ತಿಯನ್ನು ಏಕೆ ವ್ಯರ್ಥ ಮಾಡುತ್ತೀರಿ? ನೀವು ಅದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. 'ಪುರಾವೆ ನೀಡುವ ಹೊಣೆಗಾರಿಕೆ, ಹೇಳಿಕೆ ಅಥವಾ ದೂರು ನೀಡುವವನದೇ' (The burden of proof lies with the person who makes a claim) ಎಂಬ ನ್ಯಾಯಶಾಸ್ತ್ರದ ಮಾತಿಗೂ ಇದನ್ನು ಜೋಡಿಸಬಹುದು. ಯಾರಾದರೂ ನಿಮ್ಮ ವಿರುದ್ಧ ಏನಾದರೂ ಆಪಾದನೆ ಮಾಡಿದರೆ, ಅದನ್ನು ಸಾಬೀತುಪಡಿಸುವ ರುಜುವಾತನ್ನು ಅವರೇ ತೋರಿಸಬೇಕು; ಹೊರತು ನಾನು ನಿರಪರಾಧಿ ಎಂದು ತೋರಿಸಲು ನೀವು ಹೆಣಗಾಡಬೇಕಿಲ್ಲ.

6. ಗ್ರೈಸ್‌ನ ರೇಜರ್ (Grice's Razor): 'ಮಗು ಮಲಗಿದೆ. ಬಾಗಿಲು ಧಡಾರಂತ ಹಾಕ್ಬೇಡ' ಎಂದು ಹೆಂಡತಿ ಗಂಡನಿಗೆ ಹೇಳುತ್ತಾಳೆ. 'ನೀನು ಹೇಳೋಕೆ ಹೊರಟಿರೋದೇನು, ನಾನೇ ಯಾವಾಗ್ಲೂ ಮಗುವನ್ನು ಏಳಿಸ್ತೀನಿ ಅಂತಾನ?' ಎಂದು ಗಂಡ ರೇಗುತ್ತಾನೆ. ಜಗಳ ಶುರುವಾಗುತ್ತದೆ. ಮಾತಿನ ತಪ್ಪು ಅರ್ಥ ಮಾಡಿಕೊಳ್ಳುವುದಕ್ಕೆ ಇದು ಪರ್ಫೆಕ್ಟ್ ಉದಾಹರಣೆ. 'ಮಗು ಮಲಗಿದೆ, ಶಬ್ದ ಮಾಡಬೇಡ' ಎಂದಷ್ಟೇ ಗಂಡ ಅರ್ಥ ಮಾಡಿಕೊಂಡರೆ ಸಾಕಿತ್ತು. ಬ್ರಿಟಿಷ್ ಫಿಲಾಸಫರ್ ಪೌಲ್ ಗ್ರೈಸ್ ಇದಕ್ಕೆ ನೀಡಿದ ವಿವರಣೆ ಕ್ಲಿಷ್ಟವಾಗಿದೆ. ಸರಳವಾಗಿ ಹೇಳಬಹುದಾದರೆ– ಸಂವಹನ ನಡೆಸುವಾಗ, ಮಾತನ್ನು ಸಂದರ್ಭಪೂರ್ವಕವಾಗಿ ಅರ್ಥ ಮಾಡಿಕೊಳ್ಳಬೇಕು. ಪದಗಳನ್ನು ಸಂದರ್ಭದಿಂದ ಹೊರಗಿಟ್ಟು ಅವುಗಳ ಅಕ್ಷರಶಃ ಅರ್ಥವನ್ನು ಎತ್ತಿಕೊಳ್ಳಬಾರದು. ಸಂವಹನದಲ್ಲಿ ಸಹಕಾರ ಮತ್ತು ಸಂದರ್ಭವೇ ಮುಖ್ಯ. ಈ ಸೂತ್ರ ನಮಗೆ ತುಂಬ ಸಹಾಯಕ ಆಗಬಹುದಾದದ್ದು ಸಾಮಾಜಿಕ ಜಾಲತಾಣಗಳಲ್ಲಿ ನಾವು ನಡೆಸುವ ಚರ್ಚೆಗಳಲ್ಲಿ. ಎಷ್ಟು ಬೇಗ ನಮ್ಮ ಚರ್ಚೆಗಳು ಸಣ್ಣ ವಿಚಾರಗಳಿಂದ ಹೊರಟು ಜಗಳಗಳ ಕಡೆಗೆ ತಿರುಗುತ್ತವಲ್ಲ! ಅಂಥದನ್ನು ಅವಾಯ್ಡ್ ಮಾಡಲು ಈ ಸೂತ್ರ ಪಾಲಿಸಿ. ಹಾಗೇ ನಾವು ಆಡುವ ಮಾತುಗಳನ್ನು ರೂಪಿಸಿಕೊಳ್ಳಲೂ ಈ ನಿಯಮ ಸಹಕಾರಿ.

7. ಆಲ್ಡರ್‌ನ ರೇಜರ್ (Alder's Razor) : ಆಸ್ಟ್ರೇಲಿಯದ ಗಣಿತಜ್ಞ ಮೈಕ್ ಆಲ್ಡರ್‌ನ ಈ ಸೂತ್ರ ಸ್ವಲ್ಪ ಕಠಿಣವಾದದ್ದೇ. ಸಗಾನ್, ಒಕ್ಕಾಮ್ ರೇಜರ್‌ಗಳ ಇನ್ನೊಂದು ರೂಪವಾಗಿಯೂ ಇದನ್ನು ನೋಡಬಹುದು. 'ಪ್ರಯೋಗದಿಂದ ರುಜುವಾತುಪಡಿಸಲಾಗದಿದ್ದರೆ ಅಂಥ ಸಂಗತಿಗಳೇ ಸುಳ್ಳು' ಎಂಬುದೇ ಇವನ ನಿರ್ಣಯ. ವಿಜ್ಞಾನ– ಗಣಿತ ಮುಂದುವರಿಯುವುದೇ ಈ ನಿಯಮದಿಂದ. ಆದರೆ ರಾಜಕೀಯ, ಧರ್ಮದಂಥ ಕ್ಷೇತ್ರಗಳಲ್ಲಿ ಈ ರೇಜರ್ ಅನ್ನು ಯಥಾವತ್ತು ಅನುಸರಿಸುವುದು ಕಷ್ಟವೇ.

ಚುನಾವಣೆ: ಮತಗಟ್ಟೆ ವಶದಿಂದ ಎಸ್‌ಐಆರ್‌ವರೆಗೆ!

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂದು ಹೆಮ್ಮೆಪಡುತ್ತದೆ. ನಿಜವಾದ ಪ್ರಜಾಪ್ರಭುತ್ವವು ರಾಜಕೀಯ ಪಕ್ಷಗಳು, ನಾಯಕರು ಅಥವಾ ಸರ್ಕಾರಗಳ ಬಲದಿಂದಲ್ಲ; ಬದಲಾಗಿ ಚುನಾವಣಾ ಪ್ರಕ್ರಿಯೆ ಸ್ವತಂತ್ರ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ನಡೆಯುವುದರಿಂದ ಮಾತ್ರ ಸಾಧ್ಯ. ಈ ಜವಾಬ್ದಾರಿಯನ್ನು ಶಿರಸ್ತೆ ಹಾಕಿಕೊಂಡಿರುವ ಸಂಸ್ಥೆಯೆಂದರೆ ಭಾರತೀಯ ಚುನಾವಣಾ ಆಯೋಗ. ಇದು ಯಾವುದೋ ಸರ್ಕಾರದ ಅಡಿಪಾಯದಲ್ಲಿರುವ ಅಂಗವಲ್ಲ; ಬದಲಾಗಿ ಸಂವಿಧಾನಲ್ಲೇ ಸ್ಥಾಪಿಸಿದ ಸಂವಿಧಾನಿಕ ಪ್ರಾಧಿಕಾರ.

ಈ ತಾತ್ವಿಕ ಸ್ವಾಯತ್ತತೆಯನ್ನು ಅತ್ಯಂತ ಬಿಗಿಯಾಗಿ ಪಾಲಿಸಿದವರಲ್ಲಿ ಟಿ.ಎನ್.ಶೇಷನ್ ಪ್ರಮುಖರು. ಪ್ರಜಾಪ್ರಭುತ್ವದ ನೈತಿಕ ಮೌಲ್ಯಗಳನ್ನು ರಕ್ಷಿಸುವ ಹಾದಿಯಲ್ಲಿ I'm not part of a government system; I'm a part of the Indian Constitution ಎಂದು ಘೋಷಿಸಿದ ಅವರ ನಿಲುವು, ಚುನಾವಣಾ ವ್ಯವಸ್ಥೆಗೆ ಹೊಸ ಶಕ್ತಿ ನೀಡಿತು. 1990ರಲ್ಲಿ 10ನೇ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಶೇಷನ್, ಭಾರತದ ಚುನಾವಣಾ ವ್ಯವಸ್ಥೆಯ ಇತಿಹಾಸವನ್ನು ಎರಡು ಯುಗಗಳಿಗೆ ವಿಭಜಿಸಿದಂತೆಯೇ ಸುಧಾರಣೆಗಳನ್ನು ಜಾರಿಗೊಳಿಸಿದರು. ನಕಲಿ ಮತದಾನ, ಹಣ–ಮದ್ಯದ ಪ್ರಭಾವ, ಜಾತಿ–ಮತ ಪ್ರಚೋದನೆ, ಅಶಿಸ್ತಿನ ರ‍್ಯಾಲಿಗಳು, ಅನಿಯಂತ್ರಿತ ಖರ್ಚುಗಳನ್ನು ಶೇಷನ್ ಅವರು ಪ್ರಶ್ನಿಸದೇ ಬಿಡುತ್ತಿರಲಿಲ್ಲ, ಲೆಕ್ಕ ಕೇಳಲಾಗುತ್ತಿತ್ತು, ಕಠಿಣಕ್ರಮಕ್ಕೆ ಶಿಫಾರಸು ಮಾಡಲಾಗುತ್ತಿತ್ತು.

ಮಾದರಿ ನೀತಿಸಂಹಿತೆಯ ಕಟ್ಟುನಿಟ್ಟಿನ ಜಾರಿ, ಮತದಾರರ EPIC ಗುರುತಿನ ಚೀಟಿ, ಬೂತ್‌ಗಳ ಪುನರ್ ನಿರ್ದಿಷ್ಟೀಕರಣ, ಪ್ರಚಾರ ಖರ್ಚಿನ ಮೇಲಿನ ಕಟ್ಟುನಿಟ್ಟಿನ ನಿಗಾವಹಿಕೆ ಇತ್ಯಾದಿ ಕ್ರಮಗಳಿಂದ ಅವರು ರಾಷ್ಟ್ರದೆಲ್ಲೆಡೆ ಜನಪ್ರಿಯರಾದರು. ರಾಜಕಾರಣಿಗಳು ಅವರನ್ನು ಅಲ್–ಶೇಷನ್ ಎಂದು ಟೀಕಿಸಿದರೆ, ನಾಗರಿಕ ಸಮಾಜ ಮತ್ತು ಮಧ್ಯಮ ವರ್ಗ ಅವರನ್ನು ಸೇನ್–ಶೇಷನ್ ಎಂದು ಕೊಂಡಾಡಿತು.

ಸಂವಿಧಾನದ Article 324ರ ಅಡಿಯಲ್ಲಿ ಸ್ಥಾಪಿತವಾದ ಭಾರತೀಯ ಚುನಾವಣಾ ಆಯೋಗವು ಲೋಕಸಭೆ, ರಾಜ್ಯ ವಿಧಾನಸಭೆಗಳು, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಗಳ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ. ಪಕ್ಷಗಳ ನೋಂದಣಿ, ಚುನಾವಣಾ ಚಿಹ್ನೆ ವಿತರಣೆ, ಮತದಾರರ ಪಟ್ಟಿಗಳ ಸಿದ್ಧತೆ, ಮತಗಟ್ಟೆಗಳ ವ್ಯವಸ್ಥೆ, ಮತದಾರರ ಫೋಟೋ ಗುರುತಿನ ಚೀಟಿ ಸೇರಿದಂತೆ ಇವೆಲ್ಲವನ್ನೂ ಸ್ವತಂತ್ರವಾಗಿ ನಿರ್ವಹಿಸುವ ಶಕ್ತಿಯನ್ನು ಒಂದು ಸಂವಿಧಾನದತ್ತ ಸ್ವತಂತ್ರ ಸಂಸ್ಥೆಯಾಗಿ ಚುನಾವಣಾ ಆಯೋಗವು ಹೊಂದಿದೆ.

1971ರಲ್ಲಿ ಮೊದಲ ಬಾರಿಗೆ ರೂಪುಗೊಂಡ ಮಾದರಿ ನೀತಿ ಸಂಹಿತೆ ಇಂದು ಭಾರತೀಯ ರಾಜಕೀಯದ ಮೂಲಸ್ತಂಭವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿನ ನೀತಿ–ನೈತಿಕತೆ ಕಾಪಾಡುವಲ್ಲಿ ಇದರ ಪಾತ್ರ ಅಗಾಧ. ರಾಜ್ಯ ಚುನಾವಣಾ ಆಯೋಗಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಿರ್ವಹಿಸುವಂತೆಯೇ, ಕೇಂದ್ರ ಚುನಾವಣಾ ಆಯೋಗವು ರಾಷ್ಟ್ರವ್ಯಾಪಿ ಚುನಾವಣೆಗಳ ಮೇಲೆ ಅಧಿಕಾರ ಹೊಂದಿದೆ.

Electoral Cleaning ಅಂದರೆ ಮತದಾನ ವ್ಯವಸ್ಥೆಯನ್ನು ಹಂತ ಹಂತವಾಗಿ ಶುದ್ಧೀಕರಿಸುವ ಪ್ರಯತ್ನವು ಸಂಸ್ಥೆಯ ಆರಂಭದಿಂದಲೇ ಹೊಂದಿದ್ದು, 1950–51ರಲ್ಲಿ Representation of the People Act ಮೂಲಕ, ಮತದಾರರ ಪಟ್ಟಿ ತಯಾರಿಕೆಗೆ ಕಾನೂನು ಆಧಾರ, ಅರ್ಹತೆ, ಆಕ್ಷೇಪಣೆ, ತಿದ್ದುಪಡಿ ಪ್ರಕ್ರಿಯೆ ಆರಂಭಿಸಿ, Electoral cleaningನ ಮೂಲ ಅಡಿಪಾಯ ಹಾಕಲಾಯಿತು.

1960–70 ದಶಕದಲ್ಲಿ Booth-level Verification ಆರಂಭವಾಗಿ, ಸ್ಥಳೀಯ ಮಟ್ಟದ ಪರಿಶೀಲನೆ ಮತ್ತು ನೇರವಾಗಿ ಮತದಾರರನ್ನು ಗುರುತಿಸುವ ಪ್ರಯತ್ನದ ಮೂಲಕ ಮೊದಲ Ground-level checking ಆರಂಭಿಸಲಾಯಿತು. 1971ರಲ್ಲಿ Model Code of Conduct (MCC), 1989ರಲ್ಲಿ ರಾಜಕೀಯ ಪಕ್ಷಗಳ ನೋಂದಣಿ ಕಡ್ಡಾಯ ಮತ್ತು ಚಿಹ್ನೆ ನಿಯಂತ್ರಣ ನಿಯಮ ತರಲಾಯಿತು. 1993ರಲ್ಲಿ (EPIC- Photo Voter ID) ಪ್ರತಿಯೊಬ್ಬ ಮತದಾರನಿಗೆ ಫೋಟೋ ಗುರುತಿನ ಚೀಟಿ ಕಡ್ಡಾಯಗೊಳಿಸುವ ಮೂಲಕ ಬೋಗಸ್ ಮತದಾನಕ್ಕೆ ಕಡಿವಾಣ ಹಾಕಲಾಯಿತು. 2003ರಲ್ಲಿ Continuous Updating of Electoral Rolls ಅಂದರೆ, ವರ್ಷಕ್ಕೆ ಒಮ್ಮೆ ಮಾತ್ರ ಅಲ್ಲ, ನಿರಂತರ ತಿದ್ದುಪಡಿ ವ್ಯವಸ್ಥೆ ಜಾರಿಗೆ ತರಲಾಯಿತು. 2010–2014ರಲ್ಲಿ (Digital Electoral Rolls) ಆನ್‌ಲೈನ್ ಮತದಾರರ ಪಟ್ಟಿ ರೂಪಿಸಿದ್ದಲ್ಲದೇ ಸಾರ್ವಜನಿಕ ಪರಿಶೀಲನೆಗೆ ಅವಕಾಶ ನೀಡಲಾಯಿತು.

2015ರಲ್ಲಿ National Electoral Roll Purification (NERPAP) ಪ್ರಯತ್ನವಾಗಿ, Aadhaar-Voter ID linkage ಪ್ರಯತ್ನ ಮತ್ತು Duplicate names ತೆಗೆದುಹಾಕುವ ಗುರಿ ಹೊಂದಲಾಯಿತು. 2018ರಲ್ಲಿ E-EPIC Online Corrections ಮೂಲಕ, ಡಿಜಿಟಲ್ ಮತದಾರ ಚೀಟಿ ಹಾಗೂ ಸ್ವಯಂ ತಿದ್ದುಪಡಿ ವ್ಯವಸ್ಥೆ ಹೊಂದಲಾಯಿತು. 2019–2022ರಲ್ಲಿ BLO Strengt-hening Training ಅಂದರೆ, Booth Level Officersಗೆ ತರಬೇತಿ ಹಾಗೂ Field verification ಗಟ್ಟಿಗೊಳಿಸಲಾಯಿತು. 2023–24ರಲ್ಲಿ Cross-Data-base Verification ಮೂಲಕ, Death registry, Migration data, Utility databasesಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಸದ್ಯಕ್ಕೆ ಸುದ್ದಿಯಲ್ಲಿರುವ, 2025ರಲ್ಲಿ SIR-Special Intensive Revision ಅಂದರೆ, Electoral Cleaning Program ಮೂಲಕ ಒಂದು ಪ್ರಮುಖ ಘಟ್ಟಕ್ಕೆ ನಮ್ಮ ಚುನಾವಣಾ ಆಯೋಗ ಬಂದು ನಿಂತಿದೆ. ಹಾಗಾಗಿಯೇ, ಇಂದಿನ ಆಯೋಗದ ಮುಖ್ಯಸ್ಥರು ಹಲವು ಆರೋಪ–ಆಪಾದನೆಗಳಿಗೆ ಈಡಾಗುತ್ತಿದ್ದಾರೆ.

ಭಾರತೀಯ ಚುನಾವಣಾ ಆಯೋಗದ 26ನೇ ಮುಖ್ಯ ಆಯುಕ್ತರಾಗಿ 2025ರಲ್ಲಿ ಅಧಿಕಾರ ವಹಿಸಿಕೊಂಡ ಜ್ಞಾನೇಶ್ ಕುಮಾರ್, ಈಗಷ್ಟೇ ಮುಗಿದ ಬಿಹಾರ ವಿಧಾನಸಭಾ ಚುನಾವಣೆಗೂ ಪೂರ್ವದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮಕ್ಕೆ ಇವರು ಪ್ರಾಮುಖ್ಯತೆ ಕೊಟ್ಟರು. ಜ್ಞಾನೇಶ್ ಕುಮಾರ್ ದೇಶಾದ್ಯಂತ ಅಕ್ರಮ ನುಸುಳುವಿಕೆ, ನಕಲಿ ಮತದಾರರು ಹಾಗೂ ಮತದಾರರ ಪಟ್ಟಿಗಳಲ್ಲಿರುವ ಗೊಂದಲಗಳ ವಿರುದ್ಧ ತೆರೆದ ಹೋರಾಟ ಘೋಷಿಸಿದ್ದಾರೆ. ಅವರ ನೋಟದಲ್ಲಿ ಪಾರದರ್ಶಕ ಚುನಾವಣೆ ಕೇವಲ ಗುರಿಯಲ್ಲ; ಅದು ಪ್ರಜಾಪ್ರಭುತ್ವದ ಅಸ್ತಿತ್ವದ ಅಡಿಯಾಳು.

ಜ್ಞಾನೇಶ್ ಕುಮಾರ್ ಅತ್ಯಂತ ಚರ್ಚಿತ ಕ್ರಮವಾಗಿರುವ SIR (Special Intensive Revision) ಯೋಜನೆಯು, ಕೇವಲ ಸಾಮಾನ್ಯ ನವೀಕರಣವಲ್ಲ; ಬದಲಾಗಿ ಮನೆ–ಮನೆಗೆ ತೆರಳಿ ಮತದಾರರ ಪಟ್ಟಿಯನ್ನು ಸಂಪೂರ್ಣ ಮರುಪರಿಶೀಲಿಸುವ ವಿಶೇಷ ಅಭಿಯಾನವಾಗಿದೆ. ಇದನ್ನು, ಚುನಾವಣಾ ಆಯೋಗದ SIR ಕ್ರಮವು ಪ್ರಜಾಸತ್ತೆಯ ಶುದ್ಧೀಕರಣದ ನವ ಅಧ್ಯಾಯವೆಂದೇ ನಾವು ಪರಿಗಣಿಸಬಹುದು.

SIR ಕ್ರಮದ ಮುಖ್ಯ ಉದ್ದೇಶಗಳೆಂದರೆ, ಮತದಾರರ ಪಟ್ಟಿಯ ಶುದ್ಧೀಕರಣ, ಡೂಪ್ಲಿಕೇಟ್ ಎಂಟ್ರಿಗಳ ನಿವಾರಣೆ, ಅಕ್ರಮವಾಗಿ ಸೇರಿಸಲಾದ ಹೆಸರಿನ ಪತ್ತೆ, ಬೋಗಸ್ ಮತದಾರರ ದಾಖಲಾತಿ ತಡೆಯುವುದು, ಜನಸಂಖ್ಯಾ ಚಲನೆಯ ಆಧಾರದ ಮೇಲೆ ಪಟ್ಟಿನ ನವೀಕರಣ, ಸೇರಿಂತೆ ವಿವಿಧ ಕ್ರಮಗಳು ಚುನಾವಣಾ ಸುಸ್ಥಿರತೆಗೆ ಅತ್ಯಂತ ಮೂಲಭೂತವಾಗಿವೆ. SIR ಕ್ರಮ ಜಾರಿಗೆ ತರಲು, ಚುನಾವಣಾ ಆಯೋಗವು ವಿವರವಾದ ಮಾರ್ಗಸೂಚಿ ನೀಡುತ್ತದೆ. ಅದರ ಮುಖ್ಯ ಹಂತಗಳು ಹೀಗಿದ್ದು,

ಬೂತ್ ಲೆವೆಲ್ ಅಧಿಕಾರಿಗಳು (BLO) ಪ್ರತೀ ಮನೆಯಿಗೂ ತೆರಳಿ, ವಾಸ್ತವಿಕವಾಗಿ ನಿವಾಸಿಗಳು ಇದ್ದಾರೆಯೇ? ಹೊಸದಾಗಿ ಬಂದಿರುವವರೇ? ಯಾರಾದರೂ ಹೊರಗುಳಿದವರೇ? ಮೃತಪಟ್ಟವರ ಮಾಹಿತಿ ಏನು? ಎಂಬುದನ್ನು ದಾಖಲಿಸುತ್ತಾರೆ. Aadhaar, ration card, property records, death registry, electricity bill ಮುಂತಾದ ಸಾರ್ವಜನಿಕ ಡೇಟಾಬೇಸ್‌ಗಳೊಂದಿಗೆ ಹೋಲಿಕೆ ನಡೆಸಲಾಗುತ್ತದೆ.

ಒಬ್ಬರ ಹೆಸರು ಒಂದೇ ಕ್ಷೇತ್ರದಲ್ಲಿ ಅಥವಾ ಬೇರೆ ಜಿಲ್ಲೆಯಲ್ಲಿ ಹಲವು ಭಾರಿ ಬಂದಿದೆ ಎಂದರೆ ಸ್ವಯಂ–ಪರಿಶೀಲನಾ ವ್ಯವಸ್ಥೆಯಲ್ಲೇ ಅದು ಫ್ಲ್ಯಾಗ್ ಆಗುತ್ತದೆ. ಯಾವುದೇ ಅನುಮಾನಾಸ್ಪದ ಹೆಸರು ಕಂಡರೆ ಮತದಾರರಿಗೆ ನೋಟಿಸ್ ನೀಡಿ, ಇದರಂತೆ – ನಿಮ್ಮ ವಿಳಾಸ ದೃಢಪಡಿಸಿ, ಬೇಕಾದ ದಾಖಲೆಗಳನ್ನು ನೀಡಿ, BLO ಕಚೇರಿಗೆ ಭೇಟಿ ನೀಡಿ ಎಂದು ತಿಳಿಸಲಾಗುತ್ತದೆ. ಪುನಃಪರಿಶೀಲಿಸಿದ ಮತದಾರರ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆ. 12–15 ದಿನಗಳೊಳಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಪರಿಶೀಲನೆ, ತನಿಖೆ ಮತ್ತು ಸಾರ್ವಜನಿಕ ಪರಿಗಣನೆ ನಂತರ ಅಂತಿಮಪಟ್ಟಿ ಪ್ರಕಟವಾಗುತ್ತದೆ.

ಈ ಒಂದು ಕ್ರಮದಿಂದಾಗಿ, ಚುನಾವಣೆಗಳ ನೈತಿಕತೆಯನ್ನು ಹೆಚ್ಚಿಸಿ, ಬೋಗಸ್ ಮತದಾರಿಕೆ ಕಡಿಮೆಯಾಗುವ ಮೂಲಕ ನಿಜವಾದ ಮತದಾರರ ಮತವೇ ಮಹತ್ವ ಹೊಂದುತ್ತದೆ. ಕೆಲವು ರಾಜಕೀಯ ಪಕ್ಷಗಳು ಸ್ಥಳೀಯವಾಗಿ ಹೊರಗಿನ ಜನರನ್ನು ತಾತ್ಕಾಲಿಕವಾಗಿ ತರಿಸಿ ಮತದಾನ ಮಾಡಿಸಿದ ಪ್ರಕರಣಗಳು ಹಿಂದೊಮ್ಮೆ ಕಂಡುಬಂದಿದ್ದು ಈ ಕ್ರಮದಿಂದ ಆ ದುರ್ಬಳಕೆಗಳು ತಡೆಗಟ್ಟಲ್ಪಡುವ ಸಾಧ್ಯತೆ ಹೆಚ್ಚುತ್ತದೆ. ಆಧಾರ್–ಲಿಂಕ್ ಸೌಲಭ್ಯ, e-EPIC, ಆನ್ಲೈನ್ ತಿದ್ದುಪಡಿಗಳೆಲ್ಲವೂ ಶುದ್ಧಾತಿ ಶುದ್ಧ ಮತದಾರರ ಅಧಿಕೃತ ಡಾಟಾಗಳ ಮೇಲೆಯೇ ನಡೆಯುತ್ತದೆ. ವರ್ಷದೊಳಗೆ ಸ್ಥಳಾಂತರ ಹೆಚ್ಚಿರುವ ನಗರ–ಪ್ರವಾಹ ಪ್ರದೇಶಗಳಲ್ಲಿ ನಿಖರ ಪಟ್ಟಿಯು ಸಮಾಜಬದ್ಧ ನಿರ್ಧಾರಗಳಿಗೆ ಸಹ ಸಹಾಯಕವಾಗಬಲ್ಲದು. ಇಷ್ಟೆಲ್ಲ ಉಪಯೋಗಗಳಿದ್ದೂ, SIR ಕ್ರಮಕ್ಕೆ ಹಲವಾರು ರಾಜಕೀಯ ನಾಯಕರು ವಿರೋಧ ವ್ಯಕ್ತಪಡಿಸಿದ್ದು, ಅವುಗಳಲ್ಲಿ; ಮತದಾರರ ಹೆಸರನ್ನು ಇದ್ದಕ್ಕಿದ್ದಂತೆ ಅಳಿಸುತ್ತಿದ್ದಾರೆ ಎಂಬ ಆರೋಪವು ಕೇಳಿಬಂತು. ಕೆಲವು ಪ್ರದೇಶಗಳಲ್ಲಿ ಸಮೂಹವಾಗಿ 500–2000 ಹೆಸರುಗಳು ಅಳಿಸಲ್ಪಟ್ಟಿದ್ದರಿಂದ ರಾಜಕೀಯ ಚರ್ಚೆಗೆ ಕಾರಣವಾಯಿತು. ಆದರೆ ಆಯೋಗದ ಪ್ರಕಾರ, ಇದು ತಾತ್ಕಾಲಿಕವಾಗಿ ವಿವರ ಪರಿಶೀಲನೆಗಾಗಿ ಫ್ಲ್ಯಾಗ್ ಮಾಡಲ್ಪಟ್ಟ ಪಟ್ಟಿಯೇ ಹೊರತು ಅಂತಿಮ ಅಳಿಕೆ ಅಲ್ಲ.

ನಗರದ ಬಡ ಪ್ರದೇಶಗಳು, ಅಸಂಘಟಿತ ಕಾರ್ಮಿಕ ವರ್ಗ, ಬಾಡಿಗೆ ಮನೆಗಳಲ್ಲಿ ವಾಸಿಸುವವರು–ಇವರಲ್ಲಿ ವಿಳಾಸದ ಬದಲಾವಣೆ ಸಾಮಾನ್ಯ. ಇವರ ಹೆಸರುಗಳು ಸಂದೇಹಕ್ಕೆ ಒಳಪಡುವ ಸಾಧ್ಯತೆ ಅಧಿಕ. ಚುನಾವಣೆ ಮೊದಲು ದೊಡ್ಡ ಮಟ್ಟದಲ್ಲಿ ಪರಿಶೀಲನೆ ನಡೆಸುವುದರಿಂದ ರಾಜಕೀಯ ಪಕ್ಷಗಳು ಜನಪ್ರಭಾವ ಕಡಿಮೆ ಮಾಡುವ ಉದ್ದೇಶ ಎಂದು ಆರೋಪಿಸುತ್ತವೆ. ಕಾರ್ಯಕರ್ತರಿಂದ ಒದಗಿಸುವ ಸಂಖ್ಯೆ–ದತ್ತಾಂಶಕ್ಕಿಂತ ಆಯೋಗದ ಡಿಜಿಟಲ್ ದತ್ತಾಂಶ ಬಲವಾಗಿರುವುದರಿಂದ ರಾಜಕೀಯಪಕ್ಷಗಳಿಗೆ ಪಕ್ಷಗಳ ಬೂತ್ (ground) ನೆಟ್ವರ್ಕ್ ದುರ್ಬಲವಾಗುವ ಸಾಧ್ಯತೆ.

ಇವೆಲ್ಲದರ ಜೊತೆಗೆ, ಬಹಳಷ್ಟು ಸವಾಲುಗಳು SIR ಕ್ರಮದ ಸಂದರ್ಭದಲ್ಲಿ ಒದಗಿಬರುತ್ತಿವೆ. ಅವುಗಳಲ್ಲಿ, ಬೃಹತ್ ನಗರಗಳಲ್ಲಿ ವಿಳಾಸ ನಿಜತೆ ಪರಿಶೀಲನೆ ಅತ್ಯಂತ ಕಷ್ಟ, ಕಡಿಮೆ ಸಿಬ್ಬಂದಿ ಮತ್ತು BLO ಗಳ ಮೇಲಿನ ಒತ್ತಡ, ಆಧಾರ್–ಗೌಪ್ಯತಾ ಚರ್ಚೆಗಳು, ತಪ್ಪಾದ ನೋಟಿಸ್‌ಗಳಿಂದ ನಿರ್ದೋಷಿ ಮತದಾರರಿಗೆ ತೊಂದರೆ, ಡಿಜಿಟಲ್ ಗ್ಯಾಪ್ ತಿದ್ದುಪಡಿ ಕ್ರಮಗಳನ್ನು ಅನೇಕರು ತಿಳಿಯದಿರುವುದು ಸೇರಿದಂತೆ ಏನೇ ಅಡೆತಡೆಗಳುಂಟಾದರೂ ಈ ಕ್ರಮವು ಅತ್ಯಗತ್ಯವಾಗಿದ್ದು, ಭಾರತದ ಪ್ರಜಾಪ್ರಭುತ್ವದ ಮೂಲಾಧಾರವಾದ ಚುನಾವಣೆಯನ್ನು ಶುದ್ಧ, ಪಾರದರ್ಶಕ ಮತ್ತು ನೈತಿಕವಾಗಿಡಲು ಇದು ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಚುನಾವಣಾ ಆಯೋಗವು ಸದಾ ಚಲನೆಯಲ್ಲಿರುವ, ನವೀನತೆಗಳನ್ನು ಅಳವಡಿಸಿಕೊಂಡು ಮುನ್ನಡೆಯುವ, ಸಂವಿಧಾನದ ಬಲವಾದ ಶಕ್ತಿಕೇಂದ್ರವಾಗಿ ಮುನ್ನಡೆಯುತ್ತಲೇ ಇದೆ.

SIR ಮಾದರಿಯ ಕ್ರಮಗಳು ಚುನಾವಣಾ ವ್ಯವಸ್ಥೆಯನ್ನು ವಂಚನೆಮುಕ್ತ ಮತ್ತು ನಂಬಿಕೆ ಮೂಡುವಂತಾಗಿಸುತ್ತಿವೆ. ಪ್ರಜಾಪ್ರಭುತ್ವದ ನೈಜಬಲ ಮತದಾರರಲ್ಲಿದೆ. ಮತದಾರರ ಪಟ್ಟಿಗಳು ನಿಖರವಾಗಿದ್ದಷ್ಟೂ, ಚುನಾವಣೆಯ ಶುದ್ಧತೆ ಗಟ್ಟಿಯಾಗುತ್ತದೆ. ಇಂದು ಭಾರತವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲು ರಾಜಕೀಯ ಧ್ರುವೀಕರಣವಲ್ಲ; ಬದಲಾಗಿ ವಿಶ್ವಾಸಾರ್ಹ ಮತದಾರರ ಪಟ್ಟಿಯನ್ನು ನಿರ್ಮಿಸುವುದು.

SIR ಅಭಿಯಾನ, ಕಟ್ಟುನಿಟ್ಟಿನ ನೀತಿಸಂಹಿತೆ, ನಿಷ್ಪಕ್ಷಪಾತ ಆಡಳಿತಾತ್ಮಕ ಕ್ರಮಗಳು ಸರಿಯಾದ ಸಂವಿಧಾನಾತ್ಮಕ ದಿಸೆಯಲ್ಲಿಯೇ ಸಾಗುತ್ತಿರುವುದು ಜನಸಾಮಾನ್ಯರಲ್ಲಿ ನೆಮ್ಮದಿ, ಖುಷಿ ತರುವ ವಿಚಾರವೆಂದೇ ಹೇಳಬಹುದು. ಭಾರತೀಯ ಚುನಾವಣಾ ಆಯೋಗವು ಶೇಷನ್‌ರ ಕಾಲದಲ್ಲಿ ಹೊಸ ಮುಖ ಪಡೆದಂತೆ, ಇಂದು ಜ್ಞಾನೇಶ್ ಕುಮಾರ್ ನೇತೃತ್ವದಲ್ಲಿ ಪಾರದರ್ಶ ಕತೆ–ಮಾಹಿತಿ–ತಂತ್ರಜ್ಞಾನ–ನೈತಿಕತೆ ಎಂಬ ನಾಲ್ಕು ಆಧಾರಸ್ತಂಭಗಳ ಮೇಲೆ ಮತ್ತೊಮ್ಮೆ ಮರುನಿರ್ಮಾಣಗೊಳ್ಳುತ್ತಿದೆ. ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಕೇವಲ ಸಂವಿಧಾನದ ಆದೇಶವಲ್ಲ; ಅದು ಜನರ ಆಸೆಯೂ ಹೌದು. SIR ಮಾದರಿಯ ಧೈರ್ಯಶಾಲಿ ಕ್ರಮಗಳು ಈ ದಿಶೆಯಲ್ಲಿ ಭಾರತಕ್ಕೆ ಅಗತ್ಯವಾದ ಮಾರ್ಗಸೂಚಿಯಾಗಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಕ್ಕಳ ಬ್ಯಾಗ್ ತೂಕ ಮಾರಕ

ಭಾರತದ ಶಿಕ್ಷಣ ನೀತಿ ಮಕ್ಕಳ ಆರೋಗ್ಯದ ಕುರಿತು ಸ್ಪಷ್ಟ ಮಾರ್ಗಸೂಚಿ ನೀಡಿದ್ದರೂ, ಬಹುತೇಕ ಶಾಲೆಗಳು ಇದನ್ನು ಪಾಲಿಸುತ್ತಿಲ್ಲ ಎಂಬುದು ದುಃಖದ ಸಂಗತಿ. ವಿದ್ಯಾರ್ಥಿಗಳ ಬ್ಯಾಗ್ ತೂಕವು ದೇಹದ ತೂಕದ 10% ಮೀರಬಾರದು ಎನ್ನುವ ನಿಯಮ ಕಾಗದದ ಮೇಲೆ ಉಳಿದಿದೆ. ಅಂಕಿಅಂಶಗಳ ಪ್ರಕಾರ ಸುಮಾರು 45–50% ಶಾಲಾಮಕ್ಕಳು ಬೆನ್ನು ಮತ್ತು ಕುತ್ತಿಗೆ ನೋವಿನಿಂದ ಬಳಲುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅತಿಯಾದ ಬ್ಯಾಗ್ ತೂಕ. ಆದರೂ ಶಿಕ್ಷಣ ಇಲಾಖೆ ಈ ವಿಷಯದಲ್ಲಿ ಗಂಭೀರ ಕ್ರಮ ಕೈಗೊಳ್ಳದೆ ಮೌನವಾಗಿರುವುದು ಆತಂಕಕಾರಿ. ಪೋಷಕರು ಪ್ರಶ್ನಿಸುತ್ತಿದ್ದರೂ, ಶಾಲೆಗಳ ಮೇಲೆ ನಿಯಮಿತ ಪರಿಶೀಲನೆ ಮತ್ತು ದಂಡ ಕ್ರಮಗಳಿಲ್ಲ. ತರಗತಿ ಮಟ್ಟದಲ್ಲಿ ಬ್ಯಾಗ್ ತೂಕ ಪರಿಶೀಲನೆ, ಹಗುರವಾದ ಪುಸ್ತಕಗಳು ಮತ್ತು ಡಿಜಿಟಲ್ ನೋಟ್ ಬಳಸಬಹುದಾಗಿದೆ. ಮಗುವಿನ ಬೆನ್ನೆಲುಬು ಸುರಕ್ಷಿತವಾದರೆ ಮಾತ್ರ ಅದರ ಭವಿಷ್ಯ ಸುರಕ್ಷಿತ. ಶಿಕ್ಷಣ ಇಲಾಖೆ ತಕ್ಷಣ ಜವಾಬ್ದಾರಿ ವಹಿಸಬೇಕು. ಇದಲ್ಲದೆ, ವೈದ್ಯಕೀಯ ವರದಿಗಳಂತೆ ಪ್ರತಿ 5 ಮಕ್ಕಳಲ್ಲಿ 2 ಮಕ್ಕಳು ಶಾಲಾ ವಯಸ್ಸಿನಲ್ಲೇ ಬೆನ್ನುಹುರಿ ಸಮಸ್ಯೆಯ ಲಕ್ಷಣಗಳನ್ನು ತೋರುತ್ತಿದ್ದಾರೆ. ಇದು ಶಿಕ್ಷಣದ ಒತ್ತಡ ಮಕ್ಕಳ ದೇಹದ ಮೇಲೆ ಎಷ್ಟು ಪರಿಣಾಮ ಬೀರುತ್ತಿದೆ ಎಂಬುದನ್ನು ತೋರಿಸುತ್ತದೆ. ಶಿಕ್ಷಣವು ಜ್ಞಾನ ಮಾತ್ರವಲ್ಲ, ಆರೋಗ್ಯವನ್ನೂ ರಕ್ಷಿಸಬೇಕು.

-ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ತರೂರ್ ನಡೆ ಜಾಣತನದ್ದೂ ಅಲ್ಲ, ಸಮರ್ಥನೀಯವೂ ಅಲ್ಲ

ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ಈಚೆಗೆ ಸ್ವಪಕ್ಷಕ್ಕೆ ಮುಜುಗರವಾಗುವಂತಹ ನಡೆನುಡಿಗಳನ್ನು ಮೇಲಿಂದ ಮೇಲೆ ತೋರುತ್ತಿದ್ದಾರೆ. ಹಲವು ಸಂದರ್ಭಗಳಲ್ಲಿ ಆ ನಡೆನುಡಿಗಳು ಅಸಮರ್ಥನೀಯವಾಗಿರುವುದು ವೇದ್ಯ. 'ಮತಗಳವು' ಕುರಿತ ಕಾಂಗ್ರೆಸ್ ಸಮಾವೇಶಕ್ಕೆ ತರೂರ್ ಗೈರುಹಾಜರಾಗಿ ವಿದೇಶ ಪ್ರವಾಸದ ಕಾರಣ ಹೇಳಿರುವುದು ಇಂಥದೊಂದು ನಡೆ. ವಿದೇಶ ಪ್ರವಾಸವನ್ನು ಅವರು ಮುಂದೂಡಬಹುದಿತ್ತು ಅಥವಾ ರದ್ದುಪಡಿಸಬಹುದಿತ್ತು. ಸ್ವಪಕ್ಷಕ್ಕೆ ಉತ್ತಮ ಭವಿಷ್ಯ ಇಲ್ಲವೆಂದುಕೊಂಡು ತರೂರ್ ಅವರು ಬಿಜೆಪಿ ದಯೆಯಿಂದ ಉನ್ನತ ಸ್ಥಾನ, ಮನ್ನಣೆ ಮತ್ತು ತತ್ಫಲವಾಗಿ ದೇಶಾದ್ಯಂತ ಕೀರ್ತಿ, ಜನಪ್ರಿಯತೆ ಇವುಗಳನ್ನು ಹೊಂದುವ ಹಗಲುಗನಸು ಕಾಣುತ್ತಿರಬಹುದು. ತಮ್ಮ ಈ ಮಹತ್ವಾಕಾಂಕ್ಷೆಯ ಈಡೇರಿಕೆಗಾಗಿ ಅವರು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆ ಹೊಂದಿ ಹುತಾತ್ಮ ಎನಿಸಿಕೊಳ್ಳುವ ಯೋಚನೆ (ಯೋಜನೆ) ಹೊಂದಿರಬಹುದು. ಕಾಂಗ್ರೆಸ್ ಪಕ್ಷವಿಂದು ದುರ್ಬಲವಾಗಿದ್ದು ಅಧ್ಯಕ್ಷ ಖರ್ಗೆಯವರು ಸೌಮ್ಯ ವ್ಯಕ್ತಿ ಆಗಿರುವುದರಿಂದ ತನ್ನ ಉಚ್ಚಾಟನೆ ವಿಳಂಬವಾಗುವುದೆಂದು ತರೂರ್ ಕಾಯುತ್ತಿರಬಹುದು. ಅವರು ಪ್ರತಿನಿಧಿಸುತ್ತಿರುವ ಸಂಸದೀಯ ಕ್ಷೇತ್ರವಾದ ತಿರುವನಂತಪುರಂದ ನಗರಪಾಲಿಕೆಗಾಗಿ ಈಚೆಗಷ್ಟೇ ನಡೆದ ಚುನಾವಣೆಯಲ್ಲಿ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಜೆಪಿಯು ಜಯಭೇರಿ ಬಾರಿಸಿರುವುದು ತರೂರ್ ಅವರ ನಡೆಯ ಬಗ್ಗೆ ಸಂಶಯ ಹುಟ್ಟಿಸುತ್ತದೆ. ತರೂರ್ ಅವರು ಒಂದು ಸತ್ಯವನ್ನು ಅರಿತುಕೊಳ್ಳುವುದು ಒಳ್ಳೆಯದು. ಪ್ರಥಮವಾಗಿ ನರೇಂದ್ರ ಮೋದಿ ಮತ್ತು ಅನಂತರದಲ್ಲಿ ಒಂದಿಬ್ಬರು ಮೋದಿ ಆಪ್ತರು, ಇವರನ್ನು ಬಿಟ್ಟರೆ ಉಳಿದ ಯಾರಿಗೂ, ಮೇಲೆ ಉಲ್ಲೇಖಿಸಲಾಗಿರುವ ಮಹತ್ವಾಕಾಂಕ್ಷೆಯನ್ನು, ಬಿಜೆಪಿ ಪಕ್ಷಕ್ಕೆ ಹೋಗಿ ಅಥವಾ ಆ ಪಕ್ಷದ ದಯೆಯಿಂದ ಈಡೇರಿಸಿಕೊಳ್ಳಲು ಸದ್ಯಕ್ಕಂತೂ ಸಾಧ್ಯವೇ ಇಲ್ಲ. ಹೀಗಿರುವಾಗ ತರೂರ್ ಅವರ ಆಕಾಂಕ್ಷೆಯ ಈಡೇರಿಕೆಯು ಮರೀಚಿಕೆ ಅಷ್ಟೇ. 2006ರಲ್ಲಿ ಇದೇ ಶಶಿ ತರೂರ್ ವಿಶ್ವರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪದವಿಗೆ ಸ್ಪರ್ಧಿಸಿದಾಗ, ಅಮೆರಿಕದ ಪ್ರಬಲ ವಿರೋಧ ಮತ್ತು ವಿಟೋ ಅಧಿಕಾರ ಚಲಾವಣೆಯಿಂದಾಗಿ ಬಾನ್ ಕಿ ಮೂನ್ ಅವರ ವಿರುದ್ಧ ಸೋತದ್ದನ್ನು ಅವರು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ಉತ್ತಮ.

-ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಧುರಂಧರ- ಬೆತ್ತಲಾದ ಪಾಕ್ ಮತ್ತು ದೇಶದ್ರೋಹಿಗಳು

ಡಿ.16ರ ವಿಶ್ವವಾಣಿ ಪತ್ರಿಕೆಯಲ್ಲಿ ನವೀನ್ ಸಾಗರ್ ಅವರ ಪದಸಾಗರ ಅಂಕಣ ತುಂಬ ತೀಕ್ಷ್ಣವಾಗಿದೆ. ಓದಿ ಖುಷಿಯಾಯ್ತು. ಭಾರತದ ಪ್ರಗತಿಗೆ ಅಡ್ಡ ಬಂದ, ದೇಶದ ಅವಹೇಳನೆಗೆ, ಅಭದ್ರತೆಗೆ, ಅನಿಶ್ಚಿತತೆಗೆ, ದುರವಸ್ಥೆಗೆ ನೇರ ಹೊಣೆಯಾದ ಸರಕಾರಗಳು, ನಾಮಾಂಕಿತ (ಕುಖ್ಯಾತ) ಪುಡಾರಿಗಳ ಕುರಿತಾಗಿ ಸವಿವರ ನೀಡಿದ್ದಾರೆ. ಈಗಷ್ಟೇ ಬಂದ ಧುರಂಧರ ಎಂಬ ಚಿತ್ರ ದೇಶದಲ್ಲಿ 2014ರವರೆಗೆ ಪಾಕ್ ನಡೆಸಿದ ಅಸಂಖ್ಯ ಭಯೋತ್ಪಾದನೆ ಕೃತ್ಯಗಳನ್ನು ತೆರೆಮೇಲೆ ತೋರಿಸಿ ಪಾಕಿಸ್ತಾನವನ್ನು ಬೆತ್ತಲೆ ಮಾಡಿದೆ. ಮೋದಿಯವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲು ಮಾಡಿದ ಅತ್ಯಂತ ಪ್ರಮುಖ ಕಾರ್ಯವೆಂದರೆ ನೋಟು ಅಮಾನ್ಯೀಕರಣ. ಇದರಿಂದ ನಮ್ಮ ದೇಶದ ಕರೆನ್ಸಿ ನಕಲಿ ಪ್ರಿಂಟ್ ಮಾಡಿ ಬದುಕುತ್ತಿದ್ದ ಶತ್ರು ಪಾಕ್‌ನ ಸೊಂಟ ಮುರಿದಂತಾಗಿದೆ. ಆದರೆ, ಲೇಖಕರು ಈ ಖೋಟಾ ನೋಟಿನ ಹಿಂದೆ ಇದ್ದ ತಂದೆ– ಮಗನ ಹೆಸರನ್ನು ಬಹಿರಂಗ ಮಾಡಿಲ್ಲ, ಇದನ್ನು ಚಿದಂಬರ ರಹಸ್ಯ ಅಂತಲೇ ಹೇಳಬಹುದು...ಉತ್ತಮ ಲೇಖನ, ಅಷ್ಟೇ ಉತ್ಕೃಷ್ಟ ಲೇಖನ ಶೈಲಿ ನವೀನ್ ಸಾಗರ್ ಅವರದ್ದು. ಅವರಿಗೆ ಮತ್ತು ಪತ್ರಿಕೆಗೆ ನನ್ನ ಧನ್ಯವಾದಗಳು.

-ಲಕ್ಷ್ಮೀಕಾಂತ ಪಾಟೀಲ

ಪಕ್ಷಕ್ಕಿಂತ ಸ್ನೇಹ ಮುಖ್ಯ!

ಕೇರಳದ ಮನ್ನಾರ್‌ಕಾಡ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ನಂತರ ನಡೆದ ಒಂದು ಘಟನೆಯು, ಇಂದಿನ ದ್ವೇಷಪೂರಿತ ರಾಜಕೀಯ ವಾತಾವರಣದಲ್ಲಿ ನಮಗೆಲ್ಲರಿಗೂ ಕಣ್ಣು ತೆರೆಸುವಂತಿದೆ ಮತ್ತು ಪ್ರೇರಣೆ ನೀಡುವಂತಿದೆ. ಚುನಾವಣೆಯಲ್ಲಿ ಸೋಲು ಕಂಡ ಎಲ್‌ಡಿಎಫ್ ಅಭ್ಯರ್ಥಿ ಅಂಜು ಸಂದೀಪ್ ಅವರು, ತಮ್ಮ ಪ್ರತಿಸ್ಪರ್ಧಿ ಪಕ್ಷವಾದ ಬಿಜೆಪಿಯ ಯಶಸ್ವಿ ಅಭ್ಯರ್ಥಿ ಸ್ನೇಹಾ ರಾಮಕೃಷ್ಣನ್ ಅವರ ವಿಜಯೋತ್ಸವದಲ್ಲಿ ಪಾಲ್ಗೊಂಡಿರುವುದು ರಾಜಕೀಯ ಮಿತಿಗಳನ್ನು ಮೀರಿದ ಮಾನವೀಯ ಸಂಬಂಧದ ವಿಶಿಷ್ಟ ಉದಾಹರಣೆಯಾಗಿದೆ. ಅಂಜು ಸಂದೀಪ್ ಅವರು ಗೆದ್ದ ಸ್ನೇಹಿತೆಯ ಜೊತೆ ಸಂತೋಷದಿಂದ ನೃತ್ಯ ಮಾಡಿದ ವಿಡಿಯೋ ಸಾವಿರಾರು ಜನರಿಗೆ ಒಂದು ದೊಡ್ಡ ಸತ್ಯವನ್ನು ಮನವರಿಕೆ ಮಾಡಿದೆ. ರಾಜಕೀಯ ಸ್ಥಾನಗಳು ತಾತ್ಕಾಲಿಕವಾಗಿರಬಹುದು, ಆದರೆ ಮಾನವ ಸಂಬಂಧ ಮತ್ತು ಸ್ನೇಹ ಶಾಶ್ವತ. ಸಿದ್ಧಾಂತಗಳು ನಮ್ಮನ್ನು ವಿಭಜಿಸಬಹುದು, ಆದರೆ ಮನುಷ್ಯತ್ವ ನಮ್ಮನ್ನು ಜೋಡಿಸುತ್ತದೆ.

ತಮ್ಮ ಈ ನಡೆಗೆ ಅಂಜು ಸಂದೀಪ್ ನೀಡಿದ ಸ್ಪಷ್ಟನೆಯು ಅತ್ಯಂತ ಶ್ರೇಷ್ಠವಾದುದು. ಅವರು, ರಾಜಕೀಯವನ್ನು ಮೀರಿ ಸ್ನೇಹ ಮುಖ್ಯ. ಸ್ನೇಹಾ ರಾಮಕೃಷ್ಣನ್ ನನ್ನ ಆತ್ಮೀಯ ಸ್ನೇಹಿತೆ. ರಾಜಕೀಯವಾಗಿ ನಾವು ಎದುರಾಳಿಗಳಾಗಿರಬಹುದು, ಆದರೆ ವೈಯಕ್ತಿಕ ಬಾಂಧವ್ಯಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ. ನನ್ನ ಗೆಳತಿಯ ಗೆಲುವನ್ನು ನಾನು ಸಂಭ್ರಮಿಸಿದೆ ಅಷ್ಟೇ, ಎಂದು ತಿಳಿಸಿದ್ದಾರೆ. ಈ ಘಟನೆಯು ನಮ್ಮ ವೃತ್ತಿಪರ ಸ್ಪರ್ಧೆಗಳು ಅಥವಾ ರಾಜಕೀಯ ನಿಲುವುಗಳು ನಮ್ಮ ವೈಯಕ್ತಿಕ ಸಂಬಂಧಗಳನ್ನು ಹಾಳು ಮಾಡಬಾರದು ಎಂಬ ಪಾಠವನ್ನು ಹೇಳುತ್ತದೆ. ಗೆಲುವು–ಸೋಲು ಚುನಾವಣೆಯ ಒಂದು ಭಾಗವೇ ಹೊರತು, ಅದು ಸ್ನೇಹವನ್ನು ನಿರ್ಧರಿಸುವ ಅಳತೆಗೋಲು ಅಲ್ಲ. ನಮ್ಮ ಪಕ್ಷ ಯಾವುದು, ನಮ್ಮ ಸಿದ್ಧಾಂತ ಯಾವುದು? ಎಂಬ ಭಿನ್ನಾಭಿಪ್ರಾಯಗಳ ನಡುವೆಯೂ, ಇನ್ನೊಬ್ಬರ ಸಂತೋಷದಲ್ಲಿ ಪಾಲ್ಗೊಳ್ಳುವ ದೊಡ್ಡ ಮನಸ್ಸು ನಮ್ಮಲ್ಲಿರಬೇಕು. ಕೇವಲ ದ್ವೇಷ ಮತ್ತು ಟೀಕೆಗಳ ಮೂಲಕವಲ್ಲ, ಬದಲಿಗೆ ಪರಸ್ಪರರ ಗೆಲುವನ್ನು ಸಂಭ್ರಮಿಸುವ ಈ ಸೌಹಾರ್ದಯುತ ಮನೋಭಾವದಿಂದ ಮಾತ್ರವೇ ನಾವು ಆರೋಗ್ಯಕರ ಮತ್ತು ಪ್ರಗತಿಪರ ಸಮಾಜವನ್ನು ನಿರ್ಮಿಸಲು ಸಾಧ್ಯ. ಅಂಜು ಸಂದೀಪ್ ಅವರ ಈ ನಡೆ, ರಾಜಕೀಯ ದ್ವೇಷದ ಗೋಡೆಗಳನ್ನು ಒಡೆದು ಹಾಕುವ ಮತ್ತು ಮಾನವೀಯ ಸಂಬಂಧಗಳ ಮಹತ್ವವನ್ನು ಎತ್ತಿಹಿಡಿಯುವ ಒಂದು ವಿಶಿಷ್ಟ ಮತ್ತು ಸ್ಫೂರ್ತಿದಾಯಕ ಉದಾಹರಣೆ ಯಾಗಿದೆ.

-ಎಸ್.ಎನ್.ಭಟ್, ಸೈಪಂಗಲ್ಲು, ಕಾಸರಗೋಡು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:337

ಸಮಾಚಾರ ಸಣ್ಣದಲ್ಲ

ಮೂಲಭೂತವಾದಿಗಳಿಂದ ವಿಶ್ವಕ್ಕೇ ಅಪಾಯ: ತುಳಸಿ

ವಾಷಿಂಗ್ಟನ್: ಆಸ್ಟ್ರೇಲಿಯ ದೇಶದ ಸಿಡ್ನಿ ನಗರದಲ್ಲಿನ ಬೊಂಡಿ ಬೀಚ್‌ನಲ್ಲಿ ಸಾವಿರಾರು ಯಹೂದಿಗಳನ್ನು ಗುರಿಯಾಗಿಸಿ ಐಎಸ್‌ಐಎಸ್ ಸಿದ್ಧಾಂತ ಪ್ರಚೋದಿತ ಅಪ್ಪ-ಮಗ ನಡೆಸಿದ ಭಯೋತ್ಪಾದಕ ದಾಳಿ ವಿರುದ್ಧದ ಜಾಗತಿಕ ಮಟ್ಟದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ಇಸ್ಲಾಮಿಕ್ ಮೂಲಭೂತ ವಾದವನ್ನು ಬುಡಸಮೇತ ಕಿತ್ತೆಸೆಯ ಬೇಕು ಎಂದು ಜಾಗತಿಕ ಮಟ್ಟದಲ್ಲಿ ಸರಕಾರಗಳನ್ನು ಜನರು ಒತ್ತಾಯಿಸುತ್ತಿದ್ದಾರೆ.

ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಳಸಿ ಗಬ್ಬಾರ್ಡ್, ಆಸ್ಟ್ರೇಲಿಯದಲ್ಲಿನ ಇಸ್ಲಾಮಿಕ್ ಭಯೋತ್ಪಾದಕರ ದಾಳಿ ಆಘಾತಕಾರಿ. ಹೆಚ್ಚಿನ ಸಂಖ್ಯೆಯ ಇಸ್ಲಾಮಿಸ್ಟ್‌ಗಳ ನುಸುಳುವಿಕೆಯೇ ಆಸ್ಟ್ರೇಲಿಯದ ಈ ಸ್ಥಿತಿಗೆ ಕಾರಣ. ಇಡೀ ಜಗತ್ತನ್ನೇ ಇಸ್ಲಾಮಿಕರಣ ಮಾಡುವುದು ಅವರ ಗುರಿಯಾಗಿದೆ. ಇಸ್ಲಾಮಿಸ್ಟ್‌ಗಳು ಮತ್ತು ಇಸ್ಲಾಮಿಸಂ ಇಡೀ ವಿಶ್ವದ ಭದ್ರತೆಗೆ ದೊಡ್ಡ ಬೆದರಿಕೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಭಯೋತ್ಪಾದಕರ ಬಂಧನ, ಶಂಕಿತರ ಗಡೀಪಾರು, ಸಾಮೂಹಿಕ ವಲಸೆ ತಪ್ಪಿಸುವುದು ಅತ್ಯಗತ್ಯ ಎಂದಿದ್ದಾರೆ.

ಬುರ್ಕಾ ಧರಿಸದ್ದಕ್ಕೆ ಪತ್ನಿ, ಮಕ್ಕಳ ಕೊಲೆ

ಲಖನೌ: ಬುರ್ಕಾ ಧರಿಸದೆ ಮನೆಯಿಂದ ಹೊರಬಂದ ಪತ್ನಿ, ಇಬ್ಬರು ಪುತ್ರಿಯರನ್ನು ಕೊಂದು ಶೌಚಾಲಯದ ಗುಂಡಿಯಲ್ಲಿ ಹೂತುಹಾಕಿದ್ದ ಉತ್ತರ ಪ್ರದೇಶದ ಲಖನೌ ನಗರದ ನಿವಾಸಿ ಫಾರೂಕ್ ಎಂಬಾತನನ್ನು ಲಖನೌ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. 6 ದಿನಗಳ ಹಿಂದೆ ಪತ್ನಿ ತಾಹೀರಾ ಮತ್ತು ಪುತ್ರಿಯರಾದ ಅಫ್ರೀನ್ ಮತ್ತು ಸಹ್ರೀನ್ ಬುರ್ಕಾ ಧರಿಸದೇ ಹೊರಗೆ ಹೊರಟಿದ್ದಕ್ಕೆ ಪತಿ ಫಾರೂಕ್ ಪ್ರಶ್ನೆ ಮಾಡಿದ್ದಾನೆ. ಬುರ್ಕಾ ವಿಚಾರಕ್ಕೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಸೊಸೆ ತಾಹಿರಾ ಮತ್ತು ಮೊಮ್ಮಕ್ಕಳು 6 ದಿನಗಳಿಂದ ಕಾಣಿಸದೇ ಇದ್ದುದ್ದಕ್ಕೆ ಫಾರೂಕ್ ತಂದೆ ದಾವೂದ್ ಪೊಲೀಸರಿಗೆ ದೂರು ನೀಡಿದ್ದಾರೆ. ತನಿಖೆ ವೇಳೆ ಫಾರೂಕ್ ಹೇಳಿಕೆಗಳು ಗೊಂದಲಮಯವಾಗಿದ್ದನ್ನು ಗಮನಿಸಿದ ಪೊಲೀಸರು, ಬಳಿಕ ಆತನನ್ನು ವಶಕ್ಕೆ ಪಡೆದು 'ತೀವ್ರ' ವಿಚಾರಣೆಗೊಳಪಡಿಸಿದ್ದಾರೆ. ಕಡೆಗೆ ಫಾರೂಕ್, ಪತ್ನಿ, ಹಿರಿಯ ಮಗಳನ್ನು ಗುಂಡು ಹಾರಿಸಿ ಕೊಂದೆ, ಕಿರಿಯವಳ ಕತ್ತು ಹಿಸುಕಿ ಸಾಯಿಸಿ ಶೌಚಾಲಯಕ್ಕಾಗಿ ಅಗೆದಿದ್ದ ಗುಂಡಿಯಲ್ಲಿ ಶವಗಳನ್ನು ಹೂತುಹಾಕಿದೆ ಎಂದು ತಪ್ಪೊಪ್ಪಿಕೊಂಡಿದ್ದಾನೆ. ಬಳಿಕ ಸ್ಥಳಕ್ಕೆ ತೆರಳಿದ ಪೊಲೀಸರು ಶೌಚಾಲಯ ಗುಂಡಿ ಅಗೆಸಿ ಶವಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆಯಡಿ ಮೂವರ ಕೊಲೆ, ಸಾಕ್ಷ್ಯ ನಾಶ ಪ್ರಕರಣ ದಾಖಲಿಸಿ ಫಾರೂಕ್‌ನನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದಾರೆ.

ರಾಜಸ್ಥಾನ ಎಸ್‌ಐಆರ್: 42 ಲಕ್ಷ ಹೆಸರು ರದ್ದು

ಜೈಪುರ: ಕೇಂದ್ರ ಚುನಾವಣಾ ಆಯೋಗ ರಾಜಸ್ಥಾನದಲ್ಲಿ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಮೂಲಕ ರಾಜ್ಯ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸುತ್ತಿದದು, ಮೊದಲ ಹಂತದ ಕಾರ್ಯ ಪೂರ್ಣಗೊಂಡಿದೆ. ರಾಜ್ಯದ 5.46 ಕೋಟಿ ಮತದಾರರಲ್ಲಿ 41.85 ಲಕ್ಷ ಮತದಾರರು ಪರಿಷ್ಕರಣೆ ವೇಳೆಯಲ್ಲಿ ಗೈರುಹಾಜರಾಗಿರುವುದರಿಂದ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಮತದಾರರ ಪಟ್ಟಿಯ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, 41.85 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ನವೀನ್ ಮಹಾಜನ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಮತದಾರರ ಹಕ್ಕು ದೃಢೀಕರಣ ಯಾವುದೇ ದಾಖಲೆಗಳು ಸಲ್ಲಿಕೆಯಾಗಿಲ್ಲ. ಕೆಲವೆಡೆ ಮತದಾರರು ನೋಂದಾಯಿತ ವಿಳಾಸದಿಂದ ವಲಸೆ ಹೋಗಿದ್ದಾರೆ, ಕೆಲವೆಡೆ ಶಾಶ್ವತವಾಗಿ ಸ್ಥಳಾಂತರವಾಗಿದ್ದಾರೆ, ಕೆಲವರ ಹೆಸರು 2-3 ಮತ ಕ್ಷೇತ್ರಗಳಲ್ಲಿ ದಾಖಲಾಗಿವೆ. ಹಲವರು ಮೃತರಾದವರ ಹೆಸರುಗಳು ಈಗಲೂ ಮತದಾರರ ಪಟ್ಟಿಯಲ್ಲಿ ಉಳಿದುಕೊಂಡಿವೆ ಎಂದು ವಿವರ ನೀಡಿದರು. ಇದಕ್ಕೂ ಮುನ್ನ ಜುಲೈನಲ್ಲಿ ಬಿಹಾರದಲ್ಲಿ 'ಎಸ್‌ಐಆರ್' ನಡೆಸಿ 7.89 ಕೋಟಿ ಮತದಾರರ ಪೈಕಿ 65 ಲಕ್ಷ ಜನರ ಹೆಸರನ್ನು ರಾಜ್ಯ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದಲೂ 58 ನಕಲಿ ಮತದಾರರ ಹೆಸರು ರದ್ದಾಗಿದೆ.

ದೆಹಲಿಗೆ ಜ.1ರಿಂದ 'ಭಾರತ್ ಟ್ಯಾಕ್ಸಿ' ಆಪ್

ದೆಹಲಿ: ಕೇಂದ್ರ ಸರಕಾರವೇ ಅಭಿವೃದ್ಧಿಪಡಿಸಿರುವ 'ಭಾರತ್ ಟ್ಯಾಕ್ಸಿ' ಮೊಬೈಲ್ ಅಪ್ಲಿಕೇಷನ್ ಹೊಸ ಕ್ಯಾಲೆಂಡರ್ ವರ್ಷದ ಮೊದಲ ದಿನ(ಜ.1) ದೆಹಲಿಯಲ್ಲಿ ಬಿಡುಗಡೆಯಾಗುತ್ತಿದೆ. ದೆಹಲಿಯಲ್ಲಿ ಈ ಆಪ್ ಅನ್ನು 'ಸಹಕಾರ್ ಟ್ಯಾಕ್ಸಿ ಕೊ ಆಪರೇಟಿವ್ ಲಿ.' ನಿರ್ವಹಣೆ ಮಾಡಲಿದೆ. ಒಲಾ, ಉಬರ್, ರ್‍ಯಾಪಿಡೊ ಮಾದರಿಯಲ್ಲೇ ಕೇಂದ್ರ ಸರಕಾರದ ಸಹಕಾರ ಸಚಿವಾಲಯದಿಂದ ರೂಪುಗೊಂಡಿರುವ 'ಭಾರತ್ ಟ್ಯಾಕ್ಸಿ' ಆಪ್, ಬಾಡಿಗೆ ಕಾರುಗಳು, ಆಟೊ ರಿಕ್ಷಾ ಮತ್ತು ಬೈಕ್ ಟ್ಯಾಕ್ಸಿಗಳಲ್ಲಿ ಬಳಕೆಗೆ ಸಜ್ಜಾಗಿದೆ. ಭಾರತ ಸರಕಾರದ ಸಹಕಾರ ಸಚಿವಾಲಯದಿಂದಲೇ ನಿರ್ವಹಣೆ ಆಗುವುದರಿಂದ ಒಲಾ, ಉಬರ್ ಆಪ್‌ಗಳಲ್ಲಿ ಇರುವಂತೆ ಭಾರತ್ ಟ್ಯಾಕ್ಸಿಯಲ್ಲಿ ಕಮಿಷನ್ ಕಡಿತ ಆಗುವುದಿಲ್ಲ, ಬಾಡಿಗೆ ನಿಗದಿಯಾದ ಅಷ್ಟೂ ಮೊತ್ತ ವಾಹನಗಳ ಮಾಲೀಕರು/ಚಾಲಕರಿಗೇ ಲಭಿಸಲಿದೆ.

ನಾಗರಿಕತೆ, ಸಂಸ್ಕೃತಿ ಬೇರುಗಳಲ್ಲಿ ಭಾರತ-ಇಥಿಯೋಪಿಯ ಒಂದೇ

ಇಥಿಯೋಪಿಯ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಪ್ರಧಾನಿ ಮೋದಿ ಭಾಷಣ

ಆಡಿಸ್ ಅಬಾಬಾ: ನಾಗರಿಕತೆ ಮತ್ತು ಸಂಸ್ಕೃತಿಯಲ್ಲಿ ಆಳವಾದ ಬೇರುಗಳನ್ನು ಹೊಂದಿರುವ ಮತ್ತು ಭವಿಷ್ಯವನ್ನು ಮುಕ್ತ ಹೃದಯದಿಂದ ಅಪ್ಪಿಕೊಳ್ಳುವ ಇಥಿಯೋಪಿಯಾ ಒಂದು ದೇಶವಾಗಿ ಇಂದು ಬಹಳ ಎತ್ತರದ ಸ್ಥಾನದಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆಯ ಮಳೆಗರೆದಿದ್ದಾರೆ.

ಮಂಗಳವಾರ ಸಂಜೆಯಿಂದ ಇಥಿಯೋಪಿಯ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, ದೇಶದ ಜಂಟಿ ಸಂಸತ್ತನ್ನು ಉದ್ದೇಶಿಸಿ ದೀರ್ಘ ಭಾಷಣ ಮಾಡಿದರು. ಮೊದಲಿಗೆ ಸ್ಥಳೀಯ ಭಾಷೆಯಲ್ಲಿ 'ಟೆನಾ ಯಿಸ್ಟಿಲಿಯಾ ಸಲಾಮ್' ಎಂಬ ನುಡಿಗಳೊಂದಿಗೆ ಭಾಷಣ ಆರಂಭಿಸಿ ಚಪ್ಪಾಳೆ ಗಿಟ್ಟಿಸಿಕೊಂಡರು.

ಭಾರತ ದೇಶವೂ ಪ್ರಾಚೀನ ನಾಗರಿಕತೆಯದ್ದಾಗಿದೆ. ಅದು ಕೂಡಾ ಭವಿಷ್ಯವನ್ನು ಮುಕ್ತ ಹೃದಯದಿಂದ ಅಪ್ಪಿಕೊಳ್ಳುತ್ತದೆ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್'(ಎಲ್ಲರ ಜತೆಗೆ, ಎಲ್ಲರ ವಿಕಾಸ, ಎಲ್ಲರ ವಿಶ್ವಾಸ, ಎಲ್ಲರ ಪ್ರಯತ್ನ) ಎಂಬ ಮಂತ್ರದೊಂದಿಗೆ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಭವಿಷ್ಯದತ್ತ ಸಾಗುತ್ತಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಸಿಂಹಗಳ ನಾಡು: ಇಥಿಯೋಪಿಯ ದೇಶ 'ಸಿಂಹಗಳ ನಾಡು'. ಇಲ್ಲಿರುವಾಗ ನನಗೆ ನನ್ನದೇ ದೇಶದ ತವರು ರಾಜ್ಯ ಗುಜರಾತ್‌ನಲ್ಲಿಯೇ ನಿಂತು ಮಾತನಾಡುತ್ತಿರುವಂತೆ ಅನಿಸುತ್ತದೆ. ಏಕೆಂದರೆ ನನ್ನ ರಾಜ್ಯ ಗುಜರಾತ್ ಕೂಡ ಸಿಂಹಗಳಿಗೆ ಉತ್ತಮ ನೆಲೆವೀಡಾಗಿದೆ. ಹಾಗಾಗಿಯೇ ಈ ನೆಲವೂ ನನಗೆ ತವರು ಮನೆಯಂತೆ ಭಾಸವಾಗುತ್ತಿದೆ ಎಂದು ಭಾವೋದ್ವೇಗದಿಂದ ನುಡಿದರು.

ಇಥಿಯೋಪಿಯದ ಈ ಮಹಾನ್ ಕಟ್ಟಡ ಪ್ರಜಾಪ್ರಭುತ್ವದ ದೇವಾಲಯ. ಇಲ್ಲಿ ಜನರ ಇಚ್ಛೆಯು ರಾಜ್ಯದ ನೀತಿಯಾಗುತ್ತದೆ ಎಂದು ಬಣ್ಣಿಸಿದರು. ಪ್ರಜಾಪ್ರಭುತ್ವದ ದೇವಾಲಯಕ್ಕೆ ಬರುವುದು ನನಗೆ ಹೆಮ್ಮೆಯ ವಿಷಯ. ಇಲ್ಲಿಗೆ ಬರುವಾಗ ನಾನು ಭಾರತದ ಸಮಸ್ತ ಜನರ ಸ್ನೇಹ, ಸದ್ಭಾವನೆ ಮತ್ತು ಸೋದರತ್ವದ ಶುಭಾಶಯಗಳನ್ನು ಹೊತ್ತು ತಂದಿರುವೆ. ಅವನ್ನು ಇಥಿಯೋಪಿಯ ಜನರಿಗೆ ಸಲ್ಲಿಸಲು ಬಯಸುವೆ ಎಂದು ಭಾವುಕವಾಗಿ ಮಾತನಾಡಿದರು. ಭಾರತ ಮತ್ತು ಇಥಿಯೋಪಿಯಾ ನಡುವಿನ ಸ್ನೇಹದ ಚಿರಸ್ಥಾಯಿ. ಸಮಾನ ರೀತಿಯ ಸಾಂಸ್ಕೃತಿಕ ಪರಂಪರೆಯನ್ನು ನಮ್ಮೆರಡೂ ದೇಶಗಳು ಹಂಚಿಕೊಂಡಿವೆ ಎಂದರು.

> ಭಾರತದ ದೇಶ ಭಕ್ತಿಗೀತೆ 'ವಂದೇ ಮಾತರಂ' ಮತ್ತು ಇಥಿಯೋಪಿಯದ ರಾಷ್ಟ್ರಗೀತೆ ಎರಡೂ ತಾಯಿ ಕುರಿತೇ ಇವೆ. ನಾವು ಅಡಿಸ್ ಅಬಾಬಾದಲ್ಲಿರಲಿ, ಅಯೋಧ್ಯೆಯಲ್ಲೇ ಇರಲಿ, ನಮ್ಮ ನಾಗರಿಕತೆಗಳು ರಾಜಕೀಯ-ಗಡಿಗಳನ್ನು ಮೀರಿದ್ದಾಗಿವೆ. ನಾಗರಿಕತೆಗಳ ನಡುವೆ ಸೇತುವೆಗಳನ್ನು ನಿರ್ಮಿಸುವ ಮತ್ತು ನಮ್ಮ ಸಂಬಂಧಗಳನ್ನು ಹೊಸ ಯುಗಕ್ಕೆ ಕೊಂಡೊಯ್ಯುವ ಸಾಮಾನ್ಯ ಬೇರುಗಳನ್ನು ಹೊಂದಿವೆ.
>
> -ನರೇಂದ್ರ ಮೋದಿ ಪ್ರಧಾನಿ

ಶಿಷ್ಟಾಚಾರ ಬದಿಗಿರಿಸಿ ಪ್ರೀತಿ-ವಿಶ್ವಾಸ ಆದ್ಯತೆ

ಪ್ರಧಾನಿ ಮೋದಿ ಅವರನ್ನು ಇಥಿಯೋಪಿಯನ್ ರಾಷ್ಟ್ರೀಯ ಅರಮನೆಯಲ್ಲಿ ಔಪಚಾರಿಕವಾಗಿ ಸ್ವಾಗತಿಸಿದ ಪ್ರಧಾನಿ ಅಬಿ ಅಹ್ಮದ್ ಅಲಿ ಅವರು, ಅತಿಥಿ ಮೋದಿ ಅವರನ್ನು ಬೀಳ್ಕೊಡುವಾಗ ಎಲ್ಲಾ ಶಿಷ್ಟಾಚಾರಗಳನ್ನು ಬದಿಗಿರಿಸಿದ್ದು,ತಾವೇ ಖುದ್ದು ಕಾರು ಚಲಾಯಿಸಿಕೊಂಡು, ಪಕ್ಕದ ಆಸನದಲ್ಲೇ ಮೋದಿ ಅವರನ್ನು ಕೂರಿಸಿಕೊಂಡು ಮಾತುಕತೆ ನಡೆಸುತ್ತಲೇ ವಿಮಾನ ನಿಲ್ದಾಣದವರೆಗೂ ಕರೆದೊಯ್ದು ಬಿಟ್ಟರು. ಅಷ್ಟೇ ಅಲ್ಲದೇ, ಮೋದಿ ಅವರು ವಿಮಾನವೇರಿ ಒಳಕ್ಕೆ ತೆರಳುವವರೆಗೂ ವಿಮಾನ ಮೆಟ್ಟಿಲುಗಳ ಬಳಿಯೇ ನಿಂತಿದ್ದು, ಕೈಮುಗಿದು ನಮಸ್ಕರಿಸಿ ವಿದಾಯ ಹೇಳಿದರು. ಈ ಸಂದರ್ಭದ ವಿಡಿಯೊ ಭಾರೀ ವೈರಲ್ ಆಗಿದೆ. ಇಥಿಯೋಪಿಯ ಪ್ರಧಾನಿಯ ಪ್ರೀತಿಪೂರ್ವಕ ನಡೆನುಡಿಗೆ, ಆತಿಥ್ಯಕ್ಕೆ ಪ್ರಧಾನಿ ಮೋದಿ ಭಾವುಕರಾಗಿ ಹೃತ್ಪೂರ್ವಕ ಧನ್ಯವಾದ ತಿಳಿಸಿದ್ದಾರೆ.

ಒಪ್ಪಂದ: ಇದಕ್ಕೂ ಮುನ್ನ ಪ್ರಧಾನಿ ಮೋದಿ ಮತ್ತು ಅಬಿ ಅಹಮ್ಮದ್ ಅಲಿ ದ್ವಿಪಕ್ಷೀಯ ಸಭೆ ನಡೆಸಿ, ಕೃತಕ ಬುದ್ಧಿಮತ್ತೆ(ಎಐ) ಕ್ಷೇತ್ರದಲ್ಲಿ ನೆರವು, ರಕ್ಷಣಾ ವಲಯದಲ್ಲಿ ಸಹಕಾರ, ಸೇನಾ ಸಹಕಾರ, ಸೈಬರ್ ಸೆಕ್ಯುರಿಟಿ ಮೊದಲಾದ ಕ್ಷೇತ್ರಗಳಲ್ಲಿ ಇಥಿಯೊಪಿಯಾಗೆ ಸಹಕಾರ ನೀಡುವ, ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಭಾರತ ನೆರವು ನೀಡುವ, ಇಥಿಯೋಪಿಯಾದ ಸಾಮರ್ಥ್ಯ ವೃದ್ಧಿಗೆ ನೆರವಾಗುವುದು ಮೊದಲಾದ ಒಪ್ಪಂದಗಳಿಗೆ ಭಾರತ ಮತ್ತು ಇಥಿಯೋಪಿಯ ದೇಶಗಳು ಸಹಿ ಹಾಕಿವೆ. ಆಡಿಸ್ ಅಬಾಬಾದಿಂದ ಒಮಾನ್ ದೇಶಕ್ಕೆ ಮೋದಿ ಪ್ರಯಾಣ ಬೆಳೆಸಿದರು.

ವಂದೇ ಮಾತರಂ ಗೀತೆಗೆ ಮೋದಿ ಹರ್ಷ-ಚಪ್ಪಾಳೆ

ಇಥಿಯೋಪಿಯ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಗೌರವಾರ್ಥ ಪ್ರಧಾನಿ ಅಬಿ ಅಹ್ಮದ್ ಅಲಿ ಮಂಗಳವಾರ ಸಂಜೆ ಆಯೋಜಿಸಿದ್ದ ವಿಶೇಷ ಔತಣಕೂಟದಲ್ಲಿ ಇಥಿಯೋಪಿಯ ಗಾಯಕರ ಗಾಯನವೂ ಇತ್ತು. ವಿದೇಶಿಯ ಕಂಠದಲ್ಲಿ ಹರಿದುಬಂದ 'ವಂದೇ ಮಾತರಂ' ಗಾಯನ ಕೇಳುತ್ತಲೇ ಪ್ರಧಾನಿ ಮೋದಿ ಖುಷಿಪಟ್ಟು ಉತ್ಸಾಹದಿಂದ ಚಪ್ಪಾಳೆ ತಟ್ಟಲಾರಂಭಿಸಿದರು. ಪ್ರಧಾನಿ ಅಲಿ ಸೇರಿದಂತೆ ಇತರೆ ಗಣ್ಯರೂ ಮೋದಿ ಜತೆಗೂಡಿ ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸೇಡಿನ ರಾಜಕಾರಣದ ಮೋದಿ, ಶಾ ರಾಜೀನಾಮೆ ನೀಡಲಿ: ಖರ್ಗೆ

ನ್ಯಾಷನಲ್ ಹೆರಾಲ್ಡ್ ಕೇಸ್‌ನಲ್ಲಿ ಇ.ಡಿ.ಗೆ ಹಿನ್ನಡೆ

ದೆಹಲಿ: 'ನ್ಯಾಷನಲ್ ಹೆರಾಲ್ಡ್' ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ) ಸಲ್ಲಿಸಿದ ದೋಷಾರೋಪಣಾ ಪಟ್ಟಿಯನ್ನು ಪರಿಗಣಿಸಲು ದೆಹಲಿಯ ರೋಸ್ ಅವಿನ್ಯೂ ವಿಶೇಷ ನ್ಯಾಯಾಲಯ ನಿರಾಕರಿಸಿರುವುದನ್ನು ಸ್ವಾಗತಿಸಿರುವ ಕಾಂಗ್ರೆಸ್, ದ್ವೇಷದ ರಾಜಕೀಯ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಗೃಹ ಸಚಿವ ಅಮಿತ್ ಶಾ, ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ದೆಹಲಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಖರ್ಗೆ, ಸೋನಿಯಾ ಗಾಂಧಿ ಮತ್ತು ಅವರ ಕುಟುಂಬಕ್ಕೆ ಕಿರುಕುಳ ನೀಡುವುದು ಮತ್ತು ಪ್ರತಿಪಕ್ಷಗಳನ್ನು ಗುರಿಯಾಗಿಸಿ ಹಿಂಸಿಸುವುದೇ ನ್ಯಾಷನಲ್ ಹೆರಾಲ್ಡ್ ಪ್ರಕರಣದ ಉದ್ದೇಶವಾಗಿತ್ತು. ಇದು ಆಡಳಿತ ಪಕ್ಷ ಬಿಜೆಪಿಯ ಸೇಡಿನ ರಾಜಕಾರಣವಾಗಿದೆ. ಕೇಂದ್ರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಟೀಕಿಸಿದ್ದಾರೆ.

ಇದು ಬಿಜೆಪಿಯ ಸೇಡಿನ ರಾಜಕೀಯ. ಪ್ರತಿಪಕ್ಷಗಳ ನಾಯಕರನ್ನು ಸದಾ ಗುರಿಯಾಗಿಸಿಕೊಂಡು ತನಿಖೆಗಳ ಹೆಸರಲ್ಲಿ ಕಿರುಕುಳ ನೀಡುತ್ತಿರುವ ಬಿಜೆಪಿ ವಿರುದ್ಧ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಿಟ್ಟಾಗಿದ್ದಾರೆ. ದೇಶಾದ್ಯಂತ ಪ್ರತಿಭಟನೆಗಿಳಿದಿದ್ದಾರೆ ಎಂದು ಕಾಂಗ್ರೆಸ್

ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಮಲ್ಲಿಕಾರ್ಜುನ ಖರ್ಗೆ, ವೇಣುಗೋಪಾಲ್.

ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಕಿಡಿಕಾರಿದರು.

ಹಿನ್ನೆಲೆ: ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕಟಿಸುವ 'ಅಸೋಸಿಯೇಟೆಡ್ ಜರ್ನಲ್ಸ್ ಲಿ.'ಗೆ ಸೇರಿದ 2,000 ಕೋಟಿ ರು. ಬೆಲೆಯ ಆಸ್ತಿಗಳನ್ನು ಕಡಿಮೆ ಬೆಲೆಗೆ ಅಕ್ರಮವಾಗಿ ಗಾಂಧಿ ಕುಟುಂಬ ವರ್ಗಾಯಿಸಿಕೊಂಡಿದೆ. ಅಕ್ರಮ ಹಣ ವರ್ಗಾವಣೆ ಆಗಿದೆ ಎಂದು ಆರೋಪಿಸಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ದಿ. ಮೋತಿಲಾಲ್ ವೋರಾ, ದಿ.ಆಸ್ಕರ್ ಫರ್ನಾಂಡಿಸ್, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ ಮತ್ತು ಯಂಗ್ ಇಂಡಿಯನ್ ಕಂಪನಿ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿದೆ.

ಭಾರತೀಯ ಸೇನಾಪಡೆ ಮತ್ತಷ್ಟು ಬಲಿಷ್ಠ

'ಅಪಾಚೆ ಎಎಚ್-64ಇ' ಸಮರ ಹೆಲಿಕಾಪ್ಟರ್‌ಗಳ 2ನೇ ತಂಡ (3 ಕಾಪ್ಟರ್‌ಗಳು) ಅಮೆರಿಕ ವಾಯುಪಡೆಯ ಆಂಟೊನೋವಾ ಎಎನ್-124 ಬೃಹತ್ ಸರಕುಸಾಗಣೆ ವಿಮಾನದಲ್ಲಿ ಭಾರತಕ್ಕೆ ಮಂಗಳವಾರ ಬಂದಿಳಿದಿವೆ. ರಾಜಸ್ಥಾನದ ಜೋದ್‌ಪುರದಲ್ಲಿ ಮುಂದಿನ ವಾರ ಭಾರತೀಯ ಸೇನಾಪಡೆಯ '451 ಆರ್ಮಿ ಏವಿಯೇಷನ್ ಸ್ಕ್ವಾಡ್ರನ್'ಗೆ ಸೇರ್ಪಡೆ ಆಗಲಿವೆ. ಜಾಗತಿಕ ಮಟ್ಟದಲ್ಲಿ ಅತ್ಯಂತ ಶಕ್ತಿಶಾಲಿ ಯುದ್ಧ ಹೆಲಿಕಾಪ್ಟರ್ ಎನಿಸಿಕೊಂಡಿರುವ 'ಅಪಾಚೆ ಎಎಚ್-64ಇ'ಗೆ ಹತ್ತಾರು ಶಸ್ತ್ರಾಸ್ತ್ರಗಳನ್ನು ಜೋಡಿಸಲಾಗಿರುತ್ತದೆ. 'ಹೆಲ್‌ಫೈರ್' ಕ್ಷಿಪಣಿಗಳು, 70 ಎಂಎಂ ಹೈಡ್ರೊರಾಕೆಟ್‌ಗಳು, 'ಸ್ಟಿಂಗರ್ ಮಿಸೈಲ್ಸ್', 1200 ಸಿಡಿಗುಂಡುಗಳ ಸರಣಿಯ 30 ಎಂಎಂ ಚೈನ್‌ಗನ್, ಶತ್ರು ವಿಮಾನ, ಟ್ಯಾಂಕ್, ಹೆಲಿಕಾಪ್ಟರ್‌ಗಳತ್ತ ನಿಖರ ಗುರಿ ಇಡಬಲ್ಲ 'ನೋಸ್ ಸೆನ್ಸರ್' ಮತ್ತು ಕಗ್ಗತ್ತಲಲ್ಲೂ ಸರಾಗವಾಗಿ ಸಾಗಲು, ಶತ್ರುಗಳನ್ನುಗುರುತಿಸಲು ನೈಟ್ ವಿಷನ್ ಕ್ಯಾಮೆರಾ ಜೋಡಣೆ ಆಗಿವೆ.

252 ಕಿಮೀ ವೇಗದಲ್ಲಿ ಲೊಂಬೋರ್ಗಿನಿ ಚಾಲನೆ

ಕಾರು ಪೊಲೀಸ್ ವಶಕ್ಕೆ | ಚಾಲಕ ಫಯಾಜ್ ಅದನ್ವಾಲಾ ವಿರುದ್ಧ ಪ್ರಕರಣ



ಮುಂಬೈ: ಮಹಾರಾಷ್ಟ್ರದ ಕಡಲ ತೀರದ ವಾಣಿಜ್ಯ ನಗರಿ ಮುಂಬೈನಲ್ಲಿ ಬಾಂದ್ರಾ-ವರ್ಲಿ ಸೀಲಿಂಕ್ ರಸ್ತೆಯಲ್ಲಿ ಬುಧವಾರ ಬೆಳಗ್ಗೆ ಗಂಟೆಗೆ 252 ಕಿಮೀ ವೇಗದಲ್ಲಿ ಲೊಂಬೋರ್ಗಿನಿ ಕಾರು ಚಲಾಯಿಸಿದ ಚಾಲಕ ಫಯಾಜ್ ಅದನ್ವಾಲಾ(36) ವಿರುದ್ಧ ಅಪರಾಧ ಪ್ರಕರಣ ದಾಖಲಾಗಿದೆ. ಜತೆಗೆ ಬಹುಕೋಟಿ ರು. ಬೆಲೆ ಬಾಳುವ ಗಾಢ ಹಳದಿ ವರ್ಣದ ಹೊಸ ಲೊಂಬೋರ್ಗಿನಿ ಕಾರನ್ನೂ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಬಾಂದ್ರಾ-ವರ್ಲಿ ಸೀಲಿಂಕ್ ರಸ್ತೆಯಲ್ಲಿ ವಾಹನಗಳ ವೇಗವನ್ನು ಗಂಟೆಗೆ 80 ಕಿಮೀಗೆ ಮಿತಿಗೊಳಿಸಲಾಗಿದೆ. ಆದರೆ, ಗಂಟೆಗೆ 235ರಿಂದ 252 ಕಿಮೀಗಳಷ್ಟು ವೇಗದಲ್ಲಿ ಕಾರು ಸಂಚರಿಸಿದ್ದು, ಅತಿವೇಗ ಮತ್ತು ನಿರ್ಲಕ್ಷ್ಯದ ಚಾಲನೆ ಎಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ.

ಕಾರು ಗುಜರಾತ್‌ನ ಅಹಮದಾಬಾದ್ ನಿವಾಸಿ ನೀರವ್ ಪಟೇಲ್ ಎಂಬವರ ಒಡೆತನಕ್ಕೆ ಸೇರಿದ್ದು, 'ಸೂಪರ್ ವೆಲ್ ಕಾಮ್ ಟ್ರೇಡ್ ಪ್ರೈ.ಲಿ.' ಹೆಸರಿನಲ್ಲಿ ಹರಿಯಾಣ ರಾಜ್ಯದ 'ಆರ್‌ಟಿಒ'ದಲ್ಲಿ ನೋಂದಣಿ(ಸಂಖ್ಯೆ ಎಚ್‌ಆರ್ 70- ಎಫ್1945) ಆಗಿದೆ.

'ಕಾರನ್ನು ಕೆಲ ಕಾಲ ಬಳಸಲು ಫಯಾಜ್ ಅದನ್ವಾಲಾಗೆ ಕೊಟ್ಟಿದ್ದೆ' ಎಂದು ನೀರವ್ ಪೊಲೀಸರಿಗೆ ತಿಳಿಸಿದ್ದಾರೆ. ಕಾರು ಮಾಲೀಕನ ವಿರುದ್ಧವೂ ಕಾನೂನು ಕ್ರಮ ಜರುಗಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಬೆಂಗಳೂರಿಂದ ಮೈಸೂರು: ಗಂಟೆಗೆ 252 ಕಿಮೀ ವೇಗದಲ್ಲಿ ಕಾರು ಚಲಿಸುವುದೆಂದರೆ, ಪ್ರತಿನಿಮಿಷಕ್ಕೆ 4.2 ಕಿಮೀ ವೇಗದಲ್ಲಿ ಸಾಗಿ ಬೆಂಗಳೂರಿನ ಬಾಪೂಜಿ ನಗರದಲ್ಲಿನ 'ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ'ದಿಂದ ಮೈಸೂರಿನ ಕೃಷ್ಣರಾಜವೃತ್ತದ ಬಳಿ ಇರುವ 'ನಗರ ಸಾರಿಗೆ ಬಸ್ ನಿಲ್ದಾಣ'ಕ್ಕೆ(139 ಕಿಮೀ) ಕೇವಲ 33 ನಿಮಿಷ 3 ಸೆಕೆಂಡ್‌ಗಳಲ್ಲಿ ತಲುಪಿದಂತೆ!

ಸುಡಾನ್‌ನಲ್ಲಿ ಒತ್ತೆಯಾಳಾಗಿದ್ದ ಬೆಹೆರಾ

45 ದಿನಗಳ ಕಾಲ ನರಕ ಅನುಭವಿಸಿದ ಒಡಿಶಾದ ಕಾರ್ಮಿಕನ ಕಥೆ-ವ್ಯಥೆ

ಭುವನೇಶ್ವರ: ಆಫ್ರಿಕಾ ಖಂಡದಲ್ಲಿ ಬಡತನ, ಹಸಿವು, ಅರಾಜಕತೆಯಿಂದ ಕೂಡಿರುವ ದೇಶ ಸುಡಾನ್‌ನಲ್ಲಿ ಕೆಲವು ವರ್ಷಗಳಿಂದ ಆಂತರಿಕ ಯುದ್ಧ ನಡೆಯುತ್ತಿದೆ. ಇಂಥ ದೇಶದಲ್ಲಿನ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಮೆಕಾನಿಕ್ ಕೆಲಸಕ್ಕೆ ತೆರಳಿದ್ದ ಭಾರತದ ಒಡಿಶಾ ರಾಜ್ಯದ 36 ವರ್ಷದ ಆದರ್ಶ್ ಬೆಹೆರಾ ಎರಡು ತಿಂಗಳ ಹಿಂದೆ ಅಪಹರಣಕ್ಕೊಳಗಾದರು.

ಆದರ್ಶ್ ಬೆಹೆರಾಗೆ ಕುಟುಂಬದ ಸ್ವಾಗತ

2022ರಲ್ಲಿ ಸೂಡಾನ್ ದೇಶದ ಪ್ಲಾಸ್ಟಿಕ್ ಫ್ಯಾಕ್ಟರಿಗೆ ಮೆಕಾನಿಕ್ ಕೆಲಸಕ್ಕೆಂದು ತೆರಳಿದ್ದ ಬೆಹೆರಾ, ಅಲ್ಲಿನ ನಾರ್ಥ್ ದರ್ಫುರ್ ರಾಜ್ಯದ ಅಲ್ ಫಷಿರ್ ನಗರದಿಂದ ಅಕ್ಟೋಬರ್ ಮಾಸಾಂತ್ಯದಲ್ಲಿ ಅಪಹರಣಕ್ಕೆ ಒಳಗಾಗಿದ್ದರು. 'ರ್‍ಯಾಪಿಡ್ ಸಪೋರ್ಟ್ ಫೋರ್ಸ್' (ಆರ್‌ಎಸ್‌ಎಫ್) ಬಂಡುಕೋರ ಸಂಘಟನೆ ಬೆಹೆರಾರನ್ನು ಅಪಹರಿಸಿ 45 ದಿನಗಳ ಕಾಲ ಒತ್ತೆಯಾಳಾಗಿರಿಸಿಕೊಂಡಿತ್ತು. ಬೆಹೆರಾ ಒಂದೂವರೆ ತಿಂಗಳು ಕತ್ತಲೆ ಕೋಣೆಯಲ್ಲಿದ್ದು, ಅರೆಹೊಟ್ಟೆಯಲ್ಲಿ ನರಳಿ ಸಾಕ್ಷಾತ್ ನರಕವನ್ನೇ ಅನುಭವಿಸಿದ್ದಾರೆ.

ಸತ್ತು ಮತ್ತೆ ಹುಟ್ಟಿಬಂದೆ

ಊರಿಗೆ ಮರಳಿದ ಬಳಿಕ ಬೆಹೆರಾ, ಪೋಷಕರು, ಪತ್ನಿ, 3 ವರ್ಷದ ಮಗುವಿನೆದುರು ಆನಂದಬಾಷ್ಪ ಸುರಿಸಿದ್ದಾರೆ. 'ಊರಿಗೆ ಜೀವಂತ ಬರುವ ಆಸೆಯನ್ನೇ ತೊರೆದಿದ್ದೆ. ಒಮ್ಮೆ ಸತ್ತು ಮತ್ತೆ ಹುಟ್ಟಿ ಬಂದಂತಾಗಿದೆ' ಎನ್ನುತ್ತಾ ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದಾರೆ. ವಿದೇಶಕ್ಕೆ ಉದ್ಯೋಗ ಅರಸಿ ಹೋಗಲು ಹಂಬಲಿಸುವವರಿಗೆ ಬೆಹೆರಾ ಕಥೆ ಎಚ್ಚರಿಕೆ ಗಂಟೆಯಾಗಲಿದೆ.

ರಾಜ್ಯ ಸರಕಾರ ಮತ್ತು ಕೇಂದ್ರದ ವಿದೇಶಾಂಗ ಸಚಿವಾಲಯ ಹಾಗೂ ಸೂಡಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳ ಹಲವು ದಿನಗಳ ಪರಿಶ್ರಮಕ್ಕೆ ಕಡೆಗೂ ಫಲ ಸಿಕ್ಕಿದೆ. ಸೂಡಾನ್‌ನ ಹಲವು ಮಧ್ಯವರ್ತಿಗಳ ಸಂಧಾನದ ಫಲವಾಗಿ ಬೆಹೆರಾರನ್ನು ಅಪಹರಣಕಾರರ ಬಿಗಿ ಹಿಡಿತದಿಂದ ಬಿಡಿಸಿ ತವರೂರಿಗೆ ಸುರಕ್ಷಿತವಾಗಿ ಕರೆತರಲು ಸಾಧ್ಯವಾಗಿದೆ. ರಾಜ್ಯದ ಪ್ರಜೆ ಸುರಕ್ಷಿತವಾಗಿ ಊರಿಗೆ (ಜಗತ್‌ಸಿಂಗ್‌ಪುರ್ ಜಿಲ್ಲೆಯ ಕೋಟಕಾನಾ ಗ್ರಾಮ) ವಾಪಸಾಗಿದ್ದಕ್ಕೆ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಹರ್ಷ ವ್ಯಕ್ತಪಡಿಸಿದ್ದಾರೆ. ವಿದೇಶಾಂಗ ಸಚಿವಾಲಯಕ್ಕೆ ಧನ್ಯವಾದ ಹೇಳಿದ್ದಾರೆ.

ಬಂಧಿತರೆಲ್ಲಾ ಛತ್ತೀಸ್‌ಗಢದಿಂದ ಬಂದವರು

ತೆಲಂಗಾಣ: ಹದಿನಾರು ನಕ್ಸಲರ ಬಂಧನ

ನಕ್ಸಲ್ ದಮನ ಕಾರ್ಯಾಚರಣೆ ಕಾರಣ ಸ್ಥಳಾಂತರ | ಶಸ್ತ್ರಾಸ್ತ್ರಗಳ ವಶಕ್ಕೆ

ಹೈದರಾಬಾದ್: ತೆಲಂಗಾಣದ ಕುಮುರಾಮ್ ಭೀಮ್ ಆಸಿಫಾಬಾದ್ ಜಿಲ್ಲೆಯಲ್ಲಿ 9 ಮಹಿಳೆಯರು ಸೇರಿದಂತೆ 16 ನಕ್ಸಲರ ಬಂಧನವಾಗಿದೆ.

ಆಸಿಫಾಬಾದ್ ಜಿಲ್ಲೆಯಲ್ಲಿ ಬಹಳ ದಿನಗಳ ಬಳಿಕ ಮಾವೋವಾದಿ ಚಟುವಟಿಕೆಗಳು ಬೆಳಕಿಗೆ ಬಂದಿದ್ದು, ತಕ್ಷಣವೇ ಕಾರ್ಯಪ್ರವೃತ್ತರಾದ ಆಸಿಫಾಬಾದ್‌ನ ಎಎಸ್‌ಪಿ ಶ್ರೀರಾಮೋಜು ಚಿತ್ತರಂಜನ್ ನೇತೃತ್ವದ ಪೊಲೀಸ್ ತಂಡ ಮಂಗಳವಾರ ಸಿರ್ಪುರ(ಯು) ಮಂಡಲದ ಪೆಡಲ್‌ಡೋಬಾ ಗ್ರಾಮದಲ್ಲಿ ಕಾರ್ಯಾಚರಣೆ ನಡೆಸಿ ಗುಡಿಸಲೊಂದರಲ್ಲಿ ಅಡಗಿದ್ದ 16 ಮಾವೋವಾದಿಗಳನ್ನು ಬಂಧಿಸಿದೆ. ಬಂಧಿತ ನಕ್ಸಲರ ಬಳಿ ಇದ್ದ ಎಕೆ-47 ಸೇರಿದಂತೆ ಹಲವು ಬಂದೂಕುಗಳು ಮತ್ತಿತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.



ತೆಲಂಗಾಣ ಎಎಸ್‌ಪಿ ಚಿತ್ತರಂಜನ್

ತೆಲಂಗಾಣ ಭಾಗದ ಮಾವೋವಾದಿ ಪಕ್ಷದ ಕಾರ್ಯದರ್ಶಿ ಬಡೇ ಚೊಕ್ಕರಾವ್(ದಾಮೋದರ್) ಕೂಡ ಬಂಧಿತರಲ್ಲಿ ಸೇರಿದ್ದಾರೆ ಎಂಬ ಮಾಹಿತಿ ಇದೆ. ಆದರೆ, ಪೊಲೀಸರು ಬುಧವಾರ ಮಧ್ಯಾಹ್ನದವರೆಗೂ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಬಂಧಿತ ನಕ್ಸಲರು ಛತ್ತೀಸ್‌ಗಢ ಮೂಲದವರಾಗಿದ್ದು, ಆ ರಾಜ್ಯದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ತೀವ್ರಗೊಂಡಿದ್ದರಿಂದ ಹೈದರಾಬಾದ್‌ಗಗೆ ಸ್ಥಳಾಂತರಗೊಂಡಿದ್ದರು. ಬಂಧಿತ 16 ನಕ್ಸಲರೂ ನಿಷೇಧಿತ ಮಾವೋವಾದಿ ಸಂಘಟನೆಯ ಭಾಗವಾಗಿದ್ದು, ಛತ್ತೀಸ್‌ಗಢ, ಒಡಿಶಾ ಮತ್ತು ತೆಲಂಗಾಣ ರಾಜ್ಯ ಸಮಿತಿಗಳಲ್ಲಿ ಗುರುತಿಸಿಕೊಂಡಿದ್ದರು. ಕೆಲವೇ ದಿನಗಳ ಹಿಂದೆಯಷ್ಟೇ ಆಸಿಫಾಬಾದ್ ತಲುಪಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಛತ್ತೀಸ್‌ಗಢದಲ್ಲಿ 34 ನಕ್ಸಲರು ಶರಣು

ಛತ್ತೀಸ್‌ಗಢ ರಾಜ್ಯದಲ್ಲಿ ಬಿಜಾಪುರ ಎಸ್‌ಪಿ ಜಿತೇಂದ್ರ ಕುಮಾರ್ ಎದುರು 7 ಮಹಿಳಾ ನಕ್ಸಲರು ಸೇರಿದಂತೆ 34 ಮಾವೋವಾದಿಗಳು ಮಂಗಳವಾರ ಶರಣಾಗಿದ್ದಾರೆ. ಅವರಲ್ಲಿ ಕೆಲವರ ಬಂಧನಕ್ಕೆ ಸಹಕರಿಸಿದವರಿಗೆ, ಮಾಹಿತಿ ನೀಡಿದವರಿಗೆ ಒಟ್ಟು 84 ಲಕ್ಷ ರು. ಬಹುಮಾನ ನೀಡುವುದಾಗಿ ರಾಜ್ಯ ಸರಕಾರ ಈ ಹಿಂದೆ ಘೋಷಿಸಿತ್ತು. ಶರಣಾಗತರಲ್ಲಿ ತೆಲಂಗಾಣ ರಾಜ್ಯ ಸಮಿತಿ, ಆಂಧ್ರ-ಒಡಿಶಾ ಗಡಿ(ಎಒಬಿ) ವಿಭಾಗೀಯ ಸಮಿತಿ, ದಕ್ಷಿಣ ಉಪ-ವಲಯ ಬ್ಯೂರೊ, ಕೇರಳಪಾಲ್ ಪ್ರದೇಶ ಸಮಿತಿ, ಪಿಎಲ್‌ಜಿಎ ಕಂಪೆನಿ, ಆರ್‌ಪಿಸಿ ಕಮಾಂಡರ್ ಮತ್ತು ಪ್ಲಟೂನ್ ಸದಸ್ಯರೂ ಇದ್ದಾರೆ ಎಂದು ಎಸ್‌ಪಿ ಜಿತೇಂದ್ರ ಸುದ್ದಿಸಂಸ್ಥೆಗೆ ವಿವರ ನೀಡಿದ್ದಾರೆ.

ವಿವಿಧ ದೇಶಗಳಿಂದ ಈವರೆಗೆ 28 ಪ್ರಶಸ್ತಿ

ಇಥಿಯೊಪಿಯ ಅತ್ಯುನ್ನತ ನಾಗರಿಕ ಗೌರವ ಪ್ರಧಾನಿ ಮೋದಿಗೆ ಪ್ರದಾನ

ಅಡಿಸ್‌ಅಬಾಬಾ: ಮೂರು ದೇಶಗಳಲ್ಲಿ ನಾಲ್ಕು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಥಿಯೋಪಿಯ ದೇಶಕ್ಕೆ ಭೇಟಿ ನೀಡಿದ್ದಾರೆ. ಈ ಸಂದರ್ಭ ಇಥಿಯೋಪಿಯ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಗ್ರೇಟ್ ಹಾನರ್ ನಿಶಾನ್ ಆಫ್ ಇಥಿಯೋಪಿಯ'ವನ್ನು ಮೋದಿ ಅವರಿಗೆ ಪ್ರದಾನ ಮಾಡಲಾಗಿದೆ. ಇದು ವಿವಿಧ ದೇಶಗಳಿಂದ ಪ್ರಧಾನಿ ಮೋದಿ ಅವರಿಗೆ ಸಂದಿರುವ 28ನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ.

ಇಥಿಯೋಪಿಯ ಪ್ರಧಾನಿ ಅಬಿಯ್ ಅಹಮದ್ ಅಲಿ ಅವರು ಮೋದಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಈ ಪ್ರಶಸ್ತಿ ನನ್ನ ದೇಶದ 140 ಕೋಟಿ ಜನರಿಗೆ ಸಲ್ಲುತ್ತದೆ. ಪ್ರಶಸ್ತಿ ನೀಡಿದ್ದಕ್ಕಾಗಿ ಇಥಿಯೋಪಿಯಾ ದೇಶಕ್ಕೆ ಮತ್ತು ದೇಶವಾಸಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು ಎಂದು ಹೇಳಿದರು.

ಜಗತ್ತು ಈಗ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳನ್ನು ಎದುರಿಸುವ ಪ್ರಕ್ರಿಯೆಯಲ್ಲಿ ಇಥಿಯೋಪಿಯ ದೇಶದ ಜತೆಗೆ ಭಾರತ ಇರಲಿದೆ. ಎರಡೂ ದೇಶಗಳೂ ಜತೆಗೂಡಿ ಹೊಸ ಅವಕಾಶಗಳನ್ನೂ ಸೃಷ್ಟಿಸಿಕೊಳ್ಳಲಿವೆ ಎಂದರು.

ಒಪ್ಪಂದ: ಇದೇ ವೇಳೆ ಭಾರತ-ಇಥಿಯೋಪಿಯ ದೇಶಗಳು ಹಲವು ಒಪ್ಪಂದಗಳಿಗೆ ಸಹಿ ಹಾಕಿದವು. ಇಥಿಯೋಪಿಯದಲ್ಲಿ ಡೇಟಾ ಸೆಂಟರ್ ಆರಂಭ, ಜಿ-20

ಇಥಿಯೋಪಿಯ ಪ್ರಧಾನಿ ಅಬಿಯ್ ಅಹಮದ್ ಅಲಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಗ್ರೇಟ್ ಹಾನರ್ ನಿಶಾನ್ ಆಫ್ ಇಥಿಯೋಪಿಯ'ವನ್ನು ಪ್ರಧಾನಿ ಮೋದಿ ಅವರಿಗೆ ಪ್ರದಾನ ಮಾಡಿದರು.

ಕಾರ್ಯಸೂಚಿಯಡಿ ಹಳೆಯ ಸಾಲದ ಮರು ಹೊಂದಾಣಿಕೆ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಹಕಾರ, ಇಥಿಯೋಪಿಯ ವಿದ್ಯಾರ್ಥಿಗಳಿಗೆ ಐಸಿಸಿಆರ್ ವಿದ್ಯಾರ್ಥಿವೇತನ, ಕೃತಕ ಬುದ್ಧಿಮತ್ತೆ(ಎಐ) ಶಿಕ್ಷಣ ಒದಗಿಸುವುದು ಮೊದಲಾದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಸಮಾಚಾರ ಸಣ್ಣದಲ್ಲ

ಮಹಿಳಾ ಸ್ವ ಉದ್ಯೋಗ: ಸಾಲಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಆರ್ಥಿಕ ಸೌಲಭ್ಯ ಪಡೆದು ಸ್ವಂತ ಉದ್ಯೋಗ ಪ್ರಾರಂಭಿಸಲು ಅರ್ಹ ಮಹಿಳೆಯರಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಅರ್ಜಿ ಆಹ್ವಾನಿಸಿದೆ. ಬೆಂಗಳೂರು ನಗರ ಜಿಲ್ಲೆಯಿಂದ ಉದ್ಯೋಗಿನಿ ಯೋಜನೆಯಡಿ ಬಡತನಕ್ಕೆ ಸೇರಿದ ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು, ವಿಧವೆಯರು, ಅಂಗವಿಕಲರು, ಸಂಕಷ್ಟಕ್ಕೊಳಗಾದ ಮಹಿಳೆಯರು, ಅಲ್ಪಸಂಖ್ಯಾತರು, ಲಿಂಗತ್ವ ಅಲ್ಪಸಂಖ್ಯಾತ, ದಮನಿತ ಮಹಿಳೆಯರು, ಹೆಚ್‌ಐವಿ ಸೋಂಕಿತ ಮತ್ತು ಬಾಧಿತ ಮಹಿಳೆಯರಿಗೆ, ಚೇತನ ಯೋಜನೆಯಡಿ ದಮನಿತ ಮಹಿಳೆಯರು, ಲಿಂಗತ್ವ, ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರು ಮತ್ತು ಧನಶ್ರೀ ಯೋಜನೆಯಡಿ ಎಚ್‌ಐವಿ ಸೋಂಕಿತ ಮತ್ತು ಬಾಧಿತ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ಅರ್ಜಿಗಳನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ *https//sevasindhu.karnataka.gov.in* ಆನ್‌ಲೈನ್ ಮೂಲಕ ಅರ್ಜಿಗಳನ್ನು 2026, ಜನವರಿ 15ರೊಳಗಾಗಿ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆ ಬೆಂಗಳೂರು ನಗರ ಜಿಲ್ಲೆ. ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ನಗರ ಜಿಲ್ಲೆ ಮತ್ತು ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಂಪರ್ಕಿಸಬಹುದು ಎಂದು ಬೆಂಗಳೂರು ನಗರ ಜಿಲ್ಲೆ ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರ ತರಬೇತಿಗೆ ಅರ್ಜಿ ಅಹ್ವಾನ

ಬೆಂಗಳೂರು: ಆರು ತಿಂಗಳ ಅವಧಿಯ ರೆಗ್ಯುಲರ್ ಡಿಪ್ಲೋಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಜನವರಿಯಿಂದ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಬೆಂಗಳೂರು ಸಹಕಾರ ತರಬೇತಿ ಸಂಸ್ಥೆಯು ಪ್ರಾರಂಭಿಸುತ್ತಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ರಾಮನಗರ ಜಿಲ್ಲೆಗಳ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕನಿಷ್ಠ ಎಸ್.ಎಸ್.ಎಲ್.ಸಿ ಹಾಗೂ ಮೇಲ್ಪಟ್ಟ ವಿದ್ಯಾರ್ಹತೆಯುಳ್ಳ ಎಲ್ಲಾ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅವಕಾಶವಿರುತ್ತದೆ. ಪ್ರವೇಶ ಪಡೆಯುವ ಎಲ್ಲಾ ಸಾಮಾನ್ಯ ವರ್ಗಗಳ ಅಭ್ಯರ್ಥಿಗೆ ಮಾಸಿಕ 500 ರು. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ಮಾಸಿಕ 600 ರು. ಶಿಷ್ಯವೇತನ ನೀಡಲಾಗುವುದು. ಪುರುಷರಿಗೆ ವಸತಿ ಸೌಲಭ್ಯ ಲಭ್ಯವಿರುತ್ತದೆ. ಅರ್ಜಿ ಸಲ್ಲಿಸಲು ಡಿ. 31 ಕೊನೆಯ ದಿನವಾಗಿದೆ. ಅರ್ಜಿ ದೊರೆಯುವ ಸ್ಥಳ ಕೆ.ಐ.ಸಿ ಎಂ. 1/3, ಎರಡನೇ ಮಹಡಿ, ಮೂರನೇ ಮುಖ್ಯರಸ್ತೆ, ಕನ್ನಡ ಸಾಹಿತ್ಯ ಪರಿಷತ್ ಹಿಂಭಾಗ ಮಕ್ಕಳ ಕೂಟ ಹತ್ತಿರ, ಚಾಮರಾಜಪೇಟೆ, ಬೆಂಗಳೂರು 560018. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-35541407, 9449007661, 9036256781 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ರೈಲು ಲಗೇಜ್‌ಗೂ ಶುಲ್ಕ: ಸಚಿವ ಅಶ್ವಿನ್

ದೆಹಲಿ: ರೈಲು ಪ್ರಯಾಣಿಕರು ರೈಲು ಪ್ರಯಾಣದ ವೇಳೆಯೂ ನಿಗದಿತ ಪ್ರಮಾಣಕ್ಕಿಂತ ಅಧಿಕ ತೂಕದ ಲಗೇಜ್ ಕೊಂಡೊಯ್ದರೆ ಶುಲ್ಕ ಪಾವತಿಸಬೇಕಾಗುತ್ತದೆ

ಎಂದು ಲೋಕಸಭೆಯಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು. ವಿಮಾನ ನಿಲ್ದಾಣಗಳಲ್ಲಿ ಅನುಸರಿ ಸುತ್ತಿರುವ ಪದ್ಧತಿಯಂತೆಯೇ ರೈಲು ಪ್ರಯಾಣಿಕರಿಗೂ ಲಗೇಜ್ ನಿಯಮಗಳನ್ನು ರೈಲ್ವೆ ಇಲಾಖೆ ಜಾರಿಗೆ ತರುತ್ತದೆಯೇ? ಎಂದು ಸಂಸದ ವೇಮಿರೆಡ್ಡಿ ಪ್ರಭಾಕರ್ ರೆಡ್ಡಿ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದರು. ಪ್ರಸ್ತುತ ಪ್ರಯಾಣಿಕರು ತಮ್ಮೊಂದಿಗೆ ಕಂಪಾರ್ಟ್‌ಮೆಂಟ್‌ಗಳ ಒಳಗೆ ಲಗೇಜ್ ಕೊಂಡೊಯ್ಯಲು ವರ್ಗವಾರು ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗಿದೆ ಎಂದು ವೈಷ್ಣವ್ ತಿಳಿಸಿದರು. ಅದರಂತೆ ದ್ವಿತೀಯ ದರ್ಜೆಯ ಪ್ರಯಾಣಿ ಕರು 35 ಕೆ.ಜಿ ಲಗೇಜ್ ಉಚಿತವಾಗಿ ಸಾಗಿಸಬಹುದು. ಇನ್ನು ಶುಲ್ಕ ಪಾವತಿಸಿ ಗರಿಷ್ಠ 70 ಕೆ.ಜಿವರೆಗಿನ ಬ್ಯಾಗೇಜ್ ಕೊಂಡೊಯ್ಯಲು ಅವಕಾಶವಿದೆ. ಸ್ಲೀಪರ್ ದರ್ಜೆಯ ಪ್ರಯಾಣಿಕರು 40 ಕೆ.ಜಿವರೆಗೆ ಬ್ಯಾಗ್ ಉಚಿತವಾಗಿ ಸಾಗಿಸಬಹುದಾಗಿದ್ದು, ಶುಲ್ಕ ಪಾವತಿಸಿ ಗರಿಷ್ಠ 80 ಕೆ.ಜಿ ಲಗೇಜ್ ಕೊಂಡೊಯ್ಯಬಹುದು.

ಮಹಾರಾಷ್ಟ್ರ ಸಚಿವ ಕೊಕಾಟೆ ರಾಜೀನಾಮೆ

ಮುಂಬೈ: ನಾಸಿಕ್ ಅಪಾರ್ಟ್‌ಮೆಂಟ್ ಹಗರಣದಿಂದ ಮಹಾರಾಷ್ಟ್ರ ರಾಜ್ಯ ಕ್ರೀಡಾ ಸಚಿವ ಮಾಣಿಕ್ ರಾವ್ ಕೊಕಾಟೆ ಸಂಕಷ್ಟಕ್ಕೆ ಸಿಲುಕಿದ್ದು



ಕೊನೆಗೂ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ. ಪ್ರಕರಣ ಸಂಬಂಧ ನಾಸಿಕ್ ಸೆಷನ್ಸ್ ನ್ಯಾಯಾಲಯವು ಸಚಿವ ಮಾಣಿಕ್‌ರಾವ್ ಕೊಕಾಟೆ ವಿರುದ್ಧ ಬಂಧನ ವಾರಂಟ್ ಹೊರಡಿಸಿತ್ತು. 1995ರಲ್ಲಿ ನಡೆದಿದ್ದ ಪ್ರಕರಣ ಇದಾಗಿದೆ. ಈ ಪ್ರಕರಣದಲ್ಲಿ ಕೊಕಾಟೆಗೆ ಎರಡು ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು. ಅದರ ನಂತರ ನಾಸಿಕ್ ಸೆಷನ್ಸ್ ನ್ಯಾಯಾಲಯವು ಈಗ ಮಾಣಿಕ್‌ರಾವ್ ಕೊಕಾಟೆ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ. ನಾಸಿಕ್ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಕೊಕಾಟೆ ವಿರುದ್ಧ ವಾರಂಟ್ ಹೊರಡಿಸಿತ್ತು. ಕೊಕಾಟೆ ಕಥೆ ಸುಮಾರು 30 ವರ್ಷಗಳಿಂದ ನಡೆಯುತ್ತಿದ್ದು ಯಾವುದೇ ಕ್ಷಣದಲ್ಲಾದರೂ ಅವರ ಬಂಧನವಾಗಬಹುದು. ಮಾಣಿಕ್ ರಾವ್ ಕೊಕಾಟೆ ತಮ್ಮ ರಾಜೀನಾಮೆ ಪತ್ರವನ್ನು ಅಜಿತ್ ಪವಾರ್ ಅವರಿಗೆ ಸಲ್ಲಿಸಿದ್ದಾರೆ. ಸದ್ಯ ನಾಸಿಕ್ ಜಿಲ್ಲಾ ಸೆಷನ್ಸ್ ನ್ಯಾಯಾಲಯ ನೀಡಿದ ಆದೇಶಗಳ ವಿರುದ್ಧ ಕೊಕಾಟೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದು, ಹೈಕೋರ್ಟ್ ಶುಕ್ರವಾರ ತನ್ನ ಆದೇಶವನ್ನು ಪ್ರಕಟಿಸಲಿದೆ.

ಇ.ಡಿ ಕಿರುಕುಳ ಖಂಡಿಸಿ ಸುವರ್ಣಸೌಧದ ಎದುರು ಪ್ರತಿಭಟನೆ | ಸಿಎಂ, ಡಿಸಿಎಂ ಸೇರಿದಂತೆ ಸಚಿವ, ಶಾಸಕರು ಪ್ರತಿಭಟನೆಯಲ್ಲಿ ಭಾಗಿ

ಕೇಂದ್ರದ ವಿರುದ್ಧ ಬೆಳಗಾವಿಯಲ್ಲಿ ಕೈ ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ವಿರುದ್ಧ ಕೇಂದ್ರ ಸರಕಾರ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಬೆಳಗಾವಿ ಸುವರ್ಣಸೌಧದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರು.

ಕೇಂದ್ರೀಯ ಸ್ವಾಯತ್ತ ಸಂಸ್ಥೆಗಳನ್ನು ಬಳಸಿಕೊಂಡು ಪ್ರತಿಪಕ್ಷಗಳ ವಿರುದ್ಧ ಬಿಜೆಪಿ ದ್ವೇಷ ರಾಜಕಾರಣ ಮಾಡುತ್ತಿದೆ. ಕೇಂದ್ರ ಸರಕಾರದ ಈ ನಡೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾನಿ ಎಂದು ಕಾಂಗ್ರೆಸ್ ನಾಯಕರು ಪ್ರತಿಭಟನೆ ವೇಳೆ ವಾಗ್ದಾಳಿ ನಡೆಸಿದರು. ಇದರೊಂದಿಗೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇಡಿ ಸಲ್ಲಿಸಿದ ಆರೋಪ ಪಟ್ಟಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ ವಿಚಾರಣಾ ನ್ಯಾಯಾಲಯದ ತೀರ್ಮಾನವನ್ನು ಸ್ವಾಗತಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿ ದ್ವೇಷ ರಾಜಕಾರಣದಲ್ಲಿ ತೊಡಗಿದ್ದು, ಕಾಂಗ್ರೆಸ್ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಅಪಪ್ರಚಾರ ಮಾಡುತ್ತಿದೆ. ಬಿಜೆಪಿಯ ಈ ಕುತಂತ್ರಕ್ಕೆ ಉತ್ತರವಾಗಿ ನ್ಯಾಯಾಲಯದಲ್ಲಿ ನ್ಯಾಯ ದೊರೆತಿದೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಅಥವಾ ರಾಜ್ಯಗಳಾಗಲಿ, ಬಿಜೆಪಿ ಅಧಿಕಾರದಲ್ಲಿರುವ ಕಡೆಗಳೆಲ್ಲಾ ಕಾಂಗ್ರೆಸ್ ನವರನ್ನು ಗುರಿಯಾಗಿಸಿ, ಅವರನ್ನು ಅಪರಾಧಿಗಳಾಗಿ ಬಿಂಬಿಸಿ, ನ್ಯಾಯಾಲಯಕ್ಕೆ ಎಡತಾಕುವಂತೆ ಮಾಡುತ್ತಿದ್ದಾರೆ.



ಬೆಳಗಾವಿ ಸುವರ್ಣಸೌಧದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ. ಶಿವಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

> ಮನಮೋಹನ್ ಸಿಂಗ್ ಅವರು ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೇಶದ ಸಾಲ ಸುಮಾರು 53.11 ಲಕ್ಷ ಕೋಟಿ ಆಗಿತ್ತು. ಆದರೆ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಸಾಲದ ಮೊತ್ತ ಸುಮಾರು 2 ಲಕ್ಷ ಕೋಟಿಯನ್ನೂ ಮೀರಿದೆ
> – ಸಿದ್ದರಾಮಯ್ಯ

> ಕಾಂಗ್ರೆಸ್ ಭವನ ಟ್ರಸ್ಟ್ ಎಂದು ಬೆಂಗಳೂರಿನಲ್ಲಿದೆ. ಈ ಹಿಂದೆ ಮಲ್ಲಿಕಾರ್ಜುನ ಖರ್ಗೆ ಅವರು, ಕೆಪಿಸಿಸಿ ಅಧ್ಯಕ್ಷನಾಗಿರುವ ನಾನು, ಸಿಲ್‌ಪಿ ನಾಯಕರಾಗಿ ಸಿದ್ದರಾಮಯ್ಯ ಅವರು ಟ್ರಸ್ಟಿಯಾಗಿದ್ದಾರೆ. ಹಾಗೆಂದ ಮಾತ್ರಕ್ಕೆ ಇದು ನಮ್ಮ ಆಸ್ತಿ ಎನ್ನಲಾಗುವುದೇ?
> –ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

> ವಿಶೇಷ ನ್ಯಾಯಾಲಯ ಬಿಜೆಪಿಗೆ ಮಂಗಳಾರತಿ ಎತ್ತಿದೆ. ದ್ವೇಷ ರಾಜಕಾರಣಕ್ಕೆ ಇದು ಹಿಡಿದ ಕನ್ನಡಿಯಾಗಿದೆ. ಈ ಆರೋಪ ರಾಜಕೀಯ ಪ್ರೇರಿತ ಎಂಬುದು ಸ್ಪಷ್ಟ. ಇಡಿ, ಐಟಿ, ಸಿಬಿಐಗಳನ್ನು ಸೀಳು ನಾಯಿಗಳ ರೀತಿ ಪ್ರತಿಪಕ್ಷಗಳ ವಿರುದ್ಧ ಬಳಸಲಾಗುತ್ತಿದೆ.
> – ಕೃಷ್ಣಬೈರೇಗೌಡ, ಕಂದಾಯ ಸಚಿವ

> ನ್ಯಾಷನಲ್ ಹೆರಾಲ್ಡ್ ಸ್ವಾತಂತ್ರ್ಯ ಹೋರಾಟದ ವೇಳೆ ಜನರ ಅನಿಸಿಕೆ ತಿಳಿಸುತ್ತಿದ್ದ ಪತ್ರಿಕೆ. ಬಿಜೆಪಿಯವರು ಸಂವಿಧಾನಿಕ ಸಂಸ್ಥೆಗಳನ್ನು ಕಾಂಗ್ರೆಸ್ ನಾಯಕರ ವಿರುದ್ಧ ಬಳಸುತ್ತಿದ್ದಾರೆ. ಗಾಂಧಿ ಕುಟುಂಬಕ್ಕೆ ಕೆಟ್ಟ ಹೆಸರು ತರಲು ಯತ್ನಿಸುತ್ತಿದ್ದಾರೆ. ಇದು ಲಾಭ ಮಾಡುವ ಪತ್ರಿಕಾ ಸಂಸ್ಥೆ ಅಲ್ಲ.
> –ಬಿ.ಕೆ. ಹರಿಪ್ರಸಾದ್, ಪರಿಷತ್ ಸದಸ್ಯ

ಇಂತಹ ಅಸತ್ಯವಾದ ವಿಚಾರವನ್ನು ಮುನ್ನಲೆಗೆ ತಂದು ಬಿಜೆಪಿಯು ದುರುದ್ದೇಶದಲ್ಲಿ ತೊಡಗಿದ್ದಾರೆ. ಬಿಜೆಪಿಯವರು ತಮ್ಮ ತಪ್ಪುಗಳನ್ನು ಮರೆಮಾಚಲು ಇಂತಹ ದುಷ್ಕೃತ್ಯಕ್ಕೆ ಕೈಹಾಕಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಮನಮೋಹನ್ ಸಿಂಗ್ ಅವರು ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೇಶದ ಸಾಲ ಸುಮಾರು 53.11 ಲಕ್ಷ ಕೋಟಿ ಆಗಿತ್ತು. ಆದರೆ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಸಾಲದ ಮೊತ್ತ ಸುಮಾರು 2 ಲಕ್ಷ ಕೋಟಿಯನ್ನೂ ಮೀರಿದೆ. ಪ್ರಧಾನಿ ಮೋದಿಯವರು ಅಧಿಕಾರಕ್ಕೆ ಬಂದು 11 ವರ್ಷಗಳಲ್ಲಿ ಈ ಸಾಲದ ಮೊತ್ತವು 148 ಲಕ್ಷ ಕೋಟಿ ಹೆಚ್ಚಾಗಿದೆ. ಬಿಜೆಪಿಯವರು ತಮ್ಮ ಈ ತಪ್ಪನ್ನು ಮರೆಮಾಚಲು ಇಂತಹ ಸುಳ್ಳು ಪ್ರಕರಣಗಳ ಮೊರೆಹೋಗುತ್ತಿದೆ ಎಂದರು.

ದ್ವೇಷ ರಾಜಕಾರಣ ಬಿಜೆಪಿ ಆಸ್ತಿ: ಡಿಕೆಶಿ

ಪ್ರತಿಭಟನೆಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನ್ಯಾಷನಲ್ ಹೆರಾಲ್ಡ್ ಈ ದೇಶದ ಆಸ್ತಿ. ದ್ವೇಷ ರಾಜಕಾರಣ ಬಿಜೆಪಿ ಆಸ್ತಿ. ಸತ್ಯಕ್ಕೆ ಸಾವಿಲ್ಲ, ಸುಳ್ಳು ಕೇಸ್ ಗಳಿಗೆ ಆಯುಷ್ಯವಿಲ್ಲ ಎಂಬುದಕ್ಕೆ ಮಂಗಳವಾರ ಬಂದ ನ್ಯಾಯಾಲಯದ ಆದೇಶವೇ ಸಾಕ್ಷಿ. ನಮ್ಮನ್ನು ಪಿತೂರಿಯಿಂದ ಸೋಲಿಸಲು ಸಾಧ್ಯವಿಲ್ಲ, ದ್ವೇಷದಿಂದ ಕುಗ್ಗಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಪ್ರತಿಭಟನೆ ಮುಂದುವರಿಯಲಿದೆ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಜತೆ ನಿಂತು ಅವರ ಕೈ ಬಲಪಡಿಸೋಣ ಎಂದು ಹೇಳಿದರು.

ಆಡಳಿತ ಶಾಸಕರು ಗೈರು; ಪ್ರತಿಪಕ್ಷಗಳ ಆಕ್ಷೇಪ

ಇನ್ನು ವಿಧಾನಸಭೆ, ವಿಧಾನಪರಿಷತ್ ಕಲಾಪವನ್ನು ಕ್ರಮವಾಗಿ ಬೆ.9 ಹಾಗೂ 9.30ಕ್ಕೆ ಆರಂಭಿಸಲು ತೀರ್ಮಾನಿಸಲಾಗಿತ್ತು. ಆದರೆ ಕಾಂಗ್ರೆಸ್ ಪ್ರತಿಭಟನೆಯಿದ್ದ ಕಾರಣ 10.30 ಆದರೂ ಸದನಕ್ಕೆ ಶಾಸಕರು ಆಗಮಿಸಲಿಲ್ಲ. ಆದರೆ ಉಭಯ ಸದನದಲ್ಲಿದ್ದ ಪ್ರತಿಪಕ್ಷದ ಶಾಸಕರು, ಆಡಳಿತ ಪಕ್ಷದ ಶಾಸಕರು, ಸಚಿವರು ಇಲ್ಲದೇ ಸದನವನ್ನು ಹೇಗೆ ನಡೆಸುತ್ತೀರಾ ಎಂದು ಆಕ್ಷೇಪವ್ಯಕ್ತಪಡಿಸಿದ್ದರಿಂದ ಸದನವನ್ನು ಮುಂದೂಡಿ, ಪ್ರತಿಭಟನೆಯ ಬಳಿಕ ಸದನವನ್ನು ಪುನರಾರಂಭಿಸಲಾಯಿತು.

ಮಧ್ಯಂತರ ವಾರ್ಷಿಕ ಪರಿಶೀಲನಾ ವರದಿಯಲ್ಲಿ ವಿಷಯ ಪ್ರಸ್ತಾಪ

ಗ್ಯಾರಂಟಿ ನಡುವೆ ಶೇ.7.4 ಪ್ರಗತಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಅನುದಾನ ತಾರತಮ್ಯ ವಿಷಯದಲ್ಲಿ ನಿರಂತರವಾಗಿ ಹೋರಾಟ ನಡೆಸುತ್ತಿರುವ ರಾಜ್ಯ ಸರಕಾರ, ಈ ಎಲ್ಲ ಸವಾಲುಗಳ ಹೊರತಾಗಿಯೂ 2024-25ನೇ ಸಾಲಿನಲ್ಲಿ ದೇಶದ ಆರ್ಥಿಕ ಬೆಳವಣಿಗೆ ಹೋಲಿಸಿದರೆ, ಉತ್ತಮ ಬೆಳವಣಿಗೆ ದಾಖಲಿಸಿದೆ.

ವಿಧಾನಸಭೆಯಲ್ಲಿ ಮಂಡಿಸಿದ ಆರ್ಥಿಕ ಇಲಾಖೆಯ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ರಾಜ್ಯದ ಆರ್ಥಿಕತೆ 2024-25ರಲ್ಲಿ ಶೇ.7.4ರಷ್ಟು ನೈಜ ಬೆಳವಣಿಗೆ ದಾಖಲಿಸಿದ್ದು, ದೇಶದ ಆರ್ಥಿಕ ಬೆಳವಣಿಗೆ ಶೇ.6.5ಕ್ಕಿಂತ ಹೆಚ್ಚಾಗಿದೆ. ಇದು ರಾಜ್ಯದ ಆರ್ಥಿಕತೆ ಎಲ್ಲ ವಲಯದಲ್ಲಿ ಉತ್ತಮವಾಗಿದೆ ಎನ್ನುವುದನ್ನು ತೋರಿಸುತ್ತದೆ ಎಂದು ಉಲ್ಲೇಖಿಸಲಾ ಗಿದೆ. 2025-26ರ ಮೊದಲಾರ್ಧದಲ್ಲಿ ರಾಜ್ಯದ ವಿತ್ತೀಯ ನಿರ್ವಹಣೆಯು ಉತ್ತಮವಾಗಿದ್ದು, ರಾಜಸ್ವ ಸಂಗ್ರಹಣೆ ಯಲ್ಲಿ ಶೇ.7.7ರಷ್ಟು ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ. 2025-26ರ ಮೊದಲಾರ್ಧದಲ್ಲಿ ರಾಜ್ಯದ ಒಟ್ಟು ಜಿಎಸ್‌ಟಿ ಸಂಗ್ರಹಣೆಯು ದೇಶದಲ್ಲಿ ಎರಡನೇ ಸ್ಥಾನದಲ್ಲಿತ್ತು. ವಿದೇಶಿ ಹೂಡಿಕೆ ಸ್ವೀಕರಿಸುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, ಮಹಾರಾಷ್ಟ್ರ, ಗುಜರಾತ್ ಹಿಂದಿಕ್ಕಿ ಪ್ರಮುಖ ರಾಜ್ಯವಾಗಿ ಹೊರಹೊಮ್ಮಿದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಇನ್ನು 2025-26ನೇ ಸಾಲಿಗೆ ಜಿಎಸ್‌ಡಿಪಿಯ ಶೇ.2.95ರಷ್ಟು ವಿತ್ತೀಯ ಕೊರತೆಯನ್ನು ಅಂದಾಜಿಸಿದೆ.

3459 ಕೋಟಿ ರು. ಸಾಲ

2025-26ರ ಆರ್ಥಿಕ ವರ್ಷಕ್ಕೆ ರಾಜ್ಯ ಸರಕಾರ ಒಟ್ಟು 1,16,000 ಕೋಟಿ ರು. ಹಾಗೂ 26,474 ಕೋಟಿ ಮರು ಪಾವತಿಯನ್ನು ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ಸೆಪ್ಟೆಂಬರ್ ಅಂತ್ಯಕ್ಕೆ 3,459 ಕೋಟಿ ಸಾಲ ಪಡೆದಿರುವ ಬಗ್ಗೆ ಮಾಹಿತಿ ನೀಡಲಾಗಿದೆ. ಇದರೊಂದಿಗೆ ಕೇಂದ್ರ ಸರಕಾರ ಜಿಎಸ್‌ಟಿ ತೆರಿಗೆ ದರಗಳನ್ನು ನಾಲ್ಕು ಹಂತಗಳಿಂದ ಎರಡು ಹಂತಗಳಿಗೆ ತರ್ಕಬದ್ಧಗೊಳಿಸುವ ಮೂಲಕ ಸರಳೀಕರಿಸಿದ್ದು, ಇದರಿಂದ ರಾಜ್ಯದ ತೆರಿಗೆ ರಾಜಸ್ವ ಸಂಗ್ರಹಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಲಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಪ್ರಮುಖಾಂಶ

- 2025-26ರ ಮೊದಲ ತ್ರೈಮಾಸಿಕದಲ್ಲಿ ರಾಜ್ಯದಲ್ಲಿ 5.6 ಶತಕೋಟಿ ಡಾಲರ್ ಹೂಡಿಕೆಯಾಗಿದೆ. ಇಡೀ ದೇಶದಲ್ಲಿ 18.6 ಶತಕೋಟಿ ಡಾಲರ್ ಆಗಿದೆ.
- ರಿಯಲ್ ಎಸ್ಟೇಟ್ ಚಟುವಟಿಕೆ ಕುಸಿತವಾಗಿರುವುದರಿಂದ ರಾಜಸ್ವ ಸಂಗ್ರಹಣೆ ಕಡಿಮೆಯಾಗಿದೆ.
- ಖನಿಜಗಳ ಮೇಲೆ ತೆರಿಗೆ ವಿಧಿಸಲು ವಿಧೇಯಕಕ್ಕೆ ರಾಷ್ಟ್ರಪತಿ ಅನುಮೋದನೆ ಸಿಕ್ಕರೆ 3 ಸಾವಿರ ಕೋಟಿ ರು. ಆದಾಯ ಬರಲಿದೆ.
- ಕಳೆದ ವರ್ಷಕ್ಕೆ ಹೋಲಿಸಿದರೆ, 2025-26ರ ಮೊದಲಾರ್ಧದಲ್ಲಿ ಬಂಡವಾಳ ಯೋಜನೆಗಳ ಮೇಲಿನ ವೆಚ್ಚ ಶೇ.32.3ರಷ್ಟು ಹೆಚ್ಚಾಗಿದೆ.

ಹಿಮಾಚಲ: ಪುಟ್ಟ ಬಲೂನ್ ಬಳಸಿ ಪಾಕ್ ಪರ ಬೇಹು?

ಶಿಮ್ಲಾ: ಪಾಕಿಸ್ತಾನದ ಗುರುತುಗಳಿರುವ ಬಲೂನ್ ಹಿಮಾಚಲ ಪ್ರದೇಶದಲ್ಲಿ ಪತ್ತೆಯಾಗಿದ್ದು, ಬೇಹುಗಾರಿಕೆ ನಡೆಸುತ್ತಿದ್ದ ಶಂಕೆ ವ್ಯಕ್ತವಾಗಿದೆ. ಈ ಭಾಗದಲ್ಲಿ ಭದ್ರತಾ ವ್ಯವಸ್ಥೆಯ ಬಗೆಗೆ ಆತಂಕ

ಮೂಡಿಸಿದೆ.

ಹಿಮಾಚಲ ಪ್ರದೇಶದ ಉನಾ ಜಿಲ್ಲೆಯಲ್ಲಿ ಮನೆಯೊಂದರ ಛಾವಣಿಯ ಮೇಲೆ ಪಾಕಿಸ್ತಾನದ ಗುರುತುಗಳನ್ನು ಹೊಂದಿರುವ ಬಲೂನ್ ಪತ್ತೆಯಾಗಿದೆ. ಬಲೂನ್ ವಿಮಾನವನ್ನು ಹೋಲುತ್ತಿದ್ದು, ಪಾಕಿಸ್ತಾನಿ ಧ್ವಜದ ಗುರುತುಗಳು ಮತ್ತು ಅದರ ಮೇಲೆ ಪಾಕಿಸ್ತಾನ ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆ(ಪಿಐಎ) ಎಂದು ಬರೆಯಲಾಗಿದೆ.

ಇದು, ಗ್ರಾಮದ ನಿವಾಸಿಗಳಲ್ಲಿ ಆತಂಕ ಮೂಡಿಸಿದೆ. ಸ್ಥಳೀಯರ ಮಾಹಿತಿ ಬಳಿಕ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಬಲೂನ್ ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಸುತ್ತಮುತ್ತಲಿನ ಪ್ರದೇಶವನ್ನು, ಅನುಮಾನಾಸ್ಪದ ವಸ್ತುಗಳನ್ನು ಪರಿಶೀಲಿಸಿದರು.

ಡಿ.8ರಂದು ಗ್ಯಾಗ್ರೆಟ್ ಉಪವಿಭಾಗದ ಟಟೆಹ್ರಾ ಗ್ರಾಮದಲ್ಲಿ ಅಂತಹ ಮೂರು ಬಲೂನ್‌ಗಳು ಕಂಡುಬಂದಿದ್ದವು. ಆ ಬಲೂನ್‌ಗಳ ಮೇಲೆ ಪಾಕ್ ಧ್ವಜದ ಗುರುತುಗಳಿದ್ದು, ಐ ಲವ್ ಪಾಕಿಸ್ತಾನ್ ಎಂದು ಬರೆಯಲಾಗಿತ್ತು.

ಸರಕಾರಿ ವಕೀಲರಿಗೆ ಮಾಹಿತಿ ನೀಡದ ಅಧಿಕಾರಿಗಳ ವಜಾ

ಬೆಂಗಳೂರು: ಸರಕಾರಿ ವಕೀಲರು ಕೋರಿದ ಮಾಹಿತಿ ನೀಡದ ಅಥವಾ ಮಾಹಿತಿ ನೀಡಲು ವಿಳಂಬಿಸುವ ಸರಕಾರಿ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ ಸೇವೆಯಿಂದ ವಜಾಗೊಳಿಸಲು ಆದೇಶಿಸಲಾಗುವುದು ಎಂದು ಹೈ ಕಠಿಣ ಎಚ್ಚರಿಕೆ ನೀಡಿದೆ.

ಚಿತ್ರದುರ್ಗದ ಹಿರಿಯ ನಾಗರಿಕರಾದ ವಿಶ್ವನಾಥನ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಮೇಲಿನಂತೆ ಹೇಳಿದೆ.

ನಿವೃತ್ತ ಸರಕಾರಿ ಉದ್ಯೋಗಿಯಾಗಿರುವ ಅರ್ಜಿದಾರರು, ಹಿರಿಯ ನಾಗರಿಕರು ಮತ್ತು ಪೋಷಕರ ಕಲ್ಯಾಣ ಕಾಯಿದೆ ಅಡಿ ಪರಿಹಾರ ಕೋರಿ ಚಿತ್ರದುರ್ಗದ ಉಪ ವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು. ತಮ್ಮ ಸೇವಾವಧಿಯಲ್ಲಿ ಗಳಿಸಿದ್ದ ಹಣದಲ್ಲಿ ನಿವೇಶನ ಖರೀದಿಸಿ ನಿರ್ಮಿಸಿರುವ ಮನೆ, ತಮ್ಮ ಮಗ ಮತ್ತು ಮಗಳ ಸ್ವಾಧೀನದಲ್ಲಿದೆ. ಅವರು ತಮ್ಮನ್ನು ಪಾಲನೆ ಮಾಡುತ್ತಿಲ್ಲ. ಇದರಿಂದ ಮನೆಯನ್ನು ತಮ್ಮ ಸುಪರ್ದಿಗೆ ಒಪ್ಪಿಸಲು ಮಗ ಮತ್ತು ಮಗಳಿಗೆ ಆದೇಶಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ಉಪ ವಿಭಾಗಾಧಿಕಾರಿ, ಮನೆಯನ್ನು ತಂದೆಗೆ ಬಿಟ್ಟುಕೊಡುವಂತೆ ವಿಶ್ವನಾಥ್ ಅವರ ಮಗಳು ಮತ್ತು ಮಗನಿಗೆ ನಿರ್ದೇಶಿಸಿ 2023ರ ಫೆಬ್ರವರಿ 22ರಂದು ಆದೇಶಿಸಿದ್ದರು.

ಆದರೂ ಮಗಳ ಮತ್ತು ಮಗ ಮನೆ ಬಿಟ್ಟುಕೊಡದಕ್ಕೆ ಉಪ ವಿಭಾಗಾಧಿಕಾರಿ ಆದೇಶ ಜಾರಿಗೊಳಿಸುವಂತೆ ಕೋರಿ ಚಿತ್ರದುರ್ಗ ಜಿಲ್ಲಾಧಿಕಾರಿಗೆ ಮತ್ತು ತಹಸೀಲ್ದಾರ್‌ಗೆ 2023ರ ಏಪ್ರಿಲ್ 5ರಂದು ಅರ್ಜಿದಾರರು ಮನವಿ ಸಲ್ಲಿಸಿದ್ದರು. ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ವಿಶ್ವನಾಥನ್, ತಮ್ಮ ಮನವಿ ಪರಿಗಣಿಸಿ ಅಗತ್ಯ ಕ್ರಮ ಜರುಗಿಸಲು ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಸೀಲ್ದಾರ್‌ಗೆ ನಿರ್ದೇಶಿಸುವಂತೆ ಕೋರಿದ್ದರು. ಈ ಹಿಂದೆ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪ್ರಕರಣದ ಕುರಿತು ಮಾಹಿತಿ ಪಡೆದು ತಿಳಿಸುವಂತೆ ಸರಕಾರಿ ವಕೀಲರಿಗೆ ಸೂಚಿಸಿತ್ತು. ಈ ಸೂಚನೆ ಮೇರೆಗೆ ಹಲವು ಬಾರಿ ಕೋರಿದರೂ ಚಿತ್ರದುರ್ಗದ ತಹಸೀಲ್ದಾರ್ ಮಾಹಿತಿ ನೀಡುತ್ತಿಲ್ಲ ಎಂದು ಹೈಕೋರ್ಟ್‌ಗೆ ತಿಳಿಸಿದ್ದರು.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ಉಪ ನಿಬಂಧಕರು (ನಿ.,441),
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ, ನ್ಯಾಯಾಲಯ,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಸೌಹಾರ್ದ ಸಹಕಾರ ಸೌಧ,
#68, 1ನೇ ಮಹಡಿ,17 & 18ನೇ ಅಡ್ಡರಸ್ತೆ, ಮಾರ್ಗೋಸ ರೋಡ್,
ಮಲ್ಲೇಶ್ವರಂ, ಬೆಂಗಳೂರು-560055.

ವಾದಿ:
ಮುಖ್ಯ ಕಾರ್ಯನಿರ್ವಾಹಕರು
ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ.
ಪ್ರಧಾನ ಶಾಖೆ:ಹೊಸದುರ್ಗ,ಶಾಖೆ:ರಾಜಾಜಿನಗರ ಬೆಂಗಳೂರು-560010
ಪ್ರತಿವಾದಿಗಳು:
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/483/2025-2026
1. ಕವಿತಾ ನಂದಕುಮಾರ್ ಕೋಂ ನಂದಕುಮಾರ್. ಈ
ಜಿ.02, ತೇಜಿತ್ ಎಲಿಗಂಟ್, ಸೀಗೆಹಳ್ಳಿ ಮುಖ್ಯ ರಸ್ತೆ, ಕೆ.ಆರ್.ಪುರಮ್, ಬೆಂಗಳೂರು - 560049.
1. ನಂದಕುಮಾರ್.ಈ ಬಿನ್ ಎತಿರಾಜುಲು
ಜಿ.02, ತೇಜಿತ್ ಎಲಿಗಂಟ್, ಸೀಗೆಹಳ್ಳಿ ಮುಖ್ಯ ರಸ್ತೆ, ಕೆ.ಆರ್.ಪುರಮ್, ಬೆಂಗಳೂರು - 560049.
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/484/2025-2026
2. ಮಂಜು.ಎಸ್ ಬಿನ್ ಶಿವಯ್ಯ
ನಂ. 573/ಡಿ, 1ನೇ ಕ್ರಾಸ್, ಬಿ.ಇ.ಎಮ್.ಎಲ್, 3ನೇ ಹಂತ, ರಾಜರಾಜೇಶ್ವರಿನಗರ, ಬೆಂಗಳೂರು -560098.
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/485/2025-2026
1. ಸಾಗರ್. ಬಿ.ಎಲ್ ಬಿನ್ ಬಾಲಕೃಷ್ಣ.ಎ.ವಿ.
ನಂ.2/l,2ನೇ ಮಹಡಿ, ಓಬಳಪ್ಪ ಬೀದಿ, ಪೋಸ್ಟ್ ಆಫೀಸ್ ಹತ್ತಿರ, ಚಿಕ್ಕಮಾವಳ್ಳಿ, ಬೆಂಗಳೂರು -560004.
2. ಲತಾ. ಎಸ್ ಕೋಂ ಶ್ರೀನಿವಾಸ. ಕೆ.ಸಿ.
ನಂ.33/l, 3ನೇ ಮಹಡಿ, ವೆಂಕಟಪ್ಪ ಬೀದಿ, ಚಿಕ್ಕಮಾವಳ್ಳಿ, ಬೆಂಗಳೂರು -560004.
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/486/2025-2026
1. ವಿಜಯ್ ಕುಮಾರ್ ವಿ. ಎಸ್ ಬಿನ್ ಶ್ರೀನಿವಾಸಯ್ಯ ವಿ. ಬಿ
ವಲಗೆರೆಪುರ, ಅಮೃತ್ತೂರು, ಕುಣಿಗಲ್ ತಾಲೂಕ್ - 572111.
2. ರಾಜೇಶ್.ಹೆಚ್.ಎಲ್ ಬಿನ್ ಲಕ್ಷ್ಮೀಪತಿ ನಾಯಕ್.ಹೆಚ.ಎಸ್
C/o ಯೋಗಿಣಿ ಬಾಯಿ, ಹೇಮಾವತಿ ನೀರಾವರಿ ನಿಗಮ, ಬನಶಂಕರಿ, ಕುಣಿಗಲ್ ರಸ್ತೆ, ತುಮಕೂರು-572101.
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/487/2025-2026
1. ಲತಾ. ಎಸ್ ಕೋಂ ಶ್ರೀನಿವಾಸ. ಕೆ. ಸಿ.
ನಂ.33/l, 3ನೇ ಮಹಡಿ, ವೆಂಕಟಪ್ಪ ಬೀದಿ, ಚಿಕ್ಕಮಾವಳ್ಳಿ, ಬೆಂಗಳೂರು - 560004.
2. ಸಾಗರ್. ಬಿ.ಎಲ್ ಬಿನ್ ಬಾಲಕೃಷ್ಣ. ಎ.ವಿ.
ನಂ. 2/l, 2ನೇ ಮಹಡಿ, ಓಬಳಪ್ಪ ಬೀದಿ, ಪೋಸ್ಟ್ ಆಫೀಸ್ ಹತ್ತಿರ, ಚಿಕ್ಕಮಾವಳ್ಳಿ, ಬೆಂಗಳೂರು-560004.
ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/488/2025-2026
1. ರಮ್ಯ. ಎಸ್ ಕೋಂ ಸಾಗರ್.ಬಿ.ಎಲ್
ನಂ.2/l,2ನೇ ಮಹಡಿ, ಓಬಳಪ್ಪ ಬೀದಿ, ಪೋಸ್ಟ್ ಆಫೀಸ್ ಹತ್ತಿರ, ಚಿಕ್ಕಮಾವಳ್ಳಿ, ಬೆಂಗಳೂರು - 560004.
2. ಸಾಗರ್. ಬಿ. ಎಲ್ ಬಿನ್ ಬಾಲಕೃಷ್ಣ. ಎ. ವಿ.
ನಂ.2/l, 2ನೇ ಮಹಡಿ, ಓಬಳಪ್ಪ ಬೀದಿ, ಪೋಸ್ಟ್ ಆಫೀಸ್ ಹತ್ತಿರ, ಚಿಕ್ಕಮಾವಳ್ಳಿ, ಬೆಂಗಳೂರು - 560004.

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ **ದಾವಾ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಶ.ನಿ.,/483, 484, 485, 486, 487, 488/2025-2026** ರಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ ರಲ್ಲಿ 39 ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ: **06.01.2026 ರಂದು ಬೆಳ್ಳಗ್ಗೆ 11.30 ಗಂಟೆಗೆ** ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು. ಸದರಿ ಪ್ರಕಟಣೆಯನ್ನು ದಿನಾಂಕ: **18.12.2025**ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-
ಸಹಕಾರ ಸಂಘಗಳ ಉಪ ನಿಬಂಧಕರು (ನಿ.,441)
ದಾವಾ ಪಂಚಾಯ್ತಿ, ನ್ಯಾಯಾಲಯ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು
(ನ್ಯಾಯಾಲಯದ ಆದೇಶದ ಮೇರೆಗೆ)

ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದವರ ಮೇಲಿನ ದೌರ್ಜನ್ಯ ನಿಯಂತ್ರಣ ಸಭೆಯಲ್ಲಿ ಜಿಲ್ಲಾಧಿಕಾರಿ ಸೂಚನೆ

ಪರಿಶಿಷ್ಟರ ಕುಂದು ಕೊರತೆ ಆದ್ಯತೆ ಮೇರೆಗೆ ಬಗೆಹರಿಸಿ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಸಂಬಂದ ಕುಂದುಕೊರತೆಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಕೂಡಲೇ ಬಗೆಹರಿಸಲು ಕ್ರಮ ವಹಿಸಬೇಕು, ತಪ್ಪಿದಲ್ಲಿ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್.ಜಿ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕೃತ್ಯ ನಿಯಂತ್ರಿಸುವ ಕುರಿತು ಕರೆಯಲಾಗಿದ್ದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿ, ಅಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಸ್ಯೆ ಬಗೆಹರಿಸಿರುವ ಬಗ್ಗೆ ಅಂಕಿ ಅಂಶಗಳನ್ನು ಮುಂದಿನ ಸಭೆಯಲ್ಲಿ ನೀಡಬೇಕು. ಅದಿಲ್ಲದೆ ಈ ಸಭೆ ನಡೆಸುವುದರಲ್ಲಿ ಅರ್ಥವಿಲ್ಲ ಎಂದು ಅಭಿಪ್ರಾಯಪಟ್ಟರು.

ಜಿಲ್ಲೆಯ 6 ಪಂಚಾಯಿತಿಗಳಲ್ಲಿ ಎಸ್‌ಸಿ, ಎಸ್‌ಪಿ ಹಾಗೂ ಟಿಎಸ್‌ಪಿ ಹಣ ದುರುಪಯೋಗವಾಗಿರುವ ಸಂಬಂಧ ತನಿಖಾ ತಂಡ ರಚಿಸಲಾಗಿದ್ದು, ವರದಿ ಬಂದ ನಂತರ ತಪ್ಪಿತಸ್ಥರು ಯಾರೇ ಯಾಗಿರಲಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಎಸ್‌ಪಿ/ ಟಿಎಸ್‌ಪಿ ಯೋಜನೆಗೆ ಮೀಸಲಾದ ಅನುದಾನ ಆಯಾ ಸಾಲಿನಲ್ಲೆ ವೆಚ್ಚವಾಗಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆ ಸೌಲಭ್ಯ ತಲುಪಬೇಕು. ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ/ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿವಿಧ ಕೋರ್ಸ್‌ಗಳಾದ ಪಿಯುಸಿ, ಡಿಪ್ಲೋಮಾ, ಐಟಿಐ, ಡಿಗ್ರಿ, ಮತ್ತು ಸಮಾನ ಪದವಿ ಹಾಗೂ ಆಗ್ರಿ,



ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಜಗದೀಶ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್.ಆರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಲಕ್ಷ್ಮಣ ರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ರವೀಂದ್ರನಾಥ್ ಮೇಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇಂಜನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ನಿಯಮಾನುಸಾರ ಮೂಲಭೂತ ಸೌಕರ್ಯ ಒದಗಿಸಬೇಕು ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್ .ಆರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಲಕ್ಷ್ಮಣ ರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ರವೀಂದ್ರನಾಥ್ ಮೇಟಿ, ತಹಸೀಲ್ದಾರ್‌ಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ದಲಿತ್ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪೊಲೀಸ್ ಅಧಿಕಾರಿಗಳಿಗೆ ಸೂಚನೆ

ಠಾಣಾ ಮಟ್ಟದಲ್ಲಿ ಪ್ರತಿ ಎರಡನೇ ಭಾನುವಾರದಂದು ದಲಿತ ಸಭೆ ನಡಿಸಿ ದಲಿತ ಮುಖಂಡರುಗಳನ್ನು ಸಭೆಗೆ ಆಹ್ವಾನಿಸಿ ಅವರ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಇಲಾಖೆಯ ಅಧಿಕಾರಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ನಾಯಿ ಮೇಲೆ ಕಾರು ಹರಿಸಿ ಹತ್ಯೆ ಆರೋಪ: ಎಫ್‌ಐಆರ್

ಬೆಂಗಳೂರು: ವ್ಯಕ್ತಿಯೋರ್ವನ ವಿರುದ್ಧ ನೆರೆಮನೆಯವರ ಸಾಕು ನಾಯಿಯ ಮೇಲೆ ಏಕಾಏಕಿ ಕಾರು ಹತ್ತಿಸಿ ಸಾಯಿಸಿ ವಿಕೃತಿ ಮೆರೆದಿರುವ ಆರೋಪ ಕೇಳಿಬಂದಿದೆ. ಬೆಂಗಳೂರಿನ ರಾಯಸಂದ್ರದ ಬಳಿ ಈ ಘಟನೆ ನಡೆದಿದ್ದು, ಹರೀಶ್ ಎಂಬಾತನ ವಿರುದ್ಧ ದೂರು ದಾಖಲಾಗಿದೆ.

ರಮೇಶ್ ಎಂಬುವರ ಮನೆಯ ಬಳಿ ಸಾಕು ನಾಯಿಗಳು ಪದೇ ಪದೇ ಸಾಯುತ್ತಿರುತ್ತವೆ. ಅದು ಆಕಸ್ಮಿಕವಾದ ಘಟನೆ ಎಂದು ತಿಳಿದು ಸುಮ್ಮನಾಗಿರುತ್ತಾರೆ. ಆದರೆ ಡಿಸೆಂಬರ್ 13 ರಂದು ಬೆಳಗ್ಗೆ 6.40 ಗಂಟೆಗೆ ಅವರ ಸಾಕು ನಾಯಿ ರಸ್ತೆಯಲ್ಲಿ ಸಾವನ್ನಪ್ಪಿತ್ತು. ಈ ವೇಳೆ ಅನುಮಾನ ಬಂದು ರಮೇಶ್ ಅಲ್ಲಿನ ಸಿಸಿ ಕ್ಯಾಮರಾವನ್ನು ನೋಡಿದ ನಂತರ ಮನೆಯ ಹಿಂಭಾಗದ ನಿವಾಸಿಯಾದ ಹರೀಶ್ ಅಲಿಯಾಸ್ ಹರೀ ಎಂಬಾತನು ಈ ಕೃತ್ಯ ಎಸಗಿದ್ದಾನೆ ಅನ್ನೋದು ತಿಳಿದುಬಂದಿದೆ ಅವರು ಆರೋಪಿಸಿದ್ದಾರೆ.

ಆರೋಪಿ ವಿರುದ್ಧ ದೂರು ದಾಖಲು:

ಆತ ಮುಂಜಾನೆ ವೇಳೆ ನಾಯಿಯ ಮೇಲೆ ವಾಹನವನ್ನು ಹತ್ತಿಸಿದ್ದಾನೆ, ನಾಯಿ ಸ್ಥಳದಲ್ಲಿಯೇ ನರಳಾಡಿ ಮೃತಪಟ್ಟಿದೆ. ಆದ್ದರಿಂದ ಸದರಿ ಘಟನೆಗೆ ಕಾರಣರಾದ ಹರೀಶ್/ಹರಿ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ನಾಯಿ ಮಾಲೀಕ ರಮೇಶ್ ಅವರು ದೂರು ನೀಡಿದ್ದಾರೆ.

ಕಾನೂನು ಕ್ರಮಕ್ಕೆ ಆಗ್ರಹ: ಘಟನೆ ಸಂಬಂಧ ದೂರು ನೀಡಿರುವ ರಮೇಶ್ ಅವರು, ಕೆಲ ವರ್ಷಗಳಿಂದ ನಾನು ಮನೆಯ ಸುತ್ತಮುತ್ತ ಇರುವ ನಾಯಿಗಳನ್ನು ನೋಡಿಕೊಳ್ಳುತ್ತಿದ್ದೇನೆ.

ಸಿಸಿಟಿವಿ ವಿಡಿಯೋದಲ್ಲಿ ಏನಿದೆ?

ರಸ್ತೆಯ ಮಧ್ಯದಲ್ಲಿ ಮಲಗಿದ್ದ ನಾಯಿ, ಕಾರು ತನ್ನ ಕಡೆಗೆ ಬರುತ್ತಿದೆ ಎಂದು ತಿಳಿದು ಅಲ್ಲಿಂದ ತೆರಳಲು ಯತ್ನಿಸುತ್ತಿರುವುದು ವಿಡಿಯೋದಲ್ಲಿದೆ. ಆದರೆ, ಕಾರು ಚಾಲಕ, ನಾಯಿ ದೂರ ಹೋಗುವುದನ್ನು ಗಮನಿಸಿದ ನಂತರ, ವೇಗವನ್ನು ಹೆಚ್ಚಿಸುತ್ತಾನೆ ಮತ್ತು ಉದ್ದೇಶಪೂರ್ವಕವಾಗಿ ನಾಯಿಯ ಮೇಲೆ ಕಾರು ಹರಿಸಿರುವುದು ಸಿಸಿ ಟಿವಿಯಲ್ಲಿ ದಾಖಲಾಗಿದೆ. ಈ ವೇಳೆ ನಾಯಿ ಸ್ಥಳದಲ್ಲೇ ಸಾವಿಗೀಡಾಗಿದೆ. ನಾಯಿಗೆ ಸಹಾಯ ಮಾಡಲು ಸ್ಥಳೀಯರು ಮಾಡಿದ ಪ್ರಯತ್ನ ವ್ಯರ್ಥವಾಗಿದೆ. ಕಾರು ಚಾಲಕ ಹಾರ್ನ್ ಮಾಡಿದ್ದರೆ ಅಥವಾ ಸ್ವಲ್ಪ ವೇಗ ತಗ್ಗಿಸಿದ್ದರೆ ನಾಯಿ ದೂರ ಸರಿಯುತ್ತಿತ್ತು ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

ಮಣ್ಣಿನಡಿ ಸಿಲುಕಿ ಕಾರ್ಮಿಕ ಸಾವು

ಬೆಂಗಳೂರು: ತಾಲೂಕಿನ ದೊಮ್ಮಸಂದ್ರ ಸಮೀಪ ವರ್ತೂರು ರಸ್ತೆಯಲ್ಲಿರುವ ಮನಸ್ಕಂದ ಬಹುಮಹಡಿ ಅಪಾರ್ಟ್‌ಮೆಂಟ್ ಕಾಮಗಾರಿ ಸ್ಥಳದಲ್ಲಿ ಮಣ್ಣು ಕುಸಿದು ಕಾರ್ಮಿಕನೊಬ್ಬ ಸ್ಥಳದಲ್ಲೇ ಮೃತಪಟ್ಟ ದುರ್ಘಟನೆ ನಡೆದಿದೆ .

ಮೂಲತಃ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಮಣಿಯತ ಹಳ್ಳಿಯ ನಲ್ಲಂಪಲ್ಲಿ ಗ್ರಾಮದ ನಿವಾಸಿ ಚಿದಂಬರಂ (45) ಮೃತ ಕಾರ್ಮಿಕ. ಅಪಾರ್ಟ್‌ಮೆಂಟ್‌ನ ಒಳಚರಂಡಿ ಕಾಮಗಾರಿ ಹಿನ್ನೆಲೆಯಲ್ಲಿ, ಮಣ್ಣು ತೆಗೆಯುವ ಕೆಲಸ ಮಾಡುತ್ತಿದ್ದ ವೇಳೆ ಏಕಾಏಕಿ ಮಣ್ಣು ಕುಸಿದು ಚಿದಂಬರಂ ಮೇಲೆ ಬಿದ್ದಿದೆ. ಪರಿಣಾಮ ಮಣ್ಣಿನಡಿ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಮಾಚಾರ ಸಣ್ಣದಲ್ಲ

ರೈಲು ಹಳಿಗೆ ತಲೆಕೊಟ್ಟು ಯುವತಿ ಆತ್ಮಹತ್ಯೆ

ಧಾರವಾಡ: ಕಳೆದ 4 ವರ್ಷಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನಡೆಸುತ್ತಿದ್ದ ಉದ್ಯೋಗಾಕಾಂಕ್ಷಿ ಯುವತಿ ರೈಲು ಹಳಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಧಾರವಾಡ ನಗರದ ಶಿವಗಿರಿಯಲ್ಲಿ ನಡೆದಿದೆ.

ಬಳ್ಳಾರಿ ಮೂಲದ ವಿದ್ಯಾರ್ಥಿನಿ ಪಲ್ಲವಿ ಕಗ್ಗಲ್ (25) ಆತ್ಮಹತ್ಯೆ ಮಾಡಿಕೊಂಡ ಯುವತಿ. ನೇಮಕಾತಿಗಳು ನಡೆಯುತ್ತಿಲ್ಲ ಅಂತ ಮನನೊಂದು ಶಿವಗಿರಿಯ ರೈಲ್ವೆ ಟ್ರ್ಯಾಕ್‌ಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ. ಸ್ಥಳಕ್ಕೆ ರೇಲ್ವೆ ಪೊಲೀಸರು ಭೇಟಿ ಮಾಡಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಕಿಮ್ಸ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ರಾಷ್ಟ್ರೀಯ ಕಾರ್ಯಾಧ್ಯಕ್ಷರನ್ನು ಅಭಿನಂದಿಸಿದ ಬಿವೈವಿ

ದೆಹಲಿ: ಬಿಜೆಪಿ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಿರುವ ನಿತಿನ್ ನಬೀನ್‌ರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬುಧವಾರ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಯುವ ಸಮೂಹ' ಸಂಘಟನೆಯ ಬಹುದೊಡ್ಡ ಶಕ್ತಿ, ಈ ನಿಟ್ಟಿನಲ್ಲಿ ಯುವ ಉತ್ಸಾಹಿಗಳನ್ನು ಗುರುತಿಸುವುದು ಭಾರತೀಯ ಜನತಾ ಪಾರ್ಟಿಯ ಆದ್ಯತೆ ಹಾಗೂ ಬದ್ಧತೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಇತರ ವರಿಷ್ಠರು ಯುವ ನಾಯಕ ನಿತಿನ್ ನಬೀನ್ ಅವರನ್ನು ಕಾರ್ಯಾಧ್ಯಕ್ಷರಾಗಿ ಆಯ್ಕೆ ಮಾಡುವ ಮೂಲಕ ದೇಶದ ಯುವ ಜನರಿಗೆ ಸ್ಫೂರ್ತಿಯ ಸಂದೇಶ ರವಾನಿಸಿದ್ದಾರೆ ಎಂದು ವಿಜಯೇಂದ್ರ ತಿಳಿಸಿದ್ದಾರೆ. ಬಿಜೆಪಿ, ಇತಿಹಾಸದಲ್ಲಿ ಅತ್ಯುನ್ನತ ಜವಾಬ್ದಾರಿ ವಹಿಸಿಕೊಂಡ ಯುವ ನಾಯಕ ಎಂಬ ಹೆಗ್ಗಳಿಕೆಗೆ ನಿತಿನ್ ನಬೀನ್ ಪಾತ್ರರಾಗಿದ್ದಾರೆ. ಅವರು ನಡೆದು ಬಂದ ಹಾದಿಯಲ್ಲಿ ಪಕ್ಷನಿಷ್ಠೆ, ಕ್ರಿಯಾಶೀಲತೆ, ರಾಷ್ಟ್ರಬದ್ಧತೆ ಹಾಗೂ ಸಂಘಟನಾ ಸಾಮರ್ಥ್ಯವನ್ನು ಸಮರ್ಥವಾಗಿ ನಿರೂಪಿಸಿದ್ದಾರೆ. ಸತತ ಐದು ಬಾರಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ಬಿಹಾರದಲ್ಲಿ ಅಪಾರ ಜನಮನ್ನಣೆ ಗಳಿಸಿದ ಜನನಾಯಕನಾಗಿ ಹೊರಹೊಮ್ಮಿದ್ದಾರೆ. ನಿತಿನ್ ನಬೀನ್‌ನವರು ಪ್ರಸ್ತುತ ಜವಾಬ್ದಾರಿ ಹೊತ್ತಿರುವ ರಾಷ್ಟ್ರೀಯ ಕಾರ್ಯಾಧ್ಯಕ್ಷ ಸ್ಥಾನದ ಮೂಲಕ ನಮ್ಮಂತವರಿಗೆ ಪ್ರೇರಣೆಯ ಶಕ್ತಿಯಾಗಿ ಹೊರ ಹೊಮ್ಮಿದ್ದಾರೆ. ಅವರಿಂದ ಬಿಜೆಪಿ ಸಂಘಟನೆ ಇನ್ನಷ್ಟು ಬಲವೃದ್ಧಿಯಾಗಲಿದೆ ಎಂದರು.

ಬಿಜೆಪಿ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಿರುವ ನಿತಿನ್ ನಬಿನ್‌ರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬುಧವಾರ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ಕೈದಿಗಳ ಬಳಿ ಮೊಬೈಲ್ ಫೋನ್, ಮಾದಕವಸ್ತು, ಮಾರಕಾಸ್ತ್ರಗಳು ಪತ್ತೆ

ವಿವಿಧ ಕಾರಾಗೃಹಗಳಲ್ಲಿ ತಪಾಸಣೆ

ಬೆಂಗಳೂರು: ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಡಿಜಿಪಿಯಾಗಿ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅಧಿಕಾರ ಸ್ವೀಕರಿದ ಬೆನ್ನಲ್ಲೇ ರಾಜ್ಯದ ಜೈಲುಗಳಲ್ಲಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದಂತೆ ಮಂಗಳೂರು, ಮೈಸೂರು, ವಿಜಯಪುರ, ಬೆಳಗಾವಿ ಜಿಲ್ಲಾ ಕಾರಾಗೃಹಗಳಲ್ಲಿ 36 ಗಂಟೆಗಳ ಕಾಲ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಕೈದಿಗಳ ಬಳಿ ಮೊಬೈಲ್ ಫೋನ್‌ಗಳು, ಚಾಕು, ಮಾದಕ ಪದಾರ್ಥಗಳು ಪತ್ತೆಯಾಗಿವೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 6 ಮೊಬೈಲ್ ಫೋನ್‌ಗಳು ಹಾಗೂ 4 ಚಾಕುಗಳು, ಮೈಸೂರಿನಲ್ಲಿ 9 ಫೋನ್‌ಗಳು ಹಾಗೂ 11 ಸಿಮ್ ಕಾರ್ಡ್‌ಗಳು, ಬೆಳಗಾವಿಯಲ್ಲಿ 4 ಫೋನ್‌ಗಳು ಹಾಗೂ ದಾಳಿ ಸಂದರ್ಭದಲ್ಲಿ ಹೊರಗೆ ಎಸೆಯಲ್ಪಟ್ಟಿದ್ದ 366 ಗ್ರಾಂ ಗಾಂಜಾ, ವಿಜಯಪುರದಲ್ಲಿ 1 ಫೋನ್ ಹಾಗೂ ಮಂಗಳೂರಿನಲ್ಲಿ 4 ಫೋನ್‌ಗಳು ಪತ್ತೆಯಾಗಿವೆ.

ಕೇಂದ್ರ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳು ಪತ್ತೆ: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮಂಗಳವಾರ ರಾತ್ರಿ ಜೈಲಾಧಿಕಾರಿಗಳು ತಪಾಸಣೆ ನಡೆಸಿದ್ದರು. ಈ ವೇಳೆ, ನಿಷೇಧಿತ ವಸ್ತುಗಳು ಸೇರಿದಂತೆ 14 ಮೊಬೈಲ್ ಫೋನ್‌ಗಳು, 9 ಸಿಮ್ ಕಾರ್ಡ್‌ಗಳು, 5 ಮೊಬೈಲ್ ಫೋನ್ ಚಾರ್ಜರ್, 2 ಇಯರ್ ಫೋನ್, 10 ವಿವಿಧ ಬಗೆಯ ಚಾಕುಗಳು ಪತ್ತೆಯಾಗಿದ್ದವು. ಒಟ್ಟಾರೆ ಇದುವರೆಗೂ 67 ಮೊಬೈಲ್ ಫೋನ್‌ಗಳು, 14 ಚಾರ್ಜರ್ಸ್, 48 ಸಿಮ್ ಕಾರ್ಡ್‌ಗಳು, 10 ಇಯರ್ ಫೋನ್‌ಗಳು, 60,880 ರು. ನಗದು, 10 ಹರಿತವಾದ ಆಯುಧಗಳು ಪತ್ತೆಯಾಗಿದ್ದು, ಒಟ್ಟು 6 ಪ್ರಕರಣಗಳು ದಾಖಲಾಗಿವೆ ಎಂದು ಮೂಲಗಳು ಮಾಹಿತಿ ನೀಡಿವೆ.

ರಾಜ್ಯದ ಜೈಲುಗಳು ಕೆಲ ಕೈದಿಗಳಿಗೆ ಐಷಾರಾಮಿ ಅಡ್ಡೆಗಳಾಗುತ್ತಿವೆ ಎಂಬ ಮಾತುಗಳು ಕೇಳಿ ಬರುತ್ತಿರುವುದರ ಬೆನ್ನಲ್ಲೇ ಅಕ್ರಮಗಳಿಗೆ ಬ್ರೇಕ್ ಹಾಕಲು ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರಿಗೆ ಮುಂಬಡ್ತಿ ನೀಡಿದ್ದ ರಾಜ್ಯ ಸರಕಾರ ಅವರನ್ನು ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಡಿಜಿಪಿಯಾಗಿ ನೇಮಕಗೊಳಿಸಿತ್ತು. ಈ ಹಿಂದೆ ಕಾರಾಗೃಹ ಇಲಾಖೆಯ ಎಡಿಜಿಪಿಯಾಗಿದ್ದ ಬಿ.ದಯಾನಂದ್ ಅವರನ್ನು ತರಬೇತಿ ವಿಭಾಗದ ಎಡಿಜಿಪಿಯಾಗಿ ವರ್ಗಾವಣೆ ಮಾಡಲಾಗಿತ್ತು. ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ್ದ ಅಲೋಕ್ ಕುಮಾರ್, ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಿದರೆ ಅವರ ರ‍್ಯಾಂಕ್ ನನಗೆ ಮುಖ್ಯವಲ್ಲ, ಸ್ನೇಹಿತರಂತೆ ಕಾಣುತ್ತೇನೆ. ಆದರೆ, ಉದ್ದೇಶಪೂರ್ವಕವಾಗಿ ಅಕ್ರಮದಲ್ಲಿ ಶಾಮೀಲಾಗುವ ಅಧಿಕಾರಿಗಳನ್ನ ಬೇರೆ ರೀತಿಯಲ್ಲಿಯೇ ಪರಿಗಣಿಸಬೇಕಾಗುತ್ತದೆ ಎಂದು ಎಚ್ಚರಿಕೆ ಕೂಡ ನೀಡಿದ್ದರು.

ನರೇಗಾ ಮಾರ್ಪಾಡು: ಹಕ್ಕಿನ ಮೇಲೆ ದಾಳಿ

ಬೀದರ್: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾಯಿಸುವ ಮತ್ತು ಅದರ ಕಾನೂನು ಚೌಕಟ್ಟು ಮಾರ್ಪಡಿಸುವ ಕ್ರಮವು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪರಂಪರೆ ಹಾಗೂ ಗ್ರಾಮೀಣ ಬಡವರ ಹಕ್ಕುಗಳ ಮೇಲೆ ನಡೆಸುತ್ತಿರುವ ನೇರ ದಾಳಿಯಾಗಿದೆ ಎಂದು ಸಂಸದ ಸಾಗರ್ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೇಂದ್ರದ ಕ್ರಮವು ರಾಷ್ಟ್ರದ ಪರಂಪರೆಗೆ ಎಸಗಿದ ಅಪಮಾನ. ಮಹಾತ್ಮ ಗಾಂಧೀಜಿಯವರು ಈ ದೇಶದ ರಾಷ್ಟ್ರಪಿತ. ಶ್ರಮದ ಗೌರವ, ಗ್ರಾಮೀಣ ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯದ ಅವರ ಆದರ್ಶಗಳನ್ನು ಗೌರವಿಸಲು ಈ ಯೋಜನೆಗೆ ಅವರ ಹೆಸರನ್ನು ಇಡಲಾಗಿತ್ತು. ಹಕ್ಕು ಆಧಾರಿತ ಈ ಐತಿಹಾಸಿಕ ಕಾಯ್ದೆಯಿಂದ ಅವರ ಹೆಸರನ್ನು ತೆಗೆದು ಹಾಕುವ ಯಾವುದೇ ಪ್ರಯತ್ನವು, ನಮ್ಮ ದೇಶವನ್ನು ವ್ಯಾಖ್ಯಾನಿಸುವ ಮೌಲ್ಯಗಳ ಬಗ್ಗೆ ಕೇಂದ್ರ ಸರಕಾರಕ್ಕಿರುವ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದ್ದಾರೆ.

ಹೊಸ ಮಸೂದೆಯು ನರೇಗಾ ಖಾತರಿಪಡಿಸಿದ್ದ ಶಾಸನಬದ್ಧ ಕೆಲಸದ ಹಕ್ಕು ರದ್ದುಗೊಳಿಸಲು ಹೊರಟಿದೆ. ಇದು ಬೇಡಿಕೆ ಆಧಾರಿತ ಹಕ್ಕನ್ನು ಬದಲಿಸಿ, ಕೇಂದ್ರ ಸರಕಾರದ ನಿಯಂತ್ರಣದಲ್ಲಿರುವ ಒಂದು ಸಾಮಾನ್ಯ ಯೋಜನೆಯನ್ನಾಗಿ ಪರಿವರ್ತಿಸಲಿದೆ. ಇಲ್ಲಿ ಉದ್ಯೋಗದ ಯಾವುದೇ ಕಾನೂನು ಖಾತರಿ ಇರುವುದಿಲ್ಲ. ಪ್ರಸ್ತುತ ಇರುವ ಕಾಯ್ದೆಯಂತೆ, ಹೊಸ ಪ್ರಸ್ತಾವನೆ ಸಾರ್ವತ್ರಿಕ ವ್ಯಾಪ್ತಿಯನ್ನು ಹೊಂದಿಲ್ಲ. ಸಂಕಷ್ಟದ ಸಮಯದಲ್ಲಿ ಗ್ರಾಮೀಣ ಜನರಿಗೆ ಕೆಲಸ ನೀಡುವ ಭರವಸೆಯನ್ನು ಇದು ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯಗಳ ಮೇಲೆ ಆರ್ಥಿಕ ಹೊರೆ

ಪ್ರಸ್ತುತ ನರೇಗಾ ಯೋಜನೆಯಡಿ ಕೂಲಿ ವೆಚ್ಚದ ಸಂಪೂರ್ಣ ಜವಾಬ್ದಾರಿಯನ್ನು ಕೇಂದ್ರ ಸರಕಾರವೇ ಭರಿಸುತ್ತದೆ. ಆದರೆ, ಉದ್ದೇಶಿತ ಮಸೂದೆಯು ಕೇಂದ್ರ ಮತ್ತು ರಾಜ್ಯಗಳ ನಡುವೆ 60:40 ಅನುಪಾತದಲ್ಲಿ ಹಣ ಹಂಚಿಕೆಯ ಪದ್ಧತಿಯನ್ನು ಜಾರಿಗೆ ತರಲು ಮುಂದಾಗಿದೆ. ಇದು ರಾಜ್ಯದ ಮೇಲೆ ಆರ್ಥಿಕ ಹೊರೆ ಹೆಚ್ಚಿಸುತ್ತದೆ ಎಂದು ಸಂಸದ ಸಾಗರ್ ಖಂಡ್ರೆ ಹೇಳಿದ್ದಾರೆ. ಆರ್ಥಿಕ ಹೊರೆಯನ್ನು ರಾಜ್ಯಗಳ ಮೇಲೆ ವರ್ಗಾಯಿಸುವ ಮೂಲಕ ಮತ್ತು ಅನುದಾನಕ್ಕೆ ಮಿತಿ ಹೇರುವ ಮೂಲಕ ಕೇಂದ್ರ ಸರಕಾರವು ಈ ಯೋಜನೆಯ ಮೂಲ ಬುನಾದಿಯನ್ನೇ ಹಾಳು ಮಾಡುತ್ತಿದೆ. ಈ ಬದಲಾವಣೆಯು ಸರಕಾರದ ಬಡವರ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಉರುಳಿಗೆ ಸಿಲುಕಿ ಹುಲಿ ಸಾವು

ಕೊಡಗು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ (ಎನ್‌ಟಿಆರ್) ಬಳಿಯ ಕಾಫಿ ಎಸ್ಟೇಟ್‌ನಲ್ಲಿ ಬಲೆಯಲ್ಲಿ ಸಿಲುಕಿದ ಐದು ವರ್ಷದ ಗಂಡು ಹುಲಿ ಸಾವು ಮೃತಪಟ್ಟಿದೆ.

ಕೊಡಗು ಪ್ರಾದೇಶಿಕ ಅರಣ್ಯ ವಿಭಾಗದ ಶ್ರೀಮಂಗಲ ಗ್ರಾಮದ ಕುಶಾಲನಗರದ ಮೀನಕೊಲ್ಲಿ ವಿಭಾಗದ ದುಬಾರೆ ಅರಣ್ಯದಿಂದ 5 ಕಿಮೀ ದೂರದಲ್ಲಿರುವ ಎಸ್ಟೇಟ್‌ನಲ್ಲಿ ಬೆಳಗ್ಗೆ 10 ಗಂಟೆ ಸುಮಾರಿಗೆ ಸ್ಥಳೀಯರು ಮೃತದೇಹವನ್ನು ನೋಡಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಹುಲಿ ಮಂಗಳವಾರ ಬೆಳಗ್ಗೆ ಸಾವನ್ನಪ್ಪಿದೆ. ಮೃತದೇಹ ತುಂಬಾ ಹಳೆಯದಲ್ಲ, ಎರಡು ದಿನಗಳ ಹಿಂದೆ ಹುಲಿ ಬಲೆಗೆ ಸಿಲುಕಿತ್ತು ಎಂದು ಆಗಿರುವ ಗಾಯದಿಂದ ತಿಳಿದುಬಂದಿದೆ. ಎರಡು ದಿನಗಳ ಕಾಲ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಹುಲಿ ಮಂಗಳವಾರ ಬೆಳಗ್ಗೆ ಉಸಿರುಗಟ್ಟಿ ಸಾವನ್ನಪ್ಪಿದೆ.

ಅಂತಿಮ ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯಲಾಗುತ್ತಿದೆ. ಅದರ ಕುತ್ತಿಗೆಯ ಸುತ್ತ 2 ಇಂಚು ಆಳದ ಗಾಯವಿತ್ತು. ಅದರ ಎಲ್ಲ ಕೋರೆಹಲ್ಲುಗಳು ಮತ್ತು ಉಗುರುಗಳು ಹಾಗೆಯೇ ಇದ್ದವು. ಮೃತದೇಹ ಪತ್ತೆಯಾದ ಸ್ಥಳದಿಂದ 2-3 ಕಿ.ಮೀ ದೂರದಲ್ಲಿ ರಕ್ತದ ಕಲೆಗಳು ಕಂಡುಬಂದಿವೆ. ವಿವರವಾದ ರಕ್ತದ ಮಾದರಿ ವಿಶ್ಲೇಷಣೆ ಮಾಡಲಾಗುತ್ತಿದೆ.

ಬಲೆ ಹಾಗೂ ಘಟನೆ ನಡೆದ ನಿಖರವಾದ ಸ್ಥಳವನ್ನು ಕಂಡುಹಿಡಿಯಲು ನಾವು ಹುಡುಕಾಟ ನಡೆಸುತ್ತಿದ್ದೇವೆ. ಎಚ್‌ಡಿ ಕೋಟೆಯಿಂದ ಶ್ವಾನ ದಳವನ್ನು ತನಿಖೆಗಾಗಿ ಕರೆಸಲಾಗಿದೆ ಎಂದು ಮಡಿಕೇರಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್.ವಿ ಹೇಳಿದ್ದಾರೆ.

ಮಸಾಜ್ ಸ್ವಾಮೀಜಿಗೆ ಬೆದರಿಕೆ, ಎಫ್‌ಐಆರ್

ಧಾರವಾಡ: ಜಿಲ್ಲೆಯ ಕವಲಗೇರಿ ಮಠದ ಶಿವಾನಂದ ಮಠದ ಸರಸ್ವತಿ ಸ್ವಾಮೀಜಿಯ ಕಾಮಪುರಾಣ ಬಯಲಾಗಿದೆ. ಮಠದ ಆವರಣದಲ್ಲೇ ಮಹಿಳೆಯೊಬ್ಬರಿಂದ ಮಸಾಜ್ ಮಾಡಿಸಿಕೊಂಡಿರುವ ವಿಡಿಯೋ ವೈರಲ್ ಆಗಿದೆ.



ಮಹಿಳೆಯ ಜತೆ ಬೆತ್ತಲೆಯಾಗಿ ಸ್ನಾನ ಮಾಡಿಸಿಕೊಂಡು ಮೈಯಲ್ಲಾ ಮಸಾಜ್ ಮಾಡಿಸಿಕ್ಕೊಂಡಿದ್ದಾರೆ. ಗ್ರಾಮಸ್ಥರ ಮುಂದೆ ಸನ್ಯಾಸಿಯಂತೆ ಪೋಸ್ ಕೊಡ್ತಿದ್ದ ಸರಸ್ವತಿ ಸ್ವಾಮಿಗೆ 60 ವರ್ಷವಾದರೂ ಚಪಲ ಮಾತ್ರ ಕಡಿಮೆಯಾಗಿಲ್ಲ. ಗ್ರಾಮಸ್ಥರ ಆಧ್ಯಾತ್ಮಿಕ ಕೇಂದ್ರವಾಗಿದ್ದ ಮಠವನ್ನೇ ಸರಸ್ವತಿ ಸ್ವಾಮಿ ಮಸಾಜ್ ಪಾರ್ಲರ್ ಆಗಿ ಮಾಡಿಕೊಂಡಿದ್ದು ಭಕ್ತರ ಧಾರ್ಮಿಕ ಭಾವನೆಗಳಿಗೆ ತೀವ್ರ ನೋವನ್ನುಂಟು ಮಾಡಿದೆ. ವಿಡಿಯೋ ವೈರಲ್ ಆಗುತ್ತಿದ್ದಂತೆ ಸ್ಥಳೀಯರು ಸ್ವಾಮೀಜಿ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದ್ದಾರೆ.

10 ಲಕ್ಷಕ್ಕೆ ಡೀಲ್ ಕುದುರಿಸಿದ್ದ ಸ್ವಾಮೀಜಿ: ಸುಮಾರು 5 ಜನರ ಗುಂಪು ಈ ವಿಡಿಯೋವನ್ನಿಟ್ಟುಕೊಂಡು ಸ್ವಾಮೀಜಿಯನ್ನು ಬ್ಲಾಕ್‌ಮೇಲ್ ಮಾಡಿ 20 ಲಕ್ಷ ರುಪಾಯಿಗೆ ಡಿಮ್ಯಾಂಡ್ ಮಾಡಿತ್ತು. ಗ್ರಾಮದ ವ್ಯಕ್ತಿಯೊಬ್ಬರ ಸಮ್ಮುಖದಲ್ಲಿ 10 ಲಕ್ಷಕ್ಕೆ ಡೀಲ್ ಓಕೆ ಆಗಿತ್ತು. ಬಳಿಕ ಸ್ವಾಮೀಜಿ ವಿಡಿಯೋ ಡಿಲೀಟ್ ಮಾಡುವಂತೆ ಹೇಳಿ ಮಠಕ್ಕೆ ಕರೆಸಿಕೊಂಡು 7 ಲಕ್ಷ ರುಪಾಯಿ ಕೊಟ್ಟಿದ್ದಾರೆ. ಬಾಕಿ 3 ಲಕ್ಷ ಹಣ ಬಂದಿಲ್ಲ ಅಂತ ವಿಡಿಯೋ ವೈರಲ್ ಮಾಡಿದ್ದಾರೆ. ವಿಡಿಯೋ ಮಾಡಿ ಹಣ ವಸೂಲಿ ಮಾಡಿದ ಗ್ಯಾಂಗ್ ವಿರುದ್ಧ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಸ್ವಾಮೀಜಿ ದೂರು ದಾಖಲಿಸಿದ್ದಾರೆ. ಐವರ ವಿರುದ್ಧ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲೂ ದೂರು ದಾಖಲಿಸಲು ಮುಂದಾಗಿದ್ದಾರೆ.

ಆರು ತಿಂಗಳ ಬಳಿಕ ಬೆಂಗಳೂರು ಮಂಗ್ಳೂರು 6 ರೈಲು ಪುನಾರಂಭ

ಬೆಂಗಳೂರು: ಕಳೆದ 6 ತಿಂಗಳಿಂದ ಬಂದ್ ಆಗಿದ್ದ ಬೆಂಗಳೂರು-ಮಂಗಳೂರು-ಕಾರವಾರ ಹಗಲು ರೈಲು ಸೇವೆಯು ಪುನರಾರಂಭವಾಗಿದೆ. ಪ್ರಮುಖವಾಗಿ ಕಾರವಾರ ಎಕ್ಸ್‌ಪ್ರೆಸ್, ಗೊಮ್ಮಟೇಶ್ವರ ಎಕ್ಸ್‌ಪ್ರೆಸ್ ಸೇರಿ 6 ರೈಲುಗಳ ಸಂಚಾರ ಆರಂಭವಾಗಿದೆ.

ಸಕಲೇಶಪುರ-ಘಾಟಿ ಸುಬ್ರಮಣ್ಯ ರಸ್ತೆ ನಡುವಿನ ರೈಲು ಮಾರ್ಗ ವಿದ್ಯುತ್ ಮಾರ್ಗವಾಗಿ ಮಾರ್ಪಾಡು ಮಾಡುವ ಕಾಮಗಾರಿ ನಡೆಯುತ್ತಿತ್ತು. ಈ ಹಿನ್ನೆಲೆ ಜೂನ್ ಆರಂಭದಲ್ಲಿ ಬೆಂಗಳೂರು-ಮಂಗಳೂರು ನಡುವೆ ಹಗಲು ಹೊತ್ತಿನಲ್ಲಿ ಸಂಚರಿಸುವ ರೈಲುಗಳ ಸೇವೆಯನ್ನು 6 ತಿಂಗಳ ಕಾಲ ಬಂದ್ ಮಾಡಲಾಗಿತ್ತು.

ವಿಸ್ಟಾಡೋಮ್ ಕೋಚ್ ಪ್ರಯಾಣ ಲಭ್ಯ: ಈ ರೈಲು ಹಾಸನ, ಹಾಸನ, ಮತ್ತು ಸುಬ್ರಹ್ಮಣ್ಯ ರಸ್ತೆಗಳ ಮೂಲಕ ಸುಂದರವಾದ ಮಾರ್ಗದಲ್ಲಿ ಸಾಗುತ್ತದೆ. ವಿಶೇಷವಾಗಿ ವಿನ್ಯಾಸಗೊಳಿಸಲಾದ ವಿಸ್ಟಾಡೋಮ್ ಕೋಚ್, ದೊಡ್ಡ ಗಾಜಿನ ಕಿಟಕಿಗಳು ಮತ್ತು ಛಾವಣಿಯನ್ನು ಹೊಂದಿದೆ. ಇದರಿಂದ ಪ್ರಯಾಣಿಕರು ಪಶ್ಚಿಮ ಘಟ್ಟಗಳ ಮನಮೋಹಕ ದೃಶ್ಯಗಳನ್ನು ಆನಂದಿಸಬಹುದು. ಈ ರೈಲು ಪುನರಾರಂಭವಾಗುತ್ತಿರುವುದು ಪ್ರಯಾಣಿಕರಿಗೆ ಸಂತಸ ತಂದಿದೆ. ವಿಶೇಷವಾಗಿ ವಿಸ್ಟಾಡೋಮ್ ಕೋಚ್‌ನಲ್ಲಿ ಪ್ರಯಾಣಿಸುವ ಅನುಭವವನ್ನು ಪಡೆಯಲು ಹಲವರು ಕಾಯುತ್ತಿದ್ದಾರೆ. ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿರುವುದರಿಂದ ರೈಲು ಸಂಚಾರ ಸುಗಮವಾಗಲಿದೆ.

ಯಾವೆಲ್ಲಾ ರೈಲುಗಳ ಸಂಚಾರ ಪುನರಾರಂಭ?

- ಯಶವಂತಪುರ-ಮಂಗಳೂರು ಜಂಕ್ಷನ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 16539)
- ಮಂಗಳೂರು ಜಂಕ್ಷನ್-ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 16540)
- ಯಶವಂತಪುರ-ಮಂಗಳೂರು ಜಂಕ್ಷನ್ ಗೋಮಟೇಶ್ವರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ಸಂಖ್ಯೆ 16575)
- ಮಂಗಳೂರು ಜಂಕ್ಷನ್-ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ಸಂಖ್ಯೆ 16576)
- ಯಶವಂತಪುರ-ಕಾರವಾರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ಸಂಖ್ಯೆ 16515)
- ಕಾರವಾರ-ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ಸಂಖ್ಯೆ 16516)

ಪಂಚಾಯಿತಿ ಚುನಾವಣೆ ವಿಳಂಬ ಸಲ್ಲ: ಮಹಾಂತೇಶ ಕವಟಗಿಮಠ

ಬೆಳಗಾವಿ: ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರ ಅವಧಿ ಮುಗಿದ ನಂತರ, ತೆರವಾದ ಸ್ಥಾನಕ್ಕೆ ಮತ್ತೆ ಚುನಾವಣೆಗೆ ವಿಳಂಬ ಮಾಡಬಾರದು. ನಿರ್ದಿಷ್ಟ ಅವಧಿಯಲ್ಲೇ ಚುನಾವಣೆ ನಡೆಸಲು ರಾಜ್ಯ ಸರ್ಕಾರ ವಿಶೇಷ ಕಾನೂನು ಜಾರಿಗೆ ತರಬೇಕು ಎಂದ ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕದಲ್ಲಿ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದು, ಎಲ್ಲ ಅಧಿಕಾರವನ್ನು ರಾಜ್ಯ ಸರಕಾರ ತನ್ನ ಹಿಡಿತದಲ್ಲಿ ಇರಿಸಿಕೊಂಡಿದೆ. ಕಳೆದ ನಾಲ್ಕು ವರ್ಷಗಳಿಂದ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ನಡೆದಿಲ್ಲ. ಮೀಸಲಾತಿ ವಿಚಾರವಾಗಿ ಸರಕಾರ ಮತ್ತು ರಾಜ್ಯ ಚುನಾವಣಾ ಆಯೋಗದ ಮಧ್ಯೆ ತಿಕ್ಕಾಟ ನಡೆಯುತ್ತಲೇ ಇದೆ ಎಂದು ದೂರಿದರು.

ರಾಜ್ಯದ 31 ಜಿಲ್ಲೆಗಳ 1,130 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ಮತ್ತು 239 ತಾಲೂಕುಗಳ 3,671 ತಾಲೂಕು ಪಂಚಾಯಿತಿ ಕ್ಷೇತ್ರಗಳ ಅಂತಿಮ ಮೀಸಲಾತಿ ಪಟ್ಟಿಯನ್ನು ಸರಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕಿದೆ. ಆದರೆ, ಸರಕಾರದ ಇಚ್ಛಾಶಕ್ತಿ ಕೊರತೆಯಿಂದ ಈ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ದೂರಿದರು.

ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಸದಸ್ಯರು ಜನರಿಗೆ ಬೇಗ ಸ್ಪಂದಿಸುವವರು. ಆದರೆ, ಜಿಪಂ ಮತ್ತು ತಾಪಂನಲ್ಲಿ ಈಗ ಜನಪ್ರತಿನಿಧಿಗಳೇ ಇಲ್ಲ. ಇದರಿಂದ ಅಭಿವೃದ್ಧಿ ಕೆಲಸಕ್ಕೆ ಪೆಟ್ಟು ಬಿದ್ದಿದ್ದು, ಜನರ ಸಮಸ್ಯೆ ಆಲಿಸಲು ಸದಸ್ಯರೇ ಇಲ್ಲದಂತಾಗಿದೆ ಎಂದು ಆರೋಪಿಸಿದರು.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು-572103, ದೂರವಾಣಿ: 0816-2272280,
E-mail: tudatmk2009@yahoo.co.in website: tumakuru.uda.gov.in

ಸಂಖ್ಯೆ: TUDA-LBPAS-00188/2025-26/CLU ದಿನಾಂಕ : 18.12.2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರನ್ವಯ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ವನಜಾಕ್ಷಿ ಕೋಂ ಮುದ್ದರಂಗಯ್ಯ	ತುಮಕೂರು	ಊರ್ಡಿಗೆರೆ	ಮಂಚಕಲ್‌ಕುಪ್ಪೆ	29/2	01 ಎಕರೆ 02 ಗುಂಟೆ	ವ್ಯವಸಾಯ	ವಸತಿ

ಷರಾ : ಪ್ರಶ್ನಿತ ಜಮೀನಿನಲ್ಲಿ ಪ್ರಾಧಿಕಾರದ ನಿಯಮಗಳನ್ವಯ ಹಾಗೂ ಕಾನೂನು ಬದ್ಧವಾಗಿ ವಿನ್ಯಾಸ ಅನುಮೋದನೆ ಪಡೆದು ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ನೀಡುವ ಮತ್ತು ಕಾಮಗಾರಿ ಕೆಲಸಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು

ಕರ್ನಾಟಕ ಸರಕಾರ

**ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು**

ಅಲ್ಪಾವಧಿ ಟೆಂಡರ್ ಪ್ರಕಟಣೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ ಟೆಂಡರ್28/2025/ 3347 ದಿ:16.12.2025

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.inನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 24.12.2025ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ನ್ನು ಜಿ.ಎಸ್.ಟಿ. ಹೊರತುಪಡಿಸಿ ಆಹ್ವಾನಿಸಲಾಗಿದ್ದು, ಟೆಂಡರ್‌ದಾರರು ಜಿ.ಎಸ್.ಟಿ.ಯನ್ನು ಹೊರತುಪಡಿಸಿ ದರಗಳನ್ನು ನಮೂದಿಸತಕ್ಕದ್ದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಮಂಗಳೂರು

DIPR/DK/MPL/1257/25-26

ರೇಣುಕಾ ಹತ್ಯೆ: ಪೋಷಕರಿಂದ ಸಾಕ್ಷ್ಯ

← ಮೊದಲಪುಟದಿಂದ

ನಿಮ್ಮ ಕುಟುಂಬದಲ್ಲಿ ನಿಮ್ಮ ಬಳಿ, ನಿಮ್ಮ ಪತಿ (ರೇಣುಕಾಸ್ವಾಮಿ ತಂದೆ), ಹಾಗೂ ಸೊಸೆ ಬಳಿ (ರೇಣುಕಾಸ್ವಾಮಿ ಪತ್ನಿ) ಪ್ರತ್ಯೇಕ ಫೋನ್ ಇವೆಯೇ?, ನಿಮ್ಮ ಫೋನ್ ಯಾವ ಕಂಪನಿಯದ್ದು, ಯಾವ ನೆಟ್‌ವರ್ಕ್ ಸೇವೆಯನ್ನು ಬಳಸುತ್ತಿದ್ದೀರಿ? ಎಂಬ ಪ್ರಶ್ನೆಗೆ ರತ್ನಪ್ರಭಾ ಪ್ರತ್ಯೇಕ ಫೋನ್‌ಗಳಿವೆ ಎಂದು ಹೇಳಿ ಉಳಿದ ಪ್ರಶ್ನೆಗಳಿಗೆ ಗೊತ್ತಿಲ್ಲ ಎಂಬ ಉತ್ತರವಿತ್ತರು.

ನಿಮ್ಮ ಮಗ ಪ್ರತಿದಿನ ತಾನು ಕೆಲಸ ಮಾಡುವ ಜಾಗಕ್ಕೆ (ಫಾರ್ಮಸಿ ಶಾಪ್) ಯೂನಿಫಾರ್ಮ್ ಹಾಕಿಕೊಂಡು ಹೋಗುತ್ತಿದ್ದರು. ಅವರು ನಾಪತ್ತೆಯಾಗುವ ದಿನವೂ ಅವರು ಯೂನಿಫಾರ್ಮ್ ಹಾಕಿಕೊಂಡು ಹೋಗಿದ್ದರಾ? ರೇಣುಕಾಸ್ವಾಮಿಯವರು ಮಧ್ಯಾಹ್ನ ಮನೆಗೆ ಊಟಕ್ಕೆ ಬರಲ್ಲ ಎಂದು ಹೇಳಿ ಅಲ್ಲಿಂದ ಚಿತ್ರದುರ್ಗದ ಬಾಲಾಜಿ ಬಾರ್‌ಗೆ ಹೋಗಿದ್ದಾರೆ. ಅಲ್ಲಿಗೆ ಅವರು ಪದೇ ಪದೇ ಹೋಗುತ್ತಿದ್ದರಾ? ಆ ಬಗ್ಗೆ ನಿಮಗೇನಾದರೂ ಗೊತ್ತಿದೆಯಾ? ಎಂಬ ಪ್ರಶ್ನೆಗೆ ರತ್ನಪ್ರಭಾ ಅವರು, ಪ್ರತಿದಿನ ಅವರು ಯೂನಿಫಾರ್ಮ್ ಹಾಕುತ್ತಿದ್ದರು. ಆದರೆ, ಶನಿವಾರ ಹಾಕುತ್ತಿರಲಿಲ್ಲ. (ರೇಣುಕಾಸ್ವಾಮಿ ನಾಪತ್ತೆಯಾಗಿದ್ದ ದಿನ 2024ರ ಜೂ. 8ರಂದು ಶನಿವಾರ). ನನ್ನ ಮಗ ಬಾರ್‌ಗೆ ಯಾವತ್ತೂ ಹೋದವನಲ್ಲ. ಆತ ನಾಪತ್ತೆಯಾದ ದಿನ ಅಲ್ಲಿಗೆ ಹೋಗಿದ್ದರ ಬಗ್ಗೆ ನನಗೆ ಗೊತ್ತಿಲ್ಲ ಎಂದರು. ರೇಣುಕಾಸ್ವಾಮಿ ಅವರ ಕೊರಳಲ್ಲಿ ಚಿನ್ನದ ಚೈನ್ ಇತ್ತಾ? ರೇಣುಕಾಸ್ವಾಮಿಯ ಸಾವಿನ ನಂತರ ಪೊಲೀಸರು ಆ ಚೈನ್ ಅನ್ನು ನಿಮಗೆ ಹ್ಯಾಂಡ್ ಓವರ್ ಮಾಡಿದ್ದಾರಾ ? ಆ ಚೈನ್‌ಗಾಗಿ ನೀವು ಪೊಲೀಸರು ಸೂಚಿಸಿದಂತೆ ಸಾಕ್ಷ್ಯವನ್ನು ನೀಡಿದ್ದೀರಾ ಎಂದು ಬಾಲನ್ ಕೇಳಿದ ಪ್ರಶ್ನೆಗೆ ರತ್ನಪ್ರಭಾ ಇಲ್ಲ. ಹಾಗೆ ಮಾಡಿಲ್ಲ ಎಂದು ಉತ್ತರಿಸಿದರು.

ವಿಚಾರಣೆ 18ಕ್ಕೆ ಮುಂದೂಡಿಕೆ

ವಿಚಾರಣೆ ವೇಳೆ ಬಾಲನ್ ಅವರು ಇನ್ನೂ ಎರಡು ಗಂಟೆಗಳವರೆಗೆ ಪ್ರಶ್ನೆ ಕೇಳಬೇಕಿದೆ ಎಂದು ಹೇಳಿದರು. ಅದಕ್ಕೆ ನ್ಯಾಯಾಧೀಶರು, ಡಿ. 18ರ ಮಧ್ಯಾಹ್ನ 12.30ರ ಸುಮಾರಿಗೆ ವಿಚಾರಣೆ ಮುಂದುವರಿಸುವಂತೆ ಸೂಚಿಸಿ ನಂತರ ವಿಚಾರಣೆ ಮುಂದೂಡಿದರು.

ಕರ್ನಾಟಕ ಸರ್ಕಾರ

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ**

No.EE/MID/VJP/AE-1,4/4702/TND/2025-26/ 3490 Date: 16.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :- ಒಟ್ಟು 3 ಕಾಮಗಾರಿಗಳು(2ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.137.20 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಆರು(6) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **17.12.2025** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ(ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **26.12.2025** ರ 17-30 ಘಂಟೆವರೆಗೆ ಸ್ವೀಕರಿಸಲಾಗುವದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:**24.12.2025** ರ 17-30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ-080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

**ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ**

ವಾಸಾಸಂಇ/ವಿಜಯಪುರ/548/ಕೆಎಸ್ಎಂಸಿಎ/2025-26

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ, ಕಲಬುರಗಿ.**

ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105, ದೂ: 08472-220817,
E-mail ID : kwbceklb14@gmail.com

ಕ್ರ.ಸಂ.ಕಜಮು/ಮುಅ.ಕ/ತಾಂತ್ರಿಕ/ಸಅ-2/ನೀ.ಸ/ಸಿರುಗುಪ್ಪ-ಓ.ಹೆಚ್.ಟಿ/ಎನ್.ಜಿ.ಆರ್/2025-26/1188
ದಿನಾಂಕ: 16-12-2025

:: ಟೆಂಡರ್ ಆಹ್ವಾನಿಸುವ ಸೂಚನೆ ::

1) ಕಾಮಗಾರಿ ವಿವರ: ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಅನುದಾನದಡಿಯಲ್ಲಿ ಸಿರುಗುಪ್ಪ ಪಟ್ಟಣದ ವಾರ್ಡ ಸಂಖ್ಯೆ-18 ರ ಡ್ರೈವರ್ಸ್ ಕಾಲೋನಿಯಲ್ಲಿ 5 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಹಾಗೂ 200 ಮಿ.ಮೀ ವ್ಯಾಸದ ಡಿ.ಐ ಕೆ-9 ಕ್ಲಾಸ್ ಶುದ್ಧ ನೀರಿನ ಏರು ಕೊಳವೆ ಏರು ಕೊಳವೆ ಮಾರ್ಗ ಅಳವಡಿಸುವ ಹಾಗೂ ಒದಗಿಸುವ ಕಾಮಗಾರಿ" (ಲಂಪ್ ಸಮ್- ವೇರಿಯೇಷನ್ ಇರುವುದಿಲ್ಲ). **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2025-26/ ಡಬ್ಲ್ಯೂ.ಎಸ್/ವರ್ಕ_ಇಂಡೆಂಟ್455),** 2) ಕಾಮಗಾರಿ ಅಂದಾಜು ಮೊತ್ತ: **ರೂ. 185.75 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: **ರೂ. 2,80,000/-,** 5) ಕಾಮಗಾರಿಯ ಅವಧಿ: 12 (ಹನ್ನೆರಡು ತಿಂಗಳು), 6) ಇ- ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ; **18-12-2025 ಸಮಯ : 17:00 ಗಂಟೆಯ ನಂತರ** 7) ಪೂರ್ವ ಟೆಂಡರ್ ಸಭೆ ದಿನಾಂಕ: **24-12-2025 ಸಮಯ 11:30 ಗಂಟೆಯವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **01-01-2026 ಸಮಯ 17:30 ಗಂಟೆಯವರೆಗೆ,** 9) ಟೆಂಡರ್ ತೆರೆಯುವ ದಿನಾಂಕ: **03-01-2026 ಸಮಯ 11:00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105 ದೂ: 08472-220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

**ಸಹಿ/- ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.**

ವಾ.ಸಾ.ಸಂ.ಇ/ಕಲಬುರಗಿ/866/ಕೆ.ಎಸ್.ಎಂ.ಸಿ.&ಎ/2025-26

ಸದನದಲ್ಲಿ ಗೃಹಲಕ್ಷ್ಮೀ ಗದ್ದಲ

← ಮೊದಲಪುಟದಿಂದ

ಸರಕಾರ ಹಾಗೂ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. ಈ ವೇಳೆ ಪರಿಸ್ಥಿತಿ ತಿಳಿಯಾಗಿಸುವ ನಿಟ್ಟಿನಲ್ಲಿ ಸಭಾಧ್ಯಕ್ಷರು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದರು. ಬಳಿಕ ಸಭೆ ನಡೆಸಿ, ಕ್ಷಮೆ ಕೇಳಲು ಅವಕಾಶ ನೀಡಿದರು.

> **ಮಂತ್ರಿಗಳ ಬಾಯಲ್ಲಿ ಸದನಕ್ಕೆ ಸುಳ್ಳು ಹೇಳಿಸುವ ಕೆಲಸ ಮಾಡಿದ ಆ ಅಧಿಕಾರಿ ಯಾರು? ಅವರ ವಿರುದ್ಧ ಕ್ರಮ ಆಗಬೇಕು.**
> **-ಅರಗ ಜ್ಞಾನೇಂದ್ರ**, ಶಾಸಕ

ಸದನದ ದಾರಿ ತಪ್ಪಿಸುವ ಉದ್ದೇಶ ನನ್ನದಲ್ಲ: ಬಳಿಕ ಸದನದಲ್ಲಿ ಮಾತನಾಡಿದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ರಾಜ್ಯದ 1.26 ಲಕ್ಷ ಮಹಿಳೆಯರು ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳಾಗಿದ್ದು, ಪ್ರತಿ ತಿಂಗಳು ಅವರ ಖಾತೆಗೆ ತಲಾ ಎರಡು ಸಾವಿರ ರು.ಗಳನ್ನು ಡಿಬಿಟಿ ಮೂಲಕ ಪಾವತಿ ಮಾಡಲಾಗಿದೆ. ಈವರೆಗೆ 23 ಕಂತುಗಳಲ್ಲಿ 46,000 ರು. ಪ್ರತಿ ಫಲಾನುಭವಿಗೆ ಪಾವತಿ ಮಾಡಲಾಗಿದೆ. ಕೆಲ ತಾಂತ್ರಿಕ ಕಾರಣದಿಂದ ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ಹಣ ಪಾವತಿ ಆಗಿಲ್ಲ ಎಂಬ ಮಾಹಿತಿ ಬಂದಿದೆ. ಈ ಸದನಕ್ಕೆ ತಪ್ಪು ಮಾಹಿತಿ ಕೊಡುವುದಾಗಲಿ ಅಥವಾ ಸದನದ ದಾರಿ ತಪ್ಪಿಸುವ ಉದ್ದೇಶವಾಗಲಿ ನನ್ನದಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿ ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ಯಾರಿಗಾದರೂ ಬೇಸರ ಆಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕ್ಷಮೆಗೆ ಆಗ್ರಹಿಸಿದಾಗ ಅನಿವಾರ್ಯವಾಗಿ ಕ್ಷಮೆ ಕೋರಿದರು.

ಚಿತ್ರವಿಹಾರ

ಶೂನ್ಯದಿಂದ ವಿಶ್ವಪ್ರಜ್ಞೆಯೆಡೆಗೆ

● ಮಾಯಾ ಬಾಲಚಂದ್ರ

ನಮ್ಮ ಕಣ್ಣಿಗೆ ಕಾಣುವ, ಸರ್ಶಕ್ಕೆ ನಿಲುಕುವ ವಸ್ತುಗಳನ್ನು ನಿಜವೆಂದೇ ಪರಿಗಣಿಸುತ್ತೇವೆ. ಅವುಗಳನ್ನು ವಿಭಜಿಸುತ್ತಾ ಸಾಗಿದರೆ, ನಾವು ಕೊನೆಯಲ್ಲಿ ಕಾಣಬಹುದಾದದ್ದು ಏನೂ ಇಲ್ಲ, ಪರಮಾಣುಗಳಂದಾದ ವಸ್ತುಗಳು ನೋಡಲು ಒಕ್ಕರೆ, ಪರಮಾಣು ಮಾತ್ರ ಶುದ್ಧ ಶೂನ್ಯವಾಗಿ ಉಳಿಯುತ್ತದೆ. ಅದಕ್ಕೆ ಕಪಟವೂ ಇಲ್ಲ, ಅದರೊಳಗೆ ದುಂಡಗಿನ ವಸ್ತುವೂ ಇಲ್ಲ, ಗೋಲವೂ ಇಲ್ಲ. ಏನೂ ಇಲ್ಲದ್ದರಿಂದ ಉಂಟಾದ ಕಲ್ಲು ಕಣಜವಾಗಿ, ಬೆಣ್ಣೆ ಮೃದುವಾಗಿ, ತಮ್ಮದೇ ಪ್ರತ್ಯೇಕ ಗುಣವನ್ನು ಪಡೆಯುವುದು ಹೇಗೆ? ಎನ್ನುವುದೊಂದು ವಿಸ್ಮಯದ ಸಂಗತಿ.

ಯಾವ ವಸ್ತುವನ್ನು ಹೊಂದಿರದ, ಅನಂತ ದೂರದವರೆಗೂ ಆವರಿಸಿರುವ, ನಿರ್ಗುಣ, ನಿರಾಕಾರ ಶೂನ್ಯದಿಂದ ಉಂಟಾದ, ಭ್ರಾಮಕ ಜಗತ್ತು, ಸಗುಣ ಸಾಕಾರ ರೂಪದಲ್ಲಿ ವ್ಯಕ್ತವಾಗುವುದು ನಿಜಕ್ಕೂ ರೋಚಕ. ಪರಮಾಣುಗಳನ್ನು ಬೇಧಿಸಿ ನೋಡಿದ ವಿಜ್ಞಾನಿಗಳಿಗೆ ಕಂಡುಬಂದಿರುವುದು ಕಣ್ಣಳತೆಗೆ ನಿಲುಕದ ವಿಶಾಲ ಆಕಾಶ, ದೂರದಲ್ಲಿ ಕಾಣುವ ಶಕ್ತಿ ತರಂಗದ ಕೂಳ್ಳಿಂಚು, ಮತ್ತಿನ್ನೆಲ್ಲೋ ತೇಲಿ ಸಾಗುವ ಸೂಕ್ಷ್ಮ ಕಣ. ಉಳಿದಂತೆ ಮತ್ತದೇ, ಮುಗಿಯದ ಕತ್ತಲ ಆಕಾಶ. ಇಲ್ಲಿರುವುದೆಲ್ಲ ಶಕ್ತಿ ತರಂಗಗಳ ಏರಿಳಿತ, ಏರಿಳಿತ ಹೊರತು ಬರೀ ಶೂನ್ಯ ಮಾತ್ರ.

ಅದನ್ನು ಪೂರ್ಣವನ್ನು ಕಾಣಬೇಕಾದರೆ, ಹಿಂದಿನ ನಮ್ಮ ವೇದ ವಿಜ್ಞಾನದ ಬೆಳಕಿನ ದೀವಿಗೆಯನ್ನು ಹಿಡಿಯ ಬೇಕೇನೋ. ಅದರಲ್ಲಿ, ಚೈತನ್ಯದ ಪಾತ್ರವೇನು? ನಿರಾಕಾರ ಬ್ರಹ್ಮದ ಪಾತ್ರವೇನು? ಆ ಶೂನ್ಯವೇ ಪ್ರಜ್ಞಾಪ್ರವಾಹದ ಖನಿಯೇ? ಎಂಬೆಲ್ಲ ಪ್ರಶ್ನೆಗಳೂ ಬೆಳಕಿಡುವ ಹೊಳಪಿನಿಂದ ಅದು ಜ್ಞಾನ ಮಾತ್ರ ಎಂದು ನಮ್ಮ ಪ್ರಾಚೀನ ಮುನಿಗಳು ಕಂಡುಕೊಂಡಿದ್ದಾರೆ. ಜಗದ್ವ್ಯಾಪಿಯಾದ ಪಾರಮಾರ್ಥಿಕ ಪ್ರಜ್ಞೆ, ಜ್ಞಾನವನ್ನು, ದ್ರವ್ಯವನ್ನೂ ಸೃಷ್ಟಿ ಮಾಡುತ್ತದೆ. ಇದರ ಮೂರ್ತರೂಪಗಳು ಹಲವು ದೀಪದಲ್ಲಿ ತೋರಿ ಬರುತ್ತವೆ. ಇದು ಜೀವಾತ್ಮನಾಗಿ ಭೌತಿಕ ಶರೀರಕ್ಕೆ ಕಾರಣವಾಗುತ್ತದೆ. 'ಇದನ್ನೇ ಪ್ರಾಚೀನರಲ್ಲಿ 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂದಿದ್ದಾರೆ. ವಿಶ್ವಪ್ರಜ್ಞೆಯೊಂದಿಗೆ ಅಂತರಂಗ ಪ್ರಜ್ಞೆ ಸದಾ ಸ್ಪಂದಿಸುತ್ತಿರುತ್ತದೆ. ಇದು ಜಗತ್ತಿನ ಪ್ರತಿ ಸೃಷ್ಟಿಯಲ್ಲೂ ಕಾಣಬರುತ್ತದೆ. ಹೂಗಳಲ್ಲೇ ಗಮನಿಸುವುದಾದರೆ ಹಲವು ಹೂವುಗಳು, ಋತುಮಾನಕ್ಕೆ ಅನುಗುಣವಾಗಿ ಬಣ್ಣ ಬದಲಾವಣೆಗೆ ಒಳಗಾಗುವುದನ್ನು ಬರಿಗಣ್ಣಿನಿಂದಲೇ ನೋಡಬಹುದು. ಬಿಸಿಲ ಕಾಲದಲ್ಲಿ, ಛಾಯೆಯ ಬಿಸಿ ಪ್ರಾಯದಿಂದಾಗಿ, ಹೂವುಗಳು ತಿಳಿ ಬಣ್ಣ ತಾಳಿ, ಸೂರ್ಯನ ಶಾಖವನ್ನು ಪ್ರತಿಫಲಿಸಿ, ಮರಳಿ ಆಕಾಶಕ್ಕೆ ಕಳುಹಿಸುತ್ತವೆ. ತನ್ಮೂಲಕ ಭೂಮಿ ತಂಪಾಗಿರುವಂತೆ ನೋಡಿಕೊಳ್ಳುತ್ತವೆ. ಹಾಗಾಗಿ ವಿಶ್ವಪ್ರಜ್ಞೆಯೊಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾದ ಹಾದ್ಯತೆ ಮಾನವನಿಗೆ ಅತೀ ಹೆಚ್ಚು ಅರಿಬೇಕು. ಆದರೆ ವಿಪರ್ಯಾಸ ಎಂಬಂತೆ ಅಧುನಿಕ ಮಾನವ, ತನ್ನ ಆಲೋಚನಾ ಸಾಮರ್ಥ್ಯವನ್ನು, ವಿಶ್ವಪ್ರಜ್ಞೆಯೊಂದಿಗೆ ಪೂರಕವಾಗಿ ಸ್ಪಂದಿಸುವಂತೆ ಮಾಡದೆ, ವಿರುದ್ಧ ಬಳಕೆಯ ಅಸ್ತ್ರವನ್ನಾಗಿಸಿಕೊಂಡು, ಬ್ರಹ್ಮಾಂಡದ ಶಾಂತಿಯನ್ನು ಕದಡುತ್ತಾ, ಭಸ್ಮಾಸುರನ ಹೆಜ್ಜೆ ಸುತ್ತಾ, ಎಲ್ಲಾ ಸರಂಕ್ಷಣೆಗಳನ್ನು ಸಂಕಷ್ಟಕ್ಕೆ ದೂಡುವ ಧಾವಂತದಲ್ಲಿದ್ದಾನೆ. ಎಚ್ಚೆತ್ತುಕೊಳ್ಳದಿದ್ದರೆ ಬಾಹ್ಯ ಪರಿಸರದೊಂದಿಗೆ ತಾನೂ ವಿನಾಶದಂಚನ್ನು ತಲುಪಬೇಕಾಗುತ್ತದೆ. ಜಗತ್ತನ್ನು ಸುಂದರಗೊಳಿಸಿದ ತಾನೂ ಸೌಂದರ್ಯದ ಭಾಗವಾಗಬಹುದು ಎಂಬ ಅರಿವು ಎಲ್ಲರಲ್ಲೂ ಜಾಗೃತವಾಗಬೇಕಿದೆ.

ಇರಬೇಕು, ಇರಬೇಕು.. ನಿಂದಕರಿರಬೇಕು..

● ಸರಸ್ವತಿ ವಿಶ್ವನಾಥ್ ಪಾಟೀಲ್ ಕಾರಟಗಿ

ಹಳ್ಳಿಯ ಭಾಷೆಯಲ್ಲಿ ಹೇಳ್ಬೇಕಂದ್ರೆ, ನಿಂದನೆ ಅಂದ್ರೆ ವಿಷ ಅಲ್ಲ, ಅದೊಂದು ಔಷಧಿ. ಸರಿಯಾಗಿ ತಗೊಂಡ್ರೆ, ರೋಗ ಹೋಗುತ್ತೆ, ತಪ್ಪಾಗಿ ತಗೊಂಡ್ರೆ, ಹೊಟ್ಟೆ ಕಡಿತತ್ತೆ..!

ಎಲ್ಲಾ ಊರಲ್ಲೂ ನಿಂದನೆ ಮಾಡುವವರು ಬಹಳ ವೇಗವಾಗಿ ಇನ್ನೊಬ್ಬರ ಬಗ್ಗೆ ಯೋಚಿಸುತ್ತಾರೆ, ಅದು ಹೇಗೆ ಅಂದರೆ ನಮಗೆ ಏನು ಬೇಕು ಅಂತ ನಮಗಿಂತ ಮುಂಚೆ ಅವರಿಗೆ ಗೊತ್ತು. ನಿಂದನೆ ಮಾಡುವವರು ಯಾರಂದ್ರೆ, ಸ್ವಯಂಘೋಷಿತ ವಿಮರ್ಶಕರು. ಅವರಿಗೆ ನಮ್ಮ ಜೀವನದ ಬಗ್ಗೆ ಎಷ್ಟು ಆಸಕ್ತಿ ಅಂದ್ರೆ, ನಮಗಿಂತ ಹೆಚ್ಚು ನಮ್ಮ ಉಡುಪು, ನಮ್ಮ ನಡತೆ, ನಮ್ಮ ಮಾತು, ನಮ್ಮ ಕನಸು, ನಮ್ಮ ವೈಯಕ್ತಿಕ ವಿಚಾರ ಎಲ್ಲದರ ಮೇಲೂ ಉಚಿತ ಸಲಹೆ ನೀಡುತ್ತಾರೆ. ನಿಜ ಹೇಳ್ಬೇಕು ಅಂದ್ರೆ, ಇಂಥವರು ಇಲ್ಲದಿದ್ದರೆ ನಮ್ಮ ಆತ್ಮಾವಲೋಕನವೇ ಆಗ್ತಿರಲಿಲ್ಲ. ಹಾಸ್ಯಾಸ್ಪದ ಸಂಗತಿ ಏನೆಂದರೆ, ನಿಂದನೆ ಮಾಡುವವರೇ ನಮ್ಮ ಪ್ರಗತಿಯನ್ನು ಅಳೆಯುವ ಮೀಟರ್. ನಾವು ಮುಂದೆ ಎತ್ತರಕ್ಕೆ ಹೋದಂತೆ ಅವರ ನಿಂದನೆಯ ವಾಲ್ಯೂಮ್ ಜಾಸ್ತಿ ಆಗುತ್ತೆ. ಶಾಂತವಾಗಿದ್ದರೆ ಇವರು ಏನೂ ಇಲ್ಲ ಅಂತಾರೆ, ಸ್ವಲ್ಪ ಮುಂದೆ ಹೋದರೆ ಇವರು ಓವರ್ ಅಂತಾರೆ. ಅಂದರೆ ನಾವು ಸರಿಯಾದ ದಾರಿಯಲ್ಲಿದ್ದೇವೆ ಅನ್ನೋ ಸಿಗ್ನಲ್.

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಂತೂ ನಿಂದನೆ ಇನ್ನಷ್ಟು ಹೆಚ್ಚಾಗಿದೆ. ಮುಖವಾಡಮರೆಯಾಗಿ ಹೇಳಲು ಧೈರ್ಯವಿಲ್ಲದವರು, ಪರದೆಯ ಹಿಂದೆ ಕುಳಿತು ಕಟುವಾಗಿ ನಿಂದಿಸುತ್ತಾರೆ. ಇದರಿಂದ ಅನೇಕರು ಮಾನಸಿಕವಾಗಿ ಕುಗ್ಗುತ್ತಾರೆ. ಆದರೆ ಇಲ್ಲಿ ನಾವು ಒಂದು ವಿಷಯ ನೆನಪಿಡಬೇಕು, ನಮ್ಮ ಮೌಲ್ಯವನ್ನು ನಿರ್ಧರಿಸುವ ಅಧಿಕಾರ ಯಾರ ಕೈಯಲ್ಲೂ ಇಲ್ಲ, ನಮ್ಮ ಆತ್ಮಗೌರವ ನಮ್ಮ ಕೈಯಲ್ಲೇ ಇದೆ. ಅದನ್ನು ನಿಂದನೆಯ ಕೈಗೆ ಒಪ್ಪಿಸಬಾರದು. ನಿಂದನೆಯನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು. ಬಹುಶಃ ಎಂದಿನ ವ್ಯಕ್ತಿಯ ಒಳಗಿನ ಅಸಮಾಧಾನ, ವಿಫಲತೆ, ಅಸೂಯೆ ನಿಂದನೆಯ ರೂಪದಲ್ಲಿ ಹೊರಬರುತ್ತಿರಬಹುದು. ಅದು ನಮ್ಮ ತಪ್ಪಲ್ಲ, ಅದನ್ನು ನಾವು ಅರಿತಾಗ ಮನಸ್ಸು ಹಗುರವಾಗುತ್ತದೆ. ಅವರು ನನ್ನ ಬಗ್ಗೆ ಮಾತಾಡಿದ್ದಾರೆ ಎನ್ನುವ ಬದಲು ಅವರ ಮನಸ್ಥಿತಿ ಹೀಗಿದೆ ಎಂದು ಯೋಚಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು.

ನಿಂದನೆ ಬಂದಾಗ ನಮ್ಮೊಳಗೆ ಒಂದು ಪ್ರಶ್ನೆ ಕೇಳಿಕೊಳ್ಳಿ 'ಈ ಮಾತು ನನ್ನನ್ನು ನಿಲ್ಲಿಸುತ್ತಿದೆಯೇ, ಅಥವಾ ಮುಂದಕ್ಕೆ ನಡೆಯಲು ಪ್ರೇರೇಪಿಸುತ್ತಿದೆಯೇ?' ಅದು ನಿಮ್ಮನ್ನು ನಿಲ್ಲಿಸುತ್ತಿದ್ದರೆ, ಅದಕ್ಕೆ ಶಕ್ತಿ ಕೊಡಬೇಡಿ. ಅದು ಅಡ್ಡಿಯಲ್ಲ, ಅದು ನಿಮ್ಮ ಶಕ್ತಿಯನ್ನು ಪರೀಕ್ಷಿಸಲು ಬಂದ ಅವಕಾಶ. ನಿಮ್ಮೊಳಗಿನ ಧೈರ್ಯ ಎಷ್ಟು ಗಟ್ಟಿಯಾಗಿದೆ, ನಿಮ್ಮ ನಂಬಿಕೆ ಎಷ್ಟು ದೃಢವಾಗಿದೆ ಎಂಬುದನ್ನು ಅಳೆಯುವ ಒಂದು ಮಾನಸಿಕ ಪರೀಕ್ಷೆ ಮಾತ್ರ ನಿಂದನೆ. ಹಾಗಾಗಿ ಅದರಲ್ಲಿ ಸೋಲಬೇಡಿ, ಬದಲಾಗಿ ಅದನ್ನೇ ನಿಮ್ಮ ಏರುಗತಿಯ ಮೆಟ್ಟಿಲಾಗಿಸಿಕೊಳ್ಳಿ.

ನಿಮ್ಮನ್ನು ಮುಂದೆ ಹೋಗಲು ಪ್ರೇರೇಪಿಸುತ್ತಿದ್ದರೆ, ಅದನ್ನು ಆಶೀರ್ವಾದವೆಂದು ಸ್ವೀಕರಿಸಿ. ನಿಮ್ಮ ಮೇಲೆ ಎಸೆದ ಕಲ್ಲುಗಳಿಂದಲೇ ನೀವು ನಿಮ್ಮ ಗುರಿಯ ದಾರಿಯನ್ನು ಕಟ್ಟಬಹುದು. ನಿಂದನೆ ನಿಮ್ಮ ದಾರಿಯನ್ನು ತಡೆಹಿಡಿಯಲು ಬಂದ

ನಿಂದನೆಯನ್ನು ಧನಾತ್ಮಕವಾಗಿ ಸ್ವೀಕರಿಸಿದಾಗ ನಮ್ಮೊಳಗೆ ಸಹನಶೀಲತೆ, ತಾಳ್ಮೆ, ಆತ್ಮವಿಶ್ವಾಸ ಹೆಚ್ಚುತ್ತದೆ. ಜೀವನದ ದೊಡ್ಡ ಸವಾಲುಗಳನ್ನು ಎದುರಿಸಲು ನಾವು ಸಿದ್ಧರಾಗುತ್ತೇವೆ. ನಿಂದನೆಯೇ ನಮ್ಮನ್ನು ಗಟ್ಟಿ ಮಾಡುತ್ತದೆ. ಬೆಂಕಿಗೆ ತಾಗಿಸಿದಾಗ ಬಂಗಾರ ಶುದ್ಧವಾಗುವಂತೆ, ನಿಂದನೆಯ ತಾಪದಲ್ಲಿ ನಮ್ಮ ವ್ಯಕ್ತಿತ್ವ ಮತ್ತಷ್ಟು ಮೆರುಗು ಪಡೆಯುತ್ತದೆ. ನಿಂದನೆಯನ್ನು ಧನಾತ್ಮಕವಾಗಿ ಸ್ವೀಕರಿಸುವುದು ಎಂದರೆ ಮೌನವಾಗಿರುವುದಲ್ಲ, ಬುದ್ಧಿವಂತಿಕೆಯಿಂದ ಪ್ರತಿಕ್ರಿಯಿಸುವುದು ಮುಖ್ಯ. ಅಗತ್ಯವಿದ್ದರೆ ತಿದ್ದಿಕೊಳ್ಳಿ, ಅನಾವಶ್ಯಕವಾದರೆ ನಿರ್ಲಕ್ಷಿಸಿ. ಪ್ರತಿಯೊಂದು ಮಾತಿಗೂ ಉತ್ತರ ಕೊಡುವ ಅಗತ್ಯವಿಲ್ಲ, ಕೆಲವೊಮ್ಮೆ ಮೌನವೇ ಅತ್ಯುತ್ತಮ ಉತ್ತರವಾಗುತ್ತದೆ. ಹಾಗಾಗಿ ನಿಮ್ಮ ಬೆಳವಣಿಗೆಯೇ ನಿಮ್ಮ ಪ್ರತಿಕ್ರಿಯೆಯಾಗಲಿ.

ನಮ್ಮ ವ್ಯಕ್ತಿತ್ವದ ಮೌಲ್ಯವನ್ನು ನಿರ್ಧರಿಸುವ ಅಧಿಕಾರ ಯಾರ ಕೈಯಲ್ಲೂ ಇಲ್ಲ, ನಮ್ಮ ಆತ್ಮಗೌರವ ನಮ್ಮ ಕೈಯಲ್ಲೇ ಇದೆ. ಅದನ್ನು ನಿಂದನೆಯ ಕೈಗೆ ಒಪ್ಪಿಸಬಾರದು. ನಿಂದನೆಯನ್ನು ಧನಾತ್ಮಕವಾಗಿ ಸ್ವೀಕರಿಸಿದಾಗ ನಮ್ಮೊಳಗೆ ಸಹನಶೀಲತೆ, ತಾಳ್ಮೆ, ಆತ್ಮವಿಶ್ವಾಸ ಹೆಚ್ಚುತ್ತದೆ. ಜೀವನದಲ್ಲಿ ಮುಂದೆ ಸಾಗಲು, ಬೆಳೆಯಲು, ಶಾಂತಿಯನ್ನು ಕಾಯ್ದುಕೊಳ್ಳಲು ನಿಂದನೆಯನ್ನು ಧನಾತ್ಮಕವಾಗಿ ಸ್ವೀಕರಿಸುವ ಮನೋಭಾ ಅತ್ಯಂತ ಅಗತ್ಯ.

ಜೀವನದ ಪಯಣದಲ್ಲಿ ಪ್ರತಿಯೊಬ್ಬರೂ ಒಂದಲ್ಲೊಂದು ದಿನ ನಿಂದನೆಯ ರುಚಿ ಅನುಭವಿಸುತ್ತಾರೆ. ಯಾರೋ ನಿಮ್ಮ ಪ್ರಯತ್ನಗಳನ್ನು ತಿರಸ್ಕರಿಸುತ್ತಾರೆ, ಯಾರೋ ನಿಮ್ಮ ಸಾಮರ್ಥ್ಯವನ್ನು ಪ್ರಶ್ನಿಸುತ್ತಾರೆ, ಮತ್ತೆ ಯಾರೋ ನಿಮ್ಮ ಮೌನವನ್ನು ದುರ್ಬಲತೆ ಎಂದು ಭಾವಿಸುತ್ತಾರೆ. ಆದರೆ ನೆನಪಿಟ್ಟುಕೊಳ್ಳಿ ನೀವು ಬೆಳೆಯುತ್ತಿರುವಾಗಲೇ ನಿಂದನೆ ಆರಂಭವಾಗುತ್ತದೆ. ನೀವು ಏನೂ ಮಾಡದಿದ್ದರೆ ಯಾರಿಗೂ ನಿಮ್ಮ ಬಗ್ಗೆ ಮಾತಾಡಲು ವಿಷಯವೇ ಇರದು.

ನಿಂದನೆಯ ಮಾತುಗಳು ನಿಮ್ಮ ಮನಸ್ಸನ್ನು ಕುಗ್ಗಿಸಬಹುದು, ಆದರೆ ನಿಮ್ಮ ಆತ್ಮವಿಶ್ವಾಸವನ್ನು ಕುಸಿಯಲು ಬಿಡಬೇಡಿ. ನಿಮ್ಮ ವ್ಯಕ್ತಿತ್ವದ ಮೌಲ್ಯವನ್ನು ನಿರ್ಧರಿಸುವ ಅಧಿಕಾರ ಯಾರಿಗೂ ಇಲ್ಲ. ನಿಮ್ಮ ಬೆಲೆ ಇರುವುದು ನಿಮ್ಮ ಪರಿಶ್ರಮದಲ್ಲಿ, ಸತ್ಯನಿಷ್ಠೆಯಲ್ಲಿ, ಕನಸುಗಳಲ್ಲಿ ಮಾತ್ರ. ಅದನ್ನು ಯಾರೋ ನಾಲ್ಕು ಮಾತುಗಳಿಂದ ಅಳೆಯಲು ಸಾಧ್ಯವೇ ಇಲ್ಲ. ಜೀವನದಲ್ಲಿ ಮುಂದೆ ಸಾಗಲು, ಬೆಳೆಯಲು, ಶಾಂತಿಯನ್ನು ಕಾಯ್ದುಕೊಳ್ಳಲು ನಿಂದನೆಯನ್ನು ಧನಾತ್ಮಕವಾಗಿ ಸ್ವೀಕರಿಸುವ ಕಲೆ ಅತ್ಯಂತ ಅಗತ್ಯ. ನಿಂದನೆ ನಮ್ಮ ಶತ್ರುವಲ್ಲ ಸರಿಯಾಗಿ ಬಳಸಿಕೊಂಡರೆ ಅದು ನಮ್ಮ ಅತ್ಯುತ್ತಮ ಗುರು..!

ಸಗಣಿಯಿಂದ ಸುಂದರ ಕಲಾಕೃತಿ

ಸಗಣಿಯಿಂದ ಮನೆಯ ಅಲಂಕಾರಿಕ ವಸ್ತುಗಳ ತಯಾರಿಕೆಯನ್ನೂ ಮಾಡಬಹುದು ಎಂಬುವುದು ನಿಜಕ್ಕೂ ವಿಶಿಷ್ಟ ಹಾಗೂ ವಿಭಿನ್ನ ಕಲ್ಪನೆ. ಇಂತಹ ಉದ್ಯಮಗಳನ್ನು ಬೆಳೆಸುವ ನಿಟ್ಟಿನಲ್ಲಿ ಸರಕಾರವು ಸಾಲ ಮತ್ತು ಸಬ್ಸಿಡಿ ಯೋಜನೆಗಳನ್ನೂ ರೂಪಿಸಿದೆ.

● ಜ್ಯೋತಿ ಮಲ್ಲೇಶ್, ಮೈಸೂರು

'ಇಟ್ಟರೆ ಸಗಣಿ ತಟ್ಟಿದರೆ ಬೆರಣಿ ಸುಟ್ಟರೆ ವಿಭೂತಿ..'

ಹೀಗೆ ಮುಂದುವರಿದು ಹೋದರೆಲ್ಲ ಸಗಣಿಯ ಶ್ರೇಷ್ಠತೆಯ ಮೆರುಕೃತಿಗೆ ಹೀಗೊಂದು ಕಲಾಕೃತಿಯ ಗರಿಯು ಸೇರಿಕೊಂಡಿದೆ ಎಂದರೆ ಅಚ್ಚರಿ ಏನಿಲ್ಲ. ಪಂಚಗವ್ಯಗಳಲ್ಲಿ ಒಂದಾದ ಸಗಣಿಯು ತನ್ನದೇ ಆದ ಸ್ಥಾನಮಾನ ಹೊಂದಿದೆ, ಹಾಗಾಗಿಯೇ ಭಾರತೀಯರಾದ ನಾವು ಪವಿತ್ರ ಹಾಗೂ ಶುದ್ಧತೆಯ ಸಂಕೇತ ಸಗಣಿಯನ್ನು ಶುಭ ಕಾರ್ಯಗಳಲ್ಲಿ ಪೂಜೆಗಳಲ್ಲಿ ಬಳಸುತ್ತಾ ಬಂದಿದ್ದೇವೆ.

ಗೋ ಉತ್ಪನ್ನಗಳ ತಯಾರಿಕೆಯು ವಿಶೇಷವಾಗಿ ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಸ್ವಯಂ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಉಪಯುಕ್ತವಾಗಿದೆ. ಸಗಣಿಯಿಂದ ಮನೆಯ ಅಲಂಕಾರಿಕ ವಸ್ತುಗಳ ತಯಾರಿಕೆಯನ್ನೂ ಮಾಡಬಹುದು ಎಂಬುವುದು ನಿಜಕ್ಕೂ ವಿಶಿಷ್ಟ ಹಾಗೂ ವಿಭಿನ್ನ ಕಲ್ಪನೆ. ಹಾಗಿದ್ದರೆ ಬನ್ನಿ ಸರಳ ಪ್ರಕ್ರಿಯೆಯಾಗಿರುವ ಅದನ್ನು ಹೇಗೆ ತಯಾರಿಸುವುದು ಎಂಬುದನ್ನು ಇಲ್ಲಿ ಈಗ ನೋಡೋಣ:

ಮೊದಲು ಸಗಣಿಯನ್ನು ಚೆನ್ನಾಗಿ ಒಣಗಿಸಿ ಪುಡಿ ಮಾಡಿ ಜರಡಿಗೊಳಿಸಬೇಕು, ಆ ಬಳಿಕ ಚೂರು ಜೇಡಿಮಣ್ಣು ಹಾಗೂ ನೈಸರ್ಗಿಕ ಅಂಟು ಸೇರಿಸಿ ಸ್ವಲ್ಪ ಸ್ವಲ್ಪವಾಗಿ ನೀರನ್ನು ಬೆರೆಸುತ್ತಾ ಗಟ್ಟಿ ಚಪಾತಿ ಹಿಟ್ಟಿನ ಹದಕ್ಕೆ ಅದನ್ನು ತರಬೇಕು.

ಆಭರಣದ ಅಚ್ಚುಗಳಲ್ಲಿ ಅದನ್ನು ತುಂಬಿಸಿ ತೆಗೆದು ಹಸಿ ಇರುವಾಗಲೇ ಮೆಟಲ್ ಪಿನ್ ಗಳನ್ನು ಬಳಸಿ ಹೋಲ್ ಮಾಡಿ ನಂತರ ಬೇಕಾದ ರೂಪವನ್ನು ಕೊಟ್ಟು ನೆರಳಿನಲ್ಲಿಯೇ 5ರಿಂದ 7 ದಿನಗಳ ಕಾಲ ಒಣಗಿಸಬೇಕು. ಒಣಗಿದ ಆಚ್ಚುಗಳಿಗೆ ಆಕ್ರಲಿಕ್ ಬಣ್ಣಗಳನ್ನು ಲೇಪಿಸಿ ಧೂಳಿನಿಂದ ರಕ್ಷಣೆಗಾಗಿ ಹಾಗೂ ದೀರ್ಘಕಾಲ ಬಳಕೆಗಾಗಿ ವಾರ್ನಿಸ್ ಬಳಿದರೆ ನಂತರ ನಮಗೆ ಬೇಕಾದ ಹಾಗೇ ಜೋಡಿಸಿ ಪೋಣಿಸಿದರೆ ಬಾಗಿಲು ತೋರಣ, ಗೋಡೆಗೆ ನೇತುಹಾಕುವ ಕಲಾಕೃತಿ ಹೀಗೆ ಕಲಾತ್ಮಕ ಚಿತ್ರಗಳು ಸಿದ್ಧಗೊಳ್ಳುತ್ತವೆ.

ಸಗಣಿಯಿಂದ ತಯಾರಿಸಿದ ಅಲಂಕಾರಿಕ ವಸ್ತುಗಳು ಮಂಗಳದಾಯಕ ಹಾಗೂ ಶುದ್ಧತೆ ಭಾವವನ್ನು ತುಂಬಿಕೊಂಡಿರುತ್ತವೆ. ಮನೆಯು ಸದಾ ಧನಾತ್ಮಕ ಅನುಭೂತಿಯಿಂದ ಕೂಡಿರುತ್ತದೆ ಎಂಬ ನಂಬಿಕೆ ಇದೆ.

ಇಂತಹ ಉದ್ಯಮಗಳನ್ನು ಬೆಳೆಸುವ ನಿಟ್ಟಿನಲ್ಲಿ ಸರಕಾರವು ಸಾಲ ಮತ್ತು ಸಬ್ಸಿಡಿ ಯೋಜನೆಗಳನ್ನು ರೂಪಿಸಿದೆ. ಮುಖ್ಯವಾಗಿ ಪಿಎಂಇಜಿಪಿ (ಪ್ರಧಾನಮಂತ್ರಿ ಉದ್ಯೋಗ ಸೃಜನ ಯೋಜನೆ), ಮುದ್ರಾ ಯೋಜನೆ, ಅದಲ್ಲದೆ ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯ ಅಡಿಯಲ್ಲಿ ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯ ಹಾಗೂ ಸಬ್ಸಿಡಿಯನ್ನು ಇಂತಹ ಗುಡಿ ಕೈಗಾರಿಕೆಗಳಿಗೂ ಕೇಂದ್ರ ಸರಕಾರ ನೀಡುತ್ತಾ ಬಂದಿದೆ.

ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ: ಕೆವಿಐಸಿ (ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ) ಯು ಸಗಣಿ ಉತ್ಪನ್ನಗಳ ತಯಾರಿಕೆಗೆ ತರಬೇತಿ ನೀಡುತ್ತಿದೆ. ರುಡ್‌ಸೆಟ್ ಸಂಸ್ಥೆಯು ಗ್ರಾಮೀಣ ಭಾಗದಿಂದ ಬಂದವರಿಗಾಗಿ ಈ ಕುರಿತಾಗಿ ಉಚಿತವಾಗಿ ವಸತಿ ಸಹಿತ ತರಬೇತಿಯನ್ನು ನೀಡುತ್ತಿದೆ.

ಮಾರಾಟ ಹೇಗೆ, ಎಲ್ಲಿ: ಜೆಇಎಂ (ಗವರ್ನಮೆಂಟ್ ಈ ಮಾರ್ಕೆಟ್ ಪ್ಲೇಸ್) ನಲ್ಲಿ ಮಾರಾಟ ಮಾಡಬಹುದಾಗಿದೆ. ಟ್ರೈಫ್ ಇಂಡಿಯಾ ಸಂಸ್ಥೆಯ ಮೂಲಕ ದೊಡ್ಡ ನಗರಗಳಲ್ಲಿ ಮಾರಾಟ ಮಾಡುವ ಅವಕಾಶವನ್ನು ಪಡೆದುಕೊಳ್ಳಬಹುದಾಗಿದೆ. ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಆಯೋಜಿಸುವ ವಸ್ತು ಪ್ರದರ್ಶನಗಳಲ್ಲಿ ಕಡಿಮೆ ಬಾಡಿಗೆಗೆ ಮಾರಾಟ ಮಳಿಗೆಗಳನ್ನು ನೀಡಲಾಗುತ್ತಿದೆ.

ಗೋ ಉತ್ಪನ್ನಗಳ ಬಳಕೆಯು ಪರಿಸರ ಸಂರಕ್ಷಣೆ ಹಾಗೂ ಮಾಲಿನ್ಯ ಮುಕ್ತ ಸಮಾಜವನ್ನು ನಿರ್ಮಿಸುವಲ್ಲಿ ಸಹಕಾರಿ, ಹಾಗಾಗಿ ಪರಿಸರ ಸ್ನೇಹಿ ಉದ್ಯಮವಾದ ಪಂಚಗವ್ಯದ ಉತ್ಪನ್ನಗಳನ್ನು ಬಳಸುವ ಮೂಲಕ ನಾವು ಈ ಉದ್ಯಮವನ್ನು ಸದಾ ಪ್ರೋತ್ಸಾಹಿಸೋಣ.

ಮಾನವೀಯ ಮೌಲ್ಯಗಳೇ ನಮ್ಮ ಉಸಿರಾಗಲಿ

● ಸಿದ್ದಣ್ಣ ಪಿ. ವಾಡೇದ, ಮೇಳಕುಂದಾ

ಮಾನವೀಯ ಮೌಲ್ಯಗಳು ಸಮಾಜದ ಸ್ವಾಸ್ತ್ಯ ಕಾಪಾಡುವ ಸಂಜೀವಿನಿ ಇದ್ದಂತೆ, ಹಾಗಾಗಿ ಅದರ ಉಳಿವಿಗೆ ಸದಾ ಶತಪ್ರಯತ್ನ ನಡೆಯುತ್ತಲೇ ಇರುತ್ತದೆ. ಪ್ರಪಂಚದ ಶ್ರೇಷ್ಠ ಸಂಸ್ಕೃತಿಯನ್ನೊಳಗೊಂಡ ನಮ್ಮ ದೇಶ ಇದರ ಎಲ್ಲರಿಗೂ ಮಾದರಿ. ವಿವಿಧತೆಯಲ್ಲಿ ಏಕತೆ ಮೆರೆಯುವ ಭವ್ಯತೆಯ ನಾಡು ನಮ್ಮದು. ಇಲ್ಲಿ ಮೌಲ್ಯಗಳಿಗೆ ಬರ ಇಲ್ಲ, ಮಾನವೀಯ ಮೌಲ್ಯಗಳೇ ಇದರ ಉಸಿರು.

ನಾಗರಿಕ ಪ್ರಭುತ್ವ ಪ್ರಜೆಗಳಾದ ಇಂದಿನ ಮಕ್ಕಳಲ್ಲಿ ಮಾನವೀಯ ಮೌಲ್ಯಗಳು ಬೆಳೆಸಲು ಪ್ರಾಥಮಿಕ ಶಾಲಾ ಹಂತದಿಂದಲೇ ಪಠ್ಯಕ್ರಮ ಇದೆ. ಶಾಲಾ ವಾತಾವರಣ, ಮನೆಯ ಪರಿಸರ ಕೂಡ ಅವರಿಗೆ ಲಭ್ಯ ಇರುವ ಮಾನವೀಯ ಮೌಲ್ಯದ ಆಕರಗಳನ್ನು ಕಲಿಸುತ್ತವೆ. ನಮ್ಮ ಹಿರಿಯರು ತಮ್ಮ ಅನುಭವವನ್ನು ತಮ್ಮದೇ ಆದ ಶೈಲಿಯಲ್ಲಿ ಕಥೆ, ಹಾಡುಗಳ ಮೂಲಕ ಪ್ರೀತಿಯಿಂದ ನಮ್ಮ ಮನಸ್ಸಿಗೆ ಇಳಿಸಿದ್ದಾರೆ. ಕೆಲಗು ಕಥೆಗಳು, ಪುರಾಣ, ಪ್ರವಚನ, ವಚನ, ಕೀರ್ತನೆಗಳ ಮೂಲಕ ಸಮಾಜದಲ್ಲಿ ಪ್ರವಹಿಸಿ ಸುಧಾರಿಸುವ, ಜ್ಞಾನದ ಬೆಳಕು ಹೆಚ್ಚಿಸುವ ಆರೋಗ್ಯಕರ ಕಾರ್ಯ ಮಾಡಿದ್ದಾರೆ. ನಮ್ಮ ಅನಕ್ಷರಸ್ಥ ಪೂರ್ವಜರು ಓದು-ಬರಹದ ಅನುಪಸ್ಥಿತಿಯಲ್ಲಿಯೂ ಜನಪದ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದಾರೆ, ಇದು ಮೌಖಿಕವಾಗಿ ಪ್ರವಹಿಸಿ ಇಂದು ಕೆಲವರ ಪ್ರಯತ್ನದ ಫಲವಾಗಿ ಲಿಖಿತ ದಾಖಲೆಯಾಗಿ ರೂಪು ತಳೆದಿದೆ. ನಮ್ಮ ಪುರಾತನ ನಾಗರಿಕತೆಯಾದ ಸಿಂಧೂ ನಾಗರಿಕತೆಯಿಂದ, ರಾಜ ಅಧಿಪತ್ಯ, ವಸಾಹತುಶಾಹಿ, ಸ್ವಾತಂತ್ರ್ಯ ಭಾರತದ ಉದ್ದಕ್ಕೂ ಈ ಮೌಲ್ಯಗಳನ್ನು ಉಳಿಸಿ, ಬೆಳೆಸಿಕೊಂಡು ಬರಲಾಗಿದೆ. ಹೀಗೆ ವಿವಿಧ ಮಾರ್ಗಗಳ ಮೂಲಕ ಮಾನವೀಯ ಮೌಲ್ಯಗಳ ಜೀವಂತಿಕೆ ಭಾರತೀಯ ಸಮಾಜದ ಹೃದಯದ ಸಿಂಹಾಸನ ಅಲಂಕರಿಸಿದೆ.



ಅಲ್ಪಸ್ವಲ್ಪ ವ್ಯತ್ಯಾಸ ಕಂಡರೂ ಎಲ್ಲಾ ಕಾಲದಲ್ಲೂ ಸತ್ಯ, ಪ್ರಾಮಾಣಿಕತೆ ಜೀವಂತವಾಗಿ ಇದ್ದವು. ಕಲಿಯುಗ ತುಂಬಾ ಕ್ರೂರಯುಗ, ಅಲ್ಲಿ ಒಳ್ಳೆಯತನ ಎಂಬುದು ಇಲ್ಲ, ಎಂದಿಲ್ಲ. ಬಿಂಬಿಸಿದರೂ ಎಲ್ಲೋ ಒಂದು ಕಡೆ ಇರುವ ಈ ಮೌಲ್ಯಗಳು ಸಮಾಜದ ಸ್ವಾಸ್ಥ್ಯ ಹಾಳು ಆಗದಂತೆ ತಡೆದಿವೆ. ಕೇವಲ ಸಮಾಜದ ಉನ್ನತಿಕ್ಕೆ ಮೌಲ್ಯಗಳು ಬೇಕೆ? ಎಂಬ ಪ್ರಶ್ನೆ ನಮಗೆ ನಾವೇ ಹಾಕಿಕೊಂಡಾಗ, ಸ್ವಜನ ಸತ್ಯ ಅರಿವಿಗೆ ಬರುವುದು ಸಹಜ. ನಾವು ಸಮಾಜದ ಒಂದು ಭಾಗ ಆಗಿರುವಾಗ ಸಮಾಜದ ಒಳಿತು ನಮ್ಮ ಒಳಿತು ಅಲ್ಲವೇ? ಇದು ಒಂದು ಏಟಾದರೆ, ಅದರ ಯಾವಾಗ ನಾವು ಸತ್ಯ ಹಾಗೂ ಪ್ರಾಮಾಣಿಕತೆ ಇಂದ ಜೀವಿಸುತ್ತೇವೋ, ಆಗ ನಮ್ಮ ಮನಸ್ಸು ಧೈರ್ಯ, ದೃಢತೆ, ಆತ್ಮವಿಶ್ವಾಸದಿಂದ ಕೂಡಿರುತ್ತದೆ. ಮನಸ್ಸು ಸ್ವಸ್ಥವಾಗಿದ್ದರೆ ಯಾವ ಕಾರ್ಯವೇ ಆಗಲಿ ಯಶಸ್ವಿಯಾಗಬಲ್ಲದು. ಆಗ ಆ ಕಾರ್ಯಕ್ಕಿಂತ ಮಿಗಿಲಾಗಿ ಮಾನಸಿಕ ನೆಮ್ಮದಿ ನಮ್ಮದಾಗುತ್ತದೆ.

ತಂತ್ರಜ್ಞಾನ ಯುಗ, ಸ್ವಾರ್ಥತೆಯ ಯುಗದಲ್ಲಿ ಆಸ್ತಿ, ಅಂತಸ್ತು, ಹೆಸರು ಎಂದು ಪೈಪೋಟಿಗೆ ಬಿದ್ದು ಒತ್ತಡದ ಜೀವನ ಸಾಗಿಸುತ್ತಿದ್ದೇವೆ. ಈ ಮಧ್ಯದಲ್ಲಿ ಮಾನಸಿಕ ನೆಮ್ಮದಿ, ಸಂತೋಷದ ಕ್ಷಣಗಳು ಮರೀಚಿಕೆ ಆಗಿವೆ. ಹೀಗೆ ಒತ್ತಡದ ಬದುಕಿನ ಮಧ್ಯೆ ಮುಖದ ಮೇಲೆ ಒಂದಷ್ಟು ನಗು ಮೂಡಿಸಿಕೊಳ್ಳಬೇಕು. ಇತರರ ಮುಖದ ಮೇಲೂ ಮುಗುಳ್ನಗೆ ಮೂಡುವಂತೆ ಮಾಡಬೇಕು. ಇತರರೊಂದಿಗೆ ಸಿಹಿ ಮಾತುಗಳನ್ನಾಡುತ್ತಾ ಉತ್ತಮ ಸಂಬಂಧ ವೃದ್ಧಿಸಿಕೊಳ್ಳಬೇಕು. ಮಾತೇ ಮುತ್ತು, ಮಾತೇ ಮೃತ್ಯು ಎಂಬಂತೆ ಮಾತಿನ ಸರಿಯಾದ ಬಳಕೆ ಬಹುಮುಖ್ಯ. ಮಾತಿನ ಪ್ರಯೋಗ ಸರಿ ಇದ್ದರೆ ಅದು ಮುತ್ತಾಗಿ, ಅಸಮಂಜಸ ಪ್ರಯೋಗ ಮೃತ್ಯುವಾಗಿಯೂ ಪರಿಣಮಿಸ ಬಹುದಾದ್ದರಿಂದ ಮಾತಿನ ಮೌಲ್ಯ ಅರಿತು ಮಾತನಾಡುವುದು ಅವಶ್ಯಕ.

ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆ ಕೂಡ ಮನುಷ್ಯನ ವಿವೇಕದ ಮೌಲ್ಯ ತಿಳಿಸುತ್ತದೆ. ಮಾತಿನ ಪ್ರಯೋಗ ಅರಿಯಬೇಕು ಅದು ಉತ್ತಮ ಸಂಬಂಧ ಬೆಸೆಯಲು, ಅರಿಯದಿದ್ದರೆ ಮುರಿಯಲು ಬಳಕೆ ಆಗುತ್ತದೆ. ತ್ರೇತಾಯುಗ, ದ್ವಾಪರಯುಗ, ಕಲಿಯುಗ ಯಾವುದೇ ಇರಲಿ ಸತ್ಯ, ಪ್ರಾಮಾಣಿಕತೆಗಳು ವ್ಯಕ್ತಿಯನ್ನು ರಕ್ಷಿಸಿವೆ. ಸತ್ಯ ಯಾವಾಗಲೂ ಕಹಿಯಾಗಿರುತ್ತದೆ. ಸತ್ಯ ಹೇಳುವ ವ್ಯಕ್ತಿಯೂ ಕಹಿಯಾಗಿ ಕಾಣುತ್ತಾನೆ. ಯಾರ ಹತ್ತಿರವೂ ನಾವು ಸತ್ಯ ಹೇಳಲು ಹಿಂಜರಿಯ ಬಾರದು. ಒಂದು ಸುಳ್ಳು ಹತ್ತು ಸುಳ್ಳಿಗೆ ದಾರಿ ಮಾಡಿ ಕೊಡುತ್ತದೆ. ಸುಳ್ಳು ಸುಳ್ಳನ್ನು ಬೆಳೆಸಿದರೆ, ಸತ್ಯವು ಸತ್ಯವನ್ನು ಬೆಳೆಸುತ್ತದೆ. ಹಾಗಾಗಿ ನಮ್ಮ ಸುತ್ತಲಿನ ಪರಿಸರದ ವೃತ್ತಿಯಲ್ಲಿ ಭಾವನಾ, ಕಟ್ಟವರಾಗಿ ಕಂಡರೂ ನಮ್ಮತನ ಬಿಟ್ಟು ಕೊಡಬಾರದು. ಆರೋಗ್ಯ ಸುಧಾರಿಸುವ ಔಷಧಿ ಕೂಡ ಕಹಿಯೇ ಆಗಿರುತ್ತದೆ. ಸತ್ಯ ಮಾತನಾಡುವ, ಪ್ರಾಮಾಣಿಕ ವ್ಯಕ್ತಿಯ ಜೊತೆ ಉತ್ತಮ ಬಾಂಧವ್ಯ ಹೊಂದುವುದು ಉತ್ತಮ

ಗಜೇಂದ್ರ ಮೋಕ್ಷದ ಕಥೆ

ಒಮ್ಮೆ ತ್ರಿಕೂಟ ಪರ್ವತದ ದಿವ್ಯ ಉದ್ಯಾನದಲ್ಲಿ ಗಜೇಂದ್ರ ಎಂಬ ಗಜರಾಜನು ಅತ್ಯಂತ ತನ್ನ ಗುಂಪಿನಿಂದ ಆವರಿಸಲ್ಪಟ್ಟು, ಸ್ವಚ್ಛಸ್ವಚ್ಛ ಸರೋವರಗಳು, ಸಮೃದ್ಧ ಸಸ್ಯಸಮೂಹ, ದಿವ್ಯ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಾ ವೈಭವದ ಜೀವನ ನಡೆಸುತ್ತಿದ್ದ.

ಹಿಂದಿನ ಜನ್ಮದಲ್ಲಿ ಅವನು ಇಂದ್ರದ್ಯುಮ್ನ ಎಂಬ ರಾಜನಾಗಿದ್ದು, ಶ್ರೀವಿಷ್ಣುವಿನ ಆರಾಧಕನಾಗಿದ್ದನು. ಆದರೆ ಕ್ಷಣಿಕ ಅಹಂಕಾರದ ಕಾರಣ ಒಬ್ಬ ಋಷಿಯಿಂದ ಶಪಿಸಲ್ಪಟ್ಟು ಆನೆಯಾಗಿ ಜನಿಸಿದ್ದನು. ಆದರೂ ಅವನ ಹೃದಯದಲ್ಲಿ ವಿಷ್ಣು ಸ್ಮರಣೆಯ ಒಂದಂಶ ಉಳಿದಿತ್ತು. ಅದ್ದರಿಂದಲೇ ಪರಮೇಶ್ವರನು ಅವನೊಳಗೆ ಅಂತಿಮ ಮುಕ್ತಿಗೆ ದಾರಿ ಮಾಡುವ ವಿನಯವನ್ನು ಜಾಗ್ರತಗೊಳಿಸಲು ಹೊಸ ರೂಪ ವನ್ನು ಕೊಟ್ಟಿದ್ದನು.

ಒಂದು ದಿನ ಗಜೇಂದ್ರನು ತನ್ನ ಗುಂಪಿನೊಂದಿಗೆ ದೊಡ್ಡ ಸರೋವರವೊಂದಕ್ಕೆ ಸ್ನಾನಕ್ಕೆ ಇಳಿದನು. ಆನೆಗಳು ಆನಂದದಿಂದ ಆಟವಾಡುತ್ತಿರುವಾಗ, ಆ ಸರೋವರದಲ್ಲೇ ವಾಸಿಸಿದ್ದ ಬಲಿಷ್ಠ ಮೊಸಳೆ ಗಜೇಂದ್ರನ ಕಾಲನ್ನು ತನ್ನ ದವಡೆಗಳಿಂದ ಹಿಡಿದು ಕೊಂಡಿತು. ಆರಂಭದಲ್ಲಿ ಗಜೇಂದ್ರನು ಎಚ್ಚೆ ಬಿಡಿಸಿಕೊಳ್ಳಲು ಪ್ರಯತ್ನಿಸಿದನು, ಮೊಸಳೆಯ ಹಿಡಿತ ಬಲವಾಗಿದ್ದು ಬಿಗಿಯಾಗುತ್ತಲೇ ಹೋಯಿತು, ಇಬ್ಬರೂ ಇಲ್ಲದಿರುವೆ ಕಾದಾಡಿದರು. ನೀರಿನಲ್ಲಿ ತನ್ನ ನೆಲೆಯಿರುವ ಮೊಸಳೆ ಬಲ ಪಡೆಯುತ್ತಾ ಹೋದರೆ, ಗಜೇಂದ್ರನು ದಣಿದು, ಅಸಹಾಯಕನಾಗಿ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋದನು.

ಕೊನೆಗೆ ಸಂಪೂರ್ಣವಾಗಿ ಮರಣದ ಅಂಚಿಗೆ ಬಂದಾಗ, ದೇಹದ ಶಕ್ತಿ ಅಹಂಕಾರ ಮತ್ತು ಜೊತೆ ಇರುವ ಆನೆಗಳು ತನ್ನನ್ನು ರಕ್ಷಿಸಲಾರರು ಎಂಬ ಸತ್ಯವನ್ನು ಗಜೇಂದ್ರನು ಅರಿತುಕೊಂಡನು.

ಸಂಪೂರ್ಣ ಅಸಹಾಯಕತೆಯ ಆ ಕ್ಷಣದಲ್ಲಿ, ಅವನ ಹೃದಯದಲ್ಲಿ ಹಿಂದಿನ ಪುರಾತನ ಸ್ಮರಣೆ ಜಾಗೃತವಾಯಿತು. ಹಿಂದಿನ ಜನ್ಮದಲ್ಲಿ ಇಂದ್ರದ್ಯುಮ್ನ ರಾಜನಾಗಿದ್ದಾಗ ಕಲಿತಿದ್ದ ಪ್ರಾರ್ಥನೆಯ ಪದಗಳು ಮತ್ತೆ ಸ್ಮೃತಿಗೆ ಬಂದವು. ತನ್ನ ಸೊಂಡಿಲಿನಲ್ಲಿ ಒಂದು ಕಮಲದ ಹೂವನ್ನು ಎತ್ತಿ, 'ಎಲ್ಲ ಕಾರಣಗಳಿಗೂ ಕಾರಣನಾದ ಪರಮಪ್ರಭುವೇ, ನಾನು ನಿನಗೆ ಶರಣಾಗುತ್ತೇನೆ.. ನನ್ನ ಶಕ್ತಿ, ನನ್ನ ಗುಂಪು ಮತ್ತು ನನ್ನ ಸಾಮರ್ಥ್ಯದಲ್ಲಿ

ನಾನು ಆಶ್ರಯ ಹುಡುಕಿದ್ದೆ, ಆದರೆ ಈಗ ನಿಜವಾದ ಆಶ್ರಯ ನೀನೇ ಎಂಬುದು ನನಗೆ ತಿಳಿಯಿತು' ಎನ್ನುತ್ತಾ ತನ್ನ ಸೊಂಡಿಲಿನಿಂದ ಸರೋವರದಿಂದ ಒಂದು ಕಮಲ ಹೂವನ್ನು ಕಿತ್ತು, ಕಂಪಿಸುವ ಭಕ್ತಿಯಿಂದ ಭಗವಂತನಿಗೆ ಅರ್ಪಿಸಿದನು. ಹಾತಕ ಮತ್ತು ಭಕ್ತಿಯಿಂದ ಜನಿಸಿದ ಈ ವಿನಮ್ರ ಕ್ರಿಯೆ ಭೌತಿಕ ಮಾಯೆಯ ಪರದೆಯನ್ನು ಭೇದಿಸಿ, ನೇರವಾಗಿ ಶ್ರೀವಿಷ್ಣುವಿನ ಹೃದಯವನ್ನು ತಲುಪಿತು. ಭಕ್ತನ ಆರ್ತನಾದವನ್ನು ಕೇಳಿದ ಕೂಡಲೇ ಶ್ರೀವಿಷ್ಣು ಗರುಡಾರೂಢನಾಗಿ ಸುದರ್ಶನ ಚಕ್ರ, ಶಂಖವನ್ನು ಹಿಡಿದು ಪ್ರತ್ಯಕ್ಷನಾದನು.

ಭಗವಂತನ ಪ್ರಕಾಶಮಾನವಾದ ರೂಪವನ್ನು ಕಂಡು, ಗಜೇಂದ್ರನ ಕಣ್ಣುಗಳು ಆನಂದ ಮತ್ತು ಭಕ್ತಿಭಾವದಿಂದ ತುಂಬಿ ಬಂದವು. ನೋಡ ನೋಡುತ್ತಿದ್ದಂತೆ ವಿಷ್ಣುವಿನ ಚಕ್ರದಿಂದ ಮೊಸಳೆ ಹತವಾಯಿತು. ಹಿಂದಿನ ಜನ್ಮದಲ್ಲಿ ಋಷಿಯನ್ನು ಹಾಸ್ಯ ಮಾಡಿದ ಕಾರಣ ಶಾಪಕ್ಕೊಳಗಾಗಿದ್ದ ಮೊಸಳೆಯಾಗಿ ಜನಿಸಿದ್ದ ಗಂಧರ್ವನಾದ ಹುಹು ಭಗವಂತನಿಗೆ ವಂದನೆ ಸಲ್ಲಿಸಿ, ಕೃತಜ್ಞತೆಯನ್ನು ವ್ಯಕ್ತಪಡಿಸಿ ಸ್ವರ್ಗಲೋಕಕ್ಕೆ ಏರಿದನು.

ನೋವಿನಿಂದ ಮುಕ್ತನಾದ ಗಜೇಂದ್ರನು 'ಭಗವಂತ, ನೀನು ನನ್ನನ್ನು ಕೇವಲ ಮೊಸಳೆಯಿಂದ ಮಾತ್ರವಲ್ಲ, ಅಹಂಕಾರ ಮತ್ತು ಮಾಯೆಯ ಮಹಾಮೋಸಳೆಯಿಂದಲೂ ರಕ್ಷಿಸಿರುವೆ' ಎಂದು ಎದ್ದು ಕೈ ಮುಗಿದನು.

ಮಹಾವಿಷ್ಣು ಮಂದಸ್ಮಿತ ನಗೆ ಚೆಲ್ಲುತ್ತಾ, 'ನೀನು ಸಂಪೂರ್ಣ ಅಸಹಾಯಕತೆಯಲ್ಲಿ ನನ್ನನ್ನು ಸ್ಮರಿಸಿದ್ದೀಯ. ಇದರಿಂದ ನೀನು ಎಲ್ಲ ಭಯಗಳಿಂದ ಮುಕ್ತನಾಗಿ ನನ್ನ ಧಾಮದಲ್ಲಿ ವಾಸಿಸುವೆ" ಎಂದು ಗಜೇಂದ್ರನನ್ನು ವೈಕುಂಠಕ್ಕೆ ಕರೆದೊಯ್ದ.

ಈ ಘಟನೆಗೆ ಸಾಕ್ಷಿಯಾದ ಋಷಿಗಳು ಹೀಗೆ ಘೋಷಿಸಿದರು: 'ನಿಷ್ಠೆಯಿಂದ ಪ್ರಭುವನ್ನು ಕರೆಯುವ ಆನೆ ಕೂಡ, ತರ್ಕದಲ್ಲಿ ಮುಳುಗಿದ ಅಹಂಕಾರಿ ಪಂಡಿತನಿಗಿಂತ ವೇಗವಾಗಿ ಭಗವಂತನನ್ನು ತಲುಪಬಹುದು'

'ನಿಜವೇ ಅಲ್ಲವೇ ? ಭಗವಂತನು ಭಕ್ತಿಯನ್ನು ಸ್ವೀಕರಿಸುವನು, ರೂಪದಿಂದಲೂ, ಬುದ್ಧಿಯಿಂದಲೂ ಅಳೆಯುವುದಿಲ್ಲ, ನಿನಗೆ ನೆತೆ' ಎಂದು ಬೇಡಿದ ನಂತರ ಭಗವಂತ ಎಲ್ಲವೂ ಆಗಿ ಕಾಪಾಡುತ್ತಾನೆ. ಗಜೇಂದ್ರನು ಒಮ್ಮೆ ಭಗವಂತನನ್ನು ಮರೆತಿದ್ದರೂ, ಭಗವಂತನು ಅವನನ್ನು ಎಂದಿಗೂ ಮರೆತಿರಲಿಲ್ಲ. ಗಜೇಂದ್ರನು ಶರಣಾದ ಕ್ಷಣದಲ್ಲೇ, ಆ ಮರೆತ ಬಂಧವು ಅತ್ಯಂತ ತನ್ನ ಮೂಲದ ಕಡೆಗೆ ಎಳೆಯಲು ಶಾಶ್ವತ ಚುಂಬಕದಂತೆ ಪುನಃ ಜಾಗೃತವಾಯಿತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಂತರಂಗದ ನೋವು-ನಲಿವುಗಳು

● ಬೇಲೂರು ರಾಮಮೂರ್ತಿ

ಇಡೀ ಬ್ರಹ್ಮಾಂಡದಲ್ಲಿ ನಮಗೆ ಎಷ್ಟೋ ವಿಚಾರಗಳು ಕಾಣುತ್ತವೆ, ಎಷ್ಟೋ ವಿಚಾರಗಳು ಕಾಣುವುದಿಲ್ಲ. ಕಣ್ಣಿಗೆ ಕಾಣುವುದನ್ನು ನೋಡಿ ನಂಬುವ ಹಾಗೆ ಕಣ್ಣಿಗೆ ಕಾಣದಿರುವುದನ್ನೂ ನಂಬುತ್ತೇವೆ. ಪ್ರತ್ಯಕ್ಷವಾಗಿ ಕಂಡರೂ



ಪ್ರಮಾಣಿಸಿ ನೋಡು ಎನ್ನುವ ಹಾಗೆ ಎದುರಿಗೆ ಇರುವುದನ್ನು ಕಾಣಲು ಹೊರಗಿನ ಕಣ್ಣು ಸಾಕು, ಆದರೆ ಎದುರಿಗೆ ಇಲ್ಲದಿರುವುದನ್ನು ಕಾಣಲು ಅಂತರಂಗದ ಕಣ್ಣು ಬೇಕು. ಅಂತರಂಗದ ಕಣ್ಣಿನ ದೃಷ್ಟಿಗೆ ಪರಿಧಿ ಇಲ್ಲ, ಅದು ಎಲ್ಲಿಂದ ಎಲ್ಲಿಯವರೆಗೆ ಬೇಕಾದರೂ ನೋಡುತ್ತಾ ನಮ್ಮ ಮನಸಿಗೆ ಹಿತವನ್ನುಂಟುಮಾಡುತ್ತದೆ.

ಉದಾಹರಣೆಗೆ ಹವಾಮಾನವನ್ನು ನಾವು ಕಾಣಲಾಗದೇ? ಹಾಗಂತ ಯಾರಾದರೂ ನನಗೆ ಹಸಿವು ಆಗುತ್ತಿದೆ, ಹಾಗೆಂದರೇನು ಅಂತ ಕೇಳೋ ಕಾಣುತ್ತದೆಯೇ? ಹಸಿವು ಎಂದರೆ ಹೊಟ್ಟೆಗೆ ಆಹಾರ ಕೊಡಬೇಕು ಎನ್ನುವುದು ಅಂತರಂಗದ ಕಣ್ಣಿನ ನೋಟದಿಂದ ಅರಿವಾಗುತ್ತದೆ. ಏಕೆಂದರೆ ನಮ್ಮ ಹೊಟ್ಟೆಯ ಹಸಿವಿನ ಅರಿವು ನಮಗೆ ಆಗುತ್ತದೆ. ದೂರದ ಊರಿನಲ್ಲಿರುವ ಬಂಧುಗೆ ಅನಾರೋಗ್ಯ ಎಂದರೆ ಅವರನ್ನು ಒಳಗಣ್ಣಿಂದ ಕಂಡು ನಾವು ನಿಂತಲ್ಲೇ ತೊಳಲಾಡುತ್ತಿರುತ್ತೇವೆ. ಇನ್ನು ನಮ್ಮನ್ನು ಆಗಲಿರುವ ಹಿರಿಯರು ನಾವು ಕಣ್ಣು ಮುಚ್ಚಿಕೊಂಡು ಕೂತರೆ ಅವರೂ ನಮ್ಮೆದುರಿಗೆ ಇರುವಂತೆ ಕಾಣುತ್ತಾರೆ.

ಹೆಚ್ಚು ಮಾಡಿಕೊಂಡು ನೋವು ತಿನ್ನುತ್ತಿರುವವರನ್ನು ನೋಡಿದಾಗ ಅಯ್ಯೋ ಪಾಪ ಎಷ್ಟು ನೋವು ಅನುಭವಿಸುತ್ತಿದ್ದಾನೋ ಅಂತ ನಮಗೇ ನೋವಾದ ಹಾಗೆ ಆಗುತ್ತದೆ. ಗಾಯ ಕಾಣುತ್ತದೆ, ನೋವು ಕಾಣುವುದಿಲ್ಲ, ಆದರೆ ಒಳಗಣ್ಣಿಂದ ನೋಡಿದಾಗ ಮಾತ್ರ ನೋವಿನ ಅರಿವಾಗುತ್ತದೆ.

ನಿಮಗೆಲ್ಲಾ ತಿಳಿದಿರುವಂತೆ ಅವನು ಪರಮಾತ್ಮ. ಪರಮ ಅತ್ಮನ ಒಂದು ಭಾಗ ನಮ್ಮಲ್ಲಿರುವ ಅತ್ಮ. ಪರಮಾತ್ಮನಿಗೆ ಯಾವುದೇ ಸ್ಪಷ್ಟ ಆಕಾರವಿಲ್ಲ, ಅದರೂ ಅವನು ಕೈಗೆಟುಕುವಂತೆ ತೆಗೆದುಕೊಂಡಿಟ್ಟಿದ್ದಾನೆ. ಕಾಲುಗಳಿಲ್ಲದಿದ್ದರೂ ಓಡುತ್ತಾನೆ. ಕಣ್ಣಿಲ್ಲದಿದ್ದರೂ ನೋಡುತ್ತಾನೆ. ಕಿವಿಯಿಲ್ಲದಿದ್ದರೂ ಕೇಳಿಸಿಕೊಳ್ಳುತ್ತಾನೆ. ನಾವೂ ಹಾಗೇ ಅಲ್ಲವೇ? ದೂರದ ಊರಿನಲ್ಲಿರುವ ಬಂಧುಗಳನ್ನೋ ಎಂದೋ ಭೇಟಿ ಮಾಡಿದ ಅವರ ಮನೆಯನ್ನು ಹೊಲಗದ್ದೆಗಳನ್ನು ಇಲ್ಲಿ ಕೂತೇ ವಿವರಿಸುತ್ತೇವೆ ಹಾಗಾದರೆ ನಮ್ಮ ಕಾಲುಗಳು ಅಲ್ಲಿಗೆ ಹೋದವೇ ಕಣ್ಣುಗಳು ಅಲ್ಲಿ ಹೋದವೇ, ಇಲ್ಲವಲ್ಲ, ನಮ್ಮ ಅಂತರಂಗದಲ್ಲಿರುವ ಆತ್ಮನೇ ಸಮುದ್ರಕ್ಕೆ ಹಾಗೆ ಕೈ, ಕಾಲು, ಕಣ್ಣು ಎಲ್ಲವೂ ತಾನೇ ಆಗುತ್ತಾನೆ. ಹೀಗಿರುವಾಗ ನಮ್ಮ ಸಮಾಜದ ಹಿತಕ್ಕಾಗಿ ಬಂಧುಗಳ ಜೊತೆಗಿನ ಸ್ನೇಹ ಸಂಬಂಧಗಳು ಉತ್ತಮಗೊಳ್ಳಲು ನಮ್ಮ ಅಂತರಂಗದ ಚಕ್ಷುಗಳನ್ನು ತೆರೆದು ನೋಡುವ ಪ್ರಯತ್ನ ಮಾಡಬಹುದು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಸಂತಾನ, ವಂಶ (3)
3. ಕನ್ನೆಗೆ ಹೊಡೆಯುವ ಏಟದು (4)
5. ನೀರಿನಲ್ಲಿ ಉಂಟಾದ ತೆರೆ (2)
6. ಮಾಡುವ ಕೆಲಸ (3)
8. ತಪ್ಪಿನ ವಿರುದ್ಧ ಹದ ತಿರುಗಿ ಬಂದಿದೆ (2)
10. ಕುಣಿ ಎನ್ನುತ್ತಾ ಬಂದಿರುವ ಮೇಕೆ (2)
11. ಜೀವ ತೆಗೆಯಬಲ್ಲ ನಂಜು (2)
13. ವಕಾಲತ್ತು ಮಾಡುವ ಉಪಾಯ (3)
14. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗುವುದು (3)
15. ಗೆಲುವು ಅಗುಲ್ಲ ಕೀರ್ತಿ (2)
17. ದರ್ಪದಂತೆ ತೋರುವ ರೀತಿ (2)
18. ಕತ್ತಲೆಯಂತಿರುವ ಅಜ್ಞಾನ (2)
20. ಹಣಕ್ಕಿರುವ ಬಳ್ಳಿಯ (3)
22. ಮನಸ್ಸಿನ ಅಲೆಗಳ ಸುಗಂಧ (2)
23. ದೇಹದಿಂದ ಹೊರಗೆ ಹಾಕುವುದು (4)
24. ರಾಜ ಅಥವಾ ಗುರುವಿನಿಂದ ತರುವ ನಿರ್ಣಯ (3)

ಮೇಲಿಂದ ಕೆಳಕ್ಕೆ

2. ತಂಟೆ ಅಥವಾ ಪೀಡೆ (3)
3. ನಯವಾಗಿರುವ ಸುತ (3)
4. ಇದೊಂದು ದೇವತೆಗಳ ವರ್ಗ (3)
5. ನಿರಂತರವಾದ ಎನ್ನುವುದರ ನಡುವೆ ಮದುವೆಯ ಗಂಡು ಬಂದಿದ್ದಾನೆ (5)
6. ಎರಡಕ್ಕರದ ಅರಣ್ಯ (2)
7. ಪದ್ಯ ರಚನೆ ಮಾಡುವವ (2)
9. ಸಿಹಿಯಾದ ಸ್ವರಣೆಯದು (5)
10. ಮನೆ ಅಥವಾ ವಾಸಸ್ಥಲ (3)
12. ನಿಯಮ ಅಥವಾ ಕರಾರು (3)
16. ವೇಗವಾಗಿ ಬಂದಿರುವ ಬಾಣ (2)
17. ಮತ್ತೊಂದು ಗುಂಪು (2)
19. ಮೂರಕ್ಷರದ ಆನೆ (3)
21. ಸುಗಂಧಯುಕ್ತವಾದ ಸೀಸ (3)
22. ಸರಕಾರಕ್ಕೆ ಕೊಡುವ ನಿಗದಿಯಾದ ಹಣ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ... 3. ... 5. ... 6. ... 8. ... 10. ... 11. ... 12. ... 13. ... 14. ... 15. ... 17. ... 18. ... 19. ... 20. ... 21. ... 22. ... 23. ... 24. ...

ಸಮಾಚಾರ ಸಣ್ಣದಲ್ಲ

ಯಶಸ್ವಿ ಜೈಸ್ವಾಲ್ ಆಸ್ಪತ್ರೆಗೆ ದಾಖಲು

ಮುಂಬೈ: ಭಾರತದ ಕ್ರಿಕೆಟಿಗ ಯಶಸ್ವಿ ಜೈಸ್ವಾಲ್ ಅವರನ್ನು ಪುಣೆಯಲ್ಲಿ ನಡೆದ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯದ ನಂತರ ತೀವ್ರ ಹೊಟ್ಟೆನೋವು ಕಾಣಿಸಿಕೊಂಡ ಕಾರಣ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಯಾಗಿದೆ. ವೈದ್ಯರು ಅವರಿಗೆ ಔಷಧಿಗಳನ್ನು ಮುಂದುವರಿಸಲು ಮತ್ತು ವಿಶ್ರಾಂತಿ ಪಡೆಯಲು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ. ಜೈಸ್ವಾಲ್ ಹೊಟ್ಟೆ ಸೆಳೆತದಿಂದ ಬಳಲುತ್ತಿದ್ದರು, ಪಂದ್ಯದ ನಂತರ ಅದು ತೀವ್ರಗೊಂಡಿತು. ಅವರನ್ನು ಆದಿತ್ಯ ಬಿರ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಅವರಿಗೆ ತೀವ್ರವಾದ ಗ್ಯಾಸ್ಟ್ರೋ ಎಂಟರೈಟಿಸ್ ಇರುವುದು ಪತ್ತೆಯಾಯಿತು. ಅವರಿಗೆ ಐವಿ ಔಷಧಿ ನೀಡಲಾಯಿತು ಮತ್ತು ಅಲ್ಟ್ರಾಸೌಂಡ್ ಮತ್ತು ಸಿ.ಟಿ ಸ್ಕ್ಯಾನ್ ಮೂಲಕ ರೋಗನಿರ್ಣಯ ಮಾಡಲಾಯಿತು. ಸದ್ಯ ಅವರಿಗೆ ಔಷಧಿಗಳನ್ನು ಮತ್ತು ವಿಶ್ರಾಂತಿಯಲ್ಲಿರಲು ಸೂಚಿಸಲಾಗಿದೆ. ಮುಂಬೈ ತಂಡವು ತನ್ನ ಅಂತಿಮ ಸೂಪರ್ ಲೀಗ್ ಮುಖಾಮುಖಿಯಲ್ಲಿ ರಾಜಸ್ಥಾನವನ್ನು ಸೋಲಿಸಲು 217 ರನ್‌ಗಳನ್ನು ಬೆನ್ನಟ್ಟಿದ ಹೊರತಾಗಿಯೂ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲವಾಯಿತು. ಜೈಸ್ವಾಲ್ ಪಂದ್ಯದ ಸಮಯದಲ್ಲಿ ಅಸ್ವಸ್ಥತೆಯಲ್ಲೇ ಬ್ಯಾಟಿಂಗ್ ಮಾಡಿ, 16 ಎಸೆತಗಳಲ್ಲಿ ಮೂರು ಬೌಂಡರಿಗಳೊಂದಿಗೆ ಕೇವಲ 15 ರನ್ ಗಳಿಸಿದರು.

ಆ್ಯಷಸ್ ಕ್ರಿಕೆಟ್ ಟೆಸ್ಟ್: ಸುಸ್ಥಿತಿಯಲ್ಲಿ ಆಸೀಸ್

ಅಡಿಲೇಡ್: ದಿಟ್ಟ ಶತಕ ಬಾರಿಸಿದ ಅಲೆಕ್ಸ್ ಕ್ಯಾರಿ ಮತ್ತು ಅರ್ಧ ಶತಕ ಗಳಿಸಿದ ಉಸ್ಮಾನ್ ಖ್ವಾಜಾ ಅವರು ಬುಧವಾರ ಇಲ್ಲಿ ಆರಂಭವಾದ ಆ್ಯಷಸ್ ಸರಣಿಯ ಮೂರನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಆಸರೆಯಾದರು. ಟಾಸ್ ಗೆದ್ದ ಅತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಇಂಗ್ಲೆಂಡ್ ತಂಡದ ವೇಗಿ ಜೋಫ್ರಾ ಅರ್ಚರ್ (29ರನ್‌ಗೆ 3 ವಿಕೆಟ್) ಮತ್ತು ಬ್ರೈಡನ್ ಕಾರ್ಸ್ (70 ರನ್‌ಗೆ 2 ವಿಕೆಟ್) ಅವರ ದಾಳಿಗೆ ಆಸ್ಟ್ರೇಲಿಯಾದ ಅರಂಭಿಕರು ಎಡವಿದರು. ಆ ಹಂತದಲ್ಲಿ 94 ರನ್‌ಗೆ 4 ವಿಕೆಟ್ ಕಳೆದುಕೊಂಡಿತ್ತು. ಆ ಬಳಿಕ ಅಲೆಕ್ಸ್ (106 ರನ್) ಮತ್ತು ಉಸ್ಮಾನ್ (82 ರನ್) ಐದನೇ ವಿಕೆಟ್ ಜತೆಯಾಟದಲ್ಲಿ 91 ರನ್ ಸೇರಿಸಿ ಇನ್ನಿಂಗ್‌ಗೆ ಚೇತರಿಕೆ ನೀಡಿದರು. ಇದರಿಂದಾಗಿ ತಂಡವು ದಿನದಾಟದ ಮುಕ್ತಾಯಕ್ಕೆ 83 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 326 ರನ್ ಗಳಿಸಿತು. ಕ್ಯಾರಿ ಮತ್ತು ಜೋಷ್ ಆರನೇ ವಿಕೆಟ್ ಜತೆಯಾಟದಲ್ಲಿ 59 ರನ್ ಸೇರಿಸಿದರು. ಅಲೆಕ್ಸ್ ಶತಕ ಗಳಿಸಿದ ನಂತರ ವಿಲ್ ಜ್ಯಾಕ್ಸ್ ಬೌಲಿಂಗ್‌ನಲ್ಲಿ ಔಟಾದರು. ಇಂಗ್ಲಿಸ್ ಅವರನ್ನು ಜೋಷ್ ಟಂಗ್ ಕ್ಲೀನ್ ಬೌಲ್ಡ್ ಮಾಡಿದರು. ಮಿಚೆಲ್ ಸ್ಟಾರ್ಕ್ (ಔಟಾಗದೇ 33) ಮತ್ತು ಅಲೆಕ್ಸ್ ಅವರು 9ನೇ ವಿಕೆಟ್ ಜತೆಯಾಟದಲ್ಲಿ 50 ರನ್ ಸೇರಿಸಿದರು. ಸ್ಟಾರ್ಕ್ ಮತ್ತು ನೇಥನ್ ಲಯನ್ ಕ್ರೀಸ್‌ನಲ್ಲಿದ್ದಾರೆ.

ಭಾರತ-ದ.ಆಫ್ರಿಕಾ ಟಿ20 | ನಾಳೆ ಸರಣಿಯ ನಿರ್ಣಾಯಕ ಪಂದ್ಯ

ದಟ್ಟ ಮಂಜು: 4ನೇ ಟಿ20 ರದ್ದು

ಲಖನೌ: ಇಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಬುಧವಾರ ನಡೆಯಬೇಕಿದ್ದ ನಾಲ್ಕನೇ ಟಿ20 ಪಂದ್ಯ ದಟ್ಟ ಮಂಜು ಕವಿದ ಕಾರಣಕ್ಕಾಗಿ ರದ್ದುಗೊಂಡಿದೆ.

ಬುಧವಾರ ಸಂಜೆ 6.30ಕ್ಕೆ ಟಾಸ್ ನಡೆಸಬೇಕಿತ್ತು. ಎರಡೂ ತಂಡಗಳ ಆಟಗಾರರು ಹಾಗೂ ಅಭಿಮಾನಿಗಳು ಪಂದ್ಯಕ್ಕಾಗಿ ಎದುರು ನೋಡುತ್ತಿದ್ದರು. ಆದರೆ ದಟ್ಟ ಮಂಜಿನ ಕಾರಣ ಹಲವಾರು ಬಾರಿ ಅಂಪೈರ್‌ಗಳು ಕ್ರೀಡಾಂಗಣಕ್ಕೆ ಬಂದು ಪರಿಸ್ಥಿತಿಯನ್ನು ಅವಲೋಕಿಸಿದರು. ಕೊನೆಗೆ ರಾತ್ರಿ 9.30ಕ್ಕೆ ಪಂದ್ಯ ರದ್ದು ಮಾಡಿರುವ ನಿರ್ಧಾರವನ್ನು ಪ್ರಕಟಿಸಿದರು.

ಈಗಾಗಲೇ ನಡೆದಿರುವ ಸರಣಿಯ ಮೂರು ಪಂದ್ಯಗಳಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡ 2-1 ಅಂತರದಲ್ಲಿ ಮುನ್ನಡೆ ಸಾಧಿಸಿದೆ. ಮೊದಲನೇ ಟಿ20 ಪಂದ್ಯದಲ್ಲಿ ಭಾರತ ತಂಡ 101 ರನ್‌ಗಳ ಭರ್ಜರಿ ಗೆಲುವು ಪಡೆದಿತ್ತು. ಆದರೆ ನಂತರ ನಡೆದಿದ್ದ ಎರಡನೇ ಪಂದ್ಯದಲ್ಲಿ ಭಾರತ 51 ರನ್‌ಗಳಿಂದ ಸೋಲು ಅನುಭವಿಸಿತ್ತು. ನಂತರ ಮೂರನೇ ಟಿ20 ಪಂದ್ಯದಲ್ಲಿಯೂ ಪ್ರಾಬಲ್ಯ ಮೆರೆದಿದ್ದ ಟೀಮ್ ಇಂಡಿಯಾ 7 ವಿಕೆಟ್‌ಗಳಿಂದ ಗೆದ್ದು ಬೀಗಿತ್ತು.

ಇದೀಗ ಸರಣಿಯ ಕೊನೆಯ ಮತ್ತು 5ನೇ ಪಂದ್ಯ ಇದೇ ಶುಕ್ರವಾರ (ಡಿ.19) ಅಹಮದಾಬಾದ್‌ನಲ್ಲಿ ನಡೆಯಲಿದೆ. ಆ ಪಂದ್ಯದಲ್ಲಿ ಭಾರತ ತಂಡವು ಗೆದ್ದರೆ 3-1 ಅಂತರದಿಂದ ಟಿ20 ಸರಣಿಯನ್ನು ಗೆದ್ದಂತಾಗುತ್ತದೆ. ಒಂದು ವೇಳೆ ಆ ಪಂದ್ಯದಲ್ಲಿ ದ.ಆಫ್ರಿಕಾ ಗೆದ್ದರೆ 2-2 ಅಂತರದಲ್ಲಿ ಸರಣಿ ಸಮಬಲ ಆದಂತಾಗುತ್ತದೆ. ಹಾಗಾಗಿ ಹರಿಣ ಪಡೆಯ ವಿರುದ್ಧ ಟಿ20 ಸರಣಿಯನ್ನು ಗೆಲ್ಲಬೇಕೆಂದರೆ, ಕೊನೆಯ ಪಂದ್ಯದಲ್ಲಿ ಗೆಲುವು ಭಾರತಕ್ಕೆ ಅತ್ಯಗತ್ಯ.

4 ದಿನ ನಡೆಯಲಿರುವ ಟೂರ್ನಿ | ಉದ್ಘಾಟನಾ ಪಂದ್ಯ ವೀಕ್ಷಿಸಲು ಬಂದ ಕ್ರಿಕೆಟ್, ಸಿನಿಮಾ ತಾರೆಯರು

ವರ್ಲ್ಡ್ ಟೆನ್ನಿಸ್ ಲೀಗ್ ಶುಭಾರಂಭ

ಬೆಂಗಳೂರು: ಭಾರತದಲ್ಲಿ ಇದೇ ಮೊದಲ ಬಾರಿ ಆಯೋಜನೆಯಾಗಿರುವ ವರ್ಲ್ಡ್ ಟೆನ್ನಿಸ್ ಲೀಗ್ ಬುಧವಾರ ಬೆಂಗಳೂರಿನಲ್ಲಿ ಆರಂಭವಾಗಲಿದೆ. ಇಲ್ಲಿನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಪಂದ್ಯಗಳು ಆರಂಭವಾಗಿದ್ದು, ನಾಲ್ಕು ದಿನ ನಡೆಯಲಿವೆ. ಯುಎಸ್ ಓಪನ್‌ನ ಮಾಜಿ ಚಾಂಪಿಯನ್ ಡ್ಯಾನಿಲ್ ಮೆಡ್ವೆಡೇವ್ ಸೇರಿದಂತೆ ವಿಶ್ವದ ಕೆಲ ಖ್ಯಾತನಾಮ ಟೆನಿಸ್ ತಾರೆಗಳ ಭಾಗವಹಿಸುತ್ತಿದ್ದಾರೆ. ಭಾರತೀಯ ತಾರೆಗಳಾದ ಸುಮಿತ್ ನಗಾಲ್, ದಕ್ಷಿಣೇಶ್ವರ ಸುರೇಶ್, ಅಂಕಿತಾ ರೈನಾ, ಸಹಜಾ ಯಮಲಪಲ್ಲಿ ಸಹ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಯುವ ಆಟಗಾರರಾದ ಶ್ರೀವಲ್ಲಿ ಭಮಿಡಿಪಾಟಿ, ಮಾಯಾ ರಾಜೇಶ್ವರನ್ ರೇವತಿ ಸಹ ಕಣದಲ್ಲಿದ್ದಾರೆ. ಮಹಿಳೆಯರ ಪೈಕಿ 14ನೇ ಕ್ರಮಾಂಕದಲ್ಲಿರುವ ಯುಕ್ರೇನ್‌ನ ಎಲಿನಾ ಸ್ವಿಟೋಲಿನಾ, 25ನೇ ಕ್ರಮಾಂಕದ ಸ್ಪೇನ್‌ನ ಪೌಲಾ ಬಡೋಸಾ ಸಹ ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಫೋಟೋ: ಸುಧಾಕರ್ ದೇವರಾಜ್

ಬುಧವಾರ ಬೆಂಗಳೂರಿನ ವರ್ಲ್ಡ್ ಟೆನ್ನಿಸ್ ಲೀಗ್ ಪಂದ್ಯವನ್ನು ವೀಕ್ಷಿಸಿದ ಖ್ಯಾತ ಮಾಜಿ ಕ್ರಿಕೆಟಿಗ ಕಪಿಲ್ ದೇವ್, ಬಾಲಿವುಡ್ ನಟಿ ರಾಕುಲ್ ಪ್ರೀತ್ ಸಿಂಗ್, ಅನನ್ಯಾ ಪಾಂಡೆ ಮತ್ತು ಕಾರ್ತಿಕ್ ಆರ್ಯನ್.

ಐಸಿಸಿ ಟಿ20 ಶ್ರೇಯಾಂಕದಲ್ಲಿ ಅತ್ಯಧಿಕ ಶ್ರೇಯಾಂಕ ಪಡೆದ ಭಾರತೀಯ ಬೌಲರ್

ಬುಮ್ರಾ ದಾಖಲೆ ಮುರಿದ ವರುಣ್ ಚಕ್ರವರ್ತಿ

ದುಬೈ: ಭಾರತದ ಸ್ಪಿನ್ನರ್ ವರುಣ್ ಚಕ್ರವರ್ತಿ ಹೊಸ ದಾಖಲೆ ಬರೆದಿದ್ದಾರೆ. ಐಸಿಸಿ ಟಿ20 ಶ್ರೇಯಾಂಕದಲ್ಲಿ ಅತ್ಯಧಿಕ ಶ್ರೇಯಾಂಕ ಪಡೆದ ಭಾರತೀಯ ಬೌಲರ್ ಎನಿಸಿಕೊಂಡಿದ್ದಾರೆ. ಬುಧವಾರ ಐಸಿಸಿ ಪ್ರಕಟಿಸಿದ ಶ್ರೇಯಾಂಕದಲ್ಲಿ ಚಕ್ರವರ್ತಿ ವೇಗಿ ಜಸ್‌ಪ್ರೀತ್ ಬುಮ್ರಾ ಅವರನ್ನು ಹಿಂದಿಕ್ಕಿ ತಮ್ಮ ವೃತ್ತಿಜೀವನದ ಅತ್ಯುತ್ತಮ ರೇಟಿಂಗ್ ಗಳಿಸಿದ್ದಾರೆ.

2017ರಲ್ಲಿ ವೃತ್ತಿಜೀವನದ ಅತ್ಯುತ್ತಮ 783 ರೇಟಿಂಗ್ ಪಾಯಿಂಟ್‌ಗಳನ್ನು ತಲುಪಿದ್ದ ಬುಮ್ರಾ, ಟಿ20ಗಳಲ್ಲಿ ಅತಿ ಹೆಚ್ಚು ರೇಟಿಂಗ್ ಪಡೆದ ಭಾರತೀಯ ಬೌಲರ್ ಎಂಬ ದಾಖಲೆಯನ್ನು ಹೊಂದಿದ್ದರು, ಇದೀಗ ಚಕ್ರವರ್ತಿ ಬುಮ್ರಾ ಹಿಂದಿಕ್ಕಿದ್ದಾರೆ. ಟಿ20 ಬೌಲಿಂಗ್ ಪಟ್ಟಿಯಲ್ಲಿ 818 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಪ್ರಾಬಲ್ಯ ಮುಂದುವರಿಸಿದ್ದಾರೆ.

ವರುಣ್ ಚಕ್ರವರ್ತಿ ಈಗ ನ್ಯೂಜಿಲೆಂಡ್ ಸೀಮರ್ ಜಾಕೋಬ್ ಡಫಿ (699) ಅವರಿಗಿಂತ 119 ಅಂಕಗಳ ಮುನ್ನಡೆಯಲ್ಲಿದ್ದಾರೆ. ಅವರು ಎರಡನೇ ಸ್ಥಾನದಲ್ಲಿದ್ದಾರೆ. ಅತಿ ಹೆಚ್ಚು ಟಿ20 ಬೌಲಿಂಗ್ ರೇಟಿಂಗ್‌ಗಳ ಸಾರ್ವಕಾಲಿಕ ಪಟ್ಟಿಯಲ್ಲಿ ಚಕ್ರವರ್ತಿ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ಪಾಕಿಸ್ತಾನದ ಉಮರ್ ಗುಲ್ 865 ರೇಟಿಂಗ್‌ನೊಂದಿಗೆ ಮುನ್ನಡೆ ಸಾಧಿಸಿದ ಪಟ್ಟಿಯಲ್ಲಿ ಎಂಟನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಟಿ20ಐ ಪಂದ್ಯದಲ್ಲಿ ಪಂದ್ಯಶ್ರೇಷ್ಠ ಪ್ರದರ್ಶನ ನೀಡಿದ ನಂತರ ಎಡಗೈ ವೇಗಿ ಅರ್ಷದೀಪ್ ಸಿಂಗ್ ಒಟ್ಟಾರೆ ಟಿ20 ಬೌಲಿಂಗ್ ಶ್ರೇಯಾಂಕದಲ್ಲಿ ನಾಲ್ಕು ಸ್ಥಾನ ಏರಿಕೆಯಾಗಿ 16ನೇ ಸ್ಥಾನಕ್ಕೆ ತಲುಪಿದ್ದಾರೆ.

ಬ್ಯಾಟಿಂಗ್ ಶ್ರೇಯಾಂಕದಲ್ಲಿ, ಭಾರತದ ಇಬ್ಬರು ಬ್ಯಾಟ್ಸ್‌ಮನ್‌ಗಳು ಈಗ ಅಗ್ರ ಐದರಲ್ಲಿ ಸ್ಥಾನ ಪಡೆದಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಉತ್ತಮ ಸರಣಿಯ ನಂತರ ತಿಲಕ್ ವರ್ಮಾ 774 ರೇಟಿಂಗ್‌ನೊಂದಿಗೆ ಒಟ್ಟಾರೆಯಾಗಿ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ. ಅವರ ತಂಡದ ಸಹ ಆಟಗಾರ ಅಭಿಷೇಕ್ ಶರ್ಮಾ 909 ರೇಟಿಂಗ್ ಅಂಕಗಳೊಂದಿಗೆ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿದ್ದಾರೆ.

ಐಪಿಎಲ್: ಸಮತೋಲನ ಕಾಪಾಡಿದ ಬೆಂಗಳೂರು

ಈ ಸಲವೂ ಆರ್‌ಸಿಬಿ ಬಲಿಷ್ಠ

ಅಬುದಾಬಿ: ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಫ್ರಾಂಚೈಸಿ ಲೀಗ್ ಎನಿಸಿಕೊಂಡಿರುವ ಐಪಿಎಲ್ ಟೂರ್ನಿಯ 19ರ ಮಿನಿ ಹರಾಜು ಪ್ರಕ್ರಿಯೆ ಮಂಗಳವಾರ ಮುಗಿದಿದೆ. ಹರಾಜಿನಲ್ಲಿ ಒಟ್ಟು 369 ಆಟಗಾರರು ಭಾಗವಹಿಸಿದ್ದು, 77 ಜನ ಆಟಗಾರರು ಮಾತ್ರ ಹರಾಜು ಆಗಿದ್ದಾರೆ. ಈ ಬಾರಿ ವಿಶೇಷವಾಗಿ ಅನ್‌ಕ್ಯಾಪ್ಡ್ ಆಟಗಾರರು ದಾಖಲೆಯ ಮೊತ್ತಕ್ಕೆ ಮಾರಾಟವಾಗಿದ್ದಾರೆ. ಹಾಲಿ ಚಾಂಪಿಯನ್ಸ್ ಆರ್‌ಸಿಬಿ ತಂಡ 8 ಜನ ಹೊಸ ಆಟಗಾರರನ್ನು ಖರೀದಿಸಿದೆ. ಇದರೊಂದಿಗೆ 2026ರ ಐಪಿಎಲ್‌ಗೆ ಬಲಿಷ್ಠ ಆಟಗಾರರ ಪಡೆಯನ್ನು ರೂಪಿಸಿದಂತಾಗಿದೆ.

ಟೀಮ್ ಇಂಡಿಯಾ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರನ್ನು ಆರ್‌ಸಿಬಿ 7 ಕೋಟಿಗೆ ತನ್ನ ತೆಕ್ಕೆಗೆ ಸೇರಿಸಿಕೊಂಡಿದೆ, ಆ ಮೂಲಕ ತನ್ನ ಮೂರನೇ ಕ್ರಮಾಂಕದಲ್ಲಿ ಆಡಿಸಲು ಯೋಜನೆ ರೂಪಿಸಿದೆ. ಆರ್‌ಸಿಬಿ ಪಾಲಾಗಿರುವ ನ್ಯೂಜಿಲೆಂಡ್ ವೇಗದ ಬೌಲರ್ ಜಾಕೋಬ್ ಡಫಿ. 2 ಕೋಟಿ ರು.ಮೂಲ ಬೆಲೆಯೊಂದಿಗೆ ಬೆಂಗಳೂರು ತಂಡ ಸೇರಿದ್ದು, ಟಿ20 ಬೌಲರ್‌ಗಳ ಶ್ರೇಯಾಂಕದಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಜಾಶ್ ಹೇಜಲ್‌ವುಡ್ ಗಾಯದ ಸಮಸ್ಯೆಯಿಂದ ಬಳಲುತ್ತಿರುವು ದರಿಂದ ಅವರ ಸ್ಥಾನದಲ್ಲಿ ಡಫಿ ಅವರನ್ನು ಆಡಿಸುವ ಸಾಧ್ಯತೆಯಿದೆ. ಮೂರನೆಯದಾಗಿ 30 ಲಕ್ಷ ಮೂಲ ಬೆಲೆ ಹೊಂದಿದ್ದ ಮಧ್ಯಪ್ರದೇಶದ ಬೌಲಿಂಗ್ ಆಲ್‌ರೌಂಡರ್ ಮಂಗೇಶ್ ಯಾದವ್ ಅವರನ್ನು ಆರ್‌ಸಿಬಿ 5.20 ಕೋಟಿ ರು.ಕೊಟ್ಟು ಖರೀದಿಸಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡುವ ಸಾಮರ್ಥ್ಯ ಹೊಂದಿರುವುದರಿಂದ ಅವರು ಕೂಡ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆಯಿದೆ.

ಇಂಗ್ಲೆಂಡ್ ವಿಕೆಟ್ ಕೀಪರ್ ಬ್ಯಾಟರ್ ಜೋರ್ಡನ್ ಕಾಕ್ಸ್ ಮೂಲ ಬೆಲೆ 75 ಲಕ್ಷ ರು.ದೊಂದಿಗೆ ಆರ್‌ಸಿಬಿ ತಂಡಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಬಳಿಕ ಸಾತ್ವಿಕ್ ದೇಸ್ವಾಲ್, ವಿಕ್ಕಿ ಓಸ್ತ್ವಾಲ್, ಕಾನಿಷ್ಕ್ ಚೌಹಾಣ್, ವಿಹಾನ್ ಮಲ್ಹೋತ್ರ ಅವರನ್ನು ಮೂಲ ಬೆಲೆ 30 ಲಕ್ಷದೊಂದಿಗೆ ಖರೀದಿಸುವಲ್ಲಿ ಆರ್‌ಸಿಬಿ ಯಶಸ್ವಿಯಾಗಿದೆ.

ಹರಾಜಿನ ಬಳಿಕ ಆರ್‌ಸಿಬಿಯಲ್ಲಿ ನಿರೀಕ್ಷೆಯಂತೆ ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಇನ್ನಿಂಗ್ಸ್ ಆರಂಭಿಸಬಹುದು. ಮೂರನೇ ಕ್ರಮಾಂಕದಲ್ಲಿ ವೆಂಕಟೇಶ್ ಅಯ್ಯರ್ ಅವರನ್ನು ಆಡಿಸಬಹುದು. ನಂತರ 4ನೇ ಸ್ಥಾನದಲ್ಲಿ ನಾಯಕ ರಜತ್ ಪಟಿದಾರ್ ಕಣಕ್ಕಿಳಿಯಲಿದ್ದಾರೆ. ಐದು ಹಾಗೂ ಆರನೇ ಕ್ರಮಾಂಕದಲ್ಲಿ ವಿಕೆಟ್ ಕೀಪರ್ ಜಿತೇಶ್ ಶರ್ಮಾ ಮತ್ತು ಟಿಮ್ ಡೇವಿಡ್ ಕಣಕ್ಕಿಳಿಯಬಹುದು. ಆಲ್‌ರೌಂಡರ್ ಆಗಿ ಮಂಗೇಶ್ ಯಾದವ್ ಮತ್ತು ಕೃಣಾಲ್ ಪಾಂಡ್ಯ ಅವರನ್ನು ಆರ್‌ಸಿಬಿ ಆಡಿಸಬಹುದು. ವೆಸ್ಟ್ ಇಂಡೀಸ್‌ನ ರೊಮಾರಿಯೋ ಶೆಫರ್ಡ್ ಕೂಡಾ ಆರ್‌ಸಿಬಿ ಪಾಲಿನ ಆಲ್‌ರೌಂಡರ್. ಬೌಲಿಂಗ್ ವಿಭಾದಲ್ಲಿ ಭುವನೇಶ್ವರ್ ಕುಮಾರ್, ಕಿವೀಸ್‌ನ ಜಾಕೋಬ್ ಡಫಿ, ಯಶ್ ದಯಾಳ್ ಇರಲಿದ್ದಾರೆ. ಇಂಪ್ಯಾಕ್ಟ್ ಪ್ಲೇಯರ್ ಆಗಿ ಯಶಸ್ವಿ ಸ್ಪಿನ್ನರ್ ಸುಯಶ್ ಶರ್ಮಾ ಅವರನ್ನೂ ಕೂಡ ಆಡಿಸುವ ಸಾಧ್ಯತೆ ಇರುತ್ತದೆ.

ಆರ್‌ಸಿಬಿ ಸಂಭಾವ್ಯ ತಂಡ: ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ವೆಂಕಟೇಶ್ ಅಯ್ಯರ್, ರಜತ್ ಪಾಟೀದಾರ್ (ನಾಯಕ), ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ, ಟಿಮ್ ಡೇವಿಡ್, ಮಂಗೇಶ್ ಯಾದವ್, ಜಾಕೋಬ್ ಡಫಿ, ಭುವನೇಶ್ವರ್ ಕುಮಾರ್, ಯಶ್ ದಯಾಳ್

ಇಂಪ್ಯಾಕ್ಟ್ ಪ್ಲೇಯರ್ಸ್: ಸುಯಶ್ ಶರ್ಮಾ/ದೇವದತ್ ಪಡಿಕ್ಕಲ್.

ಭಾರತ ಕ್ರಿಕೆಟ್ ತಂಡದ ಫೀಲ್ಡಿಂಗ್ ಕೋಚ್ ಆಗಿ ಸೇವೆ ಸಲ್ಲಿಸಿದ ಅನುಭವ

ಲಂಕಾ ಫೀಲ್ಡಿಂಗ್ ಕೋಚ್ ಆಗಿ ಶ್ರೀಧರ್ ನೇಮಕ

ಕೊಲಂಬೊ: ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಆರ್.ಶ್ರೀಧರ್ ಅವರನ್ನು ರಾಷ್ಟ್ರೀಯ ತಂಡದ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿದ್ದು, ಅವರ ಅಧಿಕಾರಾವಧಿಯು ಮುಂದಿನ ವರ್ಷ ಫೆಬ್ರವರಿ-ಮಾರ್ಚ್‌ನಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್ ಮುಗಿಯುವವರೆಗೆ ಇರಲಿದೆ.

ಬಿಸಿಸಿಐ ಲೆವೆಲ್-3 ಅರ್ಹತೆ ಪಡೆದ ಕೋಚ್ ಆಗಿರುವ ಶ್ರೀಧರ್, ಈ ಹಿಂದೆ 2014ರಿಂದ 2021ರ ವರೆಗೆ ಭಾರತದ ಪುರುಷರ ತಂಡದ ಫೀಲ್ಡಿಂಗ್ ಕೋಚ್ ಆಗಿ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಅವರು ಅಫಘಾನಿಸ್ತಾನ ತಂಡದೊಂದಿಗೆ ಸಹಾಯಕ ಕೋಚ್ ಆಗಿಯೂ ಸೇವೆ ಸಲ್ಲಿಸಿದ್ದರು. ಅವರು ಈಗ ಶ್ರೀಲಂಕಾದ ಫೀಲ್ಡಿಂಗ್ ಗುಣಮಟ್ಟವನ್ನು ಸುಧಾರಿಸುವತ್ತ ಗಮನ ಹರಿಸಲಿದ್ದಾರೆ. ಟಿ20 ವಿಶ್ವಕಪ್‌ಗೆ ಸಿದ್ಧತೆಗಳನ್ನು ನೋಡಿಕೊಳ್ಳುವ ಮೊದಲು ಮುಂಬರುವ ಪಾಕಿಸ್ತಾನ ಮತ್ತು ಇಂಗ್ಲೆಂಡ್ ಪ್ರವಾಸಗಳಲ್ಲಿ ತಂಡದೊಂದಿಗೆ ನಿಕಟವಾಗಿ ಕೆಲಸ ಮಾಡಲಿದ್ದಾರೆ.

'ಲಂಕಾದ ಆಟಗಾರರು ಯಾವಾಗಲೂ ಸಹಜ ಪ್ರತಿಭೆ, ಸ್ಥಿತಿಸ್ಥಾಪಕತ್ವ ಮತ್ತು ಸಾಮೂಹಿಕ ಮನೋಭಾವಕ್ಕಾಗಿ ನಿಂತಿದ್ದಾರೆ, ನನ್ನ ಪಾತ್ರ ವ್ಯವಸ್ಥೆಯನ್ನು ಹೇರುವುದಲ್ಲ, ಆದರೆ ಕ್ರೀಡಾ ಮನೋಭಾವ, ಅರಿವು ಮತ್ತು ಕ್ಷೇತ್ರದಲ್ಲಿ ಹೆಮ್ಮೆ ಸ್ವಾಭಾವಿಕವಾಗಿ ಬೆಳೆಯುವ ವಾತಾವರಣವನ್ನು ಪೋಷಿಸುವುದು, ಆಟಗಾರರು ಚೆಂಡಿನೊಂದಿಗೆ, ಪರಸ್ಪರ ಮತ್ತು ಕ್ಷಣದೊಂದಿಗೆ ಸಂಪರ್ಕ ಹೊಂದಿದಾಗ ಕ್ಷೇತ್ರರಕ್ಷಣೆ ಅಭಿವೃದ್ಧಿ ಹೊಂದುತ್ತದೆ' ಎಂದು ಅವರು ಹೇಳಿದರು.

ಐಸಿಸಿ ಪುರುಷರ ಟಿ20 ವಿಶ್ವಕಪ್ ಮುಂದಿನ ವರ್ಷ ಫೆಬ್ರವರಿಯಲ್ಲಿ ನಡೆಯಲಿದೆ. ಭಾರತ ಮತ್ತು ಶ್ರೀಲಂಕಾದಲ್ಲಿ ಪಂದ್ಯಗಳು ನಡೆಯಲಿದ್ದು, ಒಟ್ಟು 20 ತಂಡಗಳು ಭಾಗವಹಿಸಲಿವೆ.

ಬೆಳ್ಳಿತೆರೆಗೆ ಗಾನವಿದೂಷಿ

ಯಶೋಗಾಥೆ

ಭಾರತದ ಶ್ರೇಷ್ಠ ಗಾಯಕಿ ಎಂ.ಎಸ್.ಸುಬ್ಬಲಕ್ಷ್ಮಿ ಅವರು ಭಾರತೀಯರ ಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಈಗ ಅವರ ಜೀವನದ ಯಶೋಗಾಥೆ ಸಿನಿಮಾ ರೂಪದಲ್ಲಿ ಬೆಳ್ಳಿತೆರೆಗೆ ಬರಲಿದೆ. ಭಾರತ ರತ್ನ ಪಡೆದ ಮೊಟ್ಟ ಮೊದಲ ಸಂಗೀತ ಕ್ಷೇತ್ರದ ಸಾಧಕಿ ಎಂ.ಎಸ್.ಸುಬ್ಬಲಕ್ಷ್ಮಿ ಅವರ ಕುರಿತ ಸಿನಿಮಾ ಇನ್ನೇನು ಸೆಟ್ಟೇರಲಿದೆ. ಸುಬ್ಬಲಕ್ಷ್ಮಿ ಅವರ ಸಿನಿಮಾ ಅಂದಾಕ್ಷಣ ಅವರ ಪಾತ್ರದಲ್ಲಿ ಯಾರು ನಟಿಸಬಹುದು ಎಂಬ ಕುತೂಹಲ ಸಹಜವಾಗಿಯೇ ಕಾಡುತ್ತದೆ. ಗಾನ ವಿದೂಷಿಯ ಪಾತ್ರದಲ್ಲಿ ಸಾಯಿ ಪಲ್ಲವಿ ನಟಿಸಲಿದ್ದಾರೆ. ಈಗಾಗಲೇ ಹಲವು ಸೂಪರ್ ಹಿಟ್ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಸಾಯಿ ಪಲ್ಲವಿ, ಸಹಜಾಭಿನಯದ ಮೂಲಕವೇ ಪ್ರೇಕ್ಷಕರ ಮನಗೆದ್ದಿದ್ದಾರೆ. ಈಗ ಈ ಸಿನಿಮಾದ ಮೂಲಕ ಹೊಸತನದಲ್ಲಿ ಕಂಗೊಳಿಸಲಿದ್ದಾರೆ. ಖ್ಯಾತ ಗಾಯಕಿ ಎಂ.ಎಸ್.ಸುಬ್ಬಲಕ್ಷ್ಮಿ ಅವರ ಪಾತ್ರದಲ್ಲಿ ನಟಿಸಲು ಸಂತದಿಂದ ಒಪ್ಪಿರುವ ಸಾಯಿ ಪಲ್ಲವಿ, ತಮ್ಮ ಪಾತ್ರಕ್ಕಾಗಿ ವಿಶೇಷ ತಯಾರಿಯ ನಡೆಸಿದ್ದಾರೆ. ಜೆರ್ಸಿ, ಕಿಂಗ್ಡಮ್ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಗೌತಮ್ ತಿನರೂರಿ ಗಾನವಿದೂಷಿ ಬಯೋಪಿಕ್ ನಿರ್ದೇಶನ ಮಾಡಲಿದ್ದಾರೆ.

ಸ್ಯಾಂಡಲ್‌ವುಡ್ ನಿರ್ದೇಶಕ ನಂದ ಕಿಶೋರ್ ನಿರ್ದೇಶನ ಮಾಡಿರುವ ವೃಷಭ ಆರಂಭದಿಂದಲೂ ಸದ್ದು ಮಾಡಿತ್ತು. ಈಗ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ವೃಷಭ, ಸೈಕಲಾಜಿಕಲ್ ಥ್ರಿಲ್ಲರ್ ಸ್ಟೋರಿಯಾಗಿದ್ದು, ಐತಿಹಾಸಿಕ ಕಥೆಯೂ ಅಡಕವಾಗಿದೆ. ಮೋಹನ್ ಲಾಲ್ ಡಬಲ್ ಶೇಡ್‌ನಲ್ಲಿ ಕಂಗೊಳಿಸಿದ್ದು, ಫ್ಲ್ಯಾಷ್‌ಬ್ಯಾಕ್‌ನಲ್ಲಿ ಅವರು ರಾಜ ವಿಜಯೇಂದ್ರ ವೃಷಭನಾಗಿ ಕಾಣಿಸಿಕೊಂಡಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲಿ ಸಾಗುವ ಕಥೆಯಲ್ಲಿ ಅವರು ಯಶಸ್ವಿ ಉದ್ಯಮಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ಸಮರ್ಜಿತ್ ಲಂಕೇಶ್, ಮೋಹನ್‌ಲಾಲ್ ಪುತ್ರನಾಗಿ ನಟಿಸಿದ್ದಾರೆ.



ವಿಟಾಕೀಸ್

ತನ್ನ ತಂದೆಯನ್ನು ರಕ್ಷಿಸಲು ವಿಧಿ ಮತ್ತು ಭಯದೊಂದಿಗೆ ಸಮರ್ಜಿತ್ ಹೋರಾಡುತ್ತಾರೆ ಇದೆಲ್ಲವೂ ಟ್ರೇಲರ್‌ನಲ್ಲಿ ಗಮನಸೆಳೆಯುತ್ತದೆ. ರಾಗಿಣಿ ದ್ವಿವೇದಿ, ನಯನ್ ಸಾರಿಕಾ, ಅಜಯ್, ಗರುಡ ರಾಮ್‌ನಲ್ಲಿ ಟ್ರೇಲರ್‌ನಲ್ಲಿ ಅಬ್ಬರಿಸಿದ್ದಾರೆ.

ವೃಷಭ ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ದೊಡ್ಡ ಮಟ್ಟದಲ್ಲಿ ತೆರೆಗೆ ಬರುತ್ತಿದೆ. ನಿರ್ದೇಶಕ ನಂದ ಕಿಶೋರ್ ಅದ್ಭುತವಾದ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮೋಹನ್ ಲಾಲ್ ಅವರು ನಟಿಸಿದ ಸಿನಿಮಾ ನಿರ್ಮಾಣ ಮಾಡಿದ್ದು ಖುಷಿಕೊಟ್ಟಿದೆ ಎಂದು ನಿರ್ಮಾಪಕಿ ಏಕ್ತಾ ಆರ್.ಕಪೂರ್ ಹೇಳಿದರು.

ಇದು ಕಾಲಾನುಕ್ರಮದ ಹೃದಯಗಳನ್ನು ಸಂಪರ್ಕಿಸುವ ಕಥೆ. ಪ್ರೀತಿ, ವಿಧಿ ಮತ್ತು ತ್ಯಾಗದಿಂದ ಬಂಧಿತರಾದ ತಂದೆ ಮತ್ತು ಮಗನ ಪ್ರಬಲ ಸಾಹಸಗಾಥೆ ತೆರೆಯಲ್ಲಿ ಸಾಗಲಿದೆ. ಮೋಹನ್ ಲಾಲ್ ಅವರೊಂದಿಗೆ ಕೆಲಸ ಮಾಡುವುದು ಪ್ರತಿಯೊಬ್ಬ ನಿರ್ದೇಶಕನ ಕನಸು. ಆ ಕನಸು ಈ ಚಿತ್ರದ ಮೂಲಕ ನನಸಾಗಿದೆ. ವೃಷಭ ಸಿನಿಮಾವನ್ನು ಬಲು ಪ್ರೀತಿಯಿಂದ, ಶ್ರದ್ಧೆಯಿಂದ ನಿರ್ದೇಶಿಸಿದ್ದೇನೆ. ಸಿನಿಮಾ ಪ್ರೇಕ್ಷಕರ ಮನಸಿಗೆ ಮುಟ್ಟಲಿದೆ ಎಂದು ನಿರ್ದೇಶಕ ನಂದ ಕಿಶೋರ್ ಸಂತಸದಿಂದ ನುಡಿದರು. ಕನೆಕ್ಟ್ ಮೀಡಿಯಾ ಮತ್ತು ಬಾಲಾಜಿ ಟೆಲಿಫಿಲಂಸ್ ಅಭಿಷೇಕ್.ಎಸ್.ವ್ಯಾಸ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಇದೇ 25ರ ಕ್ರಿಸ್‌ಮಸ್ ಹಬ್ಬದಂದು ವೃಷಭ ವಿಶ್ವಾದ್ಯಂತ ತೆರೆಗೆ ಬರಲಿದೆ.

ಹೊಸವರ್ಷಕ್ಕೆ ಜಸ್ಟ್ ಅಸ್

ಕನ್ನಡದಲ್ಲಿ ಹಲವು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸಿರುವ ಪಿ.ಸಿ.ಶೇಖರ್ ಈಗ ಮೊದಲ ಬಾರಿಗೆ ವೆಬ್ ಸಿರೀಸ್ ನಿರ್ದೇಶಿಸಿದ್ದಾರೆ. ಎಂಟು ಕಂತುಗಳ ಈ ವೆಬ್ ಸಿರೀಸ್ ಜಸ್ಟ್ ಅಸ್ ಶೀರ್ಷಿಕೆಯಲ್ಲಿ ಮೂಡಿಬರುತ್ತಿದೆ. ಹೊಸವರ್ಷದ ದಿನದಂದೇ ಈ ವೆಬ್ ಸಿರೀಸ್‌ನ ಮೊದಲನೇ ಕಂತು ಪ್ರಸಾರವಾಗಲಿದೆ. ಜಸ್ಟ್ ಅಸ್‌ನಲ್ಲಿ ವಿವೇಕ್ ನಾಯಕನಾಗಿ ನಟಿಸಿದ್ದು, ಮೇಘಾ ಜಾದವ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಇಷ್ಟು ದಿನ ಸಿನಿಮಾಗಳನ್ನು ನಿರ್ದೇಶಿಸಿದ್ದೆ, ಈಗ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ವೆಬ್ ಸಿರೀಸ್ ನಿರ್ದೇಶಿಸಿದ್ದೇನೆ. ಜಸ್ಟ್ ಅಸ್ ಒಂದು ವಿಭಿನ್ನ ಕಥೆಯಾಗಿದೆ. ಎಂಜಿನಿಯರಿಂಗ್ ಮಾಡಬೇಕಾದರೆ ಬಿ.ಇ ಮಾಡಬೇಕು, ಡಾಕ್ಟರ್ ಆಗಬೇಕೆಂದರೆ ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡಬೇಕು. ಕಾರು ಚಾಲನೆ ಮಾಡಬೇಕಾದರೂ ಸಹ ತರಬೇತಿ ಬೇಕು. ಹೀಗೆ ಎಲ್ಲದ್ದಕ್ಕೂ ಒಂದೊಂದು ರೀತಿ ಇದೆ. ಆದರೆ ಮದುವೆ ವಿಷಯಕ್ಕೆ ಬಂದಾಗ ಹುಡುಗ, ಹುಡುಗಿಯನ್ನು ಮನೆಯವರು ಮಾತನಾಡಿ ಎಂದು ಹೇಳಿದಾಗ ಏನು ಮಾತನಾಡಬೇಕೆಂದು ಹೆಚ್ಚಿನವರಿಗೆ ತಿಳಿದಿರುವುದಿಲ್ಲ. ಹಾಗಾಗಿ ನಾನು ಮನೋಶಾಸ್ತ್ರಜ್ಞರು ಹಾಗೂ ಸಮಾಲೋಚಕರನ್ನು ಭೇಟಿಯಾಗಿ ಈ ಕುರಿತು ಚರ್ಚೆ ಮಾಡಿ ಕೆಲವು ವಿಷಯಗಳನ್ನು ಕಲೆ ಹಾಕಿದೆ. ಅದೇ ಅಂಶಗಳನ್ನು ಆಧರಿಸಿ, ಈ ವೆಬ್ ಸಿರೀಸ್ ನಿರ್ದೇಶಿಸಿದ್ದೇನೆ. ಇಲ್ಲಿ ಲವ್ ಸೆಂಟಿಮೆಂಟ್ ಕಥೆಯೂ ಬೆರೆತಿದೆ ಎಂದು ನಿರ್ದೇಶಕ ಪಿ.ಸಿ.ಶೇಖರ್ ಹೇಳಿದರು.

ನಾನು ಮೈಸೂರಿನವನು, ಮೂಲತಃ ರಂಗಭೂಮಿ ಕಲಾವಿದ. ಧಾರಾವಾಹಿಗಳಲ್ಲೂ ನಟಿಸಿದ್ದೇನೆ. ಈಗ ವೆಬ್ ಸಿರೀಸ್‌ನಲ್ಲಿ ನಟಿಸುತ್ತಿರುವುದು ಖುಷಿಕೊಟ್ಟಿದೆ. ವೆಬ್ ಸಿರೀಸ್ ಬಹಳ ಚೆನ್ನಾಗಿ ಮೂಡಿಬಂದಿದೆ ಎನ್ನುತ್ತಾರೆ ನಟ ವಿವೇಕ್.

ನಾನು ಸಾಫ್ಟ್‌ವೇರ್ ಎಂಜಿನಿಯರ್, ಆದರೂ ಅಭಿನಯದಲ್ಲಿ ನನಗೆ ಬಹಳ ಅಭಿರುಚಿ. ಧಾರಾವಾಹಿ ಹಾಗೂ ಚಲನಚಿತ್ರಗಳಿಗೆ ಕಂಠದಾನ ಕಲಾವಿದೆಯಾಗಿಯೂ ಕಾರ್ಯನಿರ್ವಹಿಸಿದ್ದೇನೆ. ಪಿ.ಸಿ.ಶೇಖರ್ ನಿರ್ದೇಶನದ ಮಹಾನ್ ಚಿತ್ರದಲ್ಲಿ ಸಣ್ಣ ಪಾತ್ರ ನಿರ್ವಹಿಸಿದ್ದೆ. ಈಗ ಅವರ ನಿರ್ದೇಶನದ ವೆಬ್ ಸಿರೀಸ್‌ನಲ್ಲಿ ನಟಿಸಿದ್ದೇನೆ. ನನ್ನ ಪಾತ್ರ ಅದ್ಭುತವಾಗಿ ಮೂಡಿಬಂದಿದೆ ಎಂದು ನಟಿ ಮೇಘಾ ಜಾದವ್ ಸಂತಸದಿಂದ ನುಡಿಯುತ್ತಾರೆ.

ಜಸ್ಟ್ ಅಸ್‌ನಲ್ಲಿ ಹಾಡು ಇದ್ದು, ನಾಗಸಿಂಹ ಭಾರದ್ವಾಜ್ ಸಾಹಿತ್ಯ ರಚಿಸಿದ್ದಾರೆ. ಶ್ರಾವಂತಿ ಸುಶ್ರಾವ್ಯವಾಗಿ ಹಾಡಿರುವ ಗೀತೆಗೆ ಎಸ್.ಪ್ರದೀಪ್ ವರ್ಮ ಸಂಗೀತ ಸಂಯೋಜಿ ಸಿದ್ದಾರೆ. ಇದೇ 22 ರಂದು ವೆಬ್ ಸಿರೀಸ್‌ನ ಹಾಡು ಬಿಡುಗಡೆಯಾಗಲಿದೆ. ಮುರಳಿ ಕ್ರಿಶ್ ಛಾಯಾಗ್ರಹಣ ನಿರ್ವಹಿಸಿದ್ದಾರೆ.

ಬಲರಾಮನ ಮಧುರ ಗಾನ



ಭೂಗತ ಜಗತ್ತಿನ ಕಥೆಯ ಆ ದಿನಗಳು ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ಕೆ.ಎಂ.ಚೈತನ್ಯ ಈಗ ಹದಿನೆಂಟು ವರ್ಷಗಳ ಬಳಿಕ ಮತ್ತೊಂದು ಭೂಗತ ಜಗತ್ತಿನ ಸುತ್ತ ಸಾಗುವ ಕಥೆಯನ್ನು ಹೊತ್ತುಬಂದಿದ್ದಾರೆ. ಬಲರಾಮನ ದಿನಗಳು ಚಿತ್ರದ ಶುರು.. ಶುರು.. ಹಾಡು ಬಿಡುಗಡೆಯಾಗಿದ್ದು ಸಿನಿಪ್ರಿಯರ ಗಮನಸೆಳೆಯುತ್ತಿದೆ. ಜಯಂತ್ ಕಾಯ್ಕಿಣಿ ಸಾಹಿತ್ಯ ರಚಿಸಿರುವ ಶುರು.. ಶುರು.. ಹಾಡಿಗೆ ಸಂತೋಷ್ ನಾರಾಯಣನ್ ಸಂಗೀತ ಸಂಯೋಜಿಸಿದ್ದು, ಸಂಚಿತ್ ಹೆಗ್ಡೆ ಹಾಗೂ ಪುಣ್ಯಾ ದನಿಯಾಗಿದ್ದಾರೆ. ಮೆಲೋಡಿಯಾಗಿ ಮೂಡಿಬಂದಿರುವ ಈ ಹಾಡಿನಲ್ಲಿ ವಿನೋದ್ ಪ್ರಭಾಕರ್ ಹಾಗೂ ಪ್ರಿಯಾ ಆನಂದ್ ಕಾಣಿಸಿಕೊಂಡಿದ್ದಾರೆ. ಇದು ವಿನೋದ್ ಪ್ರಭಾಕರ್ ಅವರ ಇಪ್ಪತ್ತೈದನೇ ಚಿತ್ರ ಎಂಬುದು ವಿಶೇಷ. ನಾಯಕಿಯಾಗಿ ಪ್ರಿಯಾ ಆನಂದ್ ಬಣ್ಣಹಚ್ಚಿದ್ದಾರೆ. ಉಳಿದಂತೆ ಅವಿನಾಶ್, ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ, ವಿನೋದ್ ಗೌಡ ಹೀಗೆ ದೊಡ್ಡ ತಾರಾಬಳಗವೇ ಇದೆ.

ಬಲರಾಮನ ದಿನಗಳು ಚಿತ್ರದ ಆಡಿಯೊ ಹಕ್ಕು ಉತ್ತಮ ಬೆಲೆಗೆ ಮಾರಾಟವಾಗಿದೆ. ಇದು ನಾನು ಅಭಿನಯಿಸಿದ ಸಿನಿಮಾಗಳಲ್ಲಿಯೇ ದೊಡ್ಡ ಮೊತ್ತವಾಗಿದೆ. ಇದು ಚಿತ್ರತಂಡಕ್ಕೆ ಹೊಸ ಚೈತನ್ಯ ತಂದಿದೆ. ನನ್ನ ಪಾತ್ರ ಕೂಡ ಅದ್ಭುತವಾಗಿ ಮೂಡಿಬಂದಿದ್ದು, ಅದನ್ನು ತೆರೆಯಲ್ಲಿಯೇ ನೋಡಬೇಕು ಎಂದು ವಿನೋದ್ ಪ್ರಭಾಕರ್ ಹೇಳಿದರು.

ಕನ್ನಡದಲ್ಲಿ ಇದು ನನ್ನ ಐದನೇ ಸಿನಿಮಾ. ಕನ್ನಡ ಕಲಿಯಲು ಪುನೀತ್ ರಾಜ್ ಕುಮಾರ್ ಅವರು ಕಾರಣ. ಭಾಷೆ ಗೊತ್ತಿದ್ದರೆ ಸನ್ನಿವೇಶಗಳಲ್ಲಿ ಸುಲಭವಾಗಿ ನಟಿಸಲು ಸಾಧ್ಯವಾಗುತ್ತದೆ ಎಂದಿದ್ದರು. ಅವರ ಮಾತು ನನಗೆ ಸದಾ ನೆನಪಿನಲ್ಲಿರುತ್ತದೆ. ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಬಲರಾಮನ ದಿನಗಳು ಚಿತ್ರ ಚೆನ್ನಾಗಿ ಬಂದಿದೆ ಪ್ರಿಯಾ ಆನಂದ್ ತಿಳಿಸಿದರು.

ನಾನು ಇದುವರೆಗೆ ಸುಮಾರು ಒಂದು ಸಾವಿರ ಚಿತ್ರಗಳಿಗೆ ಕೆಲಸ ಮಾಡಿದ್ದೇನೆ. ಅದರಲ್ಲಿ ಬಲರಾಮನ ದಿನಗಳು ಸಿನಿಮಾ ನನಗೆ ವಿಶೇಷವಾಗಿದೆ. ಶುರು.. ಶುರು.. ಹಾಡು ಆಗ್ರ ಹತ್ತು ಹಾಡುಗಳಲ್ಲಿ ಒಂದಾಗಲಿದೆ. ಜಯಂತ್ ಕಾಯ್ಕಿಣಿ ಅವರು ಉತ್ತಮ ಸಾಹಿತ್ಯ ರಚಿಸಿದ್ದಾರೆ ಎಂದು ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಸಂತಸ ಹಂಚಿಕೊಂಡರು.

ಬಲರಾಮನ ದಿನಗಳು ಉತ್ತಮ ಸಿನಿಮಾವಾಗಿದ್ದು, ಪ್ರೇಕ್ಷಕರು ಮೆಚ್ಚುವ ಚಿತ್ರವನ್ನು ನಿರ್ಮಾಣ ಮಾಡಿರುವ ಖುಷಿಯಿದೆ. ಇಡೀ ಕುಟುಂಬ ಸಮೇತ ಕುಳಿತು ನೋಡುವ ಸಿನಿಮಾವಾಗಿದೆ ಎಂದು ನಿರ್ಮಾಪಕಿ ಪದ್ಮಾವತಿ ಜಯರಾಮ್ ಸಂತ ವ್ಯಕ್ತಪಡಿಸಿದರು.